ಸಂಪುಟ ೧೮
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ್ ೧೯೮೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ, ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು "ಕರ್ನಾಟಕ ಭಾರತಿ" ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　　೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ　　೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೨-೫೦
(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ : ರೂ. ೪-೦೦ ಮಾತ್ರ)
ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.)

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೮ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೮   ಸಂಚಿಕೆ : ೧

ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗಸ್ಟ, ೧೯೮೫

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಗಾಯತ್ರಿ ಪ್ರಿಂಟರ್ಸ, ಮರಾಠಾಗಲ್ಲಿ, ಹುಬ್ಬಳ್ಳಿ

ಪರಿವಿಡಿ

ಪುಟ

೧. ಜಿನಸೇನ ಮತ್ತು ಪಂಪ ೧
ಆಕರ-ಸ್ವೀಕಾರ-ಸಾಧನೆಗಳ ಸಮಸ್ಯೆಗಳು
— ಎಸ್. ಎಂ. ವೃಷಭೇಂದ್ರಸ್ವಾಮಿ

೨. ಕನ್ನಡ ಸಂಧಿ ೧೩
— ವಿಲ್ಯಂ ಮಾಡ್ತ

೩. ಮಾನಸೋಲ್ಲಾಸ ಗ್ರಂಥದಲ್ಲಿ ಸಾಮಾಜಿಕ ಸೇವಕನ
ಸಾಮಾನ್ಯ ಗುಣಗಳು ೩೩
— ಎಂ. ಎನ್. ಜೋಶಿ

೪. ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ : ಒಂದು ಅಧ್ಯಯನ ೪೩
— ಶಾಲಿನಿ ರಘುನಾಥ

೫. ಹಳ್ಳಿದೂರಿಗೆ ಪ್ಯಾಟಿದೂರಿಗೆ ಕದನ ೭೩
-- ಜಿ. ಎಸ್. ವಡಗಾಂವಿ (ಸಂಗ್ರಹಕಾರ)
-- ಚೌರವ್ವ ಕೊಣ್ಣೂರ (ಹಾಡಿದವರು)

೬. ಮದನೂರ ಗ್ರಾಮದ ಶಾಸನಗಳು ೭೬
-- ಬಿ. ಆರ್. ಹಿರೇಮಠ
– ಹನುಮಾಕ್ಷಿ ಗೋಗಿ

೭. ಬಾರೋಕ್ ವಾಸ್ತುಕಲೆ ಮತ್ತು ಶಿಲ್ಪಕಲೆ ೧೧೫
-- ಎಸ್. ಸಿ. ಪಾಟೀಲ

೮. ಮಲೆನಾಡಿನ ಕೃಷಿಕರ ವೃತ್ತಿಪದ ಕೋಶ ೧೨೩
-- ಎಚ್. ಎಂ. ಮಹೇಶ್ವರಯ್ಯ

೯. ಸುಖವು ಬೇಕೆ, ನಿಮಗೆ ಸುಖವು ? ೧೪೫
-- ಗುರುಪಾದ ಮರಿಗುದ್ದಿ

೧೦. ಐದು ಹೊಸ ಸ್ವರವಚನಗಳು ೧೪೬
-- ವೀರಣ್ಣ ರಾಜೂರ

೧೧ ಒರೆಗಲ್ಲು :
ಬನವಾಸಿ–ಮಧುಕೇಶ್ವರಾಲಯದ ನವರಂಗ–ಸ್ತಂಬದ
ಮೇಲಿರುವ ವಿಭೂತಿ ಗೌರಯ್ಯನ ಶಾಸನ ಶಿಲ್ಪ ೧೫೪
-- ಎಚ್. ಆರ್. ರಘುನಾಥ ಭಟ್

ಜಿನಸೇನ ಮತ್ತು ಪಂಪ

(ಆಕರ–ಸ್ವೀಕಾರ–ಸಾಧನೆಗಳ ಸಮಸ್ಯೆಗಳು)

● ಎಸ್. ಎಂ. ವೃಷಭೇಂದ್ರಸ್ವಾಮಿ

ಹತ್ತನೆಯ ಶತಮಾನದ ಮಹಾಕವಿ ಪಂಪ, ಇಪ್ಪತ್ತನೆಯ ಶತಮಾನದಲ್ಲಿಯೂ ಪ್ರಸ್ತುತನೂ, ಪ್ರಶ್ನಿತನೂ ಆಗುತ್ತಿರುವುದು ಆತನ ಹಾಗೂ ಆತನ ಕೃತಿಗಳ ಹಿರಿಮೆಯನ್ನು ತೋರಿಸುತ್ತದೆ. ಆತ ಕನ್ನಡದ ಆದ್ಯ ಹಾಗೂ ಆರಾಧ್ಯ ಕವಿಯಾದುದು ಕನ್ನಡ ಸಾಹಿತ್ಯ ಪರಂಪರೆಯ ಪುಣ್ಯ. ಪಂಪ ಪ್ರಪ್ರಥಮವಾಗಿ ಜೀವನ ಸರ್ವಸ್ವವನ್ನು ಪ್ರೀತಿಸುವ ಮಹಾಮಾನವ. ಈ ಮೌಲ್ಯಾನ್ವೇಷಣೆಗಾಗಿ ಆತ ಹಿಡಿದ ದಾರಿ, ಮಹಾಕವಿಮಾರ್ಗ, ಅದರ ಗುರಿ ಸೌಂದರ್ಯಾನ್ವೇಷಣೆ ಹಾಗೂ ಉನ್ಮೇಷಣೆ, ಅದೇ ಅವನ ಕಾವ್ಯಧರ್ಮ, ಕಾವ್ಯೋದ್ದೇಶವಾಯಿತು. ಇದಕ್ಕೆ ಪ್ರೇರಣೆ ಪೋಷಣೆ ನೀಡಿದುದು ಜಿನಧರ್ಮಮೂಲವಾದ ಮಾನವೀಯ ಧರ್ಮ. ತನ್ನ ಸಮಕಾಲೀನ ಜೀವನದ ಸಮಷ್ಟಿಯನ್ನು, ಸಮಗ್ರವಾಗಿ ಅರಗಿಸಿಕೊಂಡು, ತನ್ನತನವನ್ನು ಸಮಷ್ಟಿಯಲ್ಲಿ ಎರಕ ಹೊಯ್ದುಕೊಂಡು ಸುಸಂಸ್ಕೃತ ವ್ಯಕ್ತಿತ್ವವನ್ನು ಪಡೆದ ಪಂಪ–ತನ್ನೆರಡು ಕೃತಿಗಳ ಮೂಲಕ–ವಿಶ್ವಸಾಹಿತ್ಯಕ್ಕೆ ಕನ್ನಡದ ಪ್ರಥಮ ಕಾಣಿಕೆಯನ್ನು ಸಲ್ಲಿಸಿರುವನು. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಪಂಪನಾವಗಂ' ಎಂಬ ಅಭಿಮಾನದ ಅಚ್ಚುನುಡಿಯನ್ನು ಪರಿಷ್ಕರಿಸಿ–ಕನ್ನಡ ಸಾಹಿತ್ಯಕ್ಕಿರುವ ಹಲವು ಒಡೆಯರಲ್ಲಿ ಒಬ್ಬ – ಆಗಲೂ, ಈಗಲೂ, ಯಾವಾಗಲೂ. ಆದರೆ ಅವರಲ್ಲಿ ಪ್ರಥಮನೆಂಬ ಪಟ್ಟವಂತೂ ಪಂಪನಿಗೆ ಅಬಾಧಿತ. ಸಾವಿರ ವರ್ಷಗಳ ಅಧ್ಯಯನ, ಅನುಸರಣ–ಪರೀಕ್ಷಣದ ಕಡಿಹಕ್ಕೆ. ಬಡಿಹಕ್ಕೆ ಸಿಕ್ಕರೂ, ತೇಜಾಪು ಹಾಕಿದ ಚೊಕ್ಕ ಚಿನ್ನವಾಗಿಯೇ ಉಳಿದಿದ್ದಾನೆ! ತಿಕ್ಕಿ ತೀಡಿದಷ್ಟೂ ತನ್ನ ಚೊಕ್ಕತನವನ್ನು ಪ್ರಕಾಶಿಸುವ ಕವಿಯಾಗಿದ್ದಾನೆ. ಸಾಹಿತ್ಯ–ಸಂಸ್ಕೃತಿ–ಧರ್ಮ ಪ್ರಿಯರು ದಿನ ನಿತ್ಯದ ವ್ಯವಹಾರದಲ್ಲಿ ಬಳಸಲೇಬೇಕಾದ ಸುವರ್ಣ ನಾಣ್ಯವಾಗಿರುವನು. ಆತನ ಕೃತಿಗಳು, ಕನ್ನಡ ಕಾವ್ಯದ "ಸ್ಟರ್ಲಿಂಗ್" (Gold Standard)ಗಳಾಗಿವೆ, ಕಾವ್ಯಾನುಸಂಧಾನಕ್ಕೆ ಸಾಹಿತ್ಯ ವಿಮರ್ಶೆಗೆ.

ಮಹಾಕವಿಯಾಗಬಲ್ಲ ಸ್ವೋಪಜ್ಞ ಪ್ರತಿಭೆಯ ಪಂಪ ತನ್ನ ಜೀವನ ಹಾಗೂ ಕಾವ್ಯೋದ್ಯೋಗಕ್ಕೆ ತೆಕ್ಕೆ ಬಿದ್ದುದು ಎರಡು ಮಹಾ ಬೆಟ್ಟಗಳಿಗೆ! ಗೊಮ್ಮಟ ಮಹಾ

ಮೂರ್ತಿಯನ್ನು ತನ್ನ ಒಡಲಿನಲ್ಲಿಟ್ಟುಕೊಳ್ಳ ಬಲ್ಲ ಎತ್ತರ-ಬಿತ್ತರಗಳನ್ನೊಳಗೊಂಡ, ಶ್ರವಣ ಬೆಳಗೊಳದ ದೊಡ್ಡ ಬೆಟ್ಟ. ಅದೇ ಜಿನಸೇನಾಚಾರ್ಯರ ಪೂರ್ವಪುರಾಣ. ಆ ಕಲ್‌ಬೆಟ್ಟವನ್ನು ಕಡಿದು, ಕಡಿದು, ಪ್ರಥಮ ಜಿನೇಂದ್ರ ಮೂರ್ತಿಯನ್ನು ರೂಪಿಸಿದ ತನ್ನ "ಆದಿಪುರಾಣ'' ದಲ್ಲಿ. ಶ್ರೀ ಪನ್ನಾಲಾಲ್ ಜೈನರೆನ್ನುವಂತೆ "ಪೂರ್ವ ಪುರಾಣ ಮಹಾಕಾವ್ಯ, ಧರ್ಮಕಾವ್ಯ, ಧರ್ಮಶಾಸ್ತ್ರ, ರಾಜನೀತಿ ಶಾಸ್ತ್ರ, ಆಚಾರ ಶಾಸ್ತ್ರ ಮತ್ತು ಯುಗದ ಆದ್ಯ ವ್ಯವಸ್ಥೆಯನ್ನು ಹೇಳುವ ಮಹಾ ಇತಿಹಾಸ -ಎಲ್ಲವೂ ಆಗಿದೆ[೧] ಇಂಥ ಪುರಾಣ ಮಹಾಕಾವ್ಯ (Epic of Growth) ವಿಸ್ತಾರದಲ್ಲಿ, ಪಂಪ ಆದಿಪುರಾಣವೆಂಬ ಕಲಾತ್ಮಕ ಕಾವ್ಯ (Epic of Art) ಅಥವಾ ಕ್ಲಾಸಿಕ್ ಕಾವ್ಯವನ್ನು ಕಂಡರಿಸಿಕೊಂಡಿರುವನು. ಇದೇ ಪಂಪನ ಮಹತ್ತರವಾದ ಸಾಹಸ, ಸಾಧನೆ.

ಮಹಾಕವಿ ಪಂಪ, ತೆಕ್ಕೆಬಿದ್ದ ಇನ್ನೊಂದು ಮಹಾಕಲ್‌ಬೆಟ್ಟ, ಕೈಲಾಸ ದೇವಾಲಯನ್ನೊಳಗೊಂಡಿದ್ದ, ಎಲ್ಲೋರದ ಕಲ್‌ಬೆಟ್ಟ-ಅದೇ ವ್ಯಾಸ ಮಹಾಭಾರತ. ವಿಸ್ತಾರವಾದ ದೇವಾಲಯ. ಸಾವಿರಾರು ಮೂರ್ತಿಗಳು, ಕಂಭ, ಛತ್ತು, ಮಂಟಪ, ಪಾವಟಿಗೆ ಮಹಾದ್ವಾರ-ಮುಂತಾದವುಗಳನ್ನೆಲ್ಲ ಕಲ್ಲನ್ನು ಕಟೆಕಟೆದು ರೂಪಿಸಿಕೊಂಡ, ಕೈಲಾಸ ದೇವಾಲಯದ ಮಹಾಶಿಲ್ಪಿಯಂತೆ, ಕೌರವ-ಪಾಂಡವರ ಕಥೆ, ಸಮಕಾಲೀನ ರಾಜರ ಇತಿಹಾಸ ಸಾರ್ವಕಾಲೀನ ಮಾನವ ಪ್ರಪಂಚದ ಗುಣ, ವ್ಯಕ್ತಿ, ಸಂಘರ್ಷದ ವಹಾನವೀಯ ಚಿತ್ರಣದ ಮಹಾಕಾವ್ಯ ಪಂಪನ "ವಿಕ್ರಮಾರ್ಜುನ ವಿಜಯ". "ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆನ್" ಎಂದೇ ಹೊರಟಿದ್ದಾನೆ ಪಂಪ. ಈ ಸಾಹಸ ಕೈಕೊಳ್ಳಲೂ, ಪಂಪನಿಗಿರಬಹುದಾದ ಭುಜಬಲ, ಎದೆಬಲಗಳು ಸಾಮಾನ್ಯರಿಗೆ ಎಂದೂ ಸಾಧ್ಯವಿಲ್ಲ.

ಸಾಮಾನ್ಯವಾಗಿ ಒಂದು ಜೀವಮಾನದಲ್ಲಿ ಒಂದು ಮಹಾಕಾವ್ಯವನ್ನು ಸೃಷ್ಟಿಸಿ, ತನ್ನ ಪ್ರತಿಭಾಪುಣ್ಯವೆಲ್ಲ ಖರ್ಚಾಯಿತೆನ್ನುವುದೇ ಸಹಜವಾಗಿರುವ ಕವಿ ಸಮುದಾಯದಲ್ಲಿ ಒಂದು ವೈದಿಕ, ಇನ್ನೊಂದು ಜೈನ ಮಹಾಕಾವ್ಯವನ್ನು ನಿರ್ಮಿಸಿದ ಪಂಪನ ಪ್ರತಿಭೆ ಅನ್ಯಾದೃಶವಾದುದು. ಪಂಪನ ಕೃತಿಗಳ ಕಲಾತ್ಮಕ ಸಾಧನೆ ಅವುಗಳಿಗಿದ್ದ ಮೂಲ ಆಕರ—ಜಿನಸೇನನ ಪೂರ್ವಪುರಾಣ, ವ್ಯಾಸನ ಮಹಾಭಾರತಗಳ ವೈಶಾಲ್ಯಗಳನ್ನು ಒಟ್ಟಾಗಿ ಗಮನಿಸಿದರೆ, ಪಂಪನ ಕವಿಶಕ್ತಿ, ಕೃತುಶಕ್ತಿಯ ಅನನ್ಯತೆ ಗೋಚರವಾಗುತ್ತದೆ. ಅರ್ಧಶತಮಾನದ ಆಯುಸ್ಸು ತುಂಬುವುದರೊಳಗೇ (ಆರು, ಮೂರು ತಿಂಗಳಲ್ಲಿ ಎಂಬುದು ಉತ್ಪ್ರೇಕ್ಷೆ!) ಈ ಎರಡು ಮಹಾಕಾವ್ಯಗಳನ್ನು ಬರೆದು ಮುಗಿಸಿದ; ಉಳಿದ ಆಯುಷ್ಯದಲ್ಲಿ ರಾಮಾಯಣಕ್ಕೂ ಕೈ ಹಾಕಿದ್ದರೂ ಇರಬಹುದೆ?- ಇದು ಊಹೆ ಮಾತ್ರ. ಆದರೂ, ಜೈನಧರ್ಮದ ಶ್ರದ್ಧೆ

೧) ಆದಿಪುರಾಣ—ಹಿಂದೀ ಭಾಷಾಂತರ, ಭಾರತೀಯ ಜ್ಞಾನಪೀಠ, ೧೯೫೧

ಯಿಂದ ರೂಪಿತವಾದ ಪಂಪನ ಜೀವನದರ್ಶನ 'ಆದಿಪುರಾಣ'ದಲ್ಲಿ, ವೈದಿಕ ಧರ್ಮ ನಿಷ್ಠೆಯಿಂದ ಆಕಾರ ಪಡೆದ ಮಾನವೀಯ ಜೀವನದರ್ಶನ 'ವಿಕ್ರಮಾರ್ಜುನ ವಿಜಯ' ದಲ್ಲಿ, ಅಭಿವ್ಯಕ್ತಗೊಂಡಿರುವುದು ಸುವೇದ್ಯ. ಆದರೆ, ಈ ಎರಡು ದೃಷ್ಟಿಗಳನ್ನು ಪಂಪ ತನ್ನ ಬದುಕಿನಲ್ಲಿ ಸಮನ್ವಯಗೊಳಿಸಿಕೊಳ್ಳಲಿಲ್ಲ ಎಂಬ ಆಧುನಿಕರ ಟೀಕೆ ಅರ್ಥವಿಲ್ಲದ್ದು. ಪಂಪನ ಈ ದ್ವಿಮಹಾಕಾವ್ಯ ಸೃಷ್ಟಿಯ ಸಾಧನೆಯ ವೈಶಿಷ್ಟ್ಯ ೨ಹಾಗೂ ಅನನ್ಯತೆಯನ್ನು ಮಾತ್ರ ಒಪ್ಪದಿರಲು ಸಾಧ್ಯವೇ ಇಲ್ಲ. ಎರಡು ರಾಷ್ಟ್ರೀಯ ಮಹಾಕಾವ್ಯ (National Epic) ಸಮುದ್ರಗಳನ್ನು ಈಸಿ, ಜಾಲಾಡಿ, ತನ್ನ ಪ್ರತಿಭೆಯಿಂದ ಎರಡು ವಿಶ್ವಮಹಾಕಾವ್ಯ (World Epic) ಗಳನ್ನು ಸೃಷ್ಟಿಸಿದ ಪಂಪನ ಸಾಧನೆ, ಕನ್ನಡಕ್ಕಂತೂ ಹೆಮ್ಮೆ, ವಿಶ್ವಕ್ಕೂ ಹೆಮ್ಮೆಯೇ.

ಆದರೆ ಆದಿಪುರಾಣ ಶ್ರೇಷ್ಠಮಟ್ಟದ ಜೈನ ಕಾವ್ಯವಾಗಿಯೇ ಉಳಿಯಿತು. ಮತ ಸಂಬಂಧ ಸಿದ್ಧಾಂತಗಳ ಅಕ್ಟೋಪಸ್ ಹಿಡಿತದಿಂದ ಪಾರಾಗಿ ಜೀವದೇಳು ಬೀಳುಗಳ ಶಾಶ್ವತ ಸಮಸ್ಯೆಗಳ ಕೇಂದ್ರವಾದ ಈ ಕಥಾವಸ್ತುವಿನಲ್ಲಿ ವೈಚಾರಿಕ ಅಂಶ ಗಳೊಡನೆ ಪಂಪನಂತಹ ಶಕ್ತ ಅತ್ಯಂತ ಶ್ರೇಷ್ಠಕೃತಿಯನ್ನು ನಿರ್ಮಿಸಬಹುದಿದ್ದ ಸಾಧ್ಯತೆ ಮಾತ್ರ ಇಲ್ಲವಾಯಿತು ೩ಎಂಬ ರಂ. ಶ್ರೀ ಮುಗಳಿಯವರ ಮಾತುಗಳಿಗೂ, ಕುವೆಂಪು ಅವರ ಯಾವ ಮತದ ಸಿದ್ಧಾಂತದ ಬಂಧನಕ್ಕೂ ಒಳಗಾಗದೆ ಉದಾತ್ತ ದರ್ಶನಗಳೆಲ್ಲವುಗಳ ಸಾರವನ್ನು ಹೀರಿಕೊಂಡು ನೂತನದರ್ಶನದ ಜಗತ್ಕಾವ್ಯ ವನ್ನು ೪ಮುಂದಿನವರು ಸೃಜಿಸಬಲ್ಲರೆಂಬ ದೂರದ ಆಶಾವಾದದಲ್ಲಿಯೂ ಸತ್ಯಾಂಶ ವಿಲ್ಲ. ತನ್ನ ಜನ, ದಿನ, ಧರ್ಮ, ಪರಿಸರ, ದರ್ಶನಗಳಿಲ್ಲದ, ವಿಶ್ವದ ಮಹಾಕಾವ್ಯ ವಿದೆಯೆ? ಮುಂದೆಯಾದರೂ ಬರಲು ಸಾಧ್ಯವೆ? ಕಾವ್ಯಕ್ಕೆ ವಿಶ್ವದೃಷ್ಟಿಯನ್ನು ನೀಡುವುದು–ತನ್ನ ಸಂಸ್ಕೃತಿ ದರ್ಶನದಲ್ಲಿ ವಿಶ್ವಸಾಮಾನ್ಯ ಮಾನವೀಯತೆಯನಂ ಬಿಂಬಿಸಿದಾಗ ಮಾತ್ರ ಪಂಪನ ಕೃತಿಗಳಲ್ಲಿ ಈ ಮಹದ್‌ದರ್ಶನವಿದೆ. ಈ ಮಹತ್ವ ಬೃಹತ್ತಾಗಿದೆ ಎಂಬುದರಲ್ಲಿ ಅಳುಕೇಕೆ? ಬಳುಕೇಕೆ?

'Read the work with the Spirit it is writ' ಎಂಬ ಪೋಪನ ಹೇಳಿಕೆ ಕಾವ್ಯ ವಿಮರ್ಶೆಯ ದಿಕ್ಸೂಚಿ, ಆಧುನಿಕ ವಿಮರ್ಶಕರಿಗೆ ಎಚ್ಚರಿಕೆ ನುಡಿ. ಕವಿಯ, ಕೃತಿಯ, ಮೂಲೋದ್ದೇಶ ಹಾಗೂ ಅಂದಂದಿನ ವೈಯಕ್ತಿಕ ಹಾಗೂ ಸಾಮಾಜಿಕ ಒಲವು–ಒತ್ತಡಗಳ ಹಿನ್ನೆಲೆಯ ವಲಯದಲ್ಲಿಯೇ ಪರಿಶೀಲಿಸು ವುದು ಸೂಕ್ತವಿಧಾನ. ಪ್ರಾಚೀನ ಕೃತಿಗಳಲ್ಲಿ ಅತ್ಯಾಧುನಿಕತೆಯನ್ನು ಅರಸ ಹೋಗುವುದು ಬುದ್ಧಿಯ ಕಸರತ್ತು, ಅದರಿಂದ ಒದಗುವುದು,ಮೂಲದಲ್ಲಿಲ್ಲದ ಕರಿಯ

೨) ಜಿ. ಎಚ್. ನಾಯಕ- ಪಂಪ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ. ಪು. ೨೧೩.
೩) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿ. ವಿ. ಸಂ. ೨. ಪುಟ ೧೨೩.
೪) ಕುವೆಂಪು- ತಪೋನಂದನ. ಪು. ೪೪-೪೫.

ಬೆಕ್ಕಿನ ಕತ್ತಲಮನೆ ಹುಡುಕಾಟ. ಆದಿಪುರಾಣದಲ್ಲಿ ಪಂಪ, ತನ್ನ ಸ್ಪಷ್ಟ ನಿಲುವೆಯನ್ನು ಗುರುತಿಸಿಕೊಂಡಿದ್ದಾನೆ. ಅದು ಅವನ ಪ್ರತಿಭಾವಿಲಾಸದ ಸ್ಫೂರ್ತಿಹೊಳೆ ಮಾತ್ರವಲ್ಲ, ವೈಚಾರಿಕತೆಯ ದಾರ್ಶನಿಕ ದೃಷ್ಟಿಯನ್ನು ತೋರಿಸುತ್ತದೆ. ಇದಕ್ಕೆ ಹಿನ್ನೆಲೆ-ಸ್ಫೂರ್ತಿ ನೀಡಿದೆ- ಜಿನಸೇನಾಚಾರ್ಯರ ಪೂರ್ವಪುರಾಣ. ಅಲ್ಲಿ ಧರ್ಮ, ಮೊದಲು ಮತ್ತು ಕೊನೆ; ಕಾವ್ಯಧರ್ಮ ಉಪಷ್ಟಂಭಕ. ಆದರೆ, ಪಂಪ 'ನೆಗಳ್ದಾದಿ ಪುರಾಣದೊಳ್ ಅರಿವುದು ಧರ್ಮಮಂ. ಕಾವ್ಯಧರ್ಮಮಂ' ಎಂದು ತನ್ನ ಗುರಿ-ಗಮ್ಯಗಳನ್ನು ಖಚಿತಪಡಿಸಿರುವನು. ಇವೆರಡನ್ನು ಪೃಥಕ್ಕಾಗಿ ಚಿತ್ರಿಸಿಲ್ಲ. ಜೊತೆ ಜೊತೆಯಾಗಿಯೇ ಬಿಂಬಿಸಿರುವನು. ಜಿನಸೇನರಲ್ಲಿ ಬರುವ ಕಾವ್ಯಾರಂಭದ ವಿಸ್ತಾರವಾದ ಪಂಚಪರಮೇಷ್ಠಿಗಳ ಸ್ತೋತ್ರ, ಪಂಪನಲ್ಲಿ ಸಂಗ್ರಹಿತವಾಗಿ ಅರ್ಥಪೂರ್ಣವಾಗಿ ಬಂದಿದೆ. ಹಾರೈಕೆಯ ನುಡಿಗಳಲ್ಲಿ- 'ಮುಕ್ತಶ್ರೀಸುಖ-ಓಸರಿಸಿ ಕಳೆಗೆ ಸಂಸಾರ ಕಾಂತಾರದಿಂದಂ-ಜ್ಯೋತಿಸುಗೆ ಚಿತ್ತಗೃಹದೊಳ್ ರತ್ನತ್ರಯ ಜ್ಯೋತಿಯಂ-ಕಾರ್ಯಮೆಮಗಿದುವೆ ಶಿವಪದ-ಅವಿಘ್ನ ಮನಃಪ್ರವೃತ್ತಿ-ಭವ್ಯಕೋಟಿಗೆ ಸೌಖ್ಯ-ಶಾಶ್ವತ ಪದ-ಭವ್ಯೋತ್ಸವ-ಇದೆಲ್ಲ ಧರ್ಮೋದ್ದೇಶ. ಅಂತೆಯೇ, ಕೃತಿ ಪುಣ್ಯವನಿತೆಯಂತೆ ವಿದಗ್ಧ ಬುಧಜನದ ಮನಮನಲೆವುದು-ಕೊಂಕುವೆತ್ತ ಪೊಸನುಡಿ-ಉದಾತ್ತ ಅರ್ಥಪ್ರತೀತಿ-ಕಾವ್ಯರತ್ನ-ಕೋಮಳಮತಿಸುಭಗಂ ಸುಂದರಂ ಸೂಕ್ತಗರ್ಭಂ ಮೃದು ಸಂದರ್ಭಂ, ನಿಚ್ಚಂ ಮನಂಗೊಳ್ವುದು-ಇತ್ಯಾದಿ ಕಾವ್ಯೋದ್ದೇಶ ವಿಚಾರಗಳನ್ನು ಬಿಂಬಿಸಿ, ಕೊನೆಯಲ್ಲಿ ಇವೆರಡನ್ನು ಒಡಬೆರಿಸಿದುದನ್ನು 'ಅಭ್ಯುದಯ ಪ್ರಾಪ್ತಿ ನಿಮಿತ್ತಂ ಉತ್ತಮಯಶಂ ಸಂಸಾರದೊಳ್ ಸಾರಮಪ್ಪುದರಿಂ, ಧರ್ಮಂ, ಅದಂ ನಿಮಿರ್ಚುವುದರಿಂ ಸಂಸಾರಸಾರೋದಯ' ನೆಂದು ತನ್ನ ಬದುಕಿನ-ಕಾವ್ಯದ ಗುರಿಯನ್ನು ಗುರುತಿಸಿಕೊಂಡಿದ್ದಾನೆ. ಅಂತೆಯೇ,

ಇದುವೆ ಸುಕವಿ ಪ್ರಮೋದ ಪದಮಿದುವೆ ಸಮಸ್ತ ಭವ್ಯಲೋಕ ಪ್ರಮುದ 'ಪ್ರದಮೆನೆ ನೆಗಳ್ದಾದಿ ಪುರಾಣದೊಳರಿವುದು ಕಾವ್ಯಧರ್ಮಮಂ ಧರ್ಮಮಂ ಎಂದು ಬಿಚ್ಚು ನುಡಿ ನುಡಿದಿರುವನು, ಅದನ್ನು 'ಪ್ರಾಣಿಹಿತ, ವಿನೇಯ ಹಿತ. ಜಗತ್‌ಕಲ್ಯಾಣ ಹೇತುವಾದ ಆದಿಪುರಾಣವನ್ನು 'ಭಕ್ತಿಯಿಂ ವಿರಚಿಸುವೆಂ' ಎಂದು ಹೇಳಿ, ಕಾವ್ಯಾಂತ್ಯದಲ್ಲಿ ಈ ಗುರಿ ಸಾಧಿತವಾಗಿರುವುದನ್ನು ಹೆಮ್ಮೆಯಿಂದ ಸೂಚಿಸಿರುವನು. ಆದಿಪುರಾಣ, ಪಂಪನ ಕೈಯಲ್ಲಿ ಆದಿದೇವಚರಿತ, ಭವ್ಯಾಳಿಗೆ ಕರ್ಣಾಮೃತಸ್ಯಂದಿ, ಸ್ವರ್ಗ-ಅಪವರ್ಗ, ಆಸ್ಪದಮಾ ವಸ್ತುಕೃತಿ, ದೇಸಿ-ಮಾರ್ಗ ಸಮನ್ವಿತವಾದ ಬೆಡಗಿನ ಕಾವ್ಯವನ್ನು, ಸಂಸಾರಸಾರೋದಯನಾದ ಪಂಪ, ಸಂಸಾರ ಸಾರೋದಯಕ್ಕಾಗಿಯೇ ಬರೆದನೆಂದು ಜಾಹೀರುಗೊಳಿಸಿರುವನು.

ರಸಭಾವೋಪೇತ ಧರ್ಮಾಮೃತ ರಸಮಯದೊಳ್, ಘೋರ ಸಂಸಾರ ನಾನಾ ವ್ಯಸನ ವ್ಯುಚ್ಛೇದಿಯೊಳ್, ಧಾರ್ಮಿಕ ಜನಜನಿತಾನಂದದೊಳ್, ಹೃದ್ಯವಿದಾ

ರಸನೊಳ್, ಸಂಸಾರ ಸಾರೋದಯ ವಿರಚಿತಮೊಳ್,ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದಿತ್ತಾದಿ ತೀರ್ಥೇಶ್ವರನ ಚರಿತದೊಳ್ ವಾಕ್ಯ ಮಾಣಿಕ್ಯ ಕೋಶಂ.(೧೬-೪೧)

ಇಲ್ಲಿನ ಪ್ರತಿಶಬ್ದವೂ, ಅರ್ಥಪೂರ್ಣವಾದ ಮಾಣಿಕ್ಯ. ಕವಿಯಾದ ಪಂಪ, ಕಂಡು, ಕಾಣಿಸಿದು ಧರ್ಮಾಮೃತವನ್ನು ರಸ ಭಾವೋಪೇತವಾಗಿ. ಅದರಿಂದ ಘೋರಸಂಸಾರ ನಿರಸನವುಂಟಾಗಿ' ಧಾರ್ಮಿಕರಲ್ಲಿ ಆನಂದವನ್ನುಂಟು ಮಾಡುವದಲ್ಲದೆ, ಸಹೃದಯರಿಗೆ 'ಹೃದ್ಯವಿದ್ಯಾರಸ' ವನ್ ವಾಗ್ವಧೂ ಮುದ್ರೆಯಲ್ಲಿ ನಿಕ್ಷೇಪಿಸಿರುವುದರಿಂದ. ಆದಿಪುರಾಣ ವಾಕ್ಯ ಮಾಣಿಕ್ಯಕೋಶ-ಮಾಣಿಕ್ಯದ ಬೆಡಗೂ ಇದೆ, ಬೆಲೆಯೂ ಇದೆ ಈ ಕೃತಿಯಲ್ಲಿ. ಇದು ಭವ್ಯರಿಗಂತೂ ಅನಂತ ಸುಖಾಭಿಲಾಷೆಯನ್ನು ನೀಡುತ್ತದೆ. ಹೀಗೆ, ಆದಿಪುರಾಣದ ಗುರಿ ಭವ್ಯೋತ್ಸಾಹ, ಕಾವ್ಯರಸೋತ್ಸಾಹ. ಅದನ್ನು ಸಾಧಿಸಿದ ಪಂಪ ಸಂಸಾರಸಾರೋದಯ. ಭವಸಂಸಾರ ಸಾರೋದಯವೇ ಆದಿಪುರಾಣದ ಗುರಿ-ಗಮ್ಯ.

ಪಂಪನ ಜೀವನ ದೃಷ್ಟಿ, ಕಾವ್ಯೋದ್ದೇಶ ರೂಪಣೆಗೆ, ಮುಖ್ಯ ಕಾರಣ, ಜಿನಸೇನಾಚರ್ಯರೇ, ಅವರ ಪೂರ್ವಪುರಾಣದಲ್ಲಿಯೇ, ಈ ಉದ್ದೇಶ ನಿರ್ದಿಷ್ಟವಾಗಿದೆ. ಅಲ್ಲಿ ಧಾರ್ಮಿಕಾಂಶಗಳಿಗೆ ಒತ್ತು, ಒತ್ತಡ, ಕಾವ್ಯಾಂಶಕ್ಕೂ ಕೊರತೆಯಿಲ್ಲ. ಆದರೆ, ಪಂಪ, ಮಾನವೀಯಾಂಶಗಳನ್ನು. ಮಾನವೀಯ ಮೌಲ್ಯಗಳನ್ನು ಕಂಡುಕೊಳ್ಳಲು ಹೊರಟವನಾದ್ದರಿಂದ, "ಪೂರ್ವಪುರಾಣ"ದಲ್ಲಿ ತನ್ನ "ಆದಿಪುರಾಣ"ದ ಮೂರ್ತಿಯನ್ನು ಕಡೆದಿದ್ದಾನೆ, ಕಂಡಿದ್ದಾನೆ ಮೂಲಕಾವ್ಯದ ಋಣವನ್ನು ಒಪ್ಪಿಕೊಂಡೂ, ತನ್ನ ಪ್ರತಿಭಾವಿಲಾಸದ ಧನ-ಮಹದ್ಧನವನ್ನು ಸಾಧಿಸಿರುವನು. ಆಧುನಿಕ ದೃಷ್ಟಿಯ ಕಾವ್ಯಕೇಂದ್ರಬಿಂದು ಹಾಗೂ ಐಕ್ಯತೆಯಿಲ್ಲದ, ಮೂಲವನ್ನು ಸಂಗ್ರಹಿಸುವಲ್ಲಿ, ರಸ-ಭಾವ ಸನ್ನಿವೇಶ ವಿಸ್ತರಣೆಯಲ್ಲಿ, ಭೋಗಜೀವಿಯಾದ ಮಾನವ, ತ್ಯಾಗಜೀವಿಯಾದ ತೀರ್ಥಂಕರತ್ವ ಸಾಧನೆಯ ಚಿತ್ರಣದಲ್ಲಿ ಪಂಪ ತನ್ನತನವನ್ನು ಮೆರೆದಿದ್ದಾನೆ, ಮುಂದಿನವರಿಗೆ ಮಾರ್ಗದರ್ಶನ ನೀಡಿದ್ದಾನೆ.

ಜೈನ ಧಾರ್ಮಿಕ ಸಾಹಿತ್ಯೇತಿಹಾಸದಲ್ಲಿ ವೀರಸೇನ-ಜಿನಸೇನ-ಗುಣಭದ್ರರು ಅತ್ಯಂತ ಪ್ರಮುಖರು. ಈ ಗುರು ಶಿಷ್ಯ ಪರಂಪರೆ ಜೈನ ತತ್ವ-ದರ್ಶನ-ಸಾಹಿತ್ಯದ ತ್ರಿಕೂಟವೇ ಆಗಿದೆ. ಮಾನ್ಯಖೇಟದ ರಾಷ್ಟ್ರಕೂಟ ದೊರೆ ನೃಪತುಂಗನ ಗುರುಗಳಾದ ಜಿನಸೇನಾಚಾರ್ಯರು, ಇಂದು ಮಹಾಪುರಾಣವೆಂದು ಪ್ರಸಿದ್ಧವಾಗಿರುವ ಪ್ರಥಮ ಭಾಗವಾದ ಆದಿಪುರಾಣದ ೪೭ ಪರ್ವಗಳಲ್ಲಿ ೧೨,೦೦೦ ಶ್ಲೋಕ ವಿಸ್ತಾರದ ೪೨ ಪರ್ವಗಳನ್ನು ಬರೆದರು. ಉಳಿದ ಭಾಗವನ್ನು ಅವರ ಶಿಷ್ಯ ಗುಣಭದ್ರಾಚಾರ್ಯರು ಬರೆದು ಮುಗಿಸಿದರು. ಒಟ್ಟಿನಲ್ಲಿ,

೨೦,೦೦೦ ಶ್ಲೋಕಗಳ ಮಹಾಪುರಾಣ, ಒಂದು ಮಹಾಪುರಾಣವೇ, ಒಂದು National Epic. ಜಿನಸೇನಾಚಾರ್ಯರ ಕೃತಿ ನೇರವಾಗಿ ಪ್ರಥಮ ತೀರ್ಥಂಕರನ ಕಥೆ, ಜನ್ಮಾವಳಿ, ಪಂಚಕಲ್ಯಾಣ, ಕೊನೆಯಲ್ಲಿ ಭರತ–ಬಾಹುಬಲಿ ಪ್ರಸಂಗಗಳ ಕಥೆ ಸವಿಸ್ತಾರವಾದ ಧಾರ್ಮಿಕ ಸಂಗತಿಗಳನ್ನೊಳಗೊಂಡ ಒಂದು ಧರ್ಮಾರಣ್ಯ. ಮಹಾಭಾರತ, ರಾಮಾಯಣಗಳಂತೆ ಜೈನರ ಪೂಜ್ಯ ಕಾವ್ಯ ಮಹಾಪುರಾಣ. ಅದರ ವಿಸ್ತಾರ, ಘನತೆ, ಅದ್ಭುತತೆಗಳ ಸಮಗ್ರಕಲ್ಪನೆ ಜಿನ ಸೇನಾಚಾರ್ಯರಿಗೆ ತಿಳಿದೇ ಇತ್ತು. ಮಹಾಪಂಡಿತರೂ, ಧರ್ಮ ವ್ಯಾಖ್ಯಾನ ಕಾರರೂ ಆದ ಅವರೂ ಕೂಡ,

"ತತ್ಪುರಾಣಕವೀನೇವ ಮತ್ವಾ ಹಸ್ತಾವಲಂಬನಂ
ಮಹತೋ ಅಸ್ಯ ಪುರಾಣಾಬ್ಧೇ ಸ್ತರಣಾಯೋದ್ಯತೋಸ್ಮ್ಯಹಂ" (೧–೩೫)

ಹಿಂದಿನ ಪುರಾಣ ಕವಿಗಳ ಕೈ ಹಿಡಿದುಕೊಂಡೇ, ಈ ಮಹಾಸಮುದ್ರವನ್ನು ದಾಟಲು ಧೈರ್ಯ ಮಾಡಿದ್ದೇನೆಂದು ವಿನಯಪೂರ್ವಕವಾಗಿ ತಿಳಿಸಿರುವರು. ಅದನ್ನನುಸರಿಸಿದ, ಪಂಪನೂ ಅದೇ ದೃಷ್ಟಿ, ಅದೇ ವಿನಯ ತೋರಿ, 'ಧರ್ಮ ಸಂಬಂಧಿ' ಯಾದ ಮೂಲದಿಂದ, ಜೀವನ ರಸ ಸಂಬಂಧಿಯಾದ ಕಾವ್ಯವನ್ನೂ ರೂಪಿಸಿದನು. ೨೧೦ ಶ್ಲೋಕಗಳ ಕವಿ–ಕಾವ್ಯ–ಸಹೃದಯ ಸಂಗತಿಗಳನ್ನು, ಪಂಪ, ವೃತ್ತ, ಕಂದ, ಗದ್ಯದಲ್ಲಿ, ಹಿತ–ಮಿತ–ಮೃದು ವಚನದಿಂದ ರಸೋದಯವಾಗುವಂತೆ ನಿರೂಪಿಸಿರುವನು.

ಪಂಪನ ಆದಿಪುರಾಣ ಹಾಗೂ ಜಿನಸೇನರ ಪೂರ್ವಪುರಾಣಗಳ ತೌಲನಿಕ ಅಧ್ಯಯನವಿನ್ನೂ ಸಮಗ್ರವಾಗಿ ಆಗಬೇಕಾಗಿದೆ. ಆದಿಪುರಾಣದ ವಸ್ತು ವಿನ್ಯಾಸ ಹಾಗೂ ಕಾವ್ಯ ವಿಮರ್ಶೆ ಮಾಡಿದವರೆಲ್ಲ ಇದನ್ನು ಕ್ವಚಿತ್ತಾಗಿ ಸಾಧಿಸಿರುವರು. ಆದಿಪುರಾಣದ ಪ್ರಮುಖ ಘಟ್ಟಗಳು–ಮಹಾಬಲನ ಆಸ್ಥಾನದ ಸ್ವಯಂಬುದ್ಧೋಪದೇಶ–ಲಲಿತಾಂಗ ಸ್ವಯಂ ಪ್ರಭೆಯರ ವೃತ್ತಾಂತ–ವಜ್ರದಂತ ಮಗಳು ಶ್ರೀಮತಿಗೆ ನೀಡಿದ ಬೋಧನೆ (ಶಾಕುಂತಲ ನಾಟಕದ ನಾಲ್ಕನೆ ಆಶ್ವಾಸದ ನೆನಪು) ಪುರುದೇವನ ಪ್ರಥಮ ಐದು ಭವಗಳಲ್ಲಿ ಭೋಗ ಜೀವನದ ತೀವ್ರ ಆಕಾಂಕ್ಷೆ, ಮುಂದಿನ ಭವಗಳಲ್ಲಿ ತ್ಯಾಗ ಜೀವನ ಚಿತ್ರಣ-ನೀಲಾಂಜನೆಯ ನರ್ತನ ಪ್ರಸಂಗ-ಪುರುದೇವನ ಪಂಚಕಲ್ಯಾಣ-ಸಮವಸರಣ ಭವ್ಯತೆ-ಭರತ–ಬಾಹುಬಲಿ ಪ್ರಸಂಗಗಳಲ್ಲಿ, ಪಂಪನು ಮೂಲವನ್ನನುಸರಿಸಿರುವುದೆಷ್ಟು, ಸ್ವಂತಿಕೆಯನ್ನು ಮೆರೆದುದೆಷ್ಟು ಎನ್ನುವ ವಿಮರ್ಶೆ ಹಾಗೂ ಪಂಪನ ಕವಿತ್ವದ ಮಹತ್ವವನ್ನು ವಿಮರ್ಶಕರು ಎತ್ತಿ ತೋರಿರುವರು. ಅಲ್ಲೆಲ್ಲ ಪಂಪನ ಧರ್ಮ–ಶಾಸ್ತ್ರ–ಸಾಹಿತ್ಯಾಭ್ಯಾಸ, ಅನುಸಂಧಾನ ಪರಿಣತಿ. ಸಂಗ್ರಹ–ಸಂಕ್ಷೇಪ–ವಿಕ್ಷೇಪಕ ವಿಸ್ತಾರಕ ತಾರತಮ್ಯಜ್ಞಾನ,–ಅದರ ಔಚಿತ್ಯ, ಅನೌಚಿತ್ಯಗಳು,

ಬೇಡ ಬೇಡವೆಂದರೂ, ಧಾರ್ಮಿಕ ಭಾವನಾವೇಶಕ್ಕೊಳಗಾಗಿ, ತುಂಬಿದ ನೀತಿ-ಆಚರಣೆ-ಬೋಧನೆಗಳು-ಈ ಎಲ್ಲ ಪರಿಧಿಗಳನ್ನು ದಾಟಿ, ಮಹಾಮಾನವ ಮೌಲ್ಯ ರಸೋಪೇತ ಚಿತ್ರಣದ ಪ್ರಮುಖ ಘಟ್ಟಗಳನ್ನು ರಸೋಜ್ವಲವಾಗಿ ಚಿತ್ರಿಸಿರುವುದರ ಮಹತ್ವವನ್ನು ವಿವೇಚಿಸಿರುವರು. ಸಂಪದ್ಭರಿತವಾದ ಕಾಲದಲ್ಲಿ ಬೆಳೆದು, ರಾಜಾಶ್ರಯದ ಸುಖವನ್ನುಂಡು, ಸ್ವಯಂ ರಸಿಕನಾಗಿ ಬಾಳಿದ, ಪಂಪ, ತನ್ನ ಆದಿ ಪುರಾಣದಲ್ಲಿ ಭೋಗ ಜೀವನ ವೈವಿಧ್ಯದ ತುತ್ತತುದಿಯನ್ನು, ಇನ್ನಿಲ್ಲವೆಂಬ ನುಡಿ ವಿನ್ಯಾಸದಿಂದ ಚಿತ್ರಿಸಿರುವನು. ಯುದ್ಧ ವಿದ್ಯಾವಿಲಾಸ (-ಭಾರತದಲ್ಲಿ ವಿಪುಲ ವಾಗಿದೆ-) ಹಾಗೆಯೇ ಪ್ರಕೃತಿ-ಪುಷ್ಪ-ಪ್ರಾಣಿ-ಪಕ್ಷಿ ವೈಭವ ಆದಿಪುರಾಣದಲ್ಲಿ ಮುಗಿಲು ಮುಟ್ಟಿದೆ. ಇವುಗಳಿಗೆಲ್ಲ ಮೂಲದಲ್ಲಿಯೇ ಎಡೆಯಿದ್ದರೂ, ಪಂಪನ ವಿಶಿಷ್ಟ ಸೌಂದರ್ಯಪ್ರಜ್ಞೆ, ರಸಾರ್ದ್ರಹೃದಯ, ನಿತಾಂತವಚೋವಿಲಾಸ 'ಆದಿಪುರಾಣ' ವನ್ನು ಮಹಾಕಾವ್ಯದ ಎತ್ತರಕ್ಕೆ ಏರಿಸಿವೆ. ಪಂಚಕಲ್ಯಾಣಗಳ ಭವ್ಯತೆ ನೀಲಾಂಜನೆ ನೃತ್ಯದ ಅನನ್ಯತೆ, ಭರತ-ಬಾಹುಬಲಿ ಸೆಣಸಾಟದ ರುದ್ರರಮ್ಯ ಚಿತ್ರಣ ಜಗತ್ತಿನ ಸಾಹಿತ್ಯದಲ್ಲಿಯೇ ಹೆಚ್ಚಾಗಿ ಕಾಣಬರದ 'ವೈಭವದೃಶ್ಯ'ಗಳೆಂದು ಹೆಸರಾಗಿವೆ. ಶೃಂಗಾರಪ್ರಿಯರಾದ ಕವಿಗಳಲ್ಲಿ ಸಹಜವಾಗಿರುವ ಕಲ್ಪನಾಲೋಲುಪತೆಗೆ ಪಂಪನೂ ಅಲ್ಲಲ್ಲಿ ಬಲಿಯಾಗಿರುವಂತೆ ಭಾಸವಾದರೂ, ತ್ಯಾಗಭೂಮಿಗೆ, ಹಿನ್ನೆಲೆಯಾಗಿ ನಿಲ್ಲುವ ಭೋಗ ಶೃಂಗಾರ ವರ್ಣನೆಯಲ್ಲಿ ಪಂಪನ ವಿಶೇಷ ಅನುಭೂತಿ, ವಿನೂತ ನೋಪಮಾನಗಳಿಂದ ಮೂಡಿಸುವ ನಿತಾಂತ ಅನುಭವ ಚಿತ್ರ, ಸಹೃದಯರನ್ನು ಸುಖ ಮೂರ್ಛೆಗೆ ತಳ್ಳುತ್ತದೆ. ಮೂಲದಲ್ಲಿಲ್ಲದ, ಸಂನ್ಯಾಸಿಯಾದ ಜಿನಸೇನರು ಕಾಣಲಾರದ ಚಿತ್ರಿಸಲಾರದ, ಈ ಅನುಪಮ ಸಾಧನೆ, ಸಂಸಾರ ಸಾರೋದಯನೂ, 'ವನಿತಾ ಕಟಾಕ್ಷಕುವಳಯ ವನಚಂದ್ರನೂ,' 'ಜಿನ ಚರಣಕಮಲ ಭೃಂಗನೂ' ಆದ ಪಂಪ ನಿಗೆ ಸಾಧ್ಯವಾದುದು ಅತೀ ಸಹಜವಾಗಿದೆ. ಪುರುದೇವನ ಹತ್ತು ಭವಗಳ ವರ್ಣನೆ. ಭರತಚಕ್ರವರ್ತಿಯ ವೈಭವಗಳ ಚಿತ್ರಣದಲ್ಲಿ ಈ ಅಭಿವ್ಯಕ್ತಿಗೆ ಸಹಜಾವಕಾಶ. ದೊರಕಿದೆ, ವೇಶ್ಯಾವಾಟಿಕೆಯ ವರ್ಣನೆಯೂ ಸಕಾರಣವಾಗಿದೆ. ಅದೆಲ್ಲ ಅತಿಯಾಯಿ ತೆನ್ನುವುದು, ಆಯಾ ಸಹೃದಯ ವಿಮರ್ಶಕರ ಅರಿಕೆಯ ವ್ಯಕ್ತಿತ್ವದ ದ್ಯೋತಕ.

ಬನವಾಸಿಯ ಬೆಡಗಿನ ನಾಡಿನ ಕಂದನಾದ ಪಂಪನಲ್ಲಿ ಬರುವ ಪ್ರಕೃತಿ ವರ್ಣನೆ ತಾದಾತ್ಮ್ಯತೆಯನ್ನು, ರಸತೃಪ್ತಿಯನ್ನೂ ನೀಡುವಂತಿದೆ. ಆದಿಪುರಾಣದಲ್ಲಿ ಈ ಪ್ರಕೃತಿ ವರ್ಣನೆಗೆ ಸಹಜಾವಕಾಶಗಳಿವೆ. ಅವುಗಳನ್ನೆಲ್ಲ ತುಂಬು ಹೃದಯದಿಂದ ಬಳಸಿಕೊಂಡಿರುವನು. ಮಹಾಭಾರತದ ಬನವಾಸಿಯ ವರ್ಣನೆಯನ್ನಷ್ಟೆ ಮೆಚ್ಚಿ ಮರುಳಾಗುವ ಜನ, ಆದಿಪುರಾಣದ ಭರತನ ದಿಗ್ವಿಜಯ ವರ್ಣನೆಯ ಹನ್ನೊಂದನೆಯ ಆಶ್ವಾಸವನ್ನು ಓದಿ ಆನಂದಿಸಿ, ಹುಚ್ಚರಾಗುವುದು ಸಹಜ. ಪಂಪನ ,ಪುಷ್ಪ ವರ್ಣನೆ ಯನ್ನು ಈಗಾಗಲೇ ಕವಿಸಹೃದಯರು ಕೊಂಡಾಡಿರುವರು. ಅದು ಇಂದ್ರಿಯ

ಮಟ್ಟವನ್ನು ಮೀರಿದ ಆತ್ಮ ಸಂಬಂಧಿಯಾದ ಸೌಂದರ್ಯವರ್ಣನೆ ಎಂದು ಗುರುತಿಸಿರುವವರು ಡಾ॥ ಜಿ. ಎಸ್. ಶಿವರುದ್ರಪ್ಪ. ಆದರೆ, ಲತೆ–ಪುಷ್ಪ–ಲತಾಂಗಿಯರ ಸಮನ್ವಯ ವರ್ಣನೆಯಲ್ಲಿ ಅಭೂತಪೂರ್ವವಾದ ಯಶಸ್ಸನ್ನು ಸಾಧಿಸಿರುವವನು ಪಂಪ. ತೀನಂಶ್ರೀ ಪಂಪನನ್ನು ಕನ್ನಡದ ಕಾಳಿದಾಸನೆಂದು–ವರ್ಣಿಸಿದುದು ಅತಿಯಾಯಿತೆಂದು ಭಾವಿಸಿ, ಡಾ॥ ಜಿ. ಎಸ್. ಪಂಪ ಕಾಳಿದಾಸನ ತಮ್ಮ ಎಂದು ಕರೆದರು. ಪಂಪನ ವರ್ಣನೆಗಳನ್ನು ಸವಿಸ್ತಾರ ಪರಿಶೀಲನೆಗೊಳಗಾಗಿಸಿದರೆ, ಈ ನೈಚ್ಯಾನುಸಂಧಾನದ ಅಭಿಪ್ರಾಯಗಳಿಗೆ ಅವಕಾಶವಿಲ್ಲ. ಪಂಪ ಪ್ರಪಂಚದ ಅಂಥ ಎಲ್ಲ ಶ್ರೇಷ್ಠ ಕವಿಗಳಿಗೆ ಹೆಗಲೆಣೆಯಾದ ಕವಿ.

ಪಂಪನ ಕಾವ್ಯರಚನಾ ಕೌತುಕಗಳಲ್ಲೊಂದಾದ 'ವರ್ಣನೆ'ಯ ಔಚಿತ್ಯ ಮಹತ್ವವನ್ನೂ ಬಿಂಬಿಸುವ ಈ ಪ್ರಸಂಗ ನೋಡಿ.

ವಜ್ರಜಂಘ– ಶ್ರೀಮತಿಯರು ಪರಿವಾರ ಸಮೇತ ಸರೋವರದ ಹತ್ತಿರ ಬೀಡು ಬಿಟ್ಟಿರುವ ಪ್ರಸಂಗವನ್ನು ಜೀನಸೇನರು ವರ್ಣಿಸುವುದು ಹೀಗೆ:—

'ಯದಂಬುಜರಜಃ ಪುಂಜ ಪುಂಜರೀಕೃತವೀಚಕಂ
ಕನಕದ್ರವಸಚ್ಛಾಯಂ ಬಿಭತಿಸ್ಮಾಂಬುಶೀತಲಂ' (೮–೧೫೧)

ಈ ಪುಷ್ಪ ಸರೋವರದ ಶೀತಲವಾದ ನೀರು, ಕಮಲಗಳ ಧೂಳುಗಳಿಂದ ಹಳದಿ ಬಣ್ಣವಾದ ತೆರೆಮಾಲೆಗಳುಳ್ಳುದಾಗಿಯೂ, ಬಂಗಾರ ರಸದಂತೆ ಕಾಂತಿಯುಳ್ಳದ್ದಾಗಿಯೂ ಇದ್ದಿತು. (ಮಹಾಪುರಾಣ ಸಂ. ೧ ಪು. ೩೧೩) ಈ ಮೂಮೂಲಿ ವರ್ಣನೆಗೆ, ವಿನೂತನ ಕಲ್ಪನೆಯನ್ನು ರೂಪಿಸಿ, ಪಂಪ ಹೊಸ ಸೊಗಸಿನ ಅರ್ಥವನ್ನು ಚಿಮುಕಿಸುತ್ತಾನೆ.

ಇದು ಗಹನಾಂತರಾಳವಿದರೊಳ್ ನೆಲಸಿರ್ದ ಮದೀಯ ತೋಯದಿಂ
ಪೊದವಿದ ನೀರಜಾವಳಿಯ ಚೆಲ್ವು ನಿರರ್ಥಕಮಾದುದಿಂದು ಪೊ
ರ್ದಿದಜನದಿಂ ಕರಂ ಸಫಳಮಾದುದು ಪೆಂಪೆನಗಾದುದೆಂದು ರಾ
ಗದಿನುಲವಂತುಟಾಯ್ತು ಕಲಹಂಸನಿನಾದದಿನಾಸರೋವರಂ,

(ಆ. ಪು. ೪–೯೩)

ಮೂಲದಲ್ಲಿಲ್ಲದ ಕಲಹಂಸ ನಿನಾದವನ್ನು ಕಲ್ಪಿಸಿ, ಅವುಗಳ ಮೂಲಕ, ಸರೋವರ, ತನ್ನಲ್ಲಿರುವ ಶೀತಲವಾದ ನೀರು, ಸುಂದರವಾದ ಕಮಲಗಳ ಚೆಲ್ವು ನಿರರ್ಥಕವಾಗಿದ್ದಿತು. ಇಂದು ತಮ್ಮಂಥವರ ಬರವಿನಿಂದ, ಅದು ಸಫಲವಾಯಿತೆಂಬ ಕಲ್ಪನೆಯನ್ನು ಬಿಂಬಿಸಿರುವವನು ಪಂಪ.

ಅಂತೆಯೇ, ಮುಂದುವರಿದು, ವಜ್ರಜಂಘನ ಆನೆಗಳು ಆ ಸರೋವರದಲ್ಲಿ ಅವಗಾಹಕ್ಕಿಳಿದುವು ಎಂಬ ಸಂಗತಿಗೆ, ಪಂಪನು ವಿವರವಾದ ವರ್ಣನೆ ನೀಡಿ, ಪರಂಪರೆಯ ಚಿತ್ರ, ಇನ್ನಷ್ಟು ಸೊಗಸಾಗುವಂತೆ ಮಾಡಿರುವ, ಅಲ್ಲಿ ತೋರುತ್ತದೆ ಅವನ ಸೌಂದರ್ಯಪ್ರಜ್ಞೆ.

ಮೂಲದಲ್ಲಿ ಇಂತಿದೆ:
ಕುಸುಮಾಪಚಯೋ ತೇಷಾಂ ಪದ ಪಾ ಎಟಪೈರ್ನತಾಃ
ಅನುಕೂಲ್ಯಮಿವಾತೇನುಃ ಸಮಂತಾತಿಥ್ಯ ಸತ್ಕ್ರಿಯಾಃ (೮-೧೫೮)
ಕಾಯಮಾನೇ ಮಹಾಮಾನೇ ರಾಜಾ ತತ್ರಾವ ಸತ್ಸುಖಂ।
ಸರೋಜಲ ತರಂಗೋತ್ಥ ಮೃದು ಮಾರುತ ಶೀತಲೇ " (೮-೧೬೬)

ಈ ಸನ್ನಿವೇಶದಲ್ಲಿ ಜಿನಸೇನಾಚಾರ್ಯರು ಆನೆ, ಕುದುರೆ ಹಾಗೂ ಸ್ತ್ರೀಯರು ಸರೋವರದ ಲಾಭ ಪಡೆದರೆಂಬ ವಿವಿಧ ಚಿತ್ರಗಳನ್ನು ನೀಡುತ್ತಾ ೧೦-೧೫ ಶ್ಲೋಕಗಳಷ್ಟು, ವಿಸ್ತರಿಸುತ್ತಾರೆ. ಆದರೆ, ಪಂಪ ವಿನೂತನ ದೃಷ್ಟಿಯ ವರ್ಣನೆಯಿಂದ, ಒಟ್ಟು ಸನ್ನಿವೇಶವೇ ಜೀವಂತವಾಗುವಂತೆ ಮಾಡಿರುವನು.

ಆಗಳೆ ಮಾಟ್ಟಿ ಚಿತ್ರ ರಚನಾಳಿಗೆ, ಜೈನಗೃಹಕ್ಕೆ, ಕಾಂತ ಕಾಂ.
ತಾಗಣ ಕರ್ಣಪೂರ ಕುಸುಮಾಭರಣಾಳಿಗೆ ಯೋಗ್ಯಮಾಗಿ, ಮೇ
ಲಾಗಿ ತೆರಳ್ದು ಪೊಕ್ಕು ಪೊರಮಟ್ಟ ಮದೇಭಗಣಕ್ಕೆ ಮಂಡನಾ
ಯೋಗಮು ಮಾದುವಾ ಕೊಳದಕೋಮಲ ನೀರಜ ಪುಷ್ಪ ಜಾತಿಗಳ್
(೪-೯೪)

ಚಲಕಲಹಂಸ ಸಾರಸರಥಾಂಗ ಮದಾಳಿ ನಿನಾದ ಕೈರವೋ
ತ್ಪಲ ಶತಪತ್ರ ಮಂದಮಕರಂದ ರಸೋತ್ಕಟ ಗಂಧ ಬಂಧುರಂ
ಲಲಿತ ನೃಪಾಂಗನಾಲಕ ಚಯಂಗಳನಾಡಿಪುದಾಯ್ತು ಸಂತತೋ.
ಚ್ಛಲಿತ ತರಂಗ ಶೀಕರ ತುಷಾರಜಲಂ ಸರಸೀಸಮೀರಣಂ (೪-೯೫)

ಪ್ರಕೃತಿ ರಮಣೀಯ ಸರೋವರ, ವನರಾಜ, ಪುಷ್ಪಸಮುದಾಯವನ್ನು ಕಂಡ ಕೂಡಲೇ ಪಂಪ, ಕಲ್ಪನಾಶೀಲನಾಗುತ್ತಾನೆ. ಭಾವಭರದಲ್ಲಿ ಬರೆಯುತ್ತಾನೆ. ಮೂಲದ ಸೂಚನೆಗಳ ಸುತ್ತ ವಿನೂತನ ಚಿತ್ತ ಚಿತ್ತಾರವನ್ನೇ ನೀಡುತ್ತಾನೆ, ಅದನ್ನು ಅನುಭವಿಸಿ ಚಿತ್ರಿಸುತ್ತಾನೆ. ಆ ಸರೋವರದ ಶೀತಲ ಜಲ, ಸುಂದರ ಪುಷ್ಪ, ಹಾಗೂ ಮಂದಮಾರುತ ವಜ್ರಜಂಘ ರಾಜನನ್ನು ಸೇವಿಸಿದುವೆಂಬ ಅರ್ಥದ ಹಿಂದಿನ ಧ್ವನಿ-ರಾಜ್ಯದಲ್ಲಿ ನೆಮ್ಮದಿ ಸ್ಥಾಪಿಸಲು ಸೈನ್ಯ ಸಮೇತ ಹೊರಟ ರಾಜನಿಗೆ, ವೈರಿಗಳೆಲ್ಲ ಶರಣರಾದರು, ಅಷ್ಟೇ ಅಲ್ಲ, ಅವರ ಜೀವನ ಸಾರ್ಥಕವಾಯಿತು. ಈತನ

ಸೈನ್ಯಕ್ಕೆ ಮುಂದಿನದೆಲ್ಲ ಲೀಲಾಜಾಲವಾಯಿತು ಎಂದು. ಪಂಪನ ಪ್ರತಿಭೆಯ ಸ್ಪರ್ಶ ಆತನ ಕಾವ್ಯಕ್ಕೆ ಸೌಂದರ್ಯದ ಕಮನೀಯತೆಯನ್ನು ತಂದಿದೆ ಎಂಬುದಕ್ಕೆ ಇದೊಂದು ಪುಟ್ಟ ನಿದರ್ಶನ! ಆತನ ಸೌಂದರ್ಯಾಸಕ್ತಿಯ,ಅನುರಕ್ತಿಯ ಪ್ರದರ್ಶನ.

ಮೂಲದಲ್ಲಿಲ್ಲದ ನೀಲಾಂಜನೆಯ ನರ್ತನದ ಸೊಗಸು-ಸೊಗಡುಗಳನ್ನು ಅನೇಕ ವಿಮರ್ಶಕರು ಇನ್ನಿಲ್ಲದ ಮಾತುಗಳಿಂದ ವರ್ಣಿಸಿರುವರು. ನಿಜ. ಅಂತೆಯೇ, ಸಣ್ಣ–ಪುಟ್ಟ ಸನ್ನಿವೇಶಗಳಲ್ಲಿಯೂ, ಇಂಥ ಸೊಗಸನ್ನು ಸಿಂಪಡಿಸಬಲ್ಲ ಪಂಪನ ಸಾಮರ್ಥ್ಯಕ್ಕೆ ಇನ್ನೊಂದು ಪುಟ್ಟ ಉದಾಹರಣೆ ಇಂತಿದೆ.

ಭರತನ ದಿಗ್ವಿಜಯ ಪ್ರಯಾಣದಲ್ಲಿ ಬರುವ ಸರ್ವಋತು ವೈಭವದ ವರ್ಣನೆ ಪ್ರಸಿದ್ಧವಾಗಿದೆ. ಮೂಲವನ್ನು ಮೀರಿನಿಂತ ಪಂಪನ ಸೌಂದರ್ಯ ದೃಷ್ಟಿಯ ಪ್ರತೀಕವೆಂದು ಇದು ಪ್ರಸಿದ್ಧವಾಗಿದೆ. ಆದರೆ, ವನಸ್ತ್ರೀಯರು, ಭರತರಾಜನಿಗೆ ಆತಿಥ್ಯ ಮಾಡಿದರು. ಆ ವನದೇವತೆ ಹಾಗೂ ವನಸ್ತ್ರೀಯರು ಕೂಡಿ, ಭರತನಿಗೆ ಸಂಗೀತ–ನರ್ತನದ ಆಮೋದವನ್ನುಂಟು ಮಾಡಿದರು. ಅದನ್ನು ಪಂಪ ವರ್ಣಿಸುವುದು ಹೀಗೆ :

ಅಳಿನಿನದದ ಮದಕೋಕಿಳ। ಕಳನಿನದದ ಜತಿಯೊಳಭಿನಯಮುಮಂ ನೆಗಟ್ಟಿನೆಗಂ
ಲಲಿತಮನೇನಾಡಿಸಿದನೊ । ಮಲಯಾನಿಲ ನರ್ತಕಂ ಲತಾನರ್ತಕಿಯಂ ॥
ಅಂಕುರ ಪಲ್ಲವ ಕುಸುಮಾ । ಲಂಕಾರದ ಚೂತಲತಿಕೆ ನರ್ತಕಿವೊಲ್ ತ
ನ್ನಂಕುರದಿಂ ಶಾಖೆಯಿನೇ । ನಂಕರ ಶಾಖಾಭಿನಯಮನಭಿನಯಿಸಿದುದೊ
ಮುಕುಳದ ವೆಲ್ಪಿನ ಭಂಗಿಯ । ನೆಱವಿನೊಳಿವೆ ಮಿಗಿಲವರ್ಕಮೆನೆ ಭರತನ ಕ
ಣ್ಣೆಱಕಮನೆ ಪಡೆದು ಚೆಲ್ವಂ । ಮರೆಯಿಸಿದುವುದ್ಯಾನ ಲತೆಗಳಂ ವನಲತೆಗಳ್

(೧೧–೯೧, ೯೨, ೯೩)

ಈ ಮೂರು ಕಂದ ಪದ್ಯಗಳ ಸಂಕ್ಷಿಪ್ತ ವಿನ್ಯಾಸದಲ್ಲಿ, ವನಲತೆಗಳ ನರ್ತನ, ಸೇವೆ, ಸಂಗೀತ ಸೇವೆಗಳ ಸಮನ್ವಯ ಚಿತ್ರಣವನ್ನು ಪಂಪ ನೀಡಿ, ಮುಂದಿನ ಗದ್ಯಭಾಗದಲ್ಲಿ 'ಅಲ್ಲಿ ನವಮಾಲಿಕಾ ಕುಸುಮ ಸುಕುಮಾರಿಯರ್ ನವಮಾಲಿಕಾ ಲತೆಗಳುಮಂ, ರಂಭಾಸ್ತಂಭೋಪಮಾನೋರುಯುಗಳೆಯರ್ ಶಾತಕುಂಭ ರಂಭಾವನಗಳುಮಂ...... ಕಾಮುಕಾರ್ಮುಕೋಪಮಾನ ಭ್ರೂಲತೆಯರ್ ಪುನ್ನಾಗ ತಿಲಕೆಗಳುಮಂ ನೋಡುತ್ತುಂ ಕುಸುಮಾಪಚಯ ಕ್ರೀಡಾ ವಿಳಾಸದಿಂ' ತೊಳಲಿದರೆಂಬ ವರ್ಣನೆಯಲ್ಲಿಯೂ ಈ ಪ್ರಕೃತಿ–ಪುರುಷ ಸೌಂದರ್ಯ ಸಮನ್ವಯದ ಚಿತ್ರಣ ಪಂಪನ ಕೊಡುಗೆ, ಉದ್ಯಾನಲತೆಗಳನ್ನೂ, ವನಲತೆಗಳು ಮರೆಯಿಸಿದುವೆಂಬಲ್ಲಿ ಕಾಳಿದಾಸನ ನೆನಪು ಬಂದರೂ, ಒಟ್ಟನ ದೃಶ್ಯದಲ್ಲಿ, ಪಂಪನ ಸೌಂದರ್ಯಾ

ಭಿವ್ಯಕ್ತಿ ಗುಣವನ್ನು ಮೆಚ್ಚದವರಾರು ? ಆದರೆ ಶಬ್ದ ಸಮೂಹದಲ್ಲಿ ಹೊಕ್ಕು, ಅರ್ಥವಂತಿಕೆಯನ್ನು ಗಮನಿಸುವ ಸಹೃದಯ ವ್ಯವಧಾನ ರಸಿಕತೆ ಬೇಕು, ಅಷ್ಟೆ.

ಪಂಪನು ಕಥಾವಸ್ತು, ವರ್ಣನೆಗಳಿಗಷ್ಟೇ, ಜಿನಸೇನರಿಗೆ ಋಣಿಯಾಗಿಲ್ಲ, ಉದಾತ್ತ ಪಾತ್ರ ಚಿತ್ರಣಕ್ಕೆ, ತತ್ವವಿವೇಚನೆಗೆ, ಜೀವನ ದರ್ಶನಕ್ಕೂ ಪಂಪ ಚಿರ ಋಣಿಯಾಗಿದ್ದಾನೆ. ಶಿಲೆಯನ್ನೇ ಕಲ್ಪಿಸಿ, ಶಿಲ್ಪಿಸಿದ ಮಹಾಕವಿಶಿಲ್ಪಿ ಜಿನಸೇನಾ ಚಾರ್ಯರಿಗೆ, ಪಂಪನ ಶಿಲ್ಪಚಾತುರ್ಯ ಅಡಿಯಾಳಾಗದೆ ಸ್ವಂತಿಕೆ ಮೆರೆದಿದೆ. ಆದಿಪುರಾಣದಲ್ಲಿ ಬರುವ ಹಿರಿ–ಕಿರಿ ಪಾತ್ರಗಳು, ಅವುಗಳು ನಡೆದಾಡುವ ಸನ್ನಿವೇಶ, ಅವುಗಳು ಸಾಧಿಸಿದ ಕಾರ್ಯಗಳೆಲ್ಲ ಪಂಪನಲ್ಲಿ ಮಟ್ಟಸವಾಗಿ ಬಂದಿರುವುದು ಆತನ ಕಲಾದೃಷ್ಟಿ, ಜೀವನ ಶ್ರದ್ಧೆ, ಜೈನಧರ್ಮಶಾಸ್ತ್ರ ಪರಿಣತಿ, ಕನ್ನಡ–ಸಂಸ್ಕೃತ ಭಾಷಾ ಪಾಂಡಿತ್ಯಗಳ ಸಮನ್ವಯದಿಂದ ಎಂಬುದು ಸತ್ಯ. ಜಿನಸೇನರ ಕೃತಿಯ ದೊಡ್ಡ ಬೆಟ್ಟದಲ್ಲಿ, ಆದಿಪುರಾಣದ ಗೊಮ್ಮಟ ಮೂರ್ತಿಯನ್ನು ಬಿಡಿಸಿ, ಕಡೆದು, ನಿಲ್ಲಿಸಿದ ದೇವ ಮಾನವ ಕಲೆಗಾರ ಪಂಪ. ಜಿನಸೇನ ಹಾಗೂ ಪಂಪರ ಕೊಡು–ಪಡೆಗಳನ್ನು ಅಳೆದು, ಸುರಿದು, ನೋಡುವ ಕಾರ್ಯ ಇನ್ನೂ ಆಗಬೇಕಾಗಿದೆ. ಈ ಎರಡು ಕೃತಿಗಳು ಇಂದು ನೇರವಾಗಿ ಕನ್ನಡದಲ್ಲಿಯೇ ದೊರೆಯುವುದರಿಂದ, ಸಾಹಸಿಗಳು ಇದನ್ನು ಎತ್ತಿಕೊಳ್ಳಲು ವೀಳ್ಯ ಸ್ವೀಕರಿಸಬೇಕು.

ಆದಿಪುರಾಣದ ಕಥೆ, ಕಲೆ, ಪಾತ್ರ, ಜೀವನದರ್ಶನಗಳ ವಿಚಾರ ವಿಮರ್ಶೆ ಯನ್ನು ಮೀರಿದ, ಕೆಲವು ಮೂಲಭೂತ ಸಂಗತಿಗಳ ಬಗೆಗೂ ನಾವಿಂದು ಗಮನ ಹರಿಸಬೇಕಾಗಿದೆ. (೧) ಜೈನಧರ್ಮ ಪ್ರತಿಪಾದಿಸುವ ಲೋಕಾಲೋಕಗಳ ಕಲ್ಪನೆ, ಇಂದಿನ ವಿಜ್ಞಾನದ Expanding universe ನ ಸಿದ್ಧಾಂತಕ್ಕೆ ಒಪ್ಪುವುದೇ, ವಿಚಾರ ಮಾಡಬೇಕು. (೨) ಎರಡನೆಯದಾಗಿ, ಜೈನ ಶಾಸ್ತ್ರ-ಕಾವ್ಯಗಳು ರಂಜನೀಯ ವಾಗಿ ವರ್ಣಿಸುವ ಜನ್ಮ ಜನ್ಮಾಂತರದ ಸಂಗತಿ, ಸತ್ಯವೆ? ಕಲ್ಪನೆಯೆ?-ಇಂದಿನ ಜೀವ ಶಾಸ್ತ್ರ, ತಳಿಶಾಸ್ತ್ರಗಳು ಸಂಶೋಧನೆ ಮಾಡುತ್ತಿರುವ ಜೀವಕಣ–ಜೀವಕೋಶ–ಜೀನ್ಸ್ (Geens) ಗಳ ಗುಣ–ಲಕ್ಷಣ–ವಿಕಾಸಗಳ ಹಿನ್ನೆಲೆಯಲ್ಲಿ ಈ ಜನ್ಮ ಜನ್ಮಾಂತರ ಸತ್ಯವನ್ನು ಪರೀಕ್ಷಿಸಬೇಕಾಗಿದೆ. (೩) ಜೈನ ಕಾವ್ಯ–ಶಾಸ್ತ್ರಗಳು ವಿಪುಲ ವಾಗಿ ವರ್ಣಿಸುವ ಇಹಭೋಗ ಜೀವನದ ಚಿತ್ರ, ಲೌಕಿಕ ಜೀವನದ ವಿವರಗಳು, ಕವಿ ಕಲ್ಪನೆಗಳು ಮಾತ್ರವೇ ಅಥವಾ ಅವು ಪರಂಪರೆಯ ಭಾರತ ಸಂಸ್ಕೃತಿ ಕಂಡುಕೊಂಡ ಜೀವನ ಸತ್ಯ ಸಂಗತಿಗಳಿರಬಹುದೆ? ವಿಚಾರ ಮಾಡಬೇಕು. (೪) ಜೈನ ಪುರಾಣ ಕಾವ್ಯಗಳಲ್ಲಿ ಬರುವ ಗಿಡ-ಮರ–ನೆಲ-ಜಲ ಪ್ರಕೃತಿ, ಹಣ್ಣು–ಹೂ–ಚಿಗುರು, ಪಕ್ಷಿ-ಪ್ರಾಣಿ ಪ್ರಪಂಚ, ನಗರ–ಕೋಟೆ-ಸೈನ್ಯ–ಯುದ್ಧ ಮುಂತಾದ ಮಾನವನ ಭೌತ ಸಂಸ್ಕೃತಿ ಚಿತ್ರಣದಲ್ಲಿ ಸತ್ಯವೆಷ್ಟು, ಕಲ್ಪನೆ ಎಷ್ಟು?–ಇಂದಿನ ವಿವಿಧ ವಿಜ್ಞಾನಗಳ

ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಕೊನೆಯದಾಗಿ, ಜೈನ ಧರ್ಮ ಬಿಂಬಿಸುವ ಜೀವನ ದರ್ಶನ-ನಿರೂಪಿಸುವ ವ್ರತಾಚರಣೆ, ಬೋಧಿಸುವ ತ್ಯಾಗ-ಯೋಗ-ಸಿದ್ಧಿಗಳು ಅದೆಷ್ಟು ಮಟ್ಟಿಗೆ ವೈಜ್ಞಾನಿಕ, ಅದೆಷ್ಟು ರೀತಿಯಲ್ಲಿ ವ್ಯಾವಹಾರಿಕ?-ಪರೀಕ್ಷಿಸಬೇಕು. ಪಂಪನ ಆದಿಪುರಾಣದ ಕವಿ-ಕಾವ್ಯ-ಕಲಾ ಅಧ್ಯಯನದಷ್ಟೇ ಮುಖ್ಯವಾದುದು, ಈ ಮೇಲಿನ ಐದು ಅಂಶಗಳ ವಿಶ್ಲೇಷಣೆ-ವಿವೇಚನೆ-ನಿರ್ಣಯ. ಆದರೆ, ಅವೆಲ್ಲ ಇಂದು ಯಾರಿಗೆ ಬೇಕಾಗಿದೆ? ಯಾರು ಮಾಡಬಲ್ಲರು? ಮಾಡಿಸಬಲ್ಲರು?-ಇವೆಲ್ಲ ಪ್ರಶ್ನೆಗಳು ಮಾತ್ರ ಇಂದಿಗೆ.

●

ಕನ್ನಡ ಸಂಧಿ

● ವಿಲ್ಯಂ ಮಾಡ್ತ

ಮಾನವ ತನ್ನ ಭಾಷೆಯನ್ನು ವಿವೇಕಪೂರ್ವಕವಾಗಿ ಮಾತ್ರವಲ್ಲದೆ ಸಯುವಾಗಿಯೂ ನಿರರ್ಗಳವಾಗಿಯೂ ಬಳಸಬಲ್ಲ. ಈ ರೀತಿಯಾಗಿ ಯಾವ ಅಡೆ ತಡೆಯೂ ಇಲ್ಲದೆ ಓತಪ್ರೋತವಾಗಿ ಭಾಷೆಯನ್ನಾಡಲು ಆ ಭಾಷೆಯ ಘಟಕಗಳನ್ನು ಆತ ಕೆಲವು ಸಲ ಕೂಡಿಸಿಕೊಳ್ಳಬೇಕಾಗುತ್ತದೆ, ಅರ್ಥಾತ್, ವಿರಾಮವಿಲ್ಲದೆ ಉಚ್ಚರಿಸಬೇಕಾಗುತ್ತದೆ. ಹೀಗೆ ಭಾಷಾಘಟಕಗಳನ್ನು ವಿರಾಮವಿಲ್ಲದೆ, ಕೂಡಿಸಿಕೊಂಡು ಉಚ್ಚರಿಸುವುದೇ ಸಂಧಿ.[೧]

೧. ನೀವು+ಎಲ್ಲರು+ಊ > ನೀವೆಲ್ಲರೂ

೨. ಈ ಲೇಖನ+ಅನ್ನು > ಈ ಲೇಖನವನ್ನು

೩. ಓದ್+ಅ+ಬೇಕು > ಓದಬೇಕು.

ಮೇಲಿನ ಉದಾಹರಣೆಗಳನ್ನು (೧–೩) ಗಮನಿಸಿದಾಗ ಪೂರ್ವ (ಮೊದಲನೆಯ) ಪದಾಂತ್ಯದ ಮತ್ತು ಪರ (ಎರಡನೆಯ) ಪದದಾದಿಯ ಧ್ವನಿಮಗಳು ಮಾತ್ರ ನೇರವಾಗಿ ಸಂಧಿಸುತ್ತವೆಂಬುದು ಸುಸ್ಪಷ್ಟ. ಆದರೂ ಕೇಶಿರಾಜನಿಗೆ ಈ ಬಗೆಗೆ ಹೊಸ ವಿಚಾರಗಳು ಹೊಳೆದಿವೆ. ಅವನ್ನೂ ಸಂಧಿಯ ಕುರಿತಾದ ಇನ್ನಿತರ ವಿಷಯಗಳನ್ನು ಮುಂಭಾಗದಲ್ಲಿ ಪರಿಶೀಲಿಸುವ.

ಭಾಗ–೧

ಸಂಧಿಯನ್ನು ಕುರಿತು ಸಾಂಪ್ರದಾಯಿಕ ವಿವೇಚನೆ

ಕನ್ನಡ ವ್ಯಾಕರಣ ಸಂಪ್ರದಾಯಕ್ಕೆ ದರ್ಪಣವನ್ನು ನೀಡಿ ಅದರ ಪ್ರತಿಸಿಧಿ ಸ್ವರೂಪನೆಂದು ಕೀರ್ತಿಗಳಿಸಿದ ಕೇಶಿರಾಜ ತನ್ನ ಗ್ರಂಥದಾದಿಯಲ್ಲಿ ತಾನು ಉಪಯೋಗಿಸಿ ಹಲವಾರು ಪಾರಿಭಾಷಿಕ ಪದಗಳ ವ್ಯಾಖ್ಯೆಯನ್ನು ಕೊಡುವ ಸನ್ನಿವೇಶದಲ್ಲಿ ಸಂಧಿಯ ಬಗೆಗೆ ಕೆಳಗಿನ ಸೂತ್ರವನ್ನು ಕೊಟ್ಟಿದಾನೆ.

೧) ಸಂಧಿ (ಸಮ್ + ಧಾ + ಇ) ಗೆ 'ಸಂಹಿತೆ' ಎಂದು ಇನ್ನೊಂದು ಹೆಸರೂ ಉಂಟು.

ಎರಡುಂ ಪಲವುಂ ವರ್ಣಂ
ಪರಸ್ಪರ ಕೂಡುವಂದಮುದೆ ಸಂಧಿವಲಂ
ಸ್ವರರಹಿತ ವ್ಯಂಜನಮವು
ಪರವರ್ಣಮನೆಯ್ದು ಅಪೂರ್ವಾ ಸಂಹಿತೆಯೊಳ್[2]

ಎರಡು ಇಲ್ಲವೆ ಹಲವು ವರ್ಣಗಳು ಪರಸ್ಪರ ಕೂಡುವ ರೀತಿಯೇ ಸಂಧಿ. ಆ ಸಂಧಿಯಲ್ಲಿ ಸ್ವರರಹಿತ ವ್ಯಂಜನಗಳು ಮುಂದಿನ ವರ್ಣದೊಂದಿಗೆ ಸೇರಿಕೊಳ್ಳುತ್ತವೆಂದು ಸೂತ್ರದ ತಾತ್ಪರ್ಯ.

ಉದಾಹರಣೆಗಳು :

ಸ್ವರಯುಕ್ತ ವ್ಯಂಜನಕ್ಕೆ : ೪. ಕೂರ್ತು + ಈವಂ > ಕೂರ್ತೀವಂ
ಸ್ವರರಹಿತ ವ್ಯಂಜನಕ್ಕೆ : ೫. ಜಾಣ್ + ಉಂಟು > ಜಾಣುಂಟು

ಮೇಲಿನ ಉದಾಹರಣೆಗಳನ್ನು (೪ ಮತ್ತು ೫) ಗಮನಿಸಿದಾಗ ಅಲ್ಲಿ ಕ್ರಮವಾಗಿ ಉ + ಈ ಮತ್ತು ಣ್ + ಉ ಹೀಗೆ ಎರಡು ವರ್ಣಗಳು ಪರಸ್ಪರ ಕೂಡುತ್ತವೆಯೇ ಹೊರತು ಹಲವು ವರ್ಣಗಳು ಕೂಡುವುದು ಇಲ್ಲ ಮತ್ತು ಎಲ್ಲಿಯೂ ಕಂಡು ಬರುವುದಿಲ್ಲ. ಹಾಗಾದರೆ ಹಲವು 'ವರ್ಣಗಳು' ಕೂಡುವುದು ಹೇಗೆ ಸಾಧ್ಯ ? ಕೆಳಗಿನ ಉದಾಹರಣೆಗಳನ್ನು ಪರಿಶೀಲಿಸಿ :

೬. ಒನ್ದ್ + ಇಂದ > ಒನ್ದ್-ಅರ್-ಇನ್ದ > ಒಂದರಿಂದ
೭. ಇಪ್ಟ್ + ಅಲ್ಲಿ > ಇಪ್ಟ್-ಅರ್-ಅಲ್ಲಿ > ಇಷ್ಟರಲ್ಲಿ
೮. ಅಪ್ಟ್ + ಅ > ಅಪ್ಟ್-ಅರ್-ಅ > ಅಷ್ಟರ

ಮೇಲಿನ ಉದಾಹರಣೆಗಳಲ್ಲಿ (೬-೮) ಪೂರ್ವ ಪದದ ಕೊನೆಗೆ ವ್ಯಂಜನಗುಚ್ಛಗಳನ್ನು ಕಾಣಬಹುದು. ಅವು ಅಕ್ಷರಗಳನ್ನು ಕೊನೆಗೊಳಿಸುವ ಸಂಕೀರ್ಣ ಘಟಕಗಳಾಗಿ ತೋರುತ್ತವೆ.

೬. **ಅ....ನ್ದ್ + ಇ**

---

೨. ಡಿ. ಎಲ್. ನರಸಿಂಹಾಚಾರ್ (ಸಂ.), ೧೯೬೪, ಪು ೫೩, ಸೂ. ೫೯.

೩. ಕೇಶಿರಾಜನ 'ವರ್ಣ'ಕ್ಕೆ ಧ್ವನಿಮಕ್ಕಿಂತ ವಿಶಾಲಾರ್ಥವಿದೆ: ನೋಡಿ ವಿಲ್ಯಂ ಮಾಡ್ತ. "ಕನ್ನಡದ ಧ್ವನಿಮಾಗಳು : ಅಂದು ಇಂದು" ಕರ್ನಾಟಕ ಭಾರತಿ. (೧೯೭೧:೪.೨) ಪು.೭೦.೨೨.

೭. ಅ/ಲಅ ಷ್ಟ್+ಅ – ಇಲ್ಲಿ ಕೂಡಿದ ಸಂಜ್ಞೆಗಳು ೧+೧ ಆಗಿರದೆ ೨+೧: ಆದುದರಿಂದ 'ಹಲವು' ಎಂಬ ವಿಚಾರ ಕೇಶಿರಾಜನಿಗೆ ಥಟ್ಟನೆ ಹೊಳೆದಿರಬೇಕು. ಆದರೆ ಕನ್ನಡ ಬರಹ ಮಾತ್ರ ಇಂಥ, ಭ್ರಮೆ ಹುಟ್ಟಿಸುತ್ತದೆ; ಭಾಷೆಯೆಂಬುದು ಉಚ್ಚರಣಾ ಸಂಜ್ಞೆಗಳಿಂದ ಕೂಡಿದುದು; ಅವು ೧+೧ ಆಗಿಯೇ ಬಾಯಿಯಿಂದ ಉಚ್ಚಾರಗೊಳ್ಳುತ್ತವೆ ಎಂಬ ಸೂಕ್ಷ್ಮ ಹಾಗೂ ವೈಜ್ಞಾನಿಕ ವಿಚಾರ ಕೇಶಿಗೆ ಹೊಳೆಯದೆ ಸಂಧಿಯಲ್ಲಿ ಹಲವು ವರ್ಣಗಳು ಕೂಡುತ್ತವೆಂದು ಹೇಳಿ ಆತ ಎಡವಿ ಬಿದ್ದಿದ್ದಾನೆಂಬುದು ಪ್ರಸ್ತುತದಲ್ಲಿ ಹೇಳಬೇಕಾಗುತ್ತದೆ.

ಸಂಧಿಸ್ಥಾನಃ

ಸಂಧಿ, ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ಉಂಟಾಗಬಹುದು[೪] ಪ್ರಕೃತಿಗೆ[೫] ಪ್ರತ್ಯಯವನ್ನು ಹಚ್ಚುವಾಗ ಆಗುವ ಸಂಧಿಯನ್ನು ಪದಮಧ್ಯ ಸಂದಿಯನ್ನುವರು.

೯. ಹಣ+ಅನ್ನು > ಹಣವನ್ನು
೧೦. ಮನೆ+ಅಲ್ಲಿ > ಮನೆಯಲ್ಲಿ
೧೧. ಆಡು+ಇಸು > ಆಡಿಸು
೧೨. ಒಡೆ+ಅಕ > ಒಡಕ

ಪೂರ್ವಪದ ಪರಪದದೊಡನೆ ಕೂಡುವಲ್ಲಿ ಆಗುವ ಸಂಧಿಯನ್ನು ಪದಾಂತ್ಯ ಸಂಧಿಯೆನ್ನುವರು.

೧೩. ಊರು+ಊರು > ಊರೂರು
೧೪. ಮಕ್ಕಳ+ಆಟ > ಮಕ್ಕಳಾಟ
೧೫. ಮನೆಯಲ್ಲಿ+ಇದ್ದ > ಮನೆಯಲ್ಲಿದ್ದ

ಸಂಧಿಪ್ರಭೇದಗಳು

ಸಂಧಿಯಲ್ಲಿ ಕನ್ನಡಸಂಧಿ ಮತ್ತು ಸಂಸ್ಕೃತಸಂಧಿ ಎಂದು ಎರಡು ತೆರ ಕನ್ನಡ ಪದಗಳು ಪರಸ್ಪರ ಸೇರಿದಾಗ ಅಥವಾ ಸಂಸ್ಕೃತಪದ ಕನ್ನಡಪದದೊಡನೆ ಸೇರಿದಾಗ ಕನ್ನಡ ಸಂಧಿಯುಂಟಾಗುತ್ತದೆ.

---

೪. ಕೆಲವು ಪಂಡಿತರು ಅಭಿಪ್ರಾಯಪಡುವಂತೆ ಸಂಧಿಕಾರ್ಯ ಮೂರು ಸ್ಥಾನಗಳಲ್ಲಿ ಜರುಗಬಹುದು. ನೋಡಿ : ಥೋಂ. ಡೋ. ನರಸಿಂಹ ಮುಳಬಾಗಲ. ನುಡಿಗಟ್ಟು (೧೯೨೪). ಪು. ೧೫.

೫, ಪ್ರಕೃತಿಗಳ ವರ್ಗೀಕರಣಕ್ಕೆ ನೋಡಿ: ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು ಧಾರವಾಡ (೧೯೭೫) ಪು. ೬೮-೭೩ ಮತ್ತು ವೃಕ್ಷ ಚಿತ್ರ (ಎದುರು ಪುಟ. ೯೬).

ಉದಾಹರಣೆಗಳು :

ಕನ್ನಡ+ಕನ್ನಡ: ೯-೧೫
ಸಂಸ್ಕೃತ+ಕನ್ನಡ; ೧೬ (ಮುಂದೆ ನೋಡಿ)

ಉಭಯು ಘಟಕಗಳೂ ಸಂಸ್ಕೃತ ರೂಪಗಳಾಗಿದ್ದುಂಟಾಗುವ ಸಂಧಿಯನು ಮಾತ್ರ ಸಂಸ್ಕೃತಸಂಧಿಯೆನ್ನುವರು.

ಉದಾಹರಣೆಗಳು : ೯೨–೧೪೫ (ಮುಂದೆ ನೋಡಿ)

ಕನ್ನಡ ಸಂಧಿ :

ವರ್ಣಭೇದದಿಂದ ಕನ್ನಡ ಸಂಧಿಯಲ್ಲಿ ಸ್ವರ ಮತ್ತು ವ್ಯಂಜನಸಂಧಿಗಳೆಂದು ಎರಡು ವರ್ಗಗಳು.

ಸ್ವರಸಂಧಿ : ಸ್ವರದ ಪರದಲ್ಲಿ ಅರ್ಥಾತ್ ಉತ್ತರದಲ್ಲಿ ಸ್ವರ ಬಂದು ಸಂಧಿಯಾದರೆ ಅದಕ್ಕೆ ಸ್ವರಸಂಧಿಯೆಂದು ಹೆಸರು. ಸ್ವರಸಂಧಿಯಲ್ಲಿ ಸಂಧಿಕಾರ್ಯ ಅರ್ಥಾತ್ ಸಂಧಿ ಬದಲಾವಣೆಗಳನ್ನು ಗಮನಿಸಿ ಲೋಪ ಮತ್ತು ಆಗಮ ಸಂಧಿಗಳೆಂದು ಎರಡು ವಿಧ.

ಲೋಪಸಂಧಿ : ಕೇಶಿರಾಜ ಲೋಪಸಂಧಿಯ ನಿಯಮವನ್ನು ಕೆಳಗಿನ ಸೂತ್ರದಲ್ಲಿ ಸೂಚಿಸಿದ್ದಾನೆ :

ಸ್ವರಮಿದಿರೊಳಿರೆ ವಿಭಕ್ತಿ
ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ
ವರ ಸಂಸ್ಕೃತ ಕರ್ನಾಟಕ
ಮೆರಡು ಊಳಂ ನಾಮರೂಢಿಯುಳಿಯದ ಪಕ್ಷಂ

ಸಂಸ್ಕೃತ ಕನ್ನಡಗಳ ಪ್ರಕೃತಿ ಸ್ವರಕ್ಕೆ ಮತ್ತು (ಈ ಪ್ರಕೃತಿಗಳಿಗೆ ಹತ್ತಿದ ಕನ್ನಡ). ವಿಭಕ್ತಿಸ್ವರಕ್ಕೆ ಸ್ವರಪರವಾದರೆ ಅರ್ಥಪ್ರಸಿದ್ಧಿ ಕೆಡದ ಪಕ್ಷದಲ್ಲಿ ಲೋಪವುಂಟಾಗುತ್ತದೆಂದು ಸೂತ್ರದ ಅರ್ಥ.

ಉದಾಹರಣೆಗಳು :

ಸಂಸ್ಕೃತ ಪ್ರಕೃತಿ ಸ್ವರಲೋಪಕ್ಕೆ : ೧೬ ರಾಗ+ಇಸು > ರಾಗಿಸು

ಸಂಸ್ಕೃತ ಪ್ರಕೃತಿಗೆ ಹತ್ತಿದ ಕನ್ನಡ ವಿಭಕ್ತಿ ಸ್ವರಲೋಪಕ್ಕೆ } : ೧೭ ಈಶ್ವರನ + ಒಲವು > ಈಶ್ವರನೊಲವು

ಕನ್ನಡ ಪ್ರಕೃತಿಗೆ ಹತ್ತಿದ ಕನ್ನಡ ವಿಭಕ್ತಿ ಸ್ವರಲೋಪಕ್ಕೆ : ೧೮ ನೆಲದಿಂದೆ + ಉಣ್ಬಂ > ನೆಲದಿಂದುಣ್ಬಂ

ಕನ್ನಡ ಪ್ರಕೃತಿ ಸ್ವರಲೋಪಕ್ಕೆ : ೧೯ ಸುತ್ತು + ಓಲೆ > ಸುತ್ತೋಲೆ

ಅರ್ಥ ಕೆಡುವುದಕ್ಕೆ : ೨೦ ಮಡು + ಇದು > ಮಡಿದು [೬]

ಆಗಮಸಂಧಿ : ಲೋಪಸಂಧಿಯಿಂದಾಗಿ ನಾಮರೂಢಿಗೆ ತೊಡಕುಂಟಾದರೆ ಆ ಎರಡು ಸ್ವರಗಳ ನಡುವೆ ವ್ಯಂಜನ(ಯ/ವಕಾರ) ಆಗಮವಾಗುವುದೇ ಆಗಮಸಂಧಿ.

ಯಕಾರಾಗಮ : ಕೇಶಿರಾಜನ ಮತದಂತೆ ಯಕಾರಾಗಮ ನಾಲ್ಕು ಕಡೆಗಳಲ್ಲಿ :

೧. ಅ. ಇಈ,ಎಏ,ಐ,ಓ— ಸ್ವರಗಳ ಮುಂದೆ ಯಾವುದೇ ಸ್ವರಬಂದರೆ ಯಕಾರಾಗಮ :

ಆ ಕಾರಕ್ಕೆ : ೨೧. ಆ + ಇರ್ದ > ಆಯಿರ್ದ
ಇ ಕಾರಕ್ಕೆ : ೨೨. ಪಿಡಿ + ಎಂದು > ಪಿಡಿಯೆಂದು
ಈ ಕಾರಕ್ಕೆ : ೨೩. ಈ + ಅಲ್ > ಈಯಲ್
ಎ ಕಾರಕ್ಕೆ : ೨೪. ಪಸೆ + ಇರ್ದಂ > ಪಸೆಯಿರ್ದಂ
ಏ ಕಾರಕ್ಕೆ : ೨೫. ಉಫೇ + ಎಂದು > ಉಫೇಯೆಂದು
ಐ ಕಾರಕ್ಕೆ : ೨೬. ಫೈ + ಎಂಬಿನೆಗಂ > ಫೈಯೆಂಬಿನೆಗಂ
ಓ ಕಾರಕ್ಕೆ : ೨೭. ಜೋ + ಎಂದು > ಜೋಯೆಂದು

೨ ಷಷ್ಠ್ಯಂತ ಅಕಾರಕ್ಕೆ ಅವಧಾರಣೆಯ ಸ್ವರಪರವಾದರೆ ಯಕಾರಾಗಮ :

೨೮. ಆತನ + ಎ > ಆತನಯೆ
೨೯. ಅವಳ + ಎ > ಅವಳಯೆ

೩. ಅಕಾರಾಂತ ಪ್ರಕೃತಿಗಳಿಗೆ 'ಇಸು' ಪ್ರತ್ಯಯ ಪರವಾದರೆ ಯಕಾರಾಗಮ :

---

೬. ನೋಡಿ : ಬಿ. ಟಿ. ಸಾಸನೂರ ಮತ್ತು ಎಂ. ಎಂ. ಕಲಬುರ್ಗಿ ಶಬ್ದಮಣಿ ದರ್ಪಣ ಸಂಗ್ರಹ, ಧಾರವಾಡ : ರವಿಚಂದ್ರ ಪ್ರಕಾಶನ ೧೯೭೫ ಪು ೨೨. ಸೂ. ೬೨ ರ ಅರ್ಥ. ಅರ್ಥ ಪ್ರಸಿದ್ಧಿಯನ್ನು 'idiom' ಎಂದು ನಾನು ಕರೆದಿದ್ದೇನೆ.

೩೦. ಶುದ್ಧ + ಇಸಿದಂ > ಶುದ್ಧಯಿಸಿದಂ

೩೧. ಕೋರ + ಇಸಿದಂ > ಕೋರಯಿಸಿದಂ

೪ ಅನುಕರಣ ಪದಕ್ಕೆ ಅನುಕರಣಸೂಚಕಸ್ವರಪರವಾದರೆ ಯಕಾರಾಗಮ :

೩೨. ಗಟಿಗಟಿ + ಎನುತುಂ > ಗಟಿಗಟಿಯೆನುತುಂ

೩೩. ಪಟಿಪಟಿ + ಎಂದು > ಪಟಿಪಟಿಯೆಂದು.

ವಕಾರಾಗಮ : ಉ ಊ, ಋ ೠ, ಓ ಔ–ಇವುಗಳ ಮುಂದೆ ಸ್ವರಬಂದರೆ ವಕಾರಾಗಮವೆಂದು ಕೇಶಿರಾಜ ಹೇಳುತ್ತಾನೆ.

ಉ ಕಾರಕ್ಕೆ : ೩೪. ಮನು + ಇನ > ಮನುವಿನ[೭]

ಊ ಕಾರಕ್ಕೆ : ೩೫ ಪೂ + ಇನ > ಪೂವಿನ

ಋ ಕಾರಕ್ಕೆ : ೩೬ ಹೋತೃ + ಎ > ಹೋತೃವೆ

ೠ ಕಾರಕ್ಕೆ : ೩೭ ೠ + ಎಂದು > ೠವೆಂದು

ಓ ಕಾರಕ್ಕೆ : ೩೮ ಗೋ + ಇನ > ಗೋವಿನ

ಔ ಕಾರಕ್ಕೆ : ೩೯ ನೌ + ಅಂ > ನೌವಂ

ವ್ಯಂಜನ ಸಂಧಿ : ಸ್ವರ/ವ್ಯಂಜನದ ಪರದಲ್ಲಿ ವ್ಯಂಜನ ಬಂದು ಸಂಧಿಯಾದರೆ ಅದಕ್ಕೆ ವ್ಯಂಜನಸಂಧಿಯೆಂದು ಹೆಸರು. ಈ ಸಂಧಿ ಎರಡು ಪದಗಳು ಕೂಡುವಾಗ–ಸಮಾಸ[೮] ಆಗುವ ಕಾಲಕ್ಕೆ-ಜರಗುತ್ತದೆ.

---

೭. ಮನುವಿನ, ಪೂವಿನ ಮತ್ತು ಗೋವಿನ ಎಂಬ ಪದಗಳನ್ನು ವಿಶ್ಲೇಷಿಸುವಾಗ ಅಲ್ಲಿಯರೂಪಗಳು ಅನುಕ್ರಮವಾಗಿ ಇಂತಿವೆಂದು ಕಂಡುಬರುತ್ತವೆ.

ಮನು + ಅ > ಮನು-ವಿನ್-ಅ > ಮನುವಿನ

ಪೂ + ಅ > ಪೂ-ವಿನ್-ಅ > ಪೂವಿನ

ಗೋ + ಅ > ಗೋ-ವಿನ್-ಅ > ಗೋವಿನ

ಮ, ನು, ಪೂ, ಮತ್ತು ಗೋ ಪಕ್ಷ ಸ್ವರಾಂತ ಅಮಹತ್ ನಾಮ ಪ್ರಕೃತಿಗಳು ಇವುಗಳಿಗೆ ದ್ವಿತೀಯ ಮತ್ತು ಚತುರ್ಥಿಗಳನ್ನು ಬಿಟ್ಟುಳಿದ ವಿಭಕ್ತಿ ಪ್ರತ್ಯಯಗಳು ಪರವಾದರೆ ವಿನಾಗಮವಾಗುತ್ತದೆ. ಆದುದರಿಂದ 'ಇನ್' ಎಂಬ ಮೋರ್ಫ್ ರೂಪ ಅಸಾಧು.

೮. ಸಮಾಸದ ಕುರಿತಿನ ಚರ್ಚೆಗೆ ಮುಂದೆ ನೋಡಿ :

ವ್ಯಂಜನಸಂಧಿಯಕಾಲಕ್ಕೆ ಆದೇಶ ಮತ್ತು ದ್ವಿತ್ವಗಳೆಂಬ ಎರಡು ತರಹದ ಸಂಧಿಬದಲಾವಣೆಗಳು, ನಡೆಯುತ್ತವೆ.

ಆದೇಶ ಸಂಧಿ : ಪರಪದದಾದಿಯ ಕಚಟತಪಗಳಿಗೆ ಗ.ದ.ಬ. ಗಳಾದೇಶ;

೪೦ ಪೞಿ+ಕನ್ನಡ > ಪೞಿಗನ್ನಡ

೪೧ ಕಣ್+ತೆಱವು > ಕಣ್ದೆಱವು

೪೨ ತಣ್+ಪುೞಿಲ್ > ತಣ್ಬುೞಿಲ್

ಅಪವಾದಗಳು[೧೦] ೪೩. ತಲೆ+ಕಟ್ಟು > ತಲೆಕಟ್ಟು

೪೪. ಬೆಸೆ+ಕೋಲ್ > ಬೆಸೆಕೋಲ್

೪೫. ಬಳ+ಕಯ್ > ಬಳಕಯ್

೪೬. ಬರ್+ಕಟ್ಟು > ಬರ್ಕಟ್ಟು

೪೭. ಕಾೞ್+ಕಿಚ್ಚು > ಕಾೞ್ಕಿಚ್ಚು

೪೮. ಇರ್+ತಲೆ > ಇರ್ತಲೆ

೪೯. ಕಾೞ್+ತುೞು > ಕಾೞ್ತುೞು

೫೦. ಇರ್+ಪತ್ತು > ಇರ್ಪತ್ತು

೫೧. ಕಾೞ್+ಪುರ > ಕಾೞ್ಪುರ

೨. ಸ್ವರಗಳಿಗೂ ಆದೇಶವಲ್ಲದ ಸಹಜವ್ಯಂಜನಗಳಿಗೂ ಪರವಾಗಿರುವ ಪ ಬ ಮ ಗಳಿಗೆ ವಕಾರಾದೇಶ :

ಸ್ವರಕ್ಕೆ : ೫೨. ಬೆಳೆ+ಪೊಲಂ > ಬೆಳೆವೊಲಂ

೫೩. ಕಡು+ಬೆಳ್ಪು > ಕಡುವೆಳ್ಪು

೫೪. ಪೞಿ+ಮಾನಸಂ > ಪೞಿವಾನಸಂ

ಸಹಜ ವ್ಯಂಜನಕ್ಕೆ : ೫೫. ಬಾಯ್+ಪಱಿ > ಬಾಯ್ವಱಿ

೫೬. ಬೇರ್+ಬೆರಸಿ > ಬೇರ್ವೆರಸಿ

---

೯. ಸಂಧಿಯಾಗುವಾಗ ಒಂದು ವ್ಯಂಜನ ಇನ್ನೊಂದಾಗಿ ಬದಲಾಗುವುದೇ ಆದೇಶವಾದರೆ ಅದು ಪುನರಾವರ್ತಿಸುವುದೇ ದ್ವಿತ್ವವೆನಿಸಿಕೊಳ್ಳುತ್ತದೆ: ಪುನರಾವರ್ತನೆಯು ಒಂದೇ ರೀತಿಯ ರೂಪಾಂತರವಾದುದರಿಂದ ಅದು ಆದೇಶಕ್ಕಿಂತ ಭಿನ್ನವಲ್ಲ.

೧೦. ಅಪವಾದಗಳು ; ಎನ್ನುವುದಕ್ಕಿಂತ ಆದಿಮ ಕನ್ನಡದಲ್ಲಿ ಆದೇಶ ಸಂಧಿ ಕಾರ್ಯ ನಿರ್ದಿಷ್ಟ ಆಕೃತಿಮಾಗಳಿಗೆ ಸೀಮಿತವಾಗಿತ್ತು. (Morphological conditions) ಎನ್ನಬಹುದು.

೫೭. ಮೆಲ್ + ಮಾತು > ಮೆಲ್ಮಾತು

ಅಪವಾದಗಳು : ೫೮. ರೇಬ್ + ಪೊಡೆ > ರೆಬಿಪ್ಪೊಡೆ

೫೯. ಇರ್ + ಬಾಳ್ > ಇರ್ಬಾಳ್

೬೦. ಪಾಟಿನ್ + ಮನೆ > ಪಾಟ್ಮನೆ

೩. ಪೂರ್ವಪದದ ಅಂತ್ಯದಲ್ಲಿ ಯ ಲ ಕಾರಗಳನ್ನು ಬಿಟ್ಟುಳಿದ ವ್ಯಂಜನಗಳಿದ್ದು ಅವುಗಳ ಮುಂದೆ ಸಕಾರ ಬಂದರೆ ಅದಕ್ಕೆ ಸಾಮಾನ್ಯವಾಗಿ ಚ/ಜ ಮತ್ತು ಸಂಖ್ಯೆಯಲ್ಲಿ ಛಕಾರಾದೇಶ.

ಚಕಾರಕ್ಕೆ : ೬೧. ನುಣ್ + ಸರ > ನುಣ್ಚರ

ಜಕಾರಕ್ಕೆ : ೬೨. ಪೊನ್ + ಸುರಿಗೆ > ಪೊಂಜುರಿಗೆ

ಛಕಾರಕ್ಕೆ : ೬೩. ನೂರ್ + ಸಾಸಿರ > ನೂರ್ಛಾಸಿರ

ಅಪವಾದಗಳು : ೬೪. ಬೆಳ್ + ಸರಿ > ಬೆಳ್ಸರಿ

೬೫. ಕಣ್ + ಸೋಲು > ಕಣ್ಸೋಲು

ದ್ವಿತ್ವಸಂಧಿ :

ಆದಿಯಲ್ಲೊಂದು ಹ್ರಸ್ವಸ್ವರವಿದ್ದ ನಣಲಯಳಗಳಿಗೆ ಸ್ವರಪರವಾದರೆ ದ್ವಿತ್ವವುಂಟಾಗುತ್ತದೆ. ಆ ಪೂರ್ವ ಪದದಾದಿಯಲ್ಲಿ ದೀರ್ಘವಿದ್ದರೆ ಅಥವಾ ಅದು ಅವ್ಯಯ/ಅನೇಕಾಕ್ಷರೀಯವಾಗಿದ್ದರೆ ದ್ವಿತ್ವವಿಲ್ಲ.

ದ್ವಿತ್ವ :

ನಕಾರ ದ್ವಿತ್ವಕ್ಕೆ : ೬೬ ಬೆನ್ + ಅಂ > ಬೆನ್ನಂ

ಣಕಾರ ದ್ವಿತ್ವಕ್ಕೆ : ೬೭ ಕಣ್ + ಏಂ > ಕಣ್ಣೇಂ

ಲಕಾರ ದ್ವಿತ್ವಕ್ಕೆ : ೬೮ ನೆಲ್ + ಉಂ > ನೆಲ್ಲುಂ

ಯಕಾರ ದ್ವಿತ್ವಕ್ಕೆ : ೬೯ ಮೆಯ್ + ಅ > ಮೆಯ್ಯ

ಳಕಾರ ದ್ವಿತ್ವಕ್ಕೆ : ೭೦ ಬಳ್ + ಆಳ್ > ಬಳ್ಳಾಳ್

ಅದ್ವಿತ್ವ :

ಆದಿ ದೀರ್ಘವಿದ್ದರೆ :

ನಕಾರಕ್ಕೆ : ೭೧ ತಾನ್ + ಎ > ತಾನೆ

ಣಕಾರಕ್ಕೆ : ೭೨ ನಾಣ್ + ಅಂ > ನಾಣಂ

ಲಕಾರಕ್ಕೆ : ೭೩ ಕೀಲ್ + ಅಂ > ಕೀಲಂ

ಯ ಕಾರಕ್ಕೆ : ೭೪ ಬಾಯ್ + ಒಳ್ > ಬಾಯೊಳ್
ಳ ಕಾರಕ್ಕೆ : ೭೫ ಆಳ್ + ಆಳ್ > ಆಳಾಳ್
ಅಪ್ಯಯುವಾಗಿದ್ದರೆ: ೭೬ ದಲ್ + ಇವಂ > ದಲಿವಂ
ಅನೇಕಾಕ್ಷರೀಯುವಾಗಿದ್ದರೆ ೭೭ ಪರಲ್ + ಎಲ್ಲಂ > ಪರಲೆಲ್ಲಂ

೨. ನಣಲಯಳಕಾರಾಂತ ಪ್ರತಿಷೇಧಾರ್ಥದ ಕ್ರಿಯಾ ಪ್ರಕೃತಿಗಳಿಗೆ ಆಖ್ಯಾತ ವಿಭಕ್ತಿಗಳು ಪರವಾದರೆ ಭೂತಕಾಲದಲ್ಲಿ ನಿಷೇಧಾರ್ಥದ 'ಅದೆ' ಪರವಾದರೆ ದ್ವಿತ್ವ.
ಆಖ್ಯಾತ ವಿಭಕ್ತಿಪರವಾಗಲು :

ನಕಾರ ದ್ವಿತ್ವಕ್ಕೆ : ೭೮ ಎನ್ + ಅಂ > ಎನ್ನಂ
ಣಕಾರದ್ವಿತ್ವಕ್ಕೆ : ೭೯ ಉಣ್ + ಅರ್ > ಉಣ್ಣರ್
ಲಕಾರದ್ವಿತ್ವಕ್ಕೆ : ೮೦ ಮೆಲ್ + ಅಯ್ > ಮೆಲ್ಲಯ್
ಯಕಾರದ್ವಿತ್ವಕ್ಕೆ: ೮೧ ಬಯ್ + ಎನ್ > ಬಯ್ಯೆನ್
ಳಕಾರದ್ವಿತ್ವಕ್ಕೆ : ೮೨ ಕೊಳ್ + ಎನ್ > ಕೊಳ್ಳೆನ್
'ಅದೆ' ಪರವಾಗಲು :
ನಕಾರದ್ವಿತ್ವಕ್ಕೆ : ೮೩ ಎನ್ + ಅದೆ > ಎನ್ನದೆ
ಣಕಾರದ್ವಿತ್ವಕ್ಕೆ : ೮೪ ಉಣ್ + ಅದೆ > ಉಣ್ಣದೆ
ಲಕಾರದ್ವಿತ್ವಕ್ಕೆ : ೮೫ ಒಲ್ + ಅದೆ > ಒಲ್ಲದೆ
ಯಕಾರದ್ವಿತ್ವಕ್ಕೆ: ೮೬ ಬಯ್ + ಅದೆ > ಬಯ್ಯದೆ
ಳಕಾರದ್ವಿತ್ವಕ್ಕೆ : ೮೭ ಕೊಳ್ + ಅದೆ > ಕೊಳ್ಳದೆ

೩. ಉಯ್, ನೆಯ್, ಬಯ್, ಸುಯ್– ಕ್ರಿಯಾ ಪ್ರಕೃತಿಗಳಿಗೆ 'ಅಲ್' ಪರವಾದರೆ ಐಡ್ಡಾಯದ್ವಿತ್ವಮುಂಟು :

೮೮. ಉಯ್ + ಅಲ್ > ಉಯ್ಯಲ್
೮೯. ನೆಯ್ + ಅಲ್ > ನೆಯ್ಯಲ್
೯೦. ಬಯ್ + ಅಲ್ > ಬಯ್ಯಲ್
೯೧. ಸುಯ್ + ಅಲ್ > ಸುಯ್ಯಲ್

ಸಂಸ್ಕೃತ ಸಂಧಿ :

ಕನ್ನಡ ದ್ರಾವಿಡ ಭಾಷೆಯಾದರೂ ಸಂಸ್ಕೃತದ ಪ್ರಭಾವ ಸಾವಿರಾರು ವರ್ಷಗಳಿಂದ ಅದರ ಮೇಲೆ ಇದೆ. ಸಂಸ್ಕೃತದ ಅನೇಕ ಪದಗಳು ಕನ್ನಡಕ್ಕೆ ಬಂದು ಬಳಸಲಾಗುತ್ತವೆ. ಹೀಗೆ ಕನ್ನಡದಲ್ಲಿ ಎರಡು ಸಂಸ್ಕೃತ ಪದಗಳು ಸೇರಿ ಸಂಧಿ

ಯಾದರೆ ಅದನ್ನು ಸಂಸ್ಕೃತ ಸಂಧಿಯೆನ್ನುವರು. ಇಲ್ಲಿ ಸ್ವರಕ್ಕೆ ಸ್ವರ ಪರವಾಗಿ ಸ್ವರ ಸಂಧಿಗಳೂ ವ್ಯಂಜನಕ್ಕೆ ವ್ಯಂಜನ ಪರವಾಗಿ ವ್ಯಂಜನ ಸಂಧಿಗಳೂ ಆಗುವುವು.

ಸ್ವರ ಸಂಧಿ :

ಸಂಸ್ಕೃತ ಸ್ವರ ಸಂಧಿಗಳು ನಾಲ್ಕು :

೧) ಸವರ್ಣದೀರ್ಘ ೨) ಗುಣ ೩) ವೃದ್ಧಿ ೪) ಯಣ್

೧) **ಸವರ್ಣದೀರ್ಘ ಸಂಧಿ:** ಸವರ್ಣ ಸ್ವರಗಳು[೧೧] ಸಂಧಿಸಿದಾಗ ಅವೆರಡೂ ದೀರ್ಘವಾಗಿ ರೂಪಾಂತರಗೊಳ್ಳುವುದೇ ಸವರ್ಣದೀರ್ಘ ಸಂಧಿ–

ಇ+ಇ : ೯೨ ಕವಿ+ಇಂದ್ರ>ಕವೀಂದ್ರ
ಇ+ಈ : ೯೩ ಗಿರಿ+ಈಶ>ಗಿರೀಶ
ಈ+ಈ : ೯೪ ಲಕ್ಷ್ಮೀ+ಈಶ>ಲಕ್ಷ್ಮೀಶ
ಅ+ಅ : ೯೫ ದೇವ+ಅಸುರ>ದೇವಾಸುರ
ಅ+ಆ : ೯೬ ಸುಂದರ+ಆಕಾರ>ಸುಂದರಾಕಾರ
ಆ+ಆ : ೯೭ ಮಹಾ+ಆತ್ಮಾ>ಮಹಾತ್ಮಾ

೨. ಗುಣಸಂಧಿ :

ಅ/ಆಕಾರಗಳಿಗೆ ಇ/ಈ ಕಾರಗಳು ಪರವಾದರೆ ಅವೆರಡೂ ಏಕಾರವಾಗಿಯೂ ಉ/ಊ ಕಾರಗಳೂ ಪರವಾದರೆ ಓ ಕಾರವಾಗಿಯೂ, ಋಕಾರ ಪರವಾದರೆ, 'ಅರ್' ಎಂದೂ ರೂಪಾಂತರಗೊಳ್ಳುವುದೇ ಗುಣಸಂಧಿ.

ಅ+ಇ : ೯೮ ಸುರ+ಇಂದ್ರ>ಸುರೇಂದ್ರ
ಅ+ಈ : ೯೯ ಗಣ+ಈಶ > ಗಣೇಶ
ಆ+ಇ : ೧೦೦ ಮಹಾ+ಇಂದ್ರ > ಮಹೇಂದ್ರ
ಆ+ಈ : ೧೦೧ ಮಹಾ+ಈಶ್ವರ > ಮಹೇಶ್ವರ
ಅ+ಉ : ೧೦೨ ಚಂದ್ರ+ಉದಯ > ಚಂದ್ರೋದಯ
ಅ+ಊ : ೧೦೩ ಗುಣ+ಊರ್ಜಿತ > ಗುಣೋರ್ಜಿತ

---

೧೧ ಯಾವ ಸ್ವರಗಳ ಉತ್ಪಾದನೆಯಲ್ಲಿ ಜಿಹ್ವಾಸ್ಥಾನ, ಜಿಹ್ವಾಪ್ರಗತಿ ಮತ್ತು ಓಷ್ಠ್ಯಸ್ಥಿತಿಗಳು ಏಕರೀತಿಯವುಗಳಾಗಿವೆಯೊ ಆ ಸ್ವರಗಳೇ ಸವರ್ಣಸ್ವರಗಳೆಂದು ಆಧುನಿಕ ರೀತಿಯಲ್ಲಿ ನಿರೂಪಿಸಬಹುದು.

ಅಆ, ಇ ಈ, ಉ ಊ, ಋ ೠ

ಅ+ಉ : ೧೦೪ ಮಹಾ+ಉದಯ > ಮಹೋದಯ

ಆ+ಊ : ೧೦೫ ಮಹಾ+ಊರ್ಜಿತ > ಮಹೋರ್ಜಿತ

ಅ+ಋ : ೧೦೬ ದೇವ+ಋಷಿ > ದೇವರ್ಷಿ

ಆ+ಋ : ೧೦೭ ಮಹಾ+ಋಷಿ > ಮಹರ್ಷಿ

೩ ವೃದ್ಧಿ ಸಂಧಿ :

ಅ/ಆ ಕಾರಗಳಿಗೆ ಏ/ಐ ಕಾರಗಳು ಪರವಾದರೆ ಅವೆರಡೂ ಐ ಕಾರವಾಗಿಯೂ, ಓ/ಔ ಕಾರಗಳು[೧೨] ಪರವಾದರೆ ಔಕಾರವಾಗಿಯೂ ರೂಪಾಂತರಗೊಳ್ಳುವುದೇ ವೃದ್ಧಿ ಸಂಧಿ.

ಅ+ಏ : ೧೦೮ ಲೋಕ+ಏಕ > ಲೋಕೈಕ

ಅ+ಐ : ೧೦೯ ಭಾವ+ಐಕ್ಯ > ಭಾವೈಕ್ಯ

ಆ+ಏ : ೧೧೦ ಮಾತಾ+ಏಕಪುತ್ರ > ಮಾತೈಕಪುತ್ರ

ಆ+ಐ : ೧೧೧ ವಿದ್ಯಾ+ಐಶ್ವರ್ಯ > ವಿದ್ಯೈಶ್ವರ್ಯ

ಅ+ಓ : ೧೧೨ ವನ+ಔಷಧಿ > ವನೌಷಧಿ

ಅ+ಔ : ೧೧೩ ಜನ+ಔದಾರ್ಯ > ಜನೌದಾರ್ಯ

ಆ+ಓ : ೧೧೪ ಮಹಾ+ಔಷಧಿ > ಮಹೌಷಧಿ

ಆ+ಔ : ೧೧೫ ಮಹಾ+ಔದಾರ್ಯ > ಮಹೌದಾರ್ಯ

೪ ಯಣ್ ಸಂಧಿ :

ಪೂರ್ವ ಸ್ವರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಯ ಕಾರವೂ, ಉ ಸ್ವರಗಳಿಗೆ ವ ಕಾರವೂ, ಋ ಕಾರಕ್ಕೆ ರ ಕಾರವೂ ಆದೇಶಗಳಾಗಿ ಬರುವುದೇ ಯಣ್ ಸಂಧಿ.

ಇ+ಅ : ೧೧೬ ಜಾತಿ+ಅತೀತ > ಜಾತ್ಯಾತೀತ

ಇ+ಆ : ೧೧೭ ಅತಿ+ಆಶೆ > ಅತ್ಯಾಶೆ

ಇ+ಉ : ೧೧೮ ಪ್ರತಿ+ಉತ್ತರ > ಪ್ರತ್ಯುತ್ತರ

ಉ+ಅ : ೧೧೯ ಗುರು+ಅನುಗ್ರಹ > ಗುರ್ವನುಗ್ರಹ

ಉ+ಆ : ೧೨೦ ಗುರು+ಆಜ್ಞೆ > ಗುರ್ವಾಜ್ಞೆ

ಊ+ಅ : ೧೨೧ ವಧೂ+ಅನ್ವೇಷಣ > ವಧ್ವನ್ವೇಷಣ

ಊ+ಆ : ೧೨೨ ವಧೂ+ಆಭರಣ > ವಧ್ವಾಭರಣ

---

೧೨ ಸಂಸ್ಕೃತದಲ್ಲಿ ಐ, ಔ ಕಾರಗಳು ಸಂಯುಕ್ತಾಕ್ಷರಗಳಾದರೂ ಕನ್ನಡದಲ್ಲಿ ಅವು ಕ್ರಮವಾಗಿ ಅಯ್, ಅವ್-ಎಂದು ಉಚ್ಚಾರಗೊಳ್ಳುತ್ತವೆ.

ಋ + ಅ : ೧೨೩ ಕರ್ತೃ + ಅರ್ಥ > ಕರ್ತ್ರರ್ಥ
ಋ + ಆ : ೧೨೪ ಮಾತೃ + ಆಜ್ಞೆ > ಮಾತ್ರಾಜ್ಞೆ
ಋ + ಉ : ೧೨೫ ಮಾತೃ + ಉಪದೇಶ > ಮಾತ್ರುಪದೇಶ
ಋ + ಊ : ೧೨೬ ಭ್ರಾತೃ + ಊರ್ಜ > ಭ್ರಾತ್ರೂರ್ಜ

ವ್ಯಂಜನ ಸಂಧಿ :

ಸಂಸ್ಕೃತ ವ್ಯಂಜನ ಸಂಧಿಗಳು ಮೂರು :
೧) ಜಸ್ತ್ವ ೨) ಶ್ಚುತ್ವ ಮತ್ತು ೩) ಅನುನಾಸಿಕ

೧. ಜಸ್ತ್ವಸಂಧಿ :

ಅಘೋಷ ಸ್ಪರ್ಶಗಳಿಗೆ ಸ್ವರ/ಘೋಷ ಸ್ಪರ್ಶ ಪರವಾದರೆ ಅವು ಘೋಷಗಳಾಗಿ ರೂಪಾಂತರಗೊಳ್ಳುವುದೇ ಜಸ್ತ್ವಸಂಧಿ.

ಕ್ > ಗ್ : ೧೨೭ ದಿಕ್ + ಅದ್ರಿ > ದಿಗದ್ರಿ
೧೨೮ ವಾಕ್ + ದೇವಿ > ವಾಗ್ದೇವಿ
ಚ್ > ಜ್ : ೧೨೯ ಅಚ್ + ಆದಿ > ಅಜಾದಿ ''ಸ್ವರಾದಿ''
೧೩೦ ಅಚ್ + ವರ್ಣ > ಅಜ್ವರ್ಣ ''ಸ್ವರಾಕ್ಷರ''
ಟ್ > ಡ್ : ೧೩೧ ಷಟ್ + ಅಂಗ > ಷಡಂಗ
೧೩೨ ವಿರಾಟ + ರೂಪ > ವಿರಾಡ್ರೂಪ
ತ್ > ದ್ : ೧೩೩ ಚಿತ್ + ಆನಂದ > ಚಿದಾನಂದ
೧೩೪ ಸತ್ + ಭಾವ > ಸದ್ಭಾವ
ಪ್ > ಬ್ : ೧೩೫ ಅಪ್ + ಅಂಶ > ಅಬಂಶ 'ನೀರಿನಂಶ'
೧೩೬ ಅಪ್ + ಬಿಂದು > ಅಬ್ಬಿಂದು

೨. ಶ್ಚುತ್ವಸಂಧಿ :

ದಂತ್ಯ/ತಾಲವ್ಯಗಳಿಗೆ ತಾಲವ್ಯಗಳು ಪರವಾದಾಗ ಅವು ತಾಲವ್ಯಗಳಾಗಿ ರೂಪಾಂತರಗೊಳ್ಳುವುದೇ ಶ್ಚುತ್ವಸಂಧಿ.

ತ್ > ಚ್/-ಚ್ : ೧೩೭ ಸತ್ + ಚಾರಿತ್ರ > ಸಚ್ಚಾರಿತ್ರ
ತ್ > ಜ್/-ಜ್ : ೧೩೮ ತತ್ + ಜಾತ > ತಜ್ಜಾತ
ತ್ > ಛ್/-ಛ್ : ೧೩೯ ಬೃಹತ್ + ಛತ್ರ > ಬೃಹಚ್ಛತ್ರ
ಸ್ > ಚ್/-ಚ್ : ೧೪೦ ಮನಸ್ + ಚಂಚಲ > ಮನಶ್ಚಂಚಲ
ಸ್ > ಶ್/-ಶ್ : ೧೪೧ ಮಾನಸ್ + ಶಾಂತಿ > ಮಾನಶ್ಶಾಂತಿ

೩. ಅನುನಾಸಿಕ ಸಂಧಿ :

ಅಘೋಷ ಸ್ಪರ್ಶಗಳಿಗೆ ಅನುನಾಸಿಕ ಪರವಾದರೆ ಅವು ಸಜಾತಿ ಅನುನಾಸಿಕಗಳಾಗಿ ರೂಪಾಂತರಗೊಳ್ಳುವುದೇ ಅನುನಾಸಿಕ ಸಂಧಿ.

ಕ್ > ಙ್ : ೧೪೨ ವಾಕ್ + ಮನ > ವಾಙ್ಮನ
ಟ್ > ಣ್ : ೧೪೩ ಷಟ್ + ಮತ > ಷಣ್ಮತ
ತ್ > ನ್ : ೧೪೪ ಸತ್ + ಮಾರ್ಗ > ಸನ್ಮಾರ್ಗ
ಪ್ > ಮ್ : ೧೪೫ ಅಪ್ + ಮಿತ್ರ > ಅಮ್ಮಿತ್ರ

ಭಾಗ : ೨.

ಸಂಧಿ ವಿವೇಚನೆಯ ವಿಮರ್ಶೆ

೧. ಸಂಧಿಯಾಗುವಲ್ಲಿ "ಪಲಪ್ರವರ್ಣಂ" ಕೂಡುವುದು ಕೇಶಿರಾಜನ ಭ್ರಮೆಗಳಲ್ಲೊಂದು ಎಂಬುದು ಮೇಲೆ ಮಾಡಿದ ವಿವೇಚನೆಯಿಂದ ತಿಳಿದು ಬರುತ್ತದೆ[೧೩].

೨. ಲೋಪಾಗಮ ಸಂಧಿಗಳು ನಾಮರೂಢಿಯನ್ನು ಅವಲಂಬಿಸಿದೆಂಬ ಕೇಶಿರಾಜನ ಮಾತು ಭಾಷಾ ವಿಜ್ಞಾನದ ವಸ್ತುಗತ ದೃಷ್ಟಿಗೆ ಒಪ್ಪುವಂತಹದಲ್ಲ ಅವು ರೂಪವನ್ನವಲಂಬಿಸಿವೆಂಬುದಕ್ಕೆ ಮುಂದೆ ಬರುವ ಸಂಧಿ ನಿಯಮಗಳೇ (ಉದಾ : ೧, ೩ ಮತ್ತು ೧೦ ಹಾಗೂ ಅ. ಟಿ. ೧೭) ಉತ್ತಮ ನಿದರ್ಶನ.

೩. ಸಂಧಿ ಕಾರ್ಯಗಳನ್ನು ಪರಿಶೀಲಿಸಿದಾಗ ಸಂಸ್ಕೃತ ಸಂಧಿಗಳೆಲ್ಲವೂ ಲೋಪಾಗಮಾದೇಶಗಳಲ್ಲಿ ಸಮಾವೇಶಗೊಳ್ಳುತ್ತವೆ. ಆದುದರಿಂದ ಅವನ್ನು ಪ್ರತ್ಯೇಕ ವರ್ಗವನ್ನಾಗಿ ಬೇರ್ಪಡಿಸಿ ಕಲಿಸುವುದು ಅಥವಾ ಕನ್ನಡ ವ್ಯಾಕರಣದಲ್ಲಿ[೧೪] ವಿವರಿಸುವುದು ಅನಾವಶ್ಯಕ ಹಾಗೂ ಅವೈಜ್ಞಾನಿಕ.

---

೧೩. ಛಾಷಿಕ ರಚನೆಗಳಲ್ಲಿ ಸಾಂದ್ರ ರಚನೆಯಾದ ಸಮಾಸವನ್ನು ಅಸಾಂದ್ರ ರಚನೆಯಾದ ಪದಪುಂಜದಿಂದ ಸರಿಯಾಗಿ ಬೇರ್ಪಡಿಸದೆ ಪದಪುಂಜವನ್ನು ಸಮಾಸವೆಂದು ತಪ್ಪಾಗಿ ತಿಳಿದು ಕೊಂಡು ಅದನ್ನು ಕನ್ನಡದ ವೈಶಿಷ್ಟ್ಯವೆಂದು ಸಾರಿ ಹೇಳಿದುದು ಕೇಶಿರಾಜನ ಇನ್ನೊಂದು ಭ್ರಮೆ!

೧೪. ಉದಾ : (೧) ಪಿ. ಜಿ. ಸಂದಿಮಠ ಮತ್ತಿತರರು ಕನ್ನಡದ ವ್ಯಾಕರಣ (೧೯೭೧)
(೨) ಬಿ. ಬಿ. ಪಾಟೀಲ, ವ್ಯಾಕರಣಲೋಕ (೧೯೭೬) ಇತ್ಯಾದಿ

ಭಾಗ ೩

ಸಂಧಿಯ ಭಾಷಾ ವೈಜ್ಞಾನಿಕಾವಲೋಕನ

ಭಾಷೆಯನ್ನುಚ್ಚರಿಸುವಲ್ಲಿ ವಿರಾಮವನ್ನು ಕಳೆದುಕೊಂಡಾಗ ಆಗುವ ಧ್ವನಿಮಾಗಳ ಕೂಡುವಿಕೆಯೇ ಸಂಧಿ.[೧೫] ಸಂಧಿಯಿಂದಾಗುವ ಧ್ವನಿ ವ್ಯತ್ಯಾಸಗಳೇ ಸಂಧಿ-ಕಾರ್ಯ/ಸಂಧಿ-ಬದಲಾವಣೆಗಳು ಅವು ಕನ್ನಡದಲ್ಲಿ (ಸಂಸ್ಕೃತದಿಂದ ಎರವಲಾಗಿ ಬಂದ ಪದಗಳನ್ನೊಳಗೊಂಡು) ಲೋಪಾಗಮಾದೇಶ ಮತ್ತು ನಿರ್ವಿಕಾರವೆಂದು ಕೇವಲ ನಾಲ್ಕು. ಈ ನಾಲ್ಕು ಸಂಧಿ ಸ್ಥಾನವನ್ನವಲಂಬಿಸಿ ಅಂತಸ್ಸಂಧಿ ಮತ್ತು ಬಹಿಸ್ಸಂಧಿಯೆಂದು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. ಸಂಧಿ ಕಾರ್ಯ ಅರ್ಥಾತ್ ಧ್ವನಿಮ ವ್ಯತ್ಯಾಸ ಒಂದು ಆಕೃತಿಮದ ಸೀಮೆಯೊಳಗೆಯೇ ಸಂಭವಿಸಿದರೆ ಅದು ಅಂತಸ್ಸಂಧಿ, ಆಕೃತಿಮದ ಸೀಮೆಯ ಹೊರಗೆ ಅರ್ಥಾತ್ ಎರಡು ಆಕೃತಿಮಾಗಳ ನಡುವೆ ಸಂಭವಿಸಿದರೆ ಅದು ಬಹಿಸ್ಸಂಧಿ[೧೬]. ಉದಾಹರಣಾರ್ಥವಾಗಿ ಈ ಕೆಳಗಿನ ಸಂಧಿ ನಿಯಮಗಳನ್ನು ಪರಿಶೀಲಿಸಬಹುದು.

ಸಂಧಿ ನಿಯಮಗಳು

೧) ಅಂತಸ್ಸಂಧಿ

೧. ಲೋಪಸಂಧಿ :

ಸಂಧಿನಿಯಮ : (೧) ಪೂರ್ವಪದ ದ್ವ್ಯಕ್ಷರೀಯವಾಗಿದ್ದು ಅದರ ಅಂತ್ಯ ಸ್ವರದ ಹಿಂದೆ ದ್ವಿತ್ವವಿದ್ದರೆ, ಅಥವಾ ಪ್ರಥಮಾಕ್ಷರದಲ್ಲಿ ದೀರ್ಘಸ್ವರವಿದ್ದರೆ ಅಥವಾ ಆ ಪದ ಅನೇಕಾಕ್ಷರೀಯವಾಗಿದ್ದು ಪರಪದದಾದಿಯಲ್ಲಿಯ ಕನ್ನಡ ಸ್ವರವನ್ನು ಸಂಧಿಸಿದರೆ ಪೂರ್ವಪದಾಂತ್ಯದ ಸ್ವರಕ್ಕೆ ಲೋಪ.

---

೧೫. ಸಂಧಿ ಎಲ್ಲಿ ಸಂಭವಿಸುವದಿಲ್ಲ ಅರ್ಥಾತ್ (ಬಹಿರ್) ವಿರಾಮ ಎಲ್ಲಿ ಲೋಪವಾಗುವದಿಲ್ಲವೆಂಬುದಕ್ಕೂ ರೌಪಿಕ ನಿಯಮಗಳನ್ನು ಕೊಡಬಹುದು. ನೋಡಿ. ಅ. ಅ. ೧೭.

೧೬ ನೋಡಿ. Robert A Hall, (Jr) Introductory Linguistics (1969) PP 139--141: ವಿಲ್ಯಂ ಮಾಡ್ತ. ಕನ್ನಡ ಭಾಷೆಯ ರೂಪರೇಷೆಗಳು (1975) ಪು ೪೨.

ಸಂಧಿಯ ಪ್ರಸ್ತುತ ವರ್ಗೀಕರಣಕ್ಕೂ ವೈಯಾಕರಣರ ಪದಮಧ್ಯ ಮತ್ತು ಪದಾಂತ್ಯ ಸಂಧಿಯೆಂಬ ವರ್ಗೀಕರಣಕ್ಕೂ ಅಜಗಜಾಂತರ ವ್ಯತ್ಯಾಸ. ವಿವರವಾದ ವರ್ಗೀಕರಣದ ವಿವರಣೆಗೆ ನೋಡಿ : J· S. Kulli, Kesharaja's Sabdamanidarpana (1976) P.90.

ಉದಾಹರಣೆಗಳು :

ಅ) ದ್ವ್ಯಕ್ಷರೀಯದಲ್ಲಿ ಅಂತ್ಯಾಕ್ಷರದ ಪೂರ್ವದ ದ್ವಿತ್ವಕ್ಕೆ :

೧೪೬ : ಕಟ್ಟಿ + ಇಡು > ಕಟ್ಟಿಡು

೧೪೭ : ಅಲ್ಲಿ + ಅಲ್ಲಿ > ಅಲ್ಲಲ್ಲಿ

೧೪೮ : ಕಣ್ಣು + ಎದೆ > ಕಣ್ಣೆದೆ

ಆ) ದ್ವ್ಯಕ್ಷರೀಯದಲ್ಲಿ ಪ್ರಥಮಾಕ್ಷರದ ದೀರ್ಘಕ್ಕೆ :

೧೪೯ : ಕಾಲ + ಅಡಿ > ಕಾಲಡಿ

೧೫೦ : ಭಾವ + ಇಸು > ಭಾವಿಸು

೧೫೧ : ಕೂಡಿ + ಇಡು > ಕೂಡಿಡು

ಇ) ಅನೇಕಾಕ್ಷರೀಯಕ್ಕೆ:

೧೫೨ : ನಾಡಿನ + ಒಳಗೆ > ನಾಡಿನೊಳಗೆ

೧೫೩ : ದಾರಿಗೆ + ಒಬ್ಬ > ದಾರಿಗೊಬ್ಬ

ಸಂಧಿ ನಿಯಮ ೨ :

ಸಂಸ್ಕೃತದ ಹ್ರಸ್ವ । ದೀರ್ಘ ಸವರ್ಣಸ್ವರ ಅದೇ ಸ್ಥಾನೀಯ ದೀರ್ಘಸ್ವರ ಅಥವಾ ಐ । ಔಕಾರಗಳನ್ನು ಸಂಧಿಸಿದರೆ ಪೂರ್ವ ಪದಾಂತ್ಯ ಸ್ವರಕ್ಕೆ ಲೋಪ. ಉದಾಹರಣೆಗಳು : ೯೩; ೯೪, ೯೬–೯೭; ೧೦೯, ೧೧೧,೧೧೩ ಮತ್ತು ೧೧೫

೩ ಆದೇಶ ಸಂಧಿ :

ಸಂಧಿ ನಿಯಮ ೩: ಪರಪದದ ಕನ್ನಡ ಅಘೋಷ ಸ್ಪರ್ಶ ಸಂಧಿಸ್ಥಾನದಲ್ಲಿ ಕನ್ನಡ ಸ್ವರಗಳ ನಡುವೆ ಬಂದರೆ ಅಥವಾ ಪೂರ್ವಪದಾಂತ್ಯ ಘೋಷ ವ್ಯಂಜನವನ್ನು ಸಂಧಿಸಿದರೆ ಅದು ಘೋಷ ಸ್ಪರ್ಶವಾಗಿ ರೂಪಾಂತರಗೊಳ್ಳುವದು.

ಉದಾಹರಣೆಗಳು : ೪೦, ೪೧–೪೨, ೪೩

ಸಂಧಿ ನಿಯಮ ೪

ಸಂಸ್ಕೃತ ಅಘೋಷ ಸ್ಪರ್ಶಗಳಿಗೆ ಸಂಸ್ಕೃತ ಸ್ವರ ಅಥವಾ ಘೋಷ ವ್ಯಂಜನ ಪರವಾದರೆ ಅವು ಘೋಷಗಳಾಗುತ್ತವೆ. ಅನುನಾಸಿಕಗಳು ಪರವಾದರೆ ಅವು ಅದೇ ಸ್ಥಾನೀಯ ಅನುನಾಸಿಕಗಳು ಆಗುತ್ತ.

ಉದಾಹರಣೆಗಳು : ೧೨೭-೧೩೬; ೧೪೨-೧೪೫

ಸಂಧಿ ನಿಯಮ ೫ :

ಸಂಸ್ಕೃತ ದಂತ್ಯ / ವತ್ಸ್ಯಗಳು ತಾಲವ್ಯಗಳನ್ನು ಸಂಧಿಸಿದರೆ ಅವು ತಾಲವ್ಯಗಳಾಗುತ್ತವೆ.

ಉದಾಹರಣೆಗಳು : ೧೩೭–೧೪೧

ಸಂಧಿ ನಿಯಮ ೬

ಸಂಸ್ಕೃತದ ಸವರ್ಣಹ್ರಸ್ವ ಸ್ವರಗಳು ಸಂಧಿ ಸ್ಥಾನದಲ್ಲಿ ಕೂಡಿದಾಗ ಅವು ಅದೇ ಸ್ಥಾನೀಯ ದೀರ್ಘ ಸ್ವರವಾಗುತ್ತವೆ.

ಉದಾಹರಣೆಗಳು ; ೯೩ ಮತ್ತು ೯೫

ಸಂಧಿನಿಯಮ ೭

ಅ.ಆ ಕಾರಗಳಿಗೆ ಇ/ಈ ಕಾರಗಳು ಪರವಾದರೆ ಅವೆರಡೂ ಏ ಕಾರವಾಗಿಯೂ ಉ/ಊಕಾರಗಳು ಪರವಾದರೆ ಓ ಕಾರವಾಗಿಯೂ ಋ ಕಾರ ಪರವಾದರೆ 'ಅರ್' ಎಂದೂ ರೂಪಾಂತರಗೊಳ್ಳುತ್ತವೇ,

ಉದಾಹರಣೆಗಳು : ೯೮–೧೦೭

ಸಂಧಿನಿಯಮ ೮

ಅ.ಆ. ಕಾರಗಳಿಗೆ ಏ ಓ ಕಾರಗಳು ಪರವಾದರೆ ಅವು ಕ್ರಮವಾಗಿ ಐ, ಔ ಕಾರಗಳಾಗಿ ರೂಪಾಂತರಗೊಳ್ಳುತ್ತವೆ.

ಉದಾಹರಣೆಗಳು ಃ ೧೦೮, ೧೧೦, ೧೧೨ ಮತ್ತು ೧೧೪,

ಸಂಧಿ ನಿಯಮ ೯

ಪೂರ್ವಸ್ವರಗಳಿಗೆ ಸವರ್ಣವಲ್ಲದ ಸ್ವರಪರವಾದರೆ ಯಕಾರವೂ, ಪಶ್ಚಸ್ವರಗಳಿಗೆ ವಕಾರವೂ, ಋ ಕಾರಕ್ಕೆ ರ ಕಾರವೂ ಆದೇಶಗಳಾಗಿ ಬರುತ್ತದೆ.

ಉದಾಹರಣೆಗಳು : ೧೧೬–೧೧೮; ೧೧೯–೧೨೨ ಮತ್ತು ೧೨೩–೧೨೬

ಪೂರ್ವ ಸ್ವರಗಳಿಗೆ ಸವರ್ಣವಲ್ಲದ ಸ್ವರ ಪರವಾದಾಗ ಯಕಾರಾದೇಶಕ್ಕೆ ಹೆಚ್ಚಿನ ಉದಾಹರಣೆಗಳು,

ಇ + ಊ ಃ ೧೫೩ ಅತಿ + ಊರ್ಜ > ಅತ್ಯೂರ್ಜ
ಇ + ಏ : ೧೫೪ ಪ್ರತಿ + ಏಕ > ಪ್ರತ್ಯೇಕ

ಈ + ಅ : ೧೫೫ ಅರ್ವಸಿ + ಅರ್ಪಣ > ಅರ್ವಶ್ಯರ್ಪಣ
ಈ + ಆ : ೧೫೬ ಮಹೀ + ಆಕಂಪನ > ಮಹ್ಯಾಕಂಪನ
ಏ + ಅ : ೧೫೭ ದೃಶ್ಯಲೇ + ಅನುಜ > ದಶ್ಯಲನುಜ
ಏ + ಉ : ೧೫೮ ಕಪಿಲೇ + ಉಪಾದಾನ ಕಪಿಲ್ಯುಪಾದಾನ

ಮೇಲಿನ ೧–೯ ಸಂಧಿನಿಯಮಗಳನ್ನು ಅವುಗಳಿಗೆ ಕೊಟ್ಟ ಉದಾಹರಣೆಗಳನ್ನು ಪರಿಶೀಲಿಸಿದಾಗ ಸಂಧಿಕಾರ್ಯ ಆಕೃತಿಯಾವ ಸೀಮೆಯೊಳಗೆಯೇ ನಡೆದಿದೆ ಹೊರತು ಹೊರಗಲ್ಲ. ಆದುದರಿಂದ ಆ ಎಲ್ಲ ಸಂಧಿಗಳೂ (ಲೋಪ ಮತ್ತು ಆದೇಶ) ಅಂತಸ್ಸಂಧಿಗಳಾಗಿವೆ.

೨) ಬಹಿಸ್ಸಂಧಿ : ಆಗಮಸಂಧಿ :

ಸಂಧಿನಿಯಮ ೧೦:

೧. ಪದ್ಯಾಂತ್ಯಗಳಲ್ಲಿಯ ಪೂರ್ವಸ್ವರಗಳಿಗೆ ಅಥವಾ ಐ ಕಾರಕ್ಕೆ ಮತ್ತು ಜೋ/ನೋ ಎಂಬ ಪ್ರಕೃತಿಗಳಿಗೆ ಸ್ವರಾದಿ ಪ್ರತ್ಯಯ/ಅವ್ಯಯಗಳು, ಪರವಾದರೆ **ಯಕಾರಾಗಮ**

೨. ಏಕಾಕ್ಷರೀಯ ಹ್ರಸ್ವಸ್ವರಯುಕ್ತ ನ೬ಲಯಳ ಕಾರಾಂತಗಳಿಗೆ ಸ್ವರ ಪರವಾದರೆ **ದ್ವಿತ್ವ**ವಾಗುತ್ತದೆ.

೩. ಪೂರ್ವೇತರ ಸ್ವರಾಂತಗಳಿಗೆ–ಅನ್ನು, ಇಗೆ ಅಥವಾ ಇತರ ವಿಭಕ್ತೇತರ ಸ್ವರಗಳು ಪರವಾದರೆ **ವಕಾರಾಗಮ.**

೪. ಅಕಾರಾಂತ ಮತ್ತು ಪಶ್ಚಸ್ವರಾಂತ ಅಮಹತ್‌ನಾಮ ಪ್ರಕೃತಿಗಳಿಗೆ ದ್ವಿತೀಯಾ. ಚತುರ್ಥ್ಯೇತರ ವಿಭಕ್ತಿ ಪ್ರತ್ಯಯಗಳು ಪರವಾದರೆ ಅನುಕ್ರಮವಾಗಿ **ದಕಾರ** ಮತ್ತು **ವಿನಾಗಮ ;**

೫. ಯಕಾರೇತರ ವ್ಯಂಜನಾಂತ ಅಮಹತ್‌ನಾಮ ಪ್ರಕೃತಿಗಳಿಗೆ ಅವು ಪರವಾದರೆ **ಇನಾಗಮ.**

೬. ವ್ಯಂಜನಾಂತ ಅಮಹತ್‌ಮೂಲಾಂಶ, ಅಮಹತ್ ಸರ್ವನಾಮ ಮತ್ತು ದ ಕಾರಾಂತ ನಾಮವಿಶೇಷಣಗಳಿಗೆ ಅವು ಪರವಾದರೆ **ಅರಾಗಮ.**

ಉದಾಹರಣೆಗಳು :

೧. ಯಕಾರಾಗಮಕ್ಕೆ :

ಏ + ಇ : ೧೫೯ ಬೇ + ಇಸು > ಬೇಯಿಸು
ಇ + ಎ : ೧೬೦ ತಿಳಿ + ಎಂದು > ತಿಳಿಯೆಂದು

ಇ + ಅ : ೧೬೧ ಗಾಳಿ + ಅನ್ನು > ಗಾಳಿಯನ್ನು

ಎ + ಇ : ೧೬೨ ಮಳೆ + ಇಂದ > ಮಳೆಯಿಂದ

ಎ + ಅ : ೧೬೩ ಬೇಸಿಗೆ + ಅಲ್ಲಿ > ಬೇಸಿಗೆಯಲ್ಲಿ

ಇ + ಇ : ೧೬೪ ಹುರುಳಿ + ಇಲ್ಲ > ಹುರುಳಿಯಿಲ್ಲ

ಐ + ಎ : ೧೬೫ ಥೈ + ಎಂದು > ಥೈಯೆಂದು

ಐ + ಅ : ೧೬೬ ಕೈ + ಅನ್ನು > ಕೈಯನ್ನು

ಜೋ + ಎ : ೧೬೭ ಜೋ + ಎಂದು > ಜೋಯೆಂದು

ನೋ + ಇ : ೧೬೮ ನೋ + ಇಸು > ನೋಯಿಸು

೨ ದ್ವಿತ್ವಕ್ಕೆ :

೧೬೯ ಹೊನ್ + ಇಗೆ > ಹೊನ್ನಿಗೆ

೧೭೦ ಹೆಣ್ + ಉ > ಹೆಣ್ಣು

೧೭೧ ಹುಲ್ + ಇಲ್ಲ > ಹುಲ್ಲಿಲ್ಲ

೧೭೨ ಬಯ್ + ಉ > ಬಯ್ಯು

೧೭೩ ಕೊಳ್ + ಅದೆ > ಕೊಳ್ಳದೆ

೩ ವಕಾರಾಗಮಕ್ಕೆ :

೧೭೪ ಹೂ + ಇಗೆ > ಹೂವಿಗೆ

೧೭೫ ಮರ + ಉಂಟು > ಮರವುಂಟು

೧೭೬ ಮಗು + ಅಲ್ಲ > ಮಗುವಲ್ಲ

೧೭೭ ಗುರು + ಎನ್ನದೆ > ಗುರುವೆನ್ನದೆ

೧೭೮ ಕಾರ್ಯ + ಇಲ್ಲ > ಕಾರ್ಯವಿಲ್ಲ

೧೭೯ ಮಧು + ಉಳ್ಳ > ಮಧುವುಳ್ಳ

೧೮೦ ಹೂ + ಅನ್ನು > ಹೂವನ್ನು

೪ ಅ) ದಕಾರಾಗಮಕ್ಕೆ :

೧೮೧ ಮರ + ಇಂದ > ಮರದಿಂದ

೧೮೨ ಹಣ + ಅ > ಹಣದ

೧೮೩ ತೋಟ + ಅಲ್ಲಿ > ತೋಟದಲ್ಲಿ

೪) ವಿನಾಗಮಕ್ಕೆ :

೧೮೪ ಹಸು + ಇಂದ > ಹಸುವಿನಿಂದ
೧೮೫ ಮಗು + ಅಲ್ಲಿ > ಮಗುವಿನಲ್ಲಿ
೧೮೬ ಹೂ + ಅ > ಹೂವಿನ

೫. ಇನಾಗಮಕ್ಕೆ :

೧೮೭ ಕಾಡ್ + ಇಂದ > ಕಾಡಿನಿಂದ
೧೮೮ ಜೇನ್ + ಅಲ್ಲಿ > ಜೇನಿನಲ್ಲಿ
೧೮೯ ನಾಡ್ + ಅ > ನಾಡಿನ

೬. ಅರಾಗಮಕ್ಕೆ :

೧೯೦ ಒಂದ್ + ಇಂದ > ಒಂದರಿಂದ
೧೯೧ ಹಿರಿದ್ + ಅ > ಹಿರಿದರ
೧೯೨ ಇದ್ + ಒಳಗೆ > ಇದರೊಳಗೆ


ಮೇಲಿನ ಉದಾಹರಣೆಗಳನ್ನು (೧೫೯–೧೯೨) ಗಮನಿಸಿದರೆ ಎಲ್ಲೆಲ್ಲಾ ಆಕೃತಿಮ ಸೀಮೆಗಳ ಹೊರಗೆ ಅರ್ಥಾತ್ ಎರಡು ಆಕೃತಿಮಾಗಳ ನಡುವೆ ಸಂಧಿ ಬದಲಾವಣೆ (ಆಗಮ) ಆಗಿದೆಂಬುದು ಖಚಿತವಾಗುತ್ತದೆ. ಆದುದರಿಂದ ಆಗಮಸಂಧಿಯನ್ನು ಬಹಿಸ್ಸಂಧಿಯೆಂದೇ ಕರೆಯಬೇಕಾಗುತ್ತದೆ.

ಒಟ್ಟಿನಲ್ಲಿ ಸಂಧಿಯೆಂಬುದು ವಿರಾಮವನ್ನು ಅವಲಂಬಿಸಿಕೊಂಡಿರುವ ಕೌಶಿಕ ವಿಷಯ ಅದರ ವೈವಿಧ್ಯತೆಯು ನಾಮರೂಪಿಯನ್ನು ಹೊಂದಿಕೊಂಡಿರದೆ ರೂಪವನ್ನೇ ಹೊಂದಿಕೊಂಡಿದೆ. ಭಾಷೆಯನ್ನುಚ್ಚರಿಸುವಾಗ ವಿರಾಮ ಕಳೆದು ಹೋದರೆ[೧೭] ಆಕೃತಿಮಾ ಸೀಮೆಗಳಲ್ಲಿಯ ಭಾಷಾಧ್ವನಿಗಳು ಸಂಧಿಸಿಕೊಳ್ಳುತ್ತವೆ. ಅದೇ ಸಂಧಿ. ಸಂಧಿಕಾಲದಲ್ಲಿ ಸಂಧಿಕಾರ್ಯ (Sandhicharge) ಗಳು ನಡೆಯಬಹುದು. ಅವು ಆಕೃತಿಮದ ಸೀಮೆಯೊಳಗೆ ನಡೆದರೆ ಅವುಗಳನ್ನು ಅಂತಸ್ಸಂಧಿ (Irternal

---

೧೭. ಅವ್ಯಯಗಳಿಗೂ ಕ್ರಿಯಾಪದಗಳಿಗೂ ಆಕಾರಾಂತ ಗುಣವಾಚಕ (Adjective) ಗಳಿಗೂ ಪ್ಲುತಕ್ಕೂ ಸ್ವರಾದಿಯುಕ್ತ ಆಕೃತಿಮಾ ಪದವಾದಾಗ. ವಿರಾಮ ಕಳೆದು ಹೋಗದು. ಅರ್ಥಾತ್ ಸಂಧಿಯಾಗದು. ಅಂದರೆ ಪ್ರಕೃತಿಭಾವವುಂಟಾಗುವದು. ಎಲೇ ಇದು. ಓಹೋ ಇರಲಿ. ರಾಮಾ ಎಂದು. ಹೊಸಅಡಕೆ, ಒಳ್ಳೆಯ ಊಟ. ಆ ಅಂಗಡಿ ಇತ್ಯಾದಿ.

Sandhi) ಯೆಂದೂ, ಹೊರಗೆ ನಡೆದರೆ ಬಹಿಸ್ಸಂಧಿ (External Sandhi) ಯೆಂದೂ ಹೆಸರು. ಅಂತಸ್ಸಂಧಿಯೊಳಗೆ ಧ್ವನಿಮಾಗಳು ಕಳೆದು ಹೋದರೆ ಅದನ್ನು ಲೋಪಸಂಧಿಯೆಂದೂ, ರೂಪಾಂತರಗೊಂಡರೆ ಆದೇಶಸಂಧಿಯೆಂದೂ ಕರೆಯುತ್ತಾರೆ. ಬಹಿಸ್ಸಂಧಿಯಲ್ಲಿ ಧ್ವನಿಮಾ(ಗಳು) ಹೊಸದಾಗಿ ಆಗಮಿಸುವುದರಿಂದ ಅದನ್ನು ಆಗಮ ಸಂಧಿಯೆಂದೂ ಕರೆಯುತ್ತಾರೆ. ಭಾಷಾ ಧ್ವನಿ ಸಂಧಿಸುವಾಗ ಲೋಪಾಗಮಾದೇಶಗಳುಂಟಾದರೆ ಆ ಸಂಧಿಯನ್ನು ಒಟ್ಟಾಗಿ ವಿಕಾರ (Mutation) ಸಂಧಿಯೆಂದೂ, ಉಂಟಾಗದಿದ್ದರೆ ನಿರ್ವಿಕಾರ[೧೮] ಸಂಧಿಯೆಂದೂ ಕರೆಯಬಹುದು. ಕೆಳಗಿನ ವೃಕ್ಷ ಚಿತ್ರವನ್ನು ಗಮನಿಸಿ :



---

೧೮. ಉದಾ: ಕಾಲ್ + ಅನ್ನು > ಕಾಲನ್ನು
ಊರ್ + ಇಗೆ > ಊರಿಗೆ
ಅಪ್ಪನ್ + ಅ > ಅಪ್ಪನ
ಗಾಣಿಗನ್ + ಒಡನೆ > ಗಾಣಿಗನೊಡನೆ

ಮಾನಸೋಲ್ಲಾಸ ಗ್ರಂಥದಲ್ಲಿ ಸಾಮಾಜಿಕ ಸೇವಕನ ಸಾಮಾನ್ಯ ಗುಣಗಳು

● ಎಂ. ಎಸ್. ಜೋಶಿ

ಮಾನಸೋಲ್ಲಾಸ — ಅಥವಾ ಅಭಿಲಷಿತಾರ್ಥ ಚಿಂತಾಮಣಿ ಎಂಬ ಔಚಿತ್ಯ ಪೂರ್ಣವಾದ ತಲೆಬರಹ ಪಡೆದ ಈ ಗ್ರಂಥವು ಸೋಮೇಶ್ವರ ೩ ನಿಂದ ರಚಿತವಾಗಿದೆ. ಕನ್ನಡ ನಾಡಿನ ಕಲ್ಯಾಣ ಚಾಲುಕ್ಯರ ಮನೆತನದಲ್ಲಿ ಕೀರ್ತಿವಂತನಾದ ವೈಭವದಿಂದ ೫೦ ವರುಷಗಳವರೆಗೆ ರಾಜ್ಯಭಾರ ಮಾಡಿದ ಆರನೇಯ ವಿಕ್ರಮಾದಿತ್ಯನ ಮಗನೆ ಭೂಲೋಕಮಲ್ಲ ಸರ್ವಜ್ಞ ಚಕ್ರವರ್ತಿ, ಇತ್ಯಾದಿ ಬಿರುದಾಂಕಿತ ಪಡೆದ ಸೋಮೇಶ್ವರ ೩ ನು. ಬಹಳ ವೈಭವ. ವಿಲಾಸಾದಿಗಳ ಮಧ್ಯದಲ್ಲಿದ್ದರೂ ಕೂಡ ಸೋಮೇಶ್ವರನು ಅವೆಲ್ಲವುಗಳ ಸದುಪಯೋಗವನ್ನು ಜನತೆಯ ಹಿತಕ್ಕೋಸ್ಕರ ರಾಜನಾದವನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ತನ್ನ ಗ್ರಂಥದಲ್ಲಿ ತಿಳಿಸಿರುವನು. ರಾಜಭೋಗವನ್ನು ರಾಜನಾದವನೊಬ್ಬನೇ ಉಪಯೋಗಿಸದೆ ಸರ್ವಜನ–ಹಿತದೊಂದಿಗೆ ರಾಷ್ಟ್ರ ಸಂಪತ್ತಿನ ವಿನಿಯೋಗವಾಗಬೇಕೆಂದು ತಿಳಿಸುವನು. ಈ ವಿಷಯವನ್ನೆ ಆಧುನಿಕ ಭಾರತ ರಾಷ್ಟ್ರವು ತನ್ನ ನೀತಿಯನ್ನಾಗಿಸಿಕೊಂಡು ಅನೇಕ ಪಂಚವಾರ್ಷಿಕ ಮತ್ತು ವಾರ್ಷಿಕ ಯೋಜನೆಗಳ ಮುಖಾಂತರ ರಾಷ್ಟ್ರ ಹಿತಕಾರ್ಯವನ್ನು ಮಾಡುತ್ತಲಿವೆ. ಆದರೆ ಅವೆಲ್ಲವೂ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಸ್ವಾರ್ಥಪರತೆ, ಅಸಾಮರ್ಥ್ಯ, ಒಂದೆಡೆ ನಿಯಂತ್ರಣವಿಲ್ಲದಿರುವುದು, ಇತ್ಯಾದಿ ಕಾರಣಗಳುಂಟು. ಇವೆಲ್ಲಕ್ಕೆ ಹನ್ನೆರಡನೇಯ ಶತಮಾನದಲ್ಲಿಯೇ ಸೋಮೇಶ್ವರನು ಅನೇಕ ಉಪಾಯಗಳನ್ನು ಸೂಚಿಸಿರುವನು.

ಪ್ರತಿಯೊಬ್ಬರ ಮನಸ್ಸನ್ನು ಉಲ್ಲಾಸಗೊಳಿಸುವ ಸಾಮರ್ಥ್ಯಹೊಂದಿದ ಮಾನಸೋಲ್ಲಾಸ ಗ್ರಂಥದ ಭಾಷೆ,ಸಾಹಿತ್ಯದ ಸೊಗಸು, ತಿಳಿಸುವ ರೀತಿ, ಪರೀಕ್ಷಿಸುವ ಗುಣ ಬಹಳ ಆದರಣೀಯವಾಗಿವೆ. ಸೋಮೇಶ್ವರನ ಕಲಾನೈಪುಣ್ಯವು ಮತ್ತು ವಿದ್ವತ್ತಿನ ಪರಾಕಾಷ್ಠೆಯು ಭಾಷಾವಿಜ್ಞಾನಿಗಳನ್ನು, ಇತಿಹಾಸಕಾರರನ್ನು, ಸಹೃದಯರನ್ನು, ವಿಮರ್ಶಕರನ್ನು, ರಾಜತಾಂತ್ರಿಕರನ್ನು, ರಸಿಕವೃಂದವನ್ನು, ಸಂಶೋಧಕರ ಸಮೂಹವನ್ನು ತನ್ನತ್ತ ನಿರಂತರವಾಗಿ ಸೆಳೆಯುತ್ತಲಿದೆ. ಕೇವಲ ವಿಲಾಸಾದಿ ಉಪಭೋಗಗಳಿಗೆ ಶರಣಾಗದೆ ಸಮಾಜದಲ್ಲಿ ಬದುಕುವ ಪ್ರತಿಯೊಬ್ಬರಿಗೂ ಉಪಯೋಗವಾಗ

ಲೆಂಬ ಮಹದಾಲಸೆಯಿಂದ ಗ್ರಂಥವನ್ನು ರಚಿಸಿದ ಅವನ ಪ್ರಯತ್ನ, ಪಾಂಡಿತ್ಯ, ವಿಚಾರಾದಿಗಳನ್ನು ತಿಳಿಯುವುದು ಕನ್ನಡಿಗರಾದ ನಮಗಂತೂ ಅವಶ್ಯವೆಂದೇ ಹೇಳಬೇಕು.

ರಾಜನಾದವನು ಅಥವಾ ಪ್ರಮುಖಾಡಳಿತಾಧಿಕಾರಿಯು ಸ್ವತಃ ತಾನು ಪ್ರತಿಯೊಂದರಲ್ಲಿಯೂ ಶುಚಿಯಾಗಿವೈಯಕ್ತಿಕ ಸ್ವಾರ್ಥವನ್ನು ಸಂಪೂರ್ಣತ್ಯಜಿಸಿ,ನೀತಿಯುಕ್ತನಾಗಿ, ತನ್ನ ಸಕಲಪ್ರಜೆಗಳನ್ನು ತನ್ನಮಕ್ಕಳಂತೆಯೇಕಳ್ಳರಿಂದಲೂ ಅಮಾತ್ಯರಿಂದಲೂ, ಅರ್ಥಾಧಿಕಾರಿಗಳಿಂದಲೂ ರಕ್ಷಿಸುತ್ತಿರಬೇಕಲ್ಲದೆ ಕಳ್ಳರಿಂದ, ಸೊಕ್ಕಿದಪರಿಂದ, ವಂಚಕರಿಂದ, ಅಧರ್ಮಿಗಳಿಂದ, ವೈರಿಗಳಿಂದ ಮತ್ತು ವಿಶೇಷವಾಗಿ ಕಾರಕೂನರಿಂದ ಜಾಗರೂಕನಾಗಿ ಪ್ರಜೆಗಳನ್ನು ಪಾಲಿಸಬೇಕು ಎಂದಿರುವನು.

चोरैः साहसिकैश्चाटैराचारस्तथा परैः ।
विशेषेण च कायस्थः पीडिताः पालयेत प्रजाः ॥

ಕನ್ನಡ ನಾಡಿನ ಸೋಮ ಭೂಪಾಲನು ಎಂತಹ ಸತ್ಯ, ವಿವೇಕಯುಕ್ತ ವಿಚಾರವನ್ನು ತಿಳಿಸಿರುವನು. ಅತೀ ಸೂಕ್ಷ್ಮವಾದ ಈ ವಿಷಯಗಳನ್ನು ರಾಜನಾದವನು ಗಮನಿಸುತ್ತಿದ್ದರೆ ಮಾತ್ರ ಸಾರ್ಥಕವಾಗಿ, ಉದ್ದೇಶವು ಪೂರ್ಣವಾಗುವುದು. ಜನತೆಯು ಸುಖ ಸಮೃದ್ಧಿಯನ್ನು ಹೊಂದುವುದು. ಭಾರತದೇಶದಲ್ಲಿ ಇಂತಹ ಎಲ್ಲ ಸಮರ್ಥವಾದ ನಡೆನುಡಿಗಳು ಅನೇಕ ರಾಜಮಹಾರಾಜರಲ್ಲಿ ಇರುವುದರಿಂದಲೇ ಅಂಥಹ ಪುಣ್ಯಾತ್ಮರನ್ನು ಇಂದಿಗೂ ನಾವು ನೆನೆಯುತ್ತೇವೆ. ಅನೇಕ ಶತಮಾನದವರೆಗೆ ಜನತೆಯು ಮನಗೆದ್ದು ಸುವರ್ಣಯುಗವೆಂದು ಹೆಸರುವಾಸಿಯಾದ ರಾಜಮನೆತನಗಳನ್ನು ಸ್ಮರಿಸುತ್ತೇವೆ.

ಭಾರತೀಯ ಭಾಷಾಬಳಗದಲ್ಲಿ ಕನ್ನಡ ಸಾಹಿತ್ಯಕ್ಕೆ ಸತ್ವ, ಸಂಖ್ಯೆ ಮತ್ತು ಪ್ರಾಚೀನತೆಯ ದೃಷ್ಟಿಯಿಂದ ಸಂಸ್ಕೃತ, ಪ್ರಾಕೃತ ತಮಿಳುಗಳ ತರುವಾಯದ ನಾಲ್ಕನೆಯ ಸ್ಥಾನವೆಂದು ತಿಳಿಯಲಾಗಿದೆ. ಕನ್ನಡ ಜಾನಪದಸಾಹಿತ್ಯದ ಮಹತ್ವವು ಭಾರತವನ್ನು. ವಚನಸಾಹಿತ್ಯವು ಜಾಗತಿಕ ಮನ್ನಣೆಯನ್ನು ಗಳಿಸುವ ಅರ್ಹತೆ ಪಡೆದಿವೆ. ಇಂತಹ ಉಜ್ವಲ ಸಾಹಿತ್ಯಸೃಷ್ಟಿಗೆ ಕಾರಣರಾದ ಪಂಪ–ಹರಿಹರ:ಕುಮಾರವ್ಯಾಸ ಮೊದಲಾದ ಮಹಾಕವಿಗಳ, ಬಸವ–ಪುರಂದರ ಮೊದಲಾದ ಅನುಭಾವಿ ಮಹಾತ್ಮರು ಬಾಳಿದುದು ಕನ್ನಡ ಸಾಹಿತ್ಯಕ್ಕೆ ದೊಡ್ಡ ಗೌರವ. ಅವರು ಮಾಡಿ ಬೆಳಸಿದ ಸಾಹಿತ್ಯಕೃಷಿಗೆ ಕನ್ನಡದ ಜನತೆ ಯಾವತ್ತೂ ಚಿರಋಣಿ. ಅಂತಹ ಅವರನೇ ಸಾಲಿನಲ್ಲಿ ಬರುವ ಕನ್ನಡ ಮಾತ್ರ ಭಾಷೆ ಹೊಂದಿದ ಚಾಲುಕ್ಯವಂಶ ತಿಲಕನಾದ ಸೋಮೇಶ್ವರನು ಮಾಡಿದ ಹೊಸ ಸಾಹಿತ್ಯ ರಚನಾ ಸಾಮರ್ಥ್ಯಕ್ಕೂ ನಾವು ಗೌರವಿಸುವುದು ಸೂಕ್ತ. ಮಾನಸೋಲ್ಲಾಸದಿಂದಲೇ ಅನೇಕ ಅಂಶಗಳನ್ನು ಪಡೆದು ಅದೇ ರೀತಿಯಾಗಿ

ಶಿವತತ್ವ ರತ್ನಾಕರ, ಲೋಕೋಪಕಾರಕ, ವಿವೇಕ ಚಿಂತಾಮಣಿ ಇತ್ಯಾದಿ ಗ್ರಂಥಗಳು ಬೆಳೆದು ಬಂದವು. ಆದ್ದರಿಂದಲೇ ಮಾನಸೋಲ್ಲಾಸವನ್ನು ಸಂಸ್ಕೃತ ಸಾಹಿತ್ಯದಲ್ಲಿ ಪ್ರಥಮ 'ವಿಶ್ವಕೋಶ'ವೆಂದು ಹೇಳಲು ಯಾವುದೇ ಅಭ್ಯಂತರವಿಲ್ಲ.

ಮಾನವ ಮಾನವನಾಗಿ ಜೀವಿಸಬೇಕಾದರೆ ಆದರ್ಶ ಧ್ಯೇಯ ಬೆಳಗುವ ಜ್ಯೋತಿಯಾಗಿ ಅವನನ್ನು ಆಳುತ್ತಿರತಕ್ಕದ್ದು ಎಂಬುದಾಗಿ ಹೇಳಿದ್ದಾರೆ ಹಿಂದಿನವರು, ಇಂದು ಕೂಡ ನುಡಿಯುತ್ತಿದ್ದಾರೆ ಬಹುಶಃ ಮುಂದು ಹೇಳುತ್ತಾರೆ. ಅದು ಸ್ವಯಂ ಸಿದ್ಧ ಸತ್ಯಾಂಶ ಅದನ್ನು ಕುರಿತು ಯಾವ ಸಂದೇಹವೂ ಇಲ್ಲ. ಮಾನವ ತನ್ನ ಸುತ್ತ ಮುತ್ತಣ ಜನಜಾನುವಾರವನ್ನು ನೆಲದಲ್ಲಿರುವ ಕಲ್ಲುಮುಳ್ಳನ್ನು ಗಮನಿಸುತ್ತಾ ಅವುಗಳಿಗೆ ಹೊಂದಿಕೊಳ್ಳಬೇಕು. ಆದ್ದರಿಂದ ಮನುಷ್ಯನಿಗೆ ಅವನ ದೈನಂದಿನ ಬದುಕು ಎಂದಿಗೂ ಅಮುಖ್ಯವಾಗಲಾರದು. ವಾಸ್ತವ ಜೀವನದಲ್ಲಿ ಜರಗುವ ಅನೇಕಾನೇಕ ಸಂಗತಿ ತೀರ ಸಾಮಾನ್ಯವಾದವು, ನೀರಸವಾದವು, ಮರೆತುಬಿಡತಕ್ಕವು, ಹಲಕೆಲವಾದರೂ ಸ್ವಲ್ಪ ವಿಶಿಷ್ಟವಾದವು, ಅಲ್ಪಸ್ವಲ್ಪ ಕಾಂತಿಯಿಂದ ಕೂಡಿದವು, ಭಾವಾರ್ಥ ತುಂಬಿದವು, ಮತ್ತು ಸ್ವಾರಸ್ಯವಾದವು. ಅಂಥವುಗಳನ್ನು ಆಯ್ಕೆಮಾಡಿ ಗುರ್ತಿಸಿಟ್ಟರೆ ವ್ಯಕ್ತಿಗಳ ವ್ಯಕ್ತಿತ್ವದ ಗ್ರಹಿಕೆಗೆ ಅವುಗಳಿಂದ ಉತ್ಕೃಷ್ಟ ಸಹಾಯ, ಅವಲ್ಲ ಆದರ್ಶಕ್ಕೆ ಅನುಕೂಲವಾಗುವ ಕರ್ತವ್ಯಗಳನ್ನು ಸೋಮೇಶ್ವರನು ವಿವೇಚಿಸಿದ್ದಾನೆ, ಅಲ್ಲದೆ ನಡೆದೂ ತೋರಿಸಿದ್ದಾನೆ, ಸುಳ್ಳಿಗಿಂತ ನಿಜ. ಶ್ರೇಷ್ಠ, ಕಲ್ಪಿತಕ್ಕಿಂತ ವಾಸ್ತವತೆ ಶ್ರೇಷ್ಠ ಊಹಿಸಿದ್ದಕ್ಕಿಂತ ನಡೆದದ್ದು ಹೆಚ್ಚು ವಿಸ್ಮಯಕರ, ಎಂಬ ನಾಣ್ಣುಡಿ ಅಕ್ಷರಶಃ ಸತ್ಯ.

ಸೋಮಭೂಪಾಲನು ಸಮಾಜ ಸೇವೆಯಲ್ಲಿ ವ್ಯಕ್ತಿಯು ತೊಡಗಬೇಕಾದರೆ ಅವನು ಅಸತ್ಯವನ್ನು ಬಿಡಬೇಕೆಂದು ನುಡಿಯುವನು. ಅಸತ್ಯವೆಂದರೆ ಏನು? ಎಂಬ ಪ್ರಶ್ನೆಗೆ ಆತನು :

कामाल्लोभाद् भयात् क्रोधात् साक्षिवादात तथैव च ।
मिथ्यावदति यत् पापं तदसत्यं प्रकीर्तितम् ॥

ಯಾವುದೇ ಆಶೆಯಿಂದಲಾಗಲೀ, ಲೋಭದಿಂದಲಾಗಲೀ, ಭಯದಿಂದಲಾಗಲೀ, ಸಿಟ್ಟಿನಿಂದಲಾಗಲೀ, ಸಾಕ್ಷಿಯಿಂದಲಾಗಲಿ, ಯಾವಾತನು ಪಾಪಾತ್ಮಕವಾದ ಸುಳ್ಳನ್ನು ನುಡಿಯುವನೋ ಅದುವೇ ಅಸತ್ಯವು. ಅಂತಹ ವ್ಯಕ್ತಿಯಿಂದ ಸಮಾಜ ಕಾರ್ಯ ಸರಿಯಾಗಲಾರದು. ಅದರೊಂದಿಗೆ ಪಂಚಾಯಿತಿಗೆ ಜನತೆಯ ಎದುರಿಗೆ ದೇವತಾಸನ್ನಿಧಿಯಲ್ಲಿ ಪ್ರಮಾಣವಾಗಿ ನುಡಿದ ವ್ಯಕ್ತಿಗಳು ಅಂಥಹ ಮಾತುಗಳನ್ನು ಮೋಹದಿಂದ ಮೀರಿ ನಡೆದರೆ ಅದು ಕೂಡ ಅಸತ್ಯವಾಗುವದು. ಸುಳ್ಳೆಂಬುದು ಮಾನವನ ಸ್ವರ್ಗ ಸುಖವನ್ನು ನಾಶ ಮಾಡುವುದರೊಂದಿಗೆ, ಕೀರ್ತಿ, ಯಶಸ್ಸು ಗೌರವಾದಿಗಳನ್ನು ಹಾಳುಮಾಡಿ ಜನರ

ದ್ವೇಷಕ್ಕೆ ಪಾತ್ರವಾಗುತ್ತದೆ. ಆದುದರಿಂದ 'ಇಂತಹ "ಅನಿಂದ್ಯವಾದ ಪಾಪಕರವಾದ ಸುಳ್ಳನ್ನು ಸರ್ವಥಾ ಬಿಡಬೇಕು" ಎಂಬುದಾಗಿ ಸೋಮೇಶ್ವರನು ಸಮಾಜ ಸೇವೆಗೆ, ವಯುಕ್ತಿಕ ಅಭಿವೃದ್ಧಿಗೆ ಆಲೋಚಿಸುವ ವ್ಯಕ್ತಿಗೆ ತಿಳಿಸಿರುವನು.

ಭಾರತೀಯ ಪ್ರಾಚೀನ ತತ್ವ ಶಾಸ್ತ್ರಗಳು ಇವನ್ನೇ ತಿಳಿಸುತ್ತವೆ. ಎಲ್ಲ ಧರ್ಮ ಗ್ರಂಥಗಳು ಕೂಡ ಸುಳ್ಳನ್ನು ತ್ಯಜಿಸಬೇಕೆಂದು ಬೋಧಿಸುತ್ತವೆ. ಸುಳ್ಳನ್ನು ನುಡಿಯುವದನ್ನು ಬಿಟ್ಟ ವ್ಯಕ್ತಿಯು ಬಹಳವಾಗಿ ಸಮಾಜಕ್ಕೆ ಹತ್ತಿರದವನಾಗುವದಕ್ಕೆ ಅನೇಕ ಉದಾಹರಣೆಗಳಿವೆ. ಮಹಾತ್ಮಾಗಾಂಧೀಜಿಯವರು ತಾವು ಮಾಡಿದ ತಪ್ಪನ್ನು ತಿಳಿದು ನಿಜ ವೃತ್ತಾಂತ ತಂದೆಯಲ್ಲಿ ಅರುಹಿದ ದಿನದಿಂದಜೀವನದ ಚಕ್ರದಲ್ಲಿಯೇ ಅವರೊಂದು ಉತ್ಕೃಷ್ಟವಾದ ಬದಲಾವಣೆಗೊಳಗಾದವರು. ಸುಳ್ಳನ್ನು ನುಡಿದ ಮನುಷ್ಯನ ಸುಖವೇ ನಾಶವಾಗುತ್ತದೆ ಎಂಬ ಬುದ್ಧಿವಾದಕ್ಕೆ ಇದೊಂದು ಉದಾಹರಣೆ.

ಎರಡನೇಯದಾಗಿ ಸೋಮೇಶ್ವರನು ಪರದ್ರೋಹದ ಬಗ್ಗೆ ಚರ್ಚಿಸುತ್ತಾ ಮೊದಲಿಗೆ ಅವನು ಪರದ್ರೋಹವೆಂದರೇನು ಎಂಬುದಕ್ಕೆ ಃ

ताडनं छेदन क्लेशकरण वित्तबन्धनम् ।
परेषां कुरुते यत् तु परद्रोहः स उच्यते ॥
पैशुन्यं परवादं च गालिदानं च तर्जनम् ।
मर्मोद्धाटं विधत्ते यत परद्रोहः स उच्यते ॥

ಇತರರನ್ನು ಯಾವ ಕಾರಣವಿಲ್ಲದೇ ಹೊಡೆಯುವದು, ಅವರ ಮನಸ್ಸನ್ನು ನೋಯಿಸುವಂತೆ ಮಾಡುವುದು, ಅವರ ಸಂಪತ್ತನ್ನು ಪಡೆಯುವುದು ಇವುಗಳೊಂದಿಗೆ ಒಬ್ಬರ ವಿಷಯಗಳನ್ನು ಬೇರೆಡೆ ತಿಳಿಸುವ ಚಾಡಿ ಕೆಲಸವು, ವ್ಯರ್ಥವಾದ ನಿಂದೆ ನಿರರ್ಥಕ ಬೈಗಳು, ಕಾರಣವಿಲ್ಲದೆ ಹೆದರಿಸುವುದು, ರಹಸ್ಯ ವಿಷಯಗಳನ್ನು ಸ್ವಾರ್ಥಕ್ಕೆ ಬಯಲಿಗೆಳೆಯುವುದು ಇವೆಲ್ಲವೂ ಪರದ್ರೋಹವೆಂದು ಹೇಳಿಸಿಕೊಳ್ಳುತ್ತವೆ. ತನಗಾಗಿ ಬೇರೆಯವರ ಮನೆ, ಸಂಪತ್ತು, ಭೂಮಿ, ವಸ್ತ್ರಾದಿಗಳು, ಧಾನ್ಯ, ಸಂಪತ್ತು, ಇವುಗಳನ್ನು ವಶಾತ್ಕಾರಪೂರ್ವಕ ಕಸಿದುಕೊಳ್ಳುವುದು ಪರದ್ರೋಹವೆಂದು ಸೋಮೇಶ್ವರನು ತಿಳಿಸುತ್ತಾನೆ. ಆದುದರಿಂದ ಇತರರಿಗೆ ಮಾಡಿದಂತಹ ದ್ರೋಹವು ಬಹಳ ದುಃಖದಾಯಕವು, ಸ್ವರ್ಗಸುಖವನ್ನು ನಿಲ್ಲಿಸತಕ್ಕದ್ದು ಆದುದರಿಂದ ಘೋರವಾದ ಪರದ್ರೋಹವನ್ನು ಬಿಡಬೇಕು ಎಂಬುದಾಗಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ಕುರಿತು ಕವಿಯು ನುಡಿಯುತ್ತಾನೆ. ಹೀಗೆ ಎಲ್ಲರೂ ನಡೆದರೆ ಸಮಾಜವು ಪೂರ್ಣವಾಗಿ ಬದಲಾವಣೆ ಹೊಂದುವುದರಲ್ಲಿ ಸಂದೇಹವಿಲ್ಲ. ಇದೊಂದು ತ್ರಿಕಾಲಿಕ ಸತ್ಯ ಸಂಗತಿಯಾಗಿದ್ದು ಮಾನವ ಸಮಾಜದುದ್ಧಾರಕ್ಕೆ ಬೀಜಮಂತ್ರದಂತಿದೆ. ರಾಜ್ಯವನ್ನಾ

ಳುವ ನಾಯಕರುಗಳಲ್ಲಿ ಅಧಿಕಾರಿಗಳಲ್ಲಿ, ಸಮಾಜದಲ್ಲಿ ಗಣ್ಯರೆಂದು ಹೆಸರು ಪಡೆದವರಲ್ಲಿ ಇಂತಹ ಗುಣಗಳು ಬೆಳೆದು ಬಂದರೆ ಮಾನವ ಸಮಾಜ ಸುಖ, ಶಾಂತಿ ನೆಮ್ಮದಿಯಿಂದ ಬದುಕಲು ಯಾವ ಸಂದೇಹವು ಉಳಿಯದು. ಇಂತಹ ದ್ರೋಹ ವರ್ಜಿತ, ಸತ್ಯವಾಗ್ಮಿಗಳನ್ನು ಕರ್ನಾಟಕ ಒಂದೇಯಲ್ಲದೇ ಭಾರತ ದೇಶವು ಹೊಂದಿದ್ದರಿಂದಲೇ ಜಗತ್ತಿನಲ್ಲಿ ಅವರ ಸ್ಥಾಯಿ ಕೀರ್ತಿಪತಾಕೆ ಹಾರಾಡುತ್ತಲಿದೆ. ಆಧುನಿಕ ಗಣ್ಯರಲ್ಲಿ ಸ್ವಾರ್ಥದ ಲವಲೇಶವು ಇಲ್ಲದಕ್ಕೆ ಲಾಲಬಹಾದ್ದೂರ ಶಾಸ್ತ್ರೀಜಿಯವರನ್ನು ಇಲ್ಲಿ ನೆನೆಯಬಹುದಲ್ಲವೇ.

ಮೂರನೇಯದಾಗಿ ಸೋಮ ಭೂಪಾಲನು ಮನುಷ್ಯರಿಗೆ ಯೋಗ್ಯವಲ್ಲದ ಅಗಮ್ಯರಾದ ಸ್ತ್ರೀಯರ ಸಂಗದಿಂದ ದೂರಿರಬೇಕೆಂದು ತಿಳಿಸುತ್ತಾ ವೈಜ್ಞಾನಿಕರೀತಿಯಲ್ಲಿ ಅಂಥಹ ಸಮಾಗಮದಿಂದ ಆಯುಷ್ಯ, ಮತ್ತು ಆರೋಗ್ಯ ಇವೆರಡು ಬಾಧ್ದೆಗೊಳಗಾಗುತ್ತವೆ ಎಂದು ತಿಳಿಸುವನು. ಮಾನವನಿಗೆ ಆರೋಗ್ಯವೆಂಬುದು ಎಷ್ಟು ಪ್ರಧಾನವೆಂದು ಹೇಳಿ ಅದಕ್ಕೆ ಮೌಲ್ಯ ಕಟ್ಟಲು ಬರುವುದಿಲ್ಲ. ಅಂತಹ ಅಮೂಲ್ಯವಾದ ಆರೋಗ್ಯ ರಕ್ಷಣೆಯು ಪ್ರತಿಯೊಬ್ಬ ವ್ಯಕ್ತಿ ಮೊದಲಿನ ಕರ್ತವ್ಯವೆಂದು ಸೋಮೇಶ್ವರನು ನುಡಿಯುವುದರೊಂದಿಗೆ ಆರೋಗ್ಯವಿಲ್ಲದ ವ್ಯಕ್ತಿಯನ್ನು ನಿಂದಿಸುತ್ತ ಆತನು ತನ್ನ ಸೇವಕರಿಂದಲೂ ಸ್ವ ಸ್ತ್ರೀಯರಿಂದಲೂ ದೋಷಿಯಾಗುವನೆಂದು ಮಾರ್ಮಿಕವಾಗಿ ನುಡಿದು, ಆರೋಗ್ಯದ ಬೆಲೆಯನ್ನು ತಿಳಿಸಿದ್ದಾನೆ. ರೋಗಗ್ರಸ್ಥನು ಬೇಗನೆ ಬಳಲಿದ ಮುಪ್ಪನ್ನು

वलिभिः पलितैर्युक्तो रुपेण रहितो भवेत् ।
स्त्री जनैर्भृत्यवर्णैश्च भूपतिश्चावमन्यते ॥

ಹೊಂದುವುನೆಂದು ತಿಳಿಸುವನು. ಇದರಂತೆಯೇ ಆಂಗ್ಲಭಾಷೆಯಲ್ಲಿ Health is Wealth ಎಂಬುವ ನಾಣ್ಣುಡಿಯು ಪ್ರಸಿದ್ಧವಾಗಿದೆ.

ಭಾರತದ ಇತಿಹಾಸದಲ್ಲಂತೂ ಅದು ನಿತ್ಯ ನೂತನವಾಗಿ ಬೆಳೆದು ಬಂದಿದೆ. ಎಲ್ಲ ದೇವ ದೇವತೆಯರನ್ನು ಕುರಿತು ಬಹಳ ಮಂತ್ರಗಳಲ್ಲಿ ಆಯುರಾರೋಗ್ಯವನ್ನು ಇವಿಸುವುದಲ್ಲದೇ ಎಲ್ಲ ಜನರು ವೀರ್ಯವಂತರಾಗಿರಲೆಂದು ಬೇಡಿಕೆ ಇದೆ.

सहनाववतु सहनौ भुनक्तु सहवीर्यं करवावहै ಇತ್ಯಾದಿ

ಕುಮಾರ ಸಂಭವದಲ್ಲಿ ಕಾಳಿದಾಸನು--(೫, ೩೩)

शरीरमाद्यं खलुधर्म साधनम् ।

ಬಂದಿದ್ದಾನೆ. ಆರೋಗ್ಯವಾದ ಶರೀರವೇ ಧರ್ಮಾರ್ಥ ಕಾಮಮೋಕ್ಷಗಳನ್ನು ಪಡೆಯಲು ಸಮರ್ಥವಾದವುಗಳೆಂದು ಹೇಳಿರುವನು. ಇವೆಲ್ಲ ವಿಷಯಗಳನ್ನು ತಿಳಿದಿದ್ದ ಸೋಮೇಶ್ವರನು ಮನುಷ್ಯನ ಆರೋಗ್ಯಕ್ಕೆ ಯಾವವು ಉಪಯುಕ್ತ ಸಂಗತಿಗಳು ಮತ್ತು ಯಾವ ಸಂಗತಿಗಳು ಪ್ರಯೋಜನಕಾರಿಗಳಲ್ಲವೆಂಬುದನ್ನು ವಿವೇಚಿಸಿದ್ದಾನೆ. ಹಳತಿರುವ ಆಹಾರವಾಗಲೀ, ಪಾನೀಯವಾಗಲೀ ಆಹಾರಕ್ಕೆ ಯೋಗ್ಯವಲ್ಲವೆಂದಿದ್ದಾನೆ. ಮಿತ ಆಹಾರಕ್ಕೆ ಪ್ರಶಸ್ತ್ಯ ಕೊಟ್ಟಿದ್ದು, ವ್ಯವಸ್ಥಿತ ರೀತಿಯೇ ಒಳ್ಳೆಯದೆಂದು ನುಡಿದಿದ್ದಾನೆ.

ಆರೋಗ್ಯ ಸಂಪತ್ತನ್ನು ಹೊಂದಿದ ವ್ಯಕ್ತಿಯು ಅಸೂಯೆಯನ್ನು ಪೂರ್ಣವಾಗಿ ತ್ಯಜಿಸಬೇಕೆಂದು ತಿಳಿಸಿದ್ದಾನೆ, ಸಮಾಜ ಜೀವಿಯಾದ ಮಾನವನು ಸಮಾಜದಲ್ಲಿ ಹೊಂದಿಕೊಂಡು ಬೆಳವಣಿಗೆಯನ್ನು ಪಡೆಯುವುದು ಅನಿವಾರ್ಯ. ಆದ್ದರಿಂದ ಸಮಾಜದ ಮತ್ತು ವ್ಯಯಕ್ತಿಕ ಸುಧಾರಣೆಯಾಗುವುದು ಖಂಡಿತ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅಸೂಯಾಪರನಾದರೆ ಅಂತಹ ವ್ಯಕ್ತಿ ಇಂಥ ಸಮಾಜಕ್ಕೆ ಅನುಕೂಲಕ್ಕಿಂತಲೂ ಅನಾನುಕೂಲತೆಯೇ ಅತ್ಯಧಿಕವೆಂದು ಸೋಮೇಶ್ವರನು ನುಡಿಯುತ್ತಾನೆ. ಪೂರ್ವದಲ್ಲಿ ಸೂಯೇ ಅಂದರೇನು ಎಂಬುದಕ್ಕೆ :

समृद्धि वीक्षय चान्यस्य रुपं शौर्यमुदारताम् ।
कला कुशलतां शीलं सौभाग्यं गुणसंपदा ॥

ಇತರರ ಸಮೃದ್ಧಿಯನ್ನು ನೋಡಿ, ಇತರರ ಸೌಂದರ್ಯ ಕಂಡು ಬೇರೆಯವರ ಶೌರ್ಯವನ್ನು ತಿಳಿದು ಅವರ ಉದಾರತೆಯನ್ನು ಅರಿತು ಕಲೆಗೆ ಕೀರ್ತಿವಂತರಾದ ನೈಪುಣ್ಯಕ್ಕೆ ಮೈಮರೆತವರನ್ನು ವೀಕ್ಷಿಸಿ, ಅವರ ಶ್ರೇಷ್ಠವಾದ ಶೀಲವನ್ನು ಗಮನಿಸಿ ಇತರರ ಗುಣಗಳೆಂಬ ಸಂಪತ್ತನ್ನು ಕಂಡು ಯಾವ ವ್ಯಕ್ತಿಯು ಸಹಿಸದೇ ಇರುವನೋ ಅವನೇ ಅಸೂಯೆಗಾರನು ಇದುವೇ ಅಸೂಯೆ ಅಸಹಿಷ್ಣುತೆಯಿಂದ ಕೂಡಿದವನಾದಲ್ಲಿ ಅವನು ಈ ಲೋಕದಲ್ಲಿ ನಿಂದೆಯನ್ನು ಅನುಭವಿಸುತ್ತಾನೆ. ಆದುದರಿಂದ ಬೇರೆಯವರ ಒಳ್ಳೆಯ ಶ್ರೇಷ್ಠ ಗುಣಗಳನ್ನು ನೋಡಿ ಅಸೂಯೆಯನ್ನು ಪಟ್ಟುಕೊಳ್ಳಬಾರದೆಂದು ರಾಜನಾದ ಸೋಮೇಶ್ವರನು ತಿಳಿಸುತ್ತಾನೆ. ಈ ವಿಷಯಗಳಲ್ಲಿ ಹೇಗೆ ಸಲೀಸಾಗಿ ನುಡಿಯುತ್ತೇವೆಯೋ ಹಾಗೆ ಇದನ್ನು ಆಚರಣೆಗೆ ತರಲು ಬಲು ಕಷ್ಟಸಾಧ್ಯವೆಂದು ಹೇಳಬಹುದು. ಪ್ರಾಚೀನ ಭಾರತದ ಇತಿಹಾಸವಂತೂ ಇದಕ್ಕೆ ಒಳ್ಳೆಯ ಉದಾಹರಣೆಯೇ ಆಗಿವೆ ರಾಜ ಮಹಾರಾಜರು ತಮ್ಮ ತಮ್ಮ ಸ್ವಾರ್ಥಕ್ಕೆ ಇತರ ರಾಜರ ಎಲ್ಲ ರೀತಿಯ ಅಭಿವೃದ್ಧಿಯನ್ನು ಸಹಿಸದೆ ಅವರೊಂದಿಗೆ ಹೋರಾಡಿ ಇಬ್ಬರೂ ನಿಶಕ್ತರಾಗಿ ಇನ್ನೊಬ್ಬರಿಗೆ ಶರಣಾಗತರಾಗಿ ಬದುಕುವ ಪ್ರವೃತ್ತಿಯವರಾಗಿದ್ದರು.

ಆಧುನಿಕ ರಾಷ್ಟ್ರಗಳಲ್ಲಿಯೂ ಕೂಡಾ ಇದನ್ನು ನಾವು ಕಂಡುಕೊಳ್ಳುತ್ತಲಿರುವೆವು. ಯುದ್ಧಕ್ಕೆ ಮುಖ್ಯವಾಗಿ ಸ್ವಾರ್ಥ, ಎರಡನೇಯದು ಅಸೂಹೆ ಇವುಗಳಿಂದಲೇ ಜಗತ್ತಿನ ರಾಷ್ಟ್ರ ರಾಷ್ಟ್ರಗಳ ಮಧ್ಯೆ ಹೋರಾಟ ನಡೆದಿದೆ, ಅದರಿಂದಲೇ ನಡೆಯುವುದು ವ್ಯಕ್ತಿಯಿಂದ ಮೊದಲುಗೊಂಡು ರಾಷ್ಟ್ರಗಳವರೆಗೆ ಎಣಿಕೆ ಹಾಕಿದರೆ ಇಂತಹ ಸ್ವಾರ್ಥ ಗುಣವಿಮುಕ್ತರ ಸಂಖ್ಯೆಗಳು ತೀರ ಅತ್ಯಲ್ಪ. ಆದುದರಿಂದ ಸಮಾಜ ಸುಧಾರಣೆಗೆ ಪ್ರಕೃತಿ ಕೊಡುಗಳನ್ನು ಅರಿತು ಅವುಗಳಲ್ಲಾದರೂ, ವಿವೇಕಯುಕ್ತರು ಅಸೂಹೆಯನ್ನು ಬಿಡಬೇಕೆಂದಿರುವನು; ಸೋಮಭೂಪಾಲನು.

ಸಮಾಜವೆಂದರೆ ಪ್ರತಿಯೊಂದು ರೀತಿ ನೀತಿಯ ವ್ಯಕ್ತಿಗಳನ್ನು ಹೊಂದಿ ಸಾಮಾನ್ಯ ಅನುಕೂಲಕ್ಕಿರುವ ಜನ ಸಮುದಾಯವೇ ಆಗಿದೆ. ಕೊಳೆತ ಹಣ್ಣು ಇತರ ಸರಿಯಾದ ಹಣ್ಣುಗಳನ್ನು ಕೆಡಿಸುವಂತೆ ದೋಷಯುಕ್ತರಾದ ಜನರ ಸಂಪರ್ಕದಿಂದ ಸರಿಯಾದ ನಡತೆಯ ವ್ಯಕ್ತಿಯ ಗುಣಗಳು ಹಾಳಾಗುವವು. ಅದನ್ನರಿಯುವುದು ಕಷ್ಟತಮವೆಂದು ಗ್ರಂಥಕರ್ತನ ಅಭಿಪ್ರಾಯವಾಗಿದೆ. ಧರ್ಮದ ವೇಶವನ್ನು ಹಾಕಿ ಮಹಾಪಾಪಿಗಳಾದ ದೋಷಿತರಾದ ಜನರನ್ನು ಸರಿಯಾಗಿ ತಿಳಿದುಕೊಂಡು ಅವರಿಂದ, ಅವರ ಸಂಗತಿಯಿಂದ ಬಲು ದೂರವಿರಬೇಕೆಂದು ಹೇಳುವನು.

ಕ್ರೋಧ ಅಥವಾ ಸಿಟ್ಟು ಎಂಬುದು ಮಾನವನಿಗೆ ದೊಡ್ಡದಾದ ರೋಗವೆಂದು ಬಲ್ಲವರು ಹೇಳುತ್ತಾರೆ. ಕಾರಣ ಅದರಿಂದ ವ್ಯಕ್ತಿಯು ಸರ್ವಸ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದಾಗಿ ತಿಳಿಸಿದ್ದಾರೆ. ಸೋಮೇಶ್ವರರು ಈ ಸಂದರ್ಭದಲ್ಲಿ 'ಕ್ರೋಧವು ಬುದ್ಧಿಯನ್ನು ತನ್ನನ್ನು ತನ್ನ ಕುಲವನ್ನು ಮತ್ತು ಸಂಪತ್ತೆಲ್ಲವನ್ನು ಜೊತೆಗೆ ಧರ್ಮವನ್ನು ಪ್ರಯೋಜನವಿಲ್ಲದೆ ಕಳೆದುಕೊಳ್ಳುವಂತೆ ಮಾಡುವದು ಅದಕ್ಕೋಸ್ಕರ ಕೋಪವೆಂಬುವುದನ್ನು ಬಿಡಬೇಕೆಂದು' ತಿಳಿಸಿರುವನು

क्रोधो नाशयते बुद्धिमात्मानं च कुलं धनम् ।
धर्मनाशो भवेत् कोपात् तस्मात् त परिवर्जयेत ॥

ಇವರೊಂದಿಗೆ ಕೀರ್ತಿವಂತರಾದ ಮಹಾನುಭಾವರು ತಮ್ಮನ್ನು ತಾವು ಎಂದೂ ಕೀರ್ತಿಸಿಕೊಳ್ಳುವುದಿಲ್ಲ. ಅದುವೆ ಅವರ ಕೀರ್ತಿಗೆ ಇನ್ನೊಂದು ಕಾರಣ. ಮೋಹದಿಂದ ತನ್ನ ಗುಣಗಳನ್ನೆ ತಾನು ಹೊಗಳಿಕೊಂಡರೆ ಅಂಥಹ ವ್ಯಕ್ತಿಯು ಇದ್ದು ಸತ್ತಂತೆ. ಆದುದರಿಂದ ಯಾವ ಕಾರಣಕ್ಕೂ ತನ್ನ ಗುಣಗಾನವನ್ನು ತಾನೇ ಮಾಡಿಕೊಳ್ಳಕೂಡದೆಂದು ಕವಿಯ ಸಲಹೆಯಾಗಿದೆ.

ಪ್ರತಿಯೊಬ್ಬ ಮಾನವ ಸಮಾಜ ಜೀವಿಯಾಗಿದ್ದರಿಂದ ಸಮಾಜದಲ್ಲಿಯೇ ತನ್ನೆಲ್ಲ ಬಗೆಯ ಆಗುಹೋಗುಗಳನ್ನು ಕಳೆಯಬೇಕಾದ್ದರಿಂದ ಅವನು ಇತರ ತನ

ಸಮಾಜ ವ್ಯಕ್ತಿಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಚಾಲುಕ್ಯರಾಜನು ತಿಳಿಸುತ್ತಾ

ऋतं वाच्यं प्रियं वाच्यं न वाच्यं हितम प्रियम् ।
प्रियं च नन्दतं याच्यं वाच्यमेष धर्मः सनातनः ॥

'ವ್ಯಕ್ತಿಯು ಸತ್ಯವನ್ನೇ ನುಡಿಯಬೇಕು, ಸದಾ ಪ್ರಿಯವಾದದ್ದನ್ನೆ ಹೇಳಬೇಕು, ಹಿತ ವಾಗಿದ್ದರೂ ಅಪ್ರಿಯವಾಗಿ ತಿಳಿಸಬಾರದು' ಪ್ರಿಯವನ್ನು ಸುಳ್ಳಾಗಿ ಮಾಡಬಾರದು ಇದುವೆ ಅನಾದಿ ಕಾಲದಿಂದ ಬಂದ ಧರ್ಮವೆಂದಿದ್ದಾನೆ. ಹೀಗೆ ಹಿಂದೆಯೇ ಧರ್ಮ ದರ್ಶಗಳು ತಿಳಿಸಿರುವರೆಂದಿದ್ದಾನೆ. ಬಹಳ ಜನರ ಸಾಹಿತ್ಯಾತ್ಮಕ ಲೇಖನಗಳನ್ನು ಅವಲೋಕಿಸಿದಲ್ಲಿ ಈ ವಿಷಯವಂತೂ ಇದ್ದದ್ದು ಕಂಡುಬರುವುದು. ಸಮಾಜ ಜೀವಿಯಾದ ಮಾನವನು ತನ್ನ ಪ್ರತಿಯೊಂದು ಕಾರ್ಯಕಲಾಪಗಳನು ಅವಲೋಕಿಸಿ ವಿವೇಕದಿಂದ ಮಾಡಿದ್ದೇಯಾದರೆ ಸಮಾಜವೇ ಸಮೃದ್ಧಿ ಸುಖಶಾಂತಿಯಿಂದ ಕೂಡಿರ ಬಹುದು. ಆದರೆ ಇಂತಹ ಗುಣವನ್ನು ಹೊಂದಿದ ಜನತೆ ಅತ್ಯಲ್ಪ ಅಂತಹ ಸಾಮಾನ್ಯ ಗುಣಗಳನ್ನು ಹೊಂದಿದ ಇಂಥ ಅಲ್ಪ ಜನರಿಂದಲೇ ಸಾಮಾಜಿಕ ಸೇವೆ ಸಾಧ್ಯ.

ಸೋಮೇಶ್ವರನು ಸರ್ವಸಾಮಾನ್ಯರ ನಡೆ-ನುಡಿಗಳನ್ನು ತಿಳಿಸುತ್ತಾ-ವ್ಯಕ್ತಿ ಯಿಂದ ವ್ಯಕ್ತಿಗೆ ಪ್ರಿಯಾಪ್ರಿಯಗಳಲ್ಲಿ ವ್ಯತ್ಯಾಸವಿರುವದರಿಂದ ಒಂದೇ ವಸ್ತು ಅನೇಕ ಜನರಿಗಾಗಲೀ, ಭಿನ್ನ ವಿಚಾರವಂತರಿಗಾಗಲೀ ಸಂತೋಷ ಕೊಡಲಾರದೆಂದು ಸ್ಪಷ್ಟ ವಾಗಿ ತಿಳಿಸಿದ್ದಾನೆ. ಇವನ್ನೆ ಒಬ್ಬರಿಗೆ ಅನುಕೂಲವಿದ್ದ, ಪ್ರಯೋಜನಕಾರಿಯಾದ ಕಾರ್ಯಗಳು ಇನ್ನೊಬ್ಬರಿಗೆ ಬೇಡವಾಗಬಹುದು ಆದುದರಿಂದ ಇದೆಲ್ಲವನ್ನು ತಿಳಿದು ವ್ಯಕ್ತಿಯು ಬೇರೆಯವರಿಗೆ ಮನನೊಯ್ಯುವಂತೆ ನಡೆದುಕೊಳ್ಳಬಾರದೆಂದು ತಿಳಿಸಿ ಅದರಿಂದ ತನಗೂ ಇತರರಿಗೂ ಅನುಕೂಲವೆಂದು ನುಡಿದಿದ್ದಾನೆ. ನಡೆ-ನುಡಿಯಲ್ಲಿ ಮಿತವ್ಯಯಕಾರಿಯಾಗುವುದು ಅತ್ಯುತ್ತಮವೆಂದು ಹೇಳುತ್ತಾನೆ. 'ಅರ್ಥವತ್ತಾಗಿ ಪರಿಮಿತ ಹೊಂದಿದ ಮಾತನ್ನಾಡುವ ವ್ಯಕ್ತಿಯು ಎಲ್ಲಡೆಯೂ ಎಲ್ಲ ಸಂದರ್ಭಗಳ ಲ್ಲಿಯೂ ಯಾವಾಗಲೂ ಗಣ್ಯನೆಂದು' ವಿಚಾರಿಸಿರುವನು.

ಸಮಾಜ ಸೇವೆಯಲ್ಲಿ ಮೊದಲನೇಯ ಗುಣವಾದ ತನ್ನತನವನ್ನು ನಿರಾಡಂಬರ, ನಿಸ್ವಾರ್ಥಪೂರ್ಣ ನಿಯಮಿತತನದಿಂದ ನಡೆದುಕೊಳ್ಳುವುದರೊಂದಿಗೆ, ತನು, ಮನ, ಧನದಿಂದಲೂ ಸಮಾಜಕ್ಕೆ ಹಿತಕಾರಿಯಾಗಬೇಕೆಂದು ಚಾಲುಕ್ಯ ಭೂಪಾಲನು ಹೇಳು ವನು, ರಾಜರಾದವರು ಅಂದು ತಮ್ಮ ಪ್ರಜೆಗಳಿಗಾಗಿ ಶಾಂತಿಪರಿಪಾಲನಾರ್ಥವಾಗಿ ನೈಸರ್ಗಿಕ ವಿಕೋಪಗಳಿಂದ ತೊಂದರೆ ಬಾರದಿರಲೆಂದು ಯಜ್ಞ ಯಾಗಾದಿ ಪುಣ್ಯ ಕಾರ್ಯಗಳೊಂದಿಗೆ ದೇವಾಲಯಾದಿಗಳನ್ನು ನಿರ್ಮಿಸುವವರಾಗಿದ್ದರು. ಜಾತ್ರೆಗೆ

ನೀರಿನಾನುಕೂಲಕ್ಕಾಗಿ ಕೆರೆ ಭಾವಿಗಳನ್ನು ತೋಡಿಸುತ್ತಿದ್ದರು. ಶಿಕ್ಷಣಕ್ಕಾಗಿ ಅನೇಕ ವತ್ತಿ-ದಾನಾದಿಗಳನ್ನು ಸಲ್ಲಿಸುತ್ತಿದ್ದರು. ಇಂದು ಇಂಥೆಲ್ಲ ಕಾರ್ಯಗಳನ್ನು ರಾಜ್ಯದಧಿಕಾರ ಪಡೆದ ಸರಕಾರವೇ ಮಾಡುತ್ತಲಿದೆ. ಆದರೆ ಇಂದು ಪರಿಸರ, ಪರಿಯಾಣ, ಪ್ರಸಂಗಾದಿಗಳು ಬೇರೆಯೇ ಆಗಿದ್ದು ಸಮಾಜದಲ್ಲಿ ಬಹಳಷ್ಟು ಸ್ವಾವಲಂಬನಕ್ಕಿಂತ ಅವಲಂಬನಾ ಮನೋವೃತ್ತಿ ಬೆಳೆದು ಬಂದಿದೆ. ಆದ್ದರಿಂದಲೇ ಸಮಾಜ ಸುಧಾರಣಾ ಹೆಸರಿನಿಂದ ಸ್ವಾರ್ಥಹಿತೈಷಿಗಳ ಸಂಖ್ಯೆಯು ಬೆಳೆದಿದ್ದರಿಂದ ನಿಜವಾಗಿ ಸಮಾಜ ಸೇವಕರಿಗೆ ಬಹಳ ಶ್ರಮ ಮತ್ತು ಕಷ್ಟಗಳು ಒದಗಿಬರುತ್ತಲಿವೆ. ಪ್ರತಿಯೊಂದರಲ್ಲಿ ಅನಿಶ್ಚಿತತೆ, ಅಪನಂಬಿಕೆ, ಹೆದರಿಕೆಗಳು ಜನಸಾಮಾನ್ಯರಲ್ಲಿ ಬೆಳದಿದ್ದರಿಂದ ನಿಜವಾಗಿಯೂ ಆರೋಗ್ಯ ಸಮಾಜ ಸುಧಾರಣಾ ಕರ್ತವ್ಯವನ್ನು ತಿಳಿಯುವುದು ಕಷ್ಟ ಸಾಧ್ಯವಾಗಿದೆ. ನಿಶ್ಚಿತ ಮನೋಭಾವದ ಸಮಾಜಸುಧಾರಕನು ಇದಾವುಳುದನ್ನು ಗಮನಿಸದೆ ತನ್ನ ಕಾರ್ಯದಲ್ಲಿಯೇ ಅವನು ಸಂತೋಷ ಹೊಂದುವನೆಂದು ಅನುಭವಿಕರ ನುಡಿಯಾಗಿದೆ. ನಿಶ್ಚಿತವಾದ ಜೀವನದ ಮೌಲ್ಯ ಹೊಂದಿದ ಸಮಾಜ ಸುಧಾರಕನು ತನ್ನ ಜೀವಿತದ ಕೊನೆಯವರೆಗೂ ಅದನ್ನು ಕಾಯ್ದುಕೊಂಡು ಹೋಗುವನೇ ಹೊರತು ಅದರಿಂದ ಹಿಂದೆಗೆಯಲಾರ ಅಥವಾ ತನ್ನತನಕ್ಕೆ ಇರುವ ಜೀವಿತ ಮೌಲ್ಯವನ್ನು ಕಳೆದುಕೊಳ್ಳಲಾರ. ಸತ್ಯ, ದಯೆ, ಧರ್ಮ, ದಾನ, ಮುಂತಾದ ಸದ್ಗುಣಗಳು, ತ್ರಿಕಾಲಸತ್ಯವಾಗಿದ್ದು ಅವುಗಳಲ್ಲಿಯ ರೂಪ, ಪರಿಸರ, ಕಾರ್ಯ ಕ್ಷೇತ್ರಾದಿಗಳಲ್ಲಿ ವ್ಯತ್ಯಾಸವಾಗಬಹುದಾದರೂ ಅವುಗಳ ನಿಜರೂಪದಲ್ಲಿ ಎಂದಿಗೂ ಯಾವ ಕಾರಣಕ್ಕೂ ಎಲ್ಲಿಯೂ ಬದಲಾಗಲಾರವು.

ಹನ್ನೆರಡನೆಯ ಶತಮಾನದಲ್ಲಿ ಸೋಮೇಶ್ವರನು ತನ್ನ ಗ್ರಂಥದಲ್ಲಿ ವಿವರಿಸಿದ ಎಲ್ಲ ಜೀವಿತಮೌಲ್ಯಗಳು ಇಂದಿಗೂ ಇವೆ. ಮುಂದೂ ಇರುವವು ಹಿಂದೆಯೂ ಇದ್ದವು. ಜಗತ್ತಿಗೆ ಅನುಕೂಲವಾಗುವ ಇಂದಿನ ವಿಶಾಲ ವಿಚಾರಗಳು ಭಾರತೀಯ ಸಾಹಿತ್ಯದಲ್ಲಿ ಆಗಲೇ ಬೆಳಕಿಗೆ ಬಂದಿವೆ. ಮಾನಸೋಲ್ಲಾಸದಲ್ಲಿ ಗ್ರಂಥಕರ್ತನು ತಿಳಿಸುತ್ತಾ ಮನುಷ್ಯನು ಸದಾ ಆಸ್ತಿಕ ಭಾವವನ್ನು ಹೊಂದಿ ಸಮತ್ವವನ್ನು ಅಭ್ಯಸಿಸಿದ್ದೇ ಆದಲ್ಲಿ ಅಂಥವನು ಎಲ್ಲ ದೇವತೆಗಳಿಂದ ಅನುಗ್ರಹೀತನಾಗಿ ಶ್ರೇಷ್ಠ ಸಂಪತ್ತನ್ನು ಹೊಂದುತ್ತಾನೆ ಎಂದು ನುಡಿದಿರುವನು. ಇಲ್ಲಿ ಸಂಪತ್ತೆಂದರೆ ಎಲ್ಲ ರೀತಿಯ ಸುಖ. ಶಾಂತಿ, ಸಮೃದ್ಧಿ ಎಂದು ನಿಶ್ಚಿತವಾಗಿ ಹೇಳಬಹುದು.

एवं य आस्तिकं भावमाश्रितः समतं गतः ।
सर्वदेव प्रसादेन लभते सम्पदं वराम् ॥

ಈ ವಿಚಾರವು ಇಂದು ಸಂಯುಕ್ತ ರಾಷ್ಟ್ರಗಳ ಬಿರಿದಾದ ಮಾನ್ಯತೆಗಳಲ್ಲಿಯೂ ಉದ್ಭವಿಸುತ್ತಲಿದೆ. ಈವಿಚಾರವು ದೈವವಶಾತ್ ಕಾರ್ಯಗತವಾದಲ್ಲಿ ಜಗತ್ತಿಗೆ

ಮನುಷನಿರ್ಮಿತ ಮಾರಕಾಸ್ತ್ರಗಳಿಂದ ನಿಶ್ಚಿತವಾಗಿಯೂ ಯಾವ ಅಪಾಯವೂ ಒದಗದೆ ಶಾಂತಿಯಿಂದ ಬದುಕಲು ಸಾಧ್ಯ.

ಸಂಸ್ಕೃತ ಲಿಪಿಯನ್ನರಿಯದ ಸಂಸ್ಕೃತಪ್ರೇಮಿ ಕನ್ನಡಿಗರಿಗೆ ಕನ್ನಡನಾಡಿನಲ್ಲಿಯೇ ಹುಟ್ಟಿ, ಬೆಳೆದು, ಬದುಕಿ, ಜನತೆಗೆ ಮಹದೋಪಕಾರಮಾಡಿ ಕೀರ್ತಿವಂತರಾದ, ಮಹಾ ಮಹಿಮರ ಕೊಡುಗೆಗಳನ್ನು ಅವರ ತರ್ಕಬದ್ಧಯೋಗ್ಯ ವಿಚಾರಾದಿಗಳನ್ನು ಸುಲಭವಾಗಿ ತಿಳಿಯಲು ಇಂತಹ ಸಣ್ಣ ಪುಟ್ಟ ಲೇಖನಗಳು ಉಪಯುಕ್ತವೆಂದು ಭಾವಿಸಿ ಅತ್ತ ಕಡೆ ಪ್ರಯತ್ನಿಸಲಾಗಿದೆ.

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ - ಒಂದು ಅಧ್ಯಯನ

● ಡಾ|| ಶಾಲಿನಿರಘುನಾಥ

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಕ್ಕೆ ಹೊಸಗನ್ನಡದ ಆದ್ಯ ಸಾಮಾಜಿಕ ನಾಟಕವೆಂಬ ಹೆಗ್ಗಳಿಕೆ ಇದೆಯಷ್ಟೇ[೧]. ಆದರೆ ಇಂದಿಗೂ ಅದು ಸ್ವಾರಸ್ಯವಾಗಿರುವುದು, ನೇರವಾಗಿ ಹಾಗೂ ಜೀವಂತವಾಗಿ ಚಿತ್ರಿಸಿರುವ ಸಾಮಾಜಿಕ ಸಮಸ್ಯೆಗಳಿಂದ ಮತ್ತು ಒಂದು ಸಮಾಜದ ಹಾಗೂ ಒಂದು ಪ್ರದೇಶದ ಆಡುಮಾತುಗಳನ್ನೇ ಸಂಪೂರ್ಣವಾಗಿ ನಾಟಕಕ್ಕೆ ಬಳಸಿದ ಅಪೂರ್ವ ಪ್ರಯೋಗದಿಂದ. ಕಥಾವಸ್ತು ಹಾಗೂ ರಚನೆಯ ದೃಷ್ಟಿಯಿಂದ ಅದೊಂದು ಕ್ರಾಂತಿಕಾರಕ ಕೃತಿಯೆಂಬುದನ್ನು ಎಚ್.ಕೆ.ರಂಗನಾಥರೂ, ಕನ್ನಡ ಸಾಹಿತ್ಯ ಚರಿತ್ರೆಯ ಒಂದು ತಿರುವಿನಲ್ಲಿ ಅನೇಕ ಹೊಸತನಗಳಿಗೆ ಧೈರ್ಯ ಮಾಡಿದ ಕೃತಿಯೆಂದು ಕೆ. ವಿ. ಸುಬ್ಬಣ್ಣನವರೂ ಕೊಂಡಾಡಿದ್ದಾರೆ. ೧೮೮೭ರಲ್ಲಿಯೇ ಮುದ್ರಣಗೊಂಡ ಈ ನಾಟಕ ಆ ಕಾಲದಲ್ಲಿಯೇ ಸಮಾಜದಿಂದ ಉತ್ತಮ ಪ್ರತಿಕ್ರಿಯೆ ಪಡೆಯಿತೆನ್ನುತ್ತಾರೆ. ಬಹಳ ವರ್ಷಗಳವರೆಗೆ ಅಜ್ಞಾತವಾಗಿಯೇ ಇದ್ದ ಈ ಕೃತಿಯ ಮಹತ್ವವನ್ನು ಮನಗಂಡ ಲಿಂಗೇಶ ಶರ್ಮರು ಕುಮಟಾ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ (೧೯೫೩) ಮರುಮುದ್ರಿಸಿದರು. ಈಗಾಗಲೇ ಅನೇಕ ಬಾರಿ ಧಾರವಾಡ ಆಕಾಶವಾಣಿಯ ಮೂಲಕ ರೇಡಿಯೋ ಪ್ರಸಾರ ರೂಪಕಂಡ[೨], ಹವ್ಯಾಸೀ ಕಲಾವಿದರ ಮೂಲಕ ರಂಗಭೂಮಿಯ ಪ್ರಯೋಗಗಳನ್ನು ಕಂಡ ಈ ನಾಟಕ, ಕಾಲ, ದೇಶ, ಭಾಷೆಗಳ ಗಡಿಗಳನ್ನೂ ದಾಟಿ ಸಹೃದಯರನ್ನು ಸ್ಪಂದಿಸಿದೆ; ಅನೇಕ ವಿಚಾರವಂತರಲ್ಲಿ ಬೆರಗನ್ನು ಹುಟ್ಟಿಸಿದೆ.

ನಾಟಕದ ಕರ್ತೃ : ಈ ನಾಟಕವು 'ಹವ್ಯಕ ಒತ್ತೇಚ್ಛು' ವಿದ್ವಾಂಸರೊಬ್ಬರಿಂದ ರಚಿಸಲ್ಪಟ್ಟಿದೆ ಎಂದು ಮೊದಲ ಮುದ್ರಣದಲ್ಲಿ ತಿಳಿಸಲಾಗಿದೆ. ಆದರೆ ನಂತರದ ಶೋಧನೆಗಳಿಂದ ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರೀಗಳೇ(ಸು. ೧೮೫೬–೧೯೨೬) ಆ ವಿದ್ವಾಂಸರೆಂಬುದು ದೃಢಪಟ್ಟಿದೆ[೩]. ಇವರು ಮೂಲತಃ ಕರ್ಕಿಯವರು; ವೇದ ಮತ್ತು ವೈದ್ಯ ವಿದ್ಯೆ ಬಲ್ಲ ಮನೆತನದವರು. ರಾಮಚಂದ್ರಾಪುರ ಮಠದ ಶ್ರೀಗಳವರಲ್ಲಿ ವೈದಿಕ ವಿದ್ಯೆಯನ್ನು ವ್ಯಾಸಂಗ ಮಾಡಿದವರು. ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಭಾಗ, ಸಾಗರ ಮುಂತಾದೆಡೆ ಸಾಕಷ್ಟು ಸಂಚರಿಸಿದವರು. ನಂತರ ಮುಂಬ

ಯಿಗೆ ಹೋಗಿ, ಅಲ್ಲಿ ಭಾರತೀ ಛಾಪಖಾನೆಯನ್ನು ಸ್ಥಾಪಿಸಿ, ಕನ್ನಡ ಗ್ರಂಥಗಳ ಪ್ರಕಟಣೆಯ ಸಾಹಸವನ್ನು ಕೈಕೊಂಡವರು. ಮಂಗಳೂರಿನ ಅಕ್ಕಸಾಲಿಗರಿಂದ ಕನ್ನಡ ಅಕ್ಷರಗಳನ್ನು ಕೆತ್ತಿಸಿ ಸಡಗರದ ಕಾವ್ಯಗಳನ್ನೂ ವ್ಯಾಕರಣ ಇತಿಹಾಸ-ಧರ್ಮ ಇತ್ಯಾದಿ ಗಳಿಗೆ ಸಂಬಂಧಿಸಿದ ಗ್ರಂಥಗಳನ್ನೂ ಮುದ್ರಿಸಿದ್ದರು. **ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ** ವನ್ನಲ್ಲದೇ **ಪ್ರಾಚೀನ ನಾಟ್ಯ ಕಥಾರ್ಣವ** (೧೮೮೮). **ಅನಾರ್ಯ ವಿವರ** ಮುಂತಾದ ಗ್ರಂಥಗಳನ್ನು ಸ್ವತಃ ರಚಿಸಿರುವುದಾಗಿ ತಿಳಿದು ಬರುತ್ತದೆ. ಶಾಸ್ತ್ರೀಯವರ ಸಾಹಸ ಇಷ್ಟೇ ಆಗಿದ್ದರೆ ನಾವು ಇಂದು ಅವರನ್ನು ಬಹುವಾಗಿ ಸ್ಮರಿಸುವ ಕಾರಣವಿರಲಿಲ್ಲ. ಅವರೆ ನೂರು ವರ್ಷಗಳ ಹಿಂದೆ ಮುಂಬೈಯಂಥ ನಗರದಲ್ಲಿ ಕನ್ನಡ ಮುದ್ರಣಾಲಯವನ್ನು ಸ್ಥಾಪಿಸಿ, **ಹವ್ಯಕ ಸುಬೋಧ** ಎಂಬ ವಾರ ಪತ್ರಿಕೆಯನ್ನೂ **ಹಿತೋಪದೇಶ** ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದ್ದ ಅವರ ಸಾಹಸೀ ಪತ್ರಿಕೋದ್ಯಮವನ್ನು ನಾವು ಉಲ್ಲೇಖಿಸಲೇಬೇಕು. ಇಂದಿನ ಪತ್ರಿಕಾ ರಂಗದ ತರುಣರಿಗೆ ಸ್ಫೂರ್ತಿ ನೀಡಬಲ್ಲ ಪತ್ರಿಕಾ ಧರ್ಮ ಅವರದು. ಅದು ಕ್ಷಾತ್ರ ವೃತ್ತಿಯದು. **ಹವ್ಯಕ ಸುಬೋಧ** ಆಗಿನ ಕಾಲದಲ್ಲಿಯೇ ೧೦೦೦ ಪ್ರತಿಗಳಷ್ಟು ಮುದ್ರಿತವಾಗುತ್ತಿತ್ತೆಂದರೆ ಅದರ ಜನಪ್ರಿಯತೆಯನ್ನು ಯಾರಾದರೂ ಊಹಿಸ ಬಹುದು. (**ಕನ್ನಡ ಸುವಾರ್ತೆ**ಯನ್ನುಳಿದು ಇತರ ಪತ್ರಿಕೆಗಳ ಸಾಮಾನ್ಯ ಸರಾಸರಿ ಮಾರಾಟ ೨೫೦ ಪತ್ರಿಕೆಗಳಿದ್ದಾಗ). ಇದಕ್ಕೆ ಕಾರಣ **ಹವ್ಯಕ ಸುಬೋಧ**ದಲ್ಲಿ ಬರೆಯಲ್ಪಡುತ್ತಿದ್ದ ವಿಷಯ ಮತ್ತು ಸಂಪಾದಕರು ಉಪಯೋಗಿಸುತ್ತಿದ್ದ ಹರಿತ ಹಾಗೂ ಆಕರ್ಷಕ ಭಾಷೆ. ಭಾರತೀಯ ಸಮಸ್ಯೆಗಳು. ಕೆನರಾ ಜಿಲ್ಲೆಯ ಸಂಕಷ್ಟಗಳು ಅವರ ಪತ್ರಿಕೆಯಲ್ಲಿ ನಿರೂಪಿಸಲ್ಪಡುತ್ತಿದ್ದಷ್ಟೇ ಅಲ್ಲ: ಬ್ರಿಟಿಷರ ಆಡಳಿತ ನೀತಿ ಮತ್ತು ಅಧಿಕಾರಿಗಳ ದುರ್ವರ್ತನೆಗಳು ಅನೇಕ ಬಾರಿ ಕಟುಟೀಕೆಗೆ ಒಳಗಾಗುತ್ತಿದ್ದವು. ಉತ್ತರ ಕನ್ನಡ ಜಿಲ್ಲೆಯ ವನದುಃಖ ನಿವಾರಣಾ ಸಭೆಯ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಅವ್ಯವಹಾರಗಳನ್ನೆಲ್ಲ ಬಯಲಿಗೆಳೆದುದರಿಂದಲೇ ಪ್ರಾಯಶಃ ಅವರ ಮೇಲೆ ಖಟ್ಲೆ ಜರುಗಿ, ಪತ್ರಿಕೆಗೆ ಮುಟ್ಟುಗೋಲೂ ಬಿದ್ದು, ಅವರಿಗೆ ಶಿಕ್ಷೆಯೂ ವಿಧಿಸಲ್ಪಟ್ಟಿದ್ದು. ಹೀಗೆ ರಾಜಕೀಯ ಕಾರಣದಿಂದ ಶಿಕ್ಷೆಗೊಳಗಾದ ಲೇಖಕರಲ್ಲಿ ವೆಂಕಟರಮಣ ಶಾಸ್ತ್ರೀಯವರೇ ಬಹುಶಃ ಮೊದಲಿಗರಾಗುತ್ತಾರೆ[೫]. **ಹಿತೋಪದೇಶ** ಎಳೆಯರಿಗಾಗಿ ಪ್ರಕಟಿಸುತ್ತಿದ್ದ ಮಾಸಪತ್ರಿಕೆ. ಅದರಲ್ಲಿ ಚಿಕ್ಕ ಮಕ್ಕಳ ಬೌದ್ಧಿಕ ವಿಕಾಸಕ್ಕೆ ಅನುಕೂಲವಾಗುವಂತೆ ವಿಷಯ ವಿವೇಚನೆ ಇರುತ್ತಿತ್ತು. ವಿಜ್ಞಾನದ ವಿಷಯಗಳನ್ನು ರಸವತ್ತಾಗಿ ನಿರೂಪಿಸುತ್ತಿದ್ದ ಕ್ರಮ. ಇಂದಿನ ವಿಜ್ಞಾನದ ಲೇಖಕರಿಗೆ ಮಾದರಿಯಾಗುವಂತಿದೆ. ಈಗ ಮಕ್ಕಳಿಗಾಗಿ ಅಂಥ ಶ್ರೇಷ್ಠಮಟ್ಟದ ಪತ್ರಿಕೆಯನ್ನು ಊಹಿಸುವುದೂ ಅಸಾಧ್ಯ. ಕನ್ನಡ ಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳನ್ನು ಬಳಸುವುದರಲ್ಲಿಯೂ ವೆಂಕಟರಮಣ ಶಾಸ್ತ್ರೀಯವರ ಹೆಸರೇ ಪ್ರಾಯಶಃ ಮೊದಲನೆಯದು.[೬] ತಮ್ಮ ಜೀವಿತದ ಕೊನೆಯ ಕೆಲವು ಕಾಲ ಪುಣೆಯಲ್ಲಿ ವೈದ್ಯಕೀಯ

ವೃತ್ತಿ ನಡೆಸಿ ಹುಟ್ಟೂರಿಗೆ ಮರಳಿದಂತೆ ತಿಳಿದು ಬರುತ್ತದೆ.

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ : ಇದಕ್ಕೆ 'ಕನ್ಯಾವಿಕ್ರಯದ ಪರಿಣಾಮವು' ಎಂಬ ಇನ್ನೊಂದು ಹೆಸರಿದ್ದು, ಕರ್ತೃ ಯಾವ ವಿಷಯದ ಮೇಲೆ ಹೆಚ್ಚಿನ ಬೆಳಕನ್ನು ಬೀರಲು ಪ್ರಯತ್ನಿಸುತ್ತಾನೆ ಎಂಬುದು ಗೊತ್ತಾಗುತ್ತದೆ. ಮೊದಲನೆಯ ಹೆಸರೂ ಕೂಡ ಅಷ್ಟೇ ಸ್ವಾರಸ್ಯಕರವಾಗಿದ್ದು, ಇಗ್ಗಪ್ಪ ಹೆಗಡೇ ವಿವಾಹ, ಪ್ರಹಸನ (ಅಭಾಸ) ಗೊಂಡಿದ್ದನ್ನು ತಿಳಿಸುತ್ತದೆ. ಎರಡನೆಯ ಮದುವೆಯ ಸಾಲವನ್ನೇ ಇನ್ನೂ ತೀರಿಸದಿದ್ದ, ಸುಮಾರು ಅರವತ್ತು ವರ್ಷದ ಇಗ್ಗಪ್ಪ ಹೆಗಡೆ, ಮೂರನೆಯ ಮದುವೆಯ ಖರ್ಚುವೆಚ್ಚಕ್ಕಾಗಿ ಆಸ್ತಿಯನ್ನೆಲ್ಲ ಅಡವು ಇಡುತ್ತಾನೆ. ದಳ್ಳಾಳಿ ಗಣೇಶ ಭಟ್ಟ, ಇಗ್ಗಪ್ಪ ಹೆಗಡೆಗೂ ಅತ್ತ ಹೆಣ್ಣಿನ ತಂದೆ ಶಿವಭಟ್ಟನಿಗೂ ಮೋಸಮಾಡಿ ಹಣ ತಿಂದು, ಜಾತಿ ಬದಲಾಯಿಸಿ ಅಂತೂ ಮದುವೆ ಮಾಡಿಸುತ್ತಾನೆ. ಕೆಲದಿನಗಳಲ್ಲಿಯೇ ಇಗ್ಗಪ್ಪ ಹೆಗಡೆ ಕಾಮಾಲೆರೋಗ ಬಂದು ಸಾಯುತ್ತಾನೆ. ಅತ್ತ ಶಿವಭಟ್ಟನ ಮನೆಯೂ ಹಾಳು, ಸಂಸಾರ ನಿರ್ಗತಿಕವಾಗುತ್ತದೆ. ಸಾವಿತ್ರಿ (ಇಗ್ಗಪ್ಪ ಹೆಗಡೆಯ ಮೂರನೆಯ ಹೆಂಡತಿ) ಇಗ್ಗಪ್ಪನ ಭಾವ ವಾಸಪ್ಪ ಹೆಗಡೆಯ ಮರ್ಜಿಗೆ ಒಳಗಾಗಿ ಮುಂದೆ ಅವನಿಂದಲೇ ಗರ್ಭವತಿಯೂ ಆಗುತ್ತಾಳೆ. ಆದರೆ ಸಮಾಜಕ್ಕೆ ಹೆದರಿ ಗರ್ಭ ಖೂನಿಗೈಯುತ್ತಾಳೆ. ಅದು ಹೇಗೋ ಬಯಲಿಗೆಳೆಯಲ್ಪಟ್ಟು, ಕೋರ್ಟಿನಲ್ಲಿ ಖಟ್ಲೆ ದಾಖಲಾಗುತ್ತದೆ. ಇದರಲ್ಲಿ ಸಾಮಾಜಿಕ ದೋಷವನ್ನೇ ಅಧಿಕವಾಗಿ ಕಂಡ ನ್ಯಾಯಾಧೀಶರು, ಕಾನೂನು ಬಿಡಲಾರದೆ, ಅಪರಾಧಿಗಳಿಗೆ ಅಲ್ಪ ಶಿಕ್ಷೆಯನ್ನು ನೀಡುತ್ತಾರೆ. ಇವಿಷ್ಟು ನಾಟಕದ ಕಥಾ ವಸ್ತುವಿನ ಸಾರಾಂಶ.

ಸಾಹಿತ್ತಿಕ ಮೌಲ್ಯ :

ಪ್ರಸ್ತುತ ನಾಟಕ, ಮುಖ್ಯವಾಗಿ ಕೆಲವು ಜ್ವಲಂತ ಸಾಮಾಜಿಕ ಸಮಸ್ಯೆಗಳ ಚಿತ್ರಣವಾಗಿದ್ದರೂ ಆ ಸಮಸ್ಯೆಗಳನ್ನು ಒಂದು ಸಾಹಿತ್ಯಿಕ ಚೌಕಟ್ಟಿನಲ್ಲಿ ಅಳವಡಿಸಿ ನಾಟಕವಾಗಿಸುವಲ್ಲಿ ಲೇಖಕರು ಸಾಕಷ್ಟು ಯಶಸ್ಸನ್ನು ಪಡೆದಿದ್ದಾರೆ. ಪಾತ್ರ ಚಿತ್ರಣ ದೃಶ್ಯಸಂಯೋಜನೆ, ಭಾಷೆಯ ಬಳಕೆ, ಇವೆಲ್ಲದರಲ್ಲಿಯೂ ಸಹಜತೆಯನ್ನು ಮೈಗೂಡಿಸಿಕೊಂಡು ಅದ್ಭುತ ಪರಿಣಾಮವನ್ನು ಸಾಧಿಸಿರುವುದರಲ್ಲಿ ಇದರ ಮೇಲ್ಮೆ ಅಡಗಿದೆ ತಮ್ಮದೇ ಹವ್ಯಕ ಸಮಾಜದಲ್ಲಿರುವ ಸಮಸ್ಯೆಗಳನ್ನು ಎತ್ತಿಕೊಂಡು ಚಿತ್ರಿಸಿದ್ದರೂ ಕಲಾತ್ಮಕತೆಯ ಪರಿಣಾಮದಿಂದಾಗಿ ಅದು ಕಾಲ, ದೇಶ, ಸಮಾಜಗಳನ್ನು ಮೀರಿ, ಇಂದಿಗೂ ಸಲ್ಲತಕ್ಕ ಕೃತಿಯಾಗಿದೆ. ವೈವಿಧ್ಯಪೂರ್ಣವಾದ ಆಡುಮಾತಿನ ಪ್ರಯೋಗ ಕೃತಿಯ ಪರಿಣಾಮವನ್ನು ಗಮನಾರ್ಹವಾಗಿ ಹೆಚ್ಚಿಸಿದೆ.

ಈ ನಾಟಕದಲ್ಲಿ ಬರುವ ಒಟ್ಟೂ ಪಾತ್ರಗಳು ಸಮಾಜದ ಬೇರೆ ಬೇರೆ ವರ್ಗ

ಜಾತಿಗಳಿಗೆ ಸಂಬಂಧಿಸಿದವಾದರೂ, ಬಹುಪಾಲು ಹವ್ಯಕ ಸಮಾಜಕ್ಕೆ ಸೇರಿದವು. ಕಥಾನಾಯಕ ಇಗ್ಗಪ್ಪ ಹೆಗಡೆಯನ್ನು ಚಿತ್ರಿಸುವಾಗಲೂ ಹಳ್ಳಿಯ ಹುಂಬ, ಅನಕ್ಷರಸ್ಥ ಹೆಗಡೆಯ ಚಿತ್ರ ಸಮರ್ಪಕವಾಗಿ ಮೂಡಿಬಂದಿದೆ. ಇನ್ನೇನು ಸಾಯಬಹುದಾದ ಜನರ ಹೆಸರಿನ ಪಟ್ಟಿಯಲ್ಲಿ ಸೇರುವ ಅರ್ಹತೆಯುಂಟಾದವನಿಗೆ ಮೂರನೆಯ ಮದುವೆಯಾಗಿ ಮಕ್ಕಳನ್ನು ಪಡೆಯುವ ಅರ್ಹತೆ ಇದೆಯೆಂಬ ಭ್ರಮೆ, ಆಸ್ತಿ ಅಡವಿಟ್ಟಾದರೂ ಸಾಲ ತರುವ ಹಿಂದು–ಮುಂದಾಲೋಚನೆ ಇಲ್ಲದ ಪ್ರವೃತ್ತಿ, ಅಷ್ಟು ಮೋಸ ಮಾಡುತ್ತಿದ್ದರೂ ಆ ರಾಯರನ್ನೇ ನಚ್ಚಿಕೊಳ್ಳುವ ಭೋಳೆತನ,ದುಡುಕಿ ಮದುವೆಯಾದ ಮೇಲೆ ಪಡುವ ಪಶ್ಚಾತ್ತಾಪ, ಕೈಲಾಗದಕ್ಕೆ ಮೈಯೆಲ್ಲಾ ಉರಿಯೇಳಿಸುವ ಹಾಗೂ ಕಾಹಿಲೆಯನ್ನು ಉಲ್ಬಣಿಸುವ ಸಿಟ್ಟು–ಇವೆಲ್ಲ ಆ ಪಾತ್ರದ ಲಕ್ಷಣಗಳಾಗಿ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಇನ್ನು ಅವನ ಶ್ರೇಯಸ್ಸನ್ನು ಕೋರುವ ನೆಪದಲ್ಲಿ ತನ್ನ ಸ್ವಾರ್ಥಗಳನ್ನು ಸಾಧಿಸಿಕೊಳ್ಳಲೆತ್ನಿಸಿದ ಅವನ ಭಾವ ವಾಸಪ್ಪನ ಪಾತ್ರ (ಖಳನಾಯಕ?)ಅಷ್ಟೇ ಜೀವಂತವಾಗಿದೆ.ಹೆಣ್ಣು ನೋಡಿದ ಮೇಲೆ ಅವಳನ್ನು ಬಿಡುವ ಮನಸ್ಸಾಗದ ಅವನು ತನ್ನ ಕೈಯಿಂದಲಾದರೂ ಕೆಲವಷ್ಟು ಖರ್ಚು ಮಾಡಿ, ಜಾತಕವಾಗದಿದ್ದರೂ ಆಗುವಂತೆ ಮಾಡಿಸಿ, ಇಗ್ಗಪ್ಪ ಹೆಗಡೆಯವರ ಮದುವೆ ಮಾಡಿಸುತ್ತಾನೆ. ಅವನು ಸಾಯುವವರೆಗೂ ಆಪ್ತನಂತೆಯೇ ವರ್ತಿಸಿ ಕೊನೆಗೆ ಅವನ ಆಸ್ತಿ ಹಾಗೂ ಹೆಣ್ಣು ಎರಡನ್ನೂ ಅನಧಿಕೃತವಾಗಿ ತನ್ನ ಸೊತ್ತು ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಇಗ್ಗಪ್ಪ ಹೆಗಡೇಯ ಸಾಲದ ಬಡ್ಡಿಗೆ (ರಾಯರ ವಿಚಿತ್ರ ಬಡ್ಡಿ ನೀತಿಯಿಂದಾಗಿ) ಭಾವನ ಆಸ್ತಿಯೊಂದಿಗೆ ಇವನದೂ ಅಡವಾಗಬೇಕಾಗುತ್ತದೆ. ಹಾಗೂ ಇಗ್ಗಪ್ಪನ ಹೆಂಡತಿಯ ಸಬಂಧದಿಂದಾಗಿ ಮುಂದೆ ಆಗುವ ಗರ್ಭಖೂನಿ ಇವನೇ ಅಪಮಾನ ಹಾಗೂ ದೈಹಿಕ ಶಿಕ್ಷೆಗಳನ್ನು ಅನುಭವಿಸುವಂತೆ ಮಾಡುತ್ತದೆ. ಅಂದರೆ ಇತರರದ್ದನ್ನು ದಕ್ಕಿಸಿಕೊಳ್ಳಲು ಹೋಗಿ ತನ್ನದನ್ನೂ ನಾಶಪಡಿಸಿಕೊಳ್ಳುತ್ತಾನೆ. ಆದರೆ ಇವೆಲ್ಲವೂ ಸಹಜ ಘಟನೆಗಳಾಗಿ ಕಾರ್ಯಕಾರಣ ಸಂಬಂಧಗಳಂತೆ ಮೂಡಿಬಂದಿರುವುದು ನಾಟಕಕಾರರ ಅಗಾಧ ಸಾಮರ್ಥ್ಯದಿಂದ ಮತ್ತು ಅವರಲ್ಲಿ ಸಮಾಜದ ಸಮಗ್ರ ನೋಟದ ಕಲ್ಪನೆ ಇರುವದರಿಂದ. ರಾಯರ ಎದುರಿಗಿನ ಅವನ ದೈನ್ಯ ನಡುವಳಿಕೆಯಂತೂ ಇಡೀ ನಾಟಕದಲ್ಲಿಯೇ ಅತ್ಯಂತ ಪರಿಣಾಮಕಾರಿಯಾದ ದೃಶ್ಯವೆನ್ನಬೇಕು. ಹವ್ಯಕ ಸಮಾಜದಲ್ಲಿ ಸ್ವಲ್ಪಗಮ್ಮತ್ತಿನ ಹೆಗಡೆಯಾಗಿ, ರಾಯರ ದರ್ಪದ ಎದುರಿಗೆ ಹೆಂಬೇಡಿಯಾಗಿ ಚಿತ್ರಿತವಾಗಿರುವ ವಾಸಪ್ಪ ಹೆಗಡೆ ಹವ್ಯಕ ಸಮಾಜದ ಮತ್ತೊಬ್ಬ ಪ್ರಾತಿನಿಧಿಕ ವ್ಯಕ್ತಿ [typical]. ತಂದೆಯ ದ್ರವ್ಯ–ಲೋಭಕ್ಕೆ ಬಲಿಪಶುವಾದ, ದುರ್ದೈವಿ ಹೆಣ್ಣು ಸಾವಿತ್ರಿ, ಕೈಹಿಡಿದ ಮುದಿಗಂಡನಿಂದ ದಾಂಪತ್ಯ ಸುಖ ಕಾಣಲಾರದೆ, ವಾಸಪ್ಪ ಹೆಗಡೆಯೊಡ್ಡಿದ ಬಲೆಗೆ ಸಹಜವಾಗಿಯೇ ಬಿದ್ದವಳು. ಗಂಡ ಸತ್ತ ಮೇಲೆ ಅನೈತಿಕವಾಗಿ ಗರ್ಭ ತಳೆದಾಗ, ಅದನ್ನು ನಾಶ ಮಾಡಹೋಗಿ ಕಾನೂನಿನ ತೊಡಕಿನಲ್ಲಿ ಸಿಲುಕಿಕೊಂಡಳು. ಅವಳ ಪಾತ್ರ ಚಿತ್ರಣದಲ್ಲಿ ಮುಗ್ಧ ಹೆಣ್ಣಿನ ಗೋಳಿನ, ಬಾಳಿನ ಒಳನೋಟ

ಗಳಿವೆ. ಅಷ್ಟೇ ಅಲ್ಲ, ಲೇಖಕರು ಅವಳ ಮೂಲಕವಾಗಿಯೇ (ಅವಳ ಬಗ್ಗೆ ಸಹಾನುಭೂತಿ ಹುಟ್ಟುವಂತೆ ಮಾಡುತ್ತಲೇ) ಘಟನೆಗಳ ಹಿನ್ನೆಲೆಯಲ್ಲಿರುವ ಸಾಮಾಜಿಕ ಸಮಸ್ಯೆಗಳತ್ತ ಪ್ರೇಕ್ಷಕರ ಲಕ್ಷ್ಯ ಸೆಳೆಯುತ್ತಾರೆ. ಬಾಲ್ಯ ವಿವಾಹದೊಂದಿಗೆ ದಾಂಪತ್ಯ ಸುಖದಿಂದಲೂ ವಂಚಿತಳಾಗಿ, ವಿಧವೆಯಾಗಿ ಗರ್ಭಖೂನಿಗೈದ ಅಪರಾಧಿನಿಯಾಗಿ ಚಿತ್ರಿತವಾಗಿರುವ ಸಾವಿತ್ರಿಯ ಅಸಹಾಯಕ ವ್ಯಕ್ತಿತ್ವ ಪ್ರೇಕ್ಷಕರ ಸಹಾನುಭೂತಿ ಪಡೆಯುವ ಹಾಗೂ ಅವರನ್ನು ಚಿಂತನೆಗೆ ಗುರಿ ಮಾಡುವ ಪಾತ್ರವಾಗಿದೆ. ಇನ್ನುಳಿದ ಪಾತ್ರಗಳಲ್ಲಿ ಗಣೇಶಭಟ್ಟನ ಪಾತ್ರ ದಳ್ಳಾಳಿ ಭಟ್ಟನ ವಾಸ್ತವ ಚಿತ್ರಣ ನೀಡಿದರೆ, ಶಿವಭಟ್ಟ, ಬಡತನದಿಂದಾಗಿ ದ್ರವ್ಯಲೋಭಕ್ಕೆಳಸಿರಬಹುದಾದರೂ ಅದಕ್ಕಾಗಿ ಅಯೋಗ್ಯನಿಗೆ ಮಗಳನ್ನು ಕೊಡುವ ನೀಚನಾಗುತ್ತಾನೆ. ಕೊನೆಗೆ, ಈ ನೀಚ ಬ್ರಾಹ್ಮಣನ ಮನೆ ಸುಟ್ಟು, ಮಗ ಸತ್ತು, ಅವನೂ ನಿರ್ಗತಿಕನಾಗಬೇಕಾಗುತ್ತದೆ. ರಾಯರ ಪಾತ್ರ-ವ್ಯಾಪಾರೀ ಮನೋಭಾವದ ಶೋಷಿತವರ್ಗದ ಜನರ ಪ್ರತಿನಿಧಿಯಾಗಿ ನಾಟಕೀಯವಾಗಿದೆಯಾದರೂ ಅತ್ಯಂತ ಶಕ್ತಿಯುತವಾಗಿ ಬಂದಿದ್ದರೆ, ಉಳಿದ ಅನೇಕ ಪಾತ್ರಗಳು ಒಂದೋ, ಎರಡೋ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದರೂ ತಮ್ಮ ವೈಶಿಷ್ಟ್ಯವನ್ನು ಮೆರೆದೇಹೋಗಿವೆಯೆಂದು ಹೇಳಬಹುದು. ನ್ಯಾಯಾಧೀಶರ ಪಾತ್ರದಲ್ಲಿ ವೃತ್ತಿಗೆ ತಕ್ಕ ಗಂಭೀರತೆಯಿದ್ದರೂ ಹವ್ಯಕ ಸಮಾಜದ ಒಟ್ಟೂ ಸಮಸ್ಯೆಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ನ್ಯಾಯ ತೀರ್ಮಾನ ಕೈಕೊಳ್ಳುವ ಪ್ರಸಂಗ ಆದರ್ಶವಾಗಿದ್ದು, ಲೇಖಕರು ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಲು ಕಲ್ಪಿಸಿಕೊಂಡ ಒಂದು ಸಂದರ್ಭವಾದಂತಿದೆ,

ಈ ನಾಟಕದಲ್ಲಿ ಕ್ರಿಯೈಕ್ಯ, ಕಾಲೈಕ್ಯ, ದೇಶೈಕ್ಯಗಳನ್ನು ಸಾಧಿಸಿರದಿದ್ದರೂ ಒಂದಾದ ಮೇಲೊಂದರಂತೆ ಸಾಗುವ ದೃಶ್ಯಗಳು ಗಾಢವಾದ ಪರಿಣಾಮವನ್ನು ನೀಡುತ್ತಲೇ ಹೋಗುತ್ತವೆ. ಕೆಲವು ದೃಶ್ಯಗಳಂತೂ ತಮ್ಮಷ್ಟಕ್ಕೆ ತಾವೇ ಸುಂದರವೂ, ಸ್ವತಂತ್ರವೂ ಆಗಿ ನಿಲ್ಲಬಲ್ಲ ಶಕ್ತಿಯನ್ನು ಪಡೆದುಕೊಂಡಿವೆ. ಹೊಗೆಸೊಪ್ಪಿನ ಪ್ರಸ್ತಾಪದಿಂದ ಪ್ರಾರಂಭವಾಗುವ ನಾಟಕ, ಇತರ ವಿಷಯಗಳನ್ನು ಪ್ರಸ್ತಾಪಿಸಲು ಸಹಜವಾದ ಎಡೆಯನ್ನು ದೊರಕಿಸಿ ಕೊಡುತ್ತದೆ. ಅದರಂತೆ ಮಡಗದ್ದೆ ದೇವಸ್ಥಾನದ ದೃಶ್ಯ-ಊರ ಸುದ್ದಿಯನ್ನು ಮಾತನಾಡಲು ಅದಕ್ಕಿಂತ ಪ್ರಶಸ್ತ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಪ್ರಾಯಶಃ ಸಾಧ್ಯವಿಲ್ಲ. ಹವ್ಯಕರ ಜುಟ್ಟನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡಿದ್ದ ರಾಯರು, ವಾಸಪ್ಪ ಹೆಗಡೆ ಕಾಣಿಸಿಕೊಳ್ಳುತ್ತಲೇ ದರ್ಪದ ಮಾತುಗಳನ್ನಲ್ಲದೇ ವಿನಯದ, ಸ್ವಾಗತದ ಮಾತುಗಳನ್ನಾಡಲು ಶಕ್ಯವೇ ? ಹೀಗೆ ಪಾತ್ರಗಳ ಗುಣ ಹಾಗೂ ಘಟನೆಗಳ ಉದ್ದೇಶ ಇವುಗಳಿಗೆ ತಕ್ಕಂತೆ ಸರಳ ಸಂಭಾಷಣೆ, ಸಹಜ ಸನ್ನಿವೇಶ ನಿರ್ಮಾಣಗಳನ್ನು ಸಾಧಿಸಲಾಗಿದೆ. ಇತ್ತೀಚೆಗೆ, ಒಂದೆರಡು ದಶಕಗಳ ಹಿಂದಿನವರೆಗೂ, ಸಾಹಿತ್ಯದಲ್ಲಿ ಮಡಿ (ಅಶ್ಲೀಲ) ಎಂದು ಭಾವಿಸಿದ್ದ ಕಾಮಕ್ಕೆ

ಸಂಬಂಧಿಸಿದ ವಿಷಯವನ್ನು ಅತಿರೇಕ ಅಥವಾ ಅಸಹ್ಯಗಳ ಸೋಂಕು ತಾಗಿಸದೇ ಚರ್ಚಿಸಿರುವ, ಆರೋಗ್ಯಕರವಾದ ಒಂದು ಪ್ರಯತ್ನ ಕಳೆದ ಶತಮಾನದ ಈ ಕನ್ನಡ ನಾಟಕದಲ್ಲಿದೆ.

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ೪೭ ಪುಟಗಳ ಒಂದು ಪುಟ್ಟ ನಾಟಕ. (ಮೊದಲನೆಯ ಮುದ್ರಣ ಪ್ರತಿಯಲ್ಲಿ ಕೇವಲ ೩೨ ಪುಟಗಳಿವೆ). ಆದರೆ ಇದರಲ್ಲಿ ಒಟ್ಟು ೧೫ ಸಾರೆ ದೃಶ್ಯ ಬದಲಾಗುತ್ತದೆ. ನಿರ್ದೇಶಕರು ಬಹು ಚಾತುರ್ಯದಿಂದ ರಂಗಸಜ್ಜಿಕೆ ಹಾಗೂ ರಂಗ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ನಾಟಕಕಾರರಿಗೆ ಈ ಮೊದಲೇ ತಿಳಿಸಿದಂತೆ ಸಮಸ್ಯೆಯ ಚಿತ್ರಣ ಮುಖ್ಯವಾಗಿತ್ತೇ ಹೊರತು ರಂಗ ಪ್ರಯೋಗವಲ್ಲ. ಆದರೆ ಸಹಜ ಸನ್ನಿವೇಶಗಳಲ್ಲಿ ಕಲಾತ್ಮಕವಾಗಿಯೇ ಅವು ಮೂಡಿರುವುದರಿಂದ ಸಮರ್ಥ ನಿರ್ದೇಶಕರ ಕೈಯಲ್ಲಿ ಅದ್ಭುತವಾದ ಪ್ರದರ್ಶನವನ್ನು ಹೊಂದುವ ಸಾಮರ್ಥ್ಯ ಈ ನಾಟಕಕ್ಕಿದೆ. ಘಟನೆಗಳನ್ನು ಒಂದಾದ ಮೇಲೊಂದರಂತೆ ಕಥೆಗನುಸಾರವಾಗಿ ಹೊಂದಿಸಿಕೊಂಡಿದ್ದು, ಕಥೆಯನ್ನು ಓಡಿಸಿಕೊಳ್ಳುತ್ತಾ ಹೋಗಿ, ಮುಖ್ಯ ಘಟನೆಗಳನ್ನು ಮಾತ್ರ ದೃಶ್ಯ ರೂಪದಲ್ಲಿ ತೋರಿಸಲಾಗಿದೆ. ಈ ಓಟದಲ್ಲಿ ಪ್ರೇಕ್ಷಕರನ್ನು ಭಾಷಾತೊಡಕೂ ಅಷ್ಟೊಂದು ಬಾಧಿಸುವುದಿಲ್ಲ. ಸಂಭಾಷಣೆ–ನಿರೂಪಣೆಗಳು ಪರಿಣಾಮಕಾರಿಯಾಗಿದ್ದು, ಪ್ರೇಕ್ಷಕರನ್ನು ಕೊನೆಯ ತನಕ ಸೆರೆ ಹಿಡಿದಿಡಬಲ್ಲುವಾಗಿವೆ. ನಾಟಕದ ಕೊನೆ, ಸಮಸ್ಯೆಗಳಿಗೆ ಕಂಡುಕೊಂಡ ಪರಿಹಾರವಲ್ಲದಿದ್ದರೂ, ಸಮಸ್ಯೆಗಳ ಮೂಲವನ್ನು ಶೋಧಿಸಿ, ಪರಿಣಾಮಗಳನ್ನು ವಿಶ್ಲೇಷಿಸಿ, ತೀರ್ಪನ್ನು ನೀಡುವಂತಹುದು. ವಾಸ್ತವವಾಗಿ ನಡೆದ ಘಟನೆಯಂತೆ ಪಾತ್ರಗಳನ್ನು ಕುರಿತು ಸಹಾನುಭೂತಿ, ಸಮಾಜದ ಅನಿಷ್ಟ ಪದ್ಧತಿಗಳನ್ನು ಕುರಿತು ತಾತ್ವಿಕ ಕೋಪಗಳನ್ನು ಹುಟ್ಟಿಸುವ ಈ ಕೃತಿಯಲ್ಲಿ ಲೇಖಕರ ಮಾನಸಿಕ ಕಳಕಳಿ ಎಲ್ಲೆಡೆಯೂ ಎದ್ದು ಕಾಣುತ್ತದೆ.

ಸಾಮಾಜಿಕ ಸಮಸ್ಯೆಗಳು : ಈ ನಾಟಕದಲ್ಲಿ ಚಿತ್ರಿತವಾದ ಸಮಸ್ಯೆಗಳು ಆಗಿನ ಕಾಲದ ಒಂದು ಸಮಾಜ ಸ್ಥಿತಿಗೆ ಹಿಡಿದ ಕನ್ನಡಿಯೆನ್ನಬಹುದು. ಅಂತೆಯೇ ಅವುಗಳ ನೈಜ ಚಿತ್ರಣ ಇಲ್ಲಿ ಲಭ್ಯ. (ವಿಶ್ಲೇಷಣೆಯ ದೃಷ್ಟಿಯಿಂದ) ಈ ಸಮಸ್ಯೆಗಳನ್ನು ಮುಖ್ಯವಾಗಿ ಹೆಣ್ಣಿನ ತೆರ, ವಿಷಮ ಮತ್ತು ಬಾಲ ವಿವಾಹಗಳಲ್ಲಿ ಮತ್ತು ಅವುಗಳ ಪರಿಣಾಮದಲ್ಲಿ ಕಾಣಬಹುದಾಗಿದೆ.

ಹೆಣ್ಣಿನ ತೆರ : ವಿಷಮ ವಿವಾಹ ಮತ್ತು ಕನ್ಯಾವಿಕ್ರಯಗಳು ಹೆಚ್ಚು ಪ್ರಚಲಿತವಿದ್ದ ಕಾಲವದು. ಅಂದಿನ ಕಾಲದಲ್ಲಿ ಪುರುಷರ ಮದುವೆಯ ವಯಸ್ಸೇ ಸುಮಾರು ೫೦ ವರ್ಷ ಇರುತ್ತಿತ್ತು. ಆದರೆ ಹೆಣ್ಣು ಮಾತ್ರ ಮದುವೆಗೆ ಮೊದಲು ಮೈನೆರೆಯುತ್ತಿರಲಿಲ್ಲ. ಹೆಣ್ಣನ್ನು ಮದುವೆಯಾಗುವಾಗ, ಅವಳ ತಂದೆಗೆ 'ತೆರ' (ಕನ್ಯಾಶುಲ್ಕ) ಕೊಟ್ಟು ತರುವ ಪದ್ಧತಿ ಜಾರಿಯಲ್ಲಿತ್ತು. ಎರಡನೇ, ಮೂರನೇ ಮದುವೆಯಾದ

ರಂತೂ ಅದರ ಪ್ರಮಾಣ ಸಹಜವಾಗಿ ಹೆಚ್ಚಿರುತ್ತಿತ್ತು. ಕೆಲವೊಮ್ಮೆ ೪–೫ ಸಾವಿರದ ವರೆಗೂ ಹೋಗುತ್ತಿದ್ದುದುಂಟು. ಆದರೆ ಇದು ಸಮಾಜದಲ್ಲಿ ನೈತಿಕವಾಗಿ ಒಪ್ಪಿಗೆಯನ್ನು ಪಡೆದ ಪದ್ಧತಿಯಾಗಿರಲಿಲ್ಲ. ಈ 'ತೆರ'ದ ಆಸೆಗಾಗಿ ಎಷ್ಟೋ ಕನ್ಯಾಪಿತೃಗಳು ತಮ್ಮ ಹೆಣ್ಣನ್ನು ಅಯೋಗ್ಯರಾದವರಿಗೂ ಧಾರೆ ಎರೆದು ಕೊಡುತ್ತಿದ್ದುದುಂಟು. ಮದುವೆಯ ವಿಷಯದಲ್ಲಿ ಹೆಣ್ಣು ತನ್ನ ಆಸೆ–ಆಕಾಂಕ್ಷೆಗಳನ್ನು ವ್ಯಕ್ತಪಡಿಸುವಂತೆಯೇ ಇರಲಿಲ್ಲ. ಮೇಲಾಗಿ ಅವಳಿಗೆ ತಿಳಿವಳಿಕೆಯ ವಯಸ್ಸೂ ಬಂದಿರುತ್ತಿರಲಿಲ್ಲ. ಒಮ್ಮೆ ಅಂಥವನ್ನು ವ್ಯಕ್ತಪಡಿಸಿದರೂ, ವರನ ಆಸ್ತಿಯ ಅಥವಾ ಬಂಗಾರದ ಆಸೆ ತೋರಿಸಿ ಅವನ್ನು ಹತ್ತಿಕ್ಕಲಾಗುತ್ತಿತ್ತು. ಇನ್ನು, 'ತೆರ'ದ ಸಲುವಾಗಿಯೇ ಮನಸ್ತಾಪಗಳಾಗಿ ಎಷ್ಟೋ ಮದುವೆಗಳು ಮುರಿದು ಹೋದ 'ಗುಸು-ಗುಸು' ಸುದ್ದಿಗಳನ್ನೀಗ ಕಥೆಗಳಂತೆ ಕೇಳಬಹುದು. ಈ ನಾಟಕದ ಸಮಕಾಲೀನ ಕೃತಿಯಾದ **ಕನ್ಯಾವಿಕ್ರಯ**ವೂ ಇಂಥದೇ ಕಥಾವಸ್ತುವನ್ನೊಳಗೊಂಡಿದೆ. ತಾಯಿಗೆ ಸೋದರ ಸಂಬಂಧಕ್ಕೆ ಹೆಣ್ಣುಕೊಡುವ ಮನಸ್ಸಿದ್ದರೂ 'ತೆರ'ದ ಆಸೆಗಾಗಿ ತಂದೆ ಒಬ್ಬ ಅಯೋಗ್ಯ ವರನಿಗೆ ಹೆಣ್ಣುಕೊಟ್ಟು ಅವಳ ಜೀವನವನ್ನು ದುರಂತಗೊಳಿಸಿದ ಚಿತ್ರ ಅದರಲ್ಲಿದೆ. ಹೀಗೆ ಯೋಗ್ಯತೆ ಇರುವುದಕ್ಕಿಂತ ಹೆಚ್ಚು ಹಣ ನೀಡಿದವರಿಗೆ ಹೆಣ್ಣು ಸುಲಭವಾಗಿ ದೊರಕುತ್ತಿತ್ತು. ಅಂದರೆ ದ್ರವ್ಯಲೋಭದ ತಂದೆ ಮಗಳ ಭವಿಷ್ಯದ ಬಗ್ಗೆ ಹೆಚ್ಚಿನ ಯೋಚನೆಯನ್ನೇ ಮಾಡುತ್ತಿರಲಿಲ್ಲ. ಹೆತ್ತ ತಾಯಿಗೆಮಾತ್ರ ಈ ಕುರಿತು ಕಾಳಜಿಗಳಿದ್ದರೂ ಅವಳು ನಿಸ್ಸಹಾಯಕಳಾಗಿದ್ದಳು. ಆದುದರಿಂದ ಬಡಕನ್ಯಾಪಿತೃವಿನ ದ್ರವ್ಯಲೋಭ ಎಳೆಯ ಹೆಣ್ಣು ಮಕ್ಕಳ ದುರಂತಕ್ಕೆ ಮೂಲಕಾರಣವಾಗಿರುವುದನ್ನು ನಾವು ಇಲ್ಲಿ ಗಮನಿಸಬೇಕು. ಇನ್ನು, ವಯಸ್ಸಾದವರು ಮದುವೆಯಾಗುವುದಕ್ಕೆ ಕೆಲವು ಕಾರಣಗಳನ್ನು ಕೊಡಬಹುದು: (೧) ಇಂಥ ಮದುವೆಯಾಗುವವರು ಸಾಮಾನ್ಯವಾಗಿ ಅಪುತ್ರಕರಾಗಿರುತ್ತಿದ್ದುದು. (೨) ಸಂಸಾರದ ಜವಾಬ್ದಾರಿ ಹೊರಲು ಹೆಣ್ಣೊಂದರ ಅವಶ್ಯಕತೆ ಇದ್ದುದು. (೩) ಹೆಣ್ಣಿನ ಬಯಕೆ ಇನ್ನೂ ತೀರದುದು. ಮುಂತಾಗಿ. ಆಗ ದಟ್ಟವಾದ ಕಾಡಿನಿಂದ ಕೂಡಿದ ಮಲೆನಾಡಿನ ಹವಾಮಾನ ಅನಾರೋಗ್ಯಕರವಾಗಿದ್ದು, ಮಲೇರಿಯಾದ ಉಪದ್ರವ ವಿಶೇಷವಾಗಿತ್ತು. ಜೊತೆಗೆ ಬಸಿರು–ಬಾಣಂತಿಯರ ಸಾವಿನ ಪ್ರಮಾಣವೂ ಹೆಚ್ಚಿಗೆ ಇತ್ತು. ಎಲ್ಲ ಕುತ್ತಗಳಿಂದ ಪಾರಾಗಿ ಬದುಕುಳಿಯುತ್ತಿದ್ದ ಮಕ್ಕಳ ಸಂಖ್ಯೆಯೂ ಬೆರಳೆಣಿಕೆಯಷ್ಟು. ಈ ಎಲ್ಲ ಕಾರಣಗಳಿಂದಾಗಿ, ಗಂಡು ಪದೇ ಪದೇ ಲಗ್ನವಾಗುವ ಸಂದರ್ಭ ಬರುತ್ತಿತ್ತೇನೋ. ಪ್ರಸ್ತುತ ನಾಟಕದಲ್ಲಿ ಇಗ್ಗಪ್ಪ ಹೆಗಡೆ, ತನ್ನ ಭಾವನೊಂದಿಗೆ ಸಂಸಾರದ ಕಷ್ಟಗಳನ್ನು ತೋಡಿಕೊಳ್ಳುತ್ತಾ, 'ಯಮ್ಮನೇ ಹೆಗ್ಗಡ್ತಿ ಜೀವಂತ್ತಿಪ್ಪನಕಾ, ಸುರಕ್ಷಿತ ಕೊಟ್ಟು ನೋಡು. ಅವಳು ಸತ್ತು ಇಂದೀಗ ೧೯ ದಿವ್ಸಾತು. ಯಮ್ಮಲ್ಲಿ ಕೊಟ್ಟಿಗ್ಗೆ ಹೋಪೋರ್ ಗತಿ ಇಲ್ಲದೆ ಈಗ ಮೊಲೇಲಿ ಒಂದ್ ದುಂಬಧಾರೆ ಸಹ ಇದ್ದೋ? ಇಲ್ಯೋ?' ಎನ್ನುತ್ತಾನೆ. ಅದರಂತೆ, 'ಆದ್ದು ಆಗಿ ಹೋತು. ಮುಂದೆ ಯಮ್ಮನೆ ಜೋತಿ ನಡ್ಲೂಲಿ ಏನಾದ್ರು

ಒಂದ್ ಹುಳಾ ಇದ್ದಿದ್ರೆ ಆ ಯೇಸ್ ಯೋಚನೆ ಮಾಡ್ತಿದ್ದನಿಲ್ಲೆ' ಎಂದೂ ನಿಟ್ಟುಸಿರು ಬಿಡುತ್ತಾನೆ. ಪ್ರಸ್ತುತ ನಾಟಕಕಾರರಿಗೆ ಹವ್ಯಕ ಸಮಾಜದ ಈ ಅನಿಷ್ಟ ಪದ್ಧತಿ ತೊಲಗಬೇಕೆಂಬುದರ ಬಗ್ಗೆ ಹೆಚ್ಚಿನ ಕಳಕಳಿ ಇದೆ. ಕೋರ್ಟಿನಲ್ಲಿ ಮುಂದೆ ಕೇಸಾದಾಗ ನ್ಯಾಯಾಧೀಶರು ಕೊಡುವ ನಿರ್ಣಯದಲ್ಲಿ ಇನ್ನೂ ಹೆಚ್ಚಿನ ವಿವರಗಳು ಬರುತ್ತವೆ. ಬಾಲವಿಧವೆಯರ ಸಂಖ್ಯೆ ಈ ಸಮಾಜದಲ್ಲಿ ವಿಶೇಷವಾಗಿ ಕಂಡು ಬರಲು ವಿಷಮ ವಿವಾಹ ಪದ್ಧತಿಯೇ ಕಾರಣ ಎಂಬುದನ್ನು ಅವರು ಸ್ಪಷ್ಟಪಡಿಸುತ್ತಾರೆ. ಜೊತೆಗೆ ಯೋಗ್ಯರಾದ, ಆದರೆ ಬಡವರಾದ ತರುಣರಿಗೆ ಕನ್ಯಾಪಿತೃಗಳು ಕೇಳಿದಷ್ಟು ಹಣ ಕೊಡಲು ಸಾಧ್ಯವಾಗದೆ, ತಾರುಣ್ಯದಲ್ಲಿ ಮದುವೆ ಎನ್ನುವುದು ಕನಸಿನ ಮಾತೇ ಆಗಿತ್ತು. ಇದು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿತು. ಮದುವೆಯಾದ ಮುದುಕನಿಂದ ದಾಂಪತ್ಯ ಸುಖವನ್ನು ಪಡೆಯದೇ ತಾರುಣ್ಯದಲ್ಲಿ ವೈಧವ್ಯವನ್ನು ಹೊಂದುವ ಹೆಣ್ಣು, ಅನೈತಿಕತೆಗಿಳಿಯುವ ಅಪಾಯವಂತೂ ಇದ್ದೇ ಇತ್ತು. ಇದರಿಂದ ಪ್ರತಿವರ್ಷ ನೂರಾರು ಸಂಖ್ಯೆಯಲ್ಲಿ ಗೋಪ್ಯವಾಗಿ ನಡೆಯುವ ಗರ್ಭಖೂನಿಗಳು ಸಮಾಜದ ಕಣ್ಣಿಗೆ ಬೀಳುವುದು ವಿರಳವಾಗಿದ್ದರೂ ಅವುಗಳನ್ನು ಮುಚ್ಚುವ ಪ್ರಯತ್ನ ನಾನಾರೀತಿಯಲ್ಲಿ ನಡೆಯುತ್ತಿತ್ತು. ಕೆಲವು ಮಠಾಧಿಪತಿಗಳು ಹವ್ಯಕ ಸಮಾಜದಲ್ಲಿದ್ದರೂ, ಸಮಾಜದ ಉದ್ಧಾರದ ಬಗ್ಗೆ ಹೆಚ್ಚಿನ ಕಾಳಜಿ ಅವರಲ್ಲಿ ಯಾರಿಗೂ ಇದ್ದಂತೆ ತೋರಿ ಬರುವುದಿಲ್ಲ. ವಿಧವೆಗಂತೂ ಸಂಪ್ರದಾಯ, ವಿಧಿ-ನಿಷೇಧಗಳ ಕಟ್ಟಳೆ ವಿಶೇಷವಾಗಿತ್ತು. ಆ ತರುಣ ವಿಧವೆ ಕೇಶ ಮುಂಡನ ಮಾಡಿಸಿಕೊಂಡು. ಕೇವಲ ಕೆಂಪು ಸೀರೆಯಲ್ಲಿ ತನ್ನ ಯೌವನವನ್ನು ಹುದುಗಿಸಿಕೊಂಡು ಒಪ್ಪತ್ತು ಮಾತ್ರ ಉಣ್ಣುತ್ತ, ಜೀವವಿರುವ ತನಕವೂ ಪುರಾಣ ಶ್ರವಣಗಳ ಸೇವದಲ್ಲಿ ಕಾಲ ಕಳೆಯಬೇಕಿತ್ತು. ಇತರ ಸಮಾಜಗಳಲ್ಲಿ ಕೂಡುವಳಿ ಮತ್ತಿತರ ಪದ್ಧತಿಗಳಾದರೂ ಇದ್ದು. ಹವ್ಯಕರಲ್ಲಿ ಅಂಥ ಸಂಬಂಧಗಳಿಗೂ ಅವಕಾಶವಿಲ್ಲವೆ. ವಿಧವೆಯರ ಜೀವನ ಸಂಪೂರ್ಣವಾಗಿ ಬರಡಾಗಿಹೋಗಿತ್ತು. ಹೋಗಲಿ, ಪುರುಷನ ಜೀವನವಾದರೂ ಸುಖಕರವಾಗಿತ್ತೆಂದು ಭಾವಿಸೋಣವೇ ? ಪ್ರಾಪ್ತ ವಯಸ್ಸಿನಲ್ಲಿ ಮದುವೆ ಇಲ್ಲದೆ ಯೌವನದ ಬಯಕೆಗಳನ್ನು ಹತ್ತಿಕ್ಕಿಕೊಳ್ಳುವುದು ಅವನಿಗೂ ಕಷ್ಟವೇ ಆಗುತ್ತಿತ್ತು. ವಯಸ್ಸು ಮೀರಿದ ಮೇಲೆ ಮದುವೆ ಎನ್ನುವುದನ್ನು ಕಂಡರೂ ಆ ಎಳೆ ವಯಸ್ಸಿನ ಬಾಲೆಯನ್ನು ಪೂರ್ಣ ತೃಪ್ತಿಪಡಿಸಬಲ್ಲ ಸಾಮರ್ಥ್ಯ ಅವನಲ್ಲಿ ಬಹುತೇಕವಾಗಿ ಇಲ್ಲವಾಗಿರುತ್ತಿತ್ತು. ಪ್ರಸ್ತುತ ನಾಟಕದಲ್ಲಿ ಇಗ್ಗಪ್ಪ ಹೆಗಡೆ ಜೀವಂತವಿರುವಾಗಲೇ ಸಾವಿತ್ರಿಗೆ ಒಮ್ಮೆ ಗರ್ಭಪಾತವಾಗುತ್ತದೆ. ಅದನ್ನು ಕುರಿತು ಇಗ್ಗಪ್ಪ ಹೆಗಡೆ ತನ್ನ ಭಾವನ ಹತ್ತಿರ ಹೇಳುವುದನ್ನು ಕೇಳಿ: 'ಸಣ್ಣ ಇವಾಗೊಂದು ಗರ್ಭ ದಾಟಿ ಹೋತಲ್ಲೋ ? ಅದು ಹೋದ್ದು ಒಳ್ಳೇದೇ ಆತೂ. ಹಾಗಾದ್ರೆ ಈಗ ಉರಿ ಮೂರ ಸಂಜೀ ಕಾಲ. ಉರಿ ಹೋಗಿ ತಿರುಬಪ್ಪ ಹೊತ್ತಾಯಿತು. ಹೊಸ್ತಿಲ ಬುಡಿಕೆ ಕೂರಾ ಕೊಡಾ. ಅವಳ ಹತ್ರ ನೀ ಕೇಳೂ ನೋಡ್ನೋ ? ಇವ ಹ್ಯಾಗೆ

ಬಸರಾದಾ ?' ಭಾವನ ಒತ್ತಾಯಕ್ಕೆ ಮತ್ತೆ ಮದುವೆಯಾಗಿರುವ ಇಗ್ಗಪ್ಪಹೆಗಡೆ ಮದುವೆಯಾದ ಕೆಲವು ದಿನಕ್ಕೇ ಬಂದ ಕಾಮಾಲೆ ರೋಗದಿಂದಾಗಿ ಹೆಣ್ಣಿನ ಮೇಲಿನ ಆಸಕ್ತಿಯನ್ನೇ ಕಳೆದುಕೊಂಡಿದ್ದಾನೆ, ಆದರೆ ಇನ್ನೂ ಯೌವನಕ್ಕೆ ಬರುತ್ತಿರು ಸಾವಿತ್ರಿಗೆ ತನ್ನ ಬಯಕೆಗಳನ್ನು ಹತ್ತಿಕ್ಕಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ವಿಷಮ ವಿವಾಹದ ಪರಿಣಾಮವೇ ಮುಂದಿನ ಅನಾಹುತಗಳಿಗೆ ಎಡೆಮಾಡಿಕೊಡುತ್ತದೆ. ಸಾವಿತ್ರಿಯು ಗರ್ಭಕ್ಕೆ ಕಾರಣನಾಗುವವನು, ಇಗ್ಗಪ್ಪನ ಭಾವನಾದ ವಾಸಪ್ಪನೇ. ತನ್ನ ಕಾಮತೃಷೆಗಾಗಿ ಹಾಗೂ ಆಸ್ತಿಯನ್ನು ಲಪಟಾಯಿಸುವ ಎರಡು ಉದ್ದೇಶ ಗಳಿಗಾಗಿ ಅವನು ಸಾವಿತ್ರಿಯನ್ನು ಬಳಸಿಕೊಳ್ಳುತ್ತಾನೆ. ಹೀಗೆ ಹೆಣ್ಣಿನ ಮುಂದಿನ ಅನರ್ಥಗಳಿಗೆ ಪೀಠಿಕೆ ಹಾಕುವುದನ್ನು ಗುರುತಿಸಬಹುದು.

ಲಂಚ : ದಳ್ಳಾಳಿಯಂತೆ ವ್ಯವಹರಿಸುವ ಗಣೇಶಭಟ್ಟ, ವಾಸಪ್ಪ ಹೆಗಡೇಯ ಪ್ರೋತ್ಸಾಹ ದೊರೆತ ಕಾರಣವಾಗಿ ಭಟ್ಟರಿಗೆ ಲಂಚಕೊಟ್ಟು 'ಜಾತಕವಾಗುತ್ತದೆಂದು' ಮಾಡಿಸಿಕೊಂಡು ಬರುತ್ತಾನೆ. (ಅಥವಾ ಅವನ್ನೂ ಸುಳ್ಳು ಹೇಳಿ ತಾನೇ ಆ ಲಂಚ ವನ್ನು ತಿನ್ನುತ್ತಾನೋ ತಿಳಿಯದು). ಏನೇ ಇರಲಿ, ಲಂಚ ಜಾತಕದ ಹಂತದಿಂದಲೇ ಪ್ರಾರಂಭವಾಗುತ್ತದೆ. ವಾಸಪ್ಪ ಹೆಗಡೆಯಿಂದ ಬಸಿರಾದ ವಿಧವೆ ಸಾವಿತ್ರಿ ಸಮಾಜಕ್ಕೆ ಹೆದರಿ ಗರ್ಭಹಾನಿ ಮಾಡುತ್ತಾಳೆ. ವಾಸಪ್ಪ ಹೆಗಡೆ ಮತ್ತು ಅವನ ಭಾವ ನಂಜುಂಡ ಹೆಗಡೆ ಅವಳಿಗೆ ಈ ಕೆಲಸದಲ್ಲಿ ಸಹಾಯಮಾಡುತ್ತಾರೆ. ಆದರೆ ಸುದ್ದಿ ಹೇಗೋ ಹರಡುತ್ತದೆ. ಮಠಾಧಿಪತಿಗಳು ವಿಚಾರಣೆಗಾಗಿ ಆಚಾರ್ಯಭಟ್ಟನನ್ನು ಕಳಿಸು ತ್ತಾರೆ. ಅವನು ೧೦೦ ರೂ. ತಿಂದು, ಅದನ್ನು ಮುಚ್ಚಿ–ಹಾಕುತ್ತಾನೆ. ಊರ ಮೊಕ್ತೇಸರನಾದ ಸಂಕಪ್ಪ ಹೆಗಡೆಯೂ ೩೦೦ ರೂ. ಲಂಚ ಸ್ವೀಕರಿಸಿ ವಿಷಯವನ್ನು ಸುಳ್ಳಾಗಿಸುತ್ತಾನೆ. ಆದರೂ ಕೋರ್ಟಿನಲ್ಲಿ ಕೇಸು ದಾಖಲಾಗುತ್ತದೆ. ಅದನ್ನು ಖುಲಾಸು ಮಾಡಿಸುತ್ತೇನೆಂದು ಹೇಳಿ ಫೌಜದಾರ ೭೦೦ ರೂ. ತೆಗೆದುಕೊಳ್ಳು ತ್ತಾನೆ. ಆದರೆ ಈ 'ಲಂಚ'ಗಳೆಲ್ಲವೂ ಬಹಿರಂಗಗೊಂಡು, ವಿಚಾರಣೆ ನಡೆದು, ಅಪರಾಧಿಗಳಿಗೆ ಶಿಕ್ಷೆಯಾಗುತ್ತದೆ. ಇಲ್ಲಿ ಮುಖ್ಯವಾದದ್ದು, ಧರ್ಮಾಧಿಕಾರಿಗಳ ಪ್ರತಿ ನಿಧಿಗಳಾಗಿದ್ದವರು, ಊರಮೊಕ್ತೇಸರರು ಸರಕಾರೀ ಅಧಿಕಾರಿಗಳು, ಇವರೆಲ್ಲ ಹಣದ ಆಸೆಗಾಗಿ ನ್ಯಾಯ,ಸತ್ಯಗಳನ್ನು ಬಲಿತೆಗೆದುಕೊಂಡಿದ್ದು.ಅನೀತಿಯನ್ನುಪೋಷಿಸಿದ್ದು.

ಸಾಲದ ಬಡ್ಡಿ : ಹೆಣ್ಣಿನ ತೆರ, ಲಂಚ ಇವುಗಳ ಸುಳಿಯಲ್ಲಿ ಸಿಕ್ಕು ನರಳು ತ್ತಿದ್ದ ಹವ್ಯಕ ಸಮಾಜದ ಅನೇಕ ಕುಟುಂಬಗಳು ತಲೆ ಹಿಡಿದು ಗೊಳ್ಳುವುದಕ್ಕೆ ಮತ್ತೊಂದು ಕಾರಣವನ್ನು ನಾಟಕಕಾರರು ಸರಿಯಾಗಿಯೇ ಗುರುತಿಸುತ್ತಾರೆ. ಅದೇ ಸಾಲದ ಬಡ್ಡಿ. ಇಗ್ಗಪ್ಪ ಹೆಗಡೆ ತನ್ನ ಎರಡನೆಯ ಮದುವೆಗೆ ಪಟ್ಟಣದ ರಾಯರ ಹತ್ತಿರ ಒಂದೂವರೆ ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುತ್ತಾನೆ. ನಾಲ್ಕೈದು

ವರ್ಷದಿಂದ ತನ್ನ ಆದಾಯವನ್ನೆಲ್ಲ ರಾಯರ ಮನೆಗೇ ಸುರಿದರೂ ಬಡ್ಡೀ ಗಿಡ್ಡೀ ಸೇರಿ ಸಾಲ ಮೂರು ಸಾವಿರದ ಮೇಲೆಯೇ ಉಳಿಯುತ್ತದೆ. ಇಗ್ಗಪ್ಪ ಹೆಗಡೆಯ ವಾರ್ಷಿಕ ಆದಾಯ ಕಡಿಮೆ ಎಂದರೂ ೩–೪ ಸಾವಿರಗಳಷ್ಟಾಗುತ್ತದೆ. ಅವನ ಗೃಹ ಕೃತ್ಯದ ವಾರ್ಷಿಕ ಖರ್ಚು ಹೆಚ್ಚೆಂದರೆ ೫೦೦ ರೂ. ಆದರೆ ರಾಯರ ಲೆಕ್ಕದ ಪ್ರಕಾರ ಪ್ರತಿವರ್ಷದ ಅವನ ಆದಾಯದಿಂದ ಬಡ್ಡಿಯ ಹಣವೂ ತೀರದೆ ಕೊನೆಯಲ್ಲಿ ಅಸಲಿನ ಇಮ್ಮಡಿಗಿಂತ ಹೆಚ್ಚಿನ ಬಾಕಿ ಉಳಿಯುತ್ತದೆ. ಮನೆಗೆ ಹಾಲಿಗಾಗಿ ಎಮ್ಮೆ ಕೊಂಡುಕೊಳ್ಳಲು (ಒಮ್ಮೆಲೇ ಕೊಡುವಷ್ಟು) ಅವನಲ್ಲಿ ಹಣವಿಲ್ಲ. ಕಂತಿನ ಮೇಲೆ ಕೊಂಡುಕೊಳ್ಳುತ್ತಾನೆ. ಮುಂದೆ ಮೂರನೇ ಮದುವೆಯಾಗುವಾಗ ಇಗ್ಗಪ್ಪ ಹೆಗಡೆ ಮತ್ತೆ ಸಾಲಕ್ಕಾಗಿ ರಾಯರ ಬಳಿಯೇ ಹೋಗುತ್ತಾನೆ. ಅವನು ತನ್ನ ಭೂಮಿಯ ಅಡವಿನ ಮೇಲೆ ಎರಡು ಸಾವಿರ ರೂಪಾಯಿ ಸಾಲ ಕೇಳಿದ್ದು. ಆದರೆ ಅವರು ಹಿಂದಿನ ಲೆಕ್ಕವನ್ನೂ ಹಿಡಿದು ಒಟ್ಟು ೫೦೫೦ ರೂಪಾಯಿ ನಗದೀ ತೆಗೆದುಕೊಂಡದ್ದು ಎಂದು " ದಸ್ತೈವಜು " ಬರೆಸಬೇಕೆಂದು ಹೇಳುತ್ತಾರೆ. ಮುಂದೆ ವಾಸಪ್ಪ ಹೆಗಡೆಗೆ ಹಿಂದಿನ ಲೆಕ್ಕ ಅಲ್ಲಾದಾ ತೋರಿಸುತ್ತಾರೆ. ಆದುದರಿಂದ ರಾಯರ ಮೋಸ ಬರೀ ಬಡ್ಡಿಯಷ್ಟೇ ಅಲ್ಲ; ಸಾಲದ ಹಣ ಬರೆಸುವಲ್ಲಿಯೂ ಕಂಡುಬರುತ್ತದೆ. ನಾಡಿಗರ ಹತ್ತಿರ " ದಸ್ತೈವಜು " ಬರೆಸುವಾಗ, ರಾಯರು ಮಾಡುವ ಅನ್ಯಾಯ ವನ್ನು ಅವರು ಬಯಲಿಗೆಳೆದು ತೋರಿಸುತ್ತಾರೆ. ಆದರೆ ಅದನ್ನು ಅರ್ಥಮಾಡಿ ಕೊಳ್ಳುವ ಶಕ್ತಿ ಇಗ್ಗಪ್ಪ ಹೆಗಡೆಯಲ್ಲಿಲ್ಲದಿದ್ದುದು ದುರ್ದೈವ. ರಾಯರ ಮೇಲಿನ ಅವನ ನಿಷ್ಠೆ ಎಳ್ಳಷ್ಟೂ ಕಡಿಮೆಯಾಗದಿರುವುದು ಆಶ್ಚರ್ಯದ ಸಂಗತಿ. " ಸುಮ್ಮನೆ ರಾಯರಪ್ಪಾ, ಹೆಚ್ಚಾಗಲೀ, ಕಮ್ಮಿಯಾಗಲೀ ಅವರು ಹೇಳಿದ ಹಾಗೆ ಕೇಳೋದೇ ಸರಿ " ಎನ್ನುತ್ತಾನೆ. ಈ ರೀತಿಯ ಮನೋಭಾವವೇ ಹವ್ಯಕರನೇಕರು ತಮ್ಮ ಸಾಲದ ಬಡ್ಡಿಗೆ ಆಸ್ತಿ–ಮನೆಗಳನ್ನು ಕಳೆದುಕೊಳ್ಳುವಂತೆ ಮಾಡಿತು. ಇದೇ ನಾಟಕದಲ್ಲಿ ಮುಂದೆ ವಾಸಪ್ಪ ಹೆಗಡೆ ಭಾವನ ಭೂಮಿಯನ್ನು ತಾನು ಕೊಟ್ಟ ಸಾಲಕ್ಕೆ ಬರೆಸಿ ಕೊಂಡರೆ, ಮುಂದೆ ರಾಯರಲ್ಲಿಗೆ ಹೋದಾಗ ಇಗ್ಗಪ್ಪ ಹೆಗಡೆ ಸಾಲಕ್ಕೆ (ಆಗ ಸಾಲದ ಒಟ್ಟೂ ಬಾಕಿ ೯೦೯೦ ರೂ. ಗೆ ಏರಿರುತ್ತದೆ) ತನ್ನ ಭೂಮಿಯನ್ನು 'ತೋರಡವು' ಮಾಡಿಕೊಡಬೇಕಾದ ಪ್ರಸಂಗ ಬರುತ್ತದೆ. ಒಬ್ಬನ ಸಾಲಕ್ಕಾಗಿ ಇಬ್ಬರ ಭೂಮಿಯೂ ಮುಳುಗಿ ಹೋದ ದುರವಸ್ಥೆಯ ಚಿತ್ರಣ ಖಂಡಿತಾ ಉತ್ಪ್ರೇಕ್ಷೆಯಲ್ಲ. ರಾಯರ ಬಡ್ಡೀ ವ್ಯವಹಾರದ ಒಂದು ನೈಜ ಚಿತ್ರಣ ಅಷ್ಟೆ. ರಾಯರು ತೋರಿಸುವ ದರ್ಪ, ಅಹಂಕಾರಗಳನ್ನು ಸಹಿಸಿಕೊಂಡು, ಭೂಮಿ–ಮನೆಗಳನ್ನು ಅಡವಿಟ್ಟು ಸಾಲಕೇಳುವಾಗಲೂ ಭಿಕ್ಷೆ ಬೇಡುವವರಂತೆ ಅವರ ಮುಂದೆ ಹವ್ಯಕರು ತೋರಿಸುವ ದೈನ್ಯಾವಸ್ಥೆ ಅಸಹನೀಯ. ಪ್ರಸ್ತುತ ನಾಟಕದಲ್ಲಿ ೧೨ ನೆಯ ದೃಶ್ಯದಲ್ಲಿ ಬರುವ ವಾಸಪ್ಪ ಹೆಗಡೆ ಮತ್ತು ರಾಯರ ನಡುವಿನ ಸಂ ಭಾಷಣೆ ಅತ್ಯಂತ ಕಲಾತ್ಮಕವಾಗಿ ಹಾಗೂ ನೈಜವಾಗಿ ಚಿತ್ರಿತವಾಗಿದೆ.

ಹವ್ಯಕರು ಸರಳರು, ಕಷ್ಟಪಡುವವರು, ಪ್ರಾಮಾಣಿಕರು. ಆದರೆ ಕೋರ್ಟು ಕಚೇರಿಗಳಲ್ಲಿ ವಿಶೇಷ ಆಸಕ್ತಿ ಇದ್ದವರೆಂದು ಕೆನರಾ ಗೆಜೆಟಿಯರ್ ಗುರುತಿಸಿದೆ. ಸಂಪನ್ಮೂಲಗಳಿದ್ದೂ ಅವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಚಾತುರ್ಯ ಅವರಲ್ಲಿ ಇಲ್ಲವಾಯಿತು. ಹೆಣ್ಣಿನ ತೆರ, ಲಂಚ ಮತ್ತು ಸಾಲದ ಬಡ್ಡಿ ಇವುಗಳಿಂದಾಗಿ ಅನೇಕ ಕುಟುಂಬಗಳೂ, ಜೀವನ್ಮೃತಾವಸ್ಥೆಯ ಸ್ಥಿತಿಯನ್ನು ಹೊಂದಿದವು. ಪಟ್ಟಣದ ಬುದ್ಧಿವಂತ ಜನರನ್ನು ನೋಡಿಯೂ ಸಹ ಯಾವುದೇ ಒಂದು ವ್ಯಾಪಾರ ಅಥವಾ ಉದ್ಯಮವನ್ನು ಕುರಿತು ಯೋಚಿಸುವ ಗೊಡವೆಗೂ ಹೋಗದಿದ್ದುದು ಅವರ ಜಡತ್ವ ಹಾಗೂ ಸಂಕೋಚತ್ವಗಳಿಗೆ ನಿದರ್ಶನ. ಜೊತೆಗೆ ಅನೇಕ ಕುಟುಂಬಗಳಿಗಿದ್ದ ಆಸ್ತಿಯು ಕನಿಷ್ಠ ವರಪ್ರದಾನ. ಅಂದರೆ ಊಟ–ಬಟ್ಟೆಗಳಿಗೆ ಕೊರತೆ ಇಲ್ಲದಿರುವಿಕೆ, ಕುಟುಂಬದ ಸದಸ್ಯರನ್ನು ಹೊರಗೆ ಹೋಗಿ ದುಡಿಯುವ ಅಥವಾ ಭಿನ್ನ ರೀತಿಯ ಉದ್ಯೋಗ ಕೈಗೊಳ್ಳುವ ಸಾಹಸಕ್ಕೆ ಅನಿವಾರ್ಯವಾಗಿ ಪ್ರೇರೇಪಿಸುತ್ತಿರಲಿಲ್ಲ. ತುತ್ತು ಕೂಳಿಗೂ ತತ್ವಾರ ಎನ್ನುವ ಪರಿಸ್ಥಿತಿ ಇದ್ದಿದ್ದರೆ ಜೀವನ ನಿರ್ವಹಣೆಗಾಗಿ ಏನನ್ನಾದರೂ ಮಾಡುವ ತಾಕತ್ತು, ವಿದ್ಯೆ ಕಲಿಯುವ ಅಥವಾ ಹೊಸ–ಹೊಸ ದುಡಿಮೆ ಕಂಡು ಕೊಳ್ಳುವ ಪ್ರವೃತ್ತಿ ಅವರಲ್ಲಿ ಬರುತ್ತಿತ್ತು. ಆದರೆ ಅಡವಿಡಲು ಆಸ್ತಿ ಇದೆ; ಸಾಲ ಕೊಡಲು ರಾಯರಿದ್ದಾರೆ ಎಂದ ಮೇಲೆ, ಮತ್ತೊಂದು ಸಾಧ್ಯತೆಯ ಯೋಚನೆ ಏಕೆ ಮತ್ತು ಹೇಗೆ ಬಂದೀತು ?

ಹವ್ಯಕರ ಬೋಳೇತನ ಹಾಗೂ ಶ್ರಮದ ಫಲದಿಂದ ಪಟ್ಟಣಿಗರು ಸುಖ ಜೀವಿಗಳಾಗಿರುವುದನ್ನು ನಾಟಕದಲ್ಲಿ ಪಾತ್ರವಾಗಿ ಬರುವ ನಾಡಿಗರು ಸ್ಮರಿಸಿಕೊಳ್ಳುತ್ತಾರೆ. ಅಂತೆಯೇ ಹವ್ಯಕರನ್ನು ಕುರಿತು ಕಳಕಳಿ ಆ ಪಾತ್ರಕ್ಕಿದೆ. ಅವರು ರಾಯರ ಶೋಷಣೆಗೆ ಒಳಗಾಗಿ ನಾಶವಾಗುತ್ತಿದ್ದಾರೆಂದು ಪರಿತಪಿಸುವ ನಾಡಿಗರು, ಹವ್ಯಕರಲ್ಲಿಯೇ ಶ್ರೀಮಂತರಾದವರು ಅಗತ್ಯವಿದ್ದವರಿಗೆ ಕಡಿಮೆ ಬಡ್ಡಿಯಲ್ಲಿ ಹಣಕೊಟ್ಟು ಸಹಾಯ ಮಾಡಿ ಸಮಾಜದ ಏಳ್ಗೆಗಾದರೂ ಶ್ರಮಿಸಬಹುದಿತ್ತು; ತಮ್ಮವರ ಹಣ–ಆಸ್ತಿ ಇತರರ ಪಾಲಾಗುವುದನ್ನು ತಪ್ಪಿಸಬಹುದಿತ್ತು – ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಅಂತಹ ಉದಾರ ಬುದ್ಧಿ, ಬೆರಳಣಿಕೆಯ ಶ್ರೀಮಂತರಲ್ಲಿ ಬಾರದಾಯಿತು. ಹೊಟ್ಟೆ–ಬಟ್ಟೆಗಳನ್ನೂ ಕಟ್ಟಿ ಶ್ರೀಮಂತರಾದವರು ಹಣವನ್ನು ಎಲ್ಲಿ ಹೇಗೆ ಹುಗಿದಿಡಬೇಕೆಂದು ವಿಚಾರ ಮಾಡಿದರೇ ಹೊರತು ತಮ್ಮ ಸಮಾಜದ ಉದ್ಧಾರಕ್ಕೆ ಅಥವಾ ತಮ್ಮ ಕುಟುಂಬದ ಏಳ್ಗೆಗೆ ಅದನ್ನು ಯಾವರೀತಿ ಬಳಸಬಹುದು ಎಂದು ವಿಚಾರ ಮಾಡದಾದರು. ಮುಖ್ಯತಃ ಹವ್ಯಕರಲ್ಲಿ ವಿದ್ಯಾಪ್ರಸಾರವಿರಲಿಲ್ಲ. ಹೊರಜಗತ್ತಿನ ಪರಿಚಯವೂ ಇಲ್ಲದೆ, ಕೂಪಮಂಡೂಕ ಪ್ರವೃತ್ತಿ ಬೆಳೆದಿತ್ತು.

ಆಗಿನ ಕಾಲದಲ್ಲಿ ವಿದ್ಯಾಭ್ಯಾಸ ಪದ್ಧತಿ ಜಿಲ್ಲೆಯಲ್ಲಿ ಯಾವತರಹದ್ದಿತ್ತೆಂದು ತಿಳಿಯಬೇಕಾದರೆ, ನ್ಯಾಯಾಧೀಶರ ಮಾತುಗಳಿಗೇ ಶರಣುಹೋಗಬೇಕು: " ವಿದ್ಯ

ವೆಂದರೆ ಎಲ್ಲ್ಯಾದರೂ ಭಟ್ಟ ಭಿಕ್ಷುಕರು ಬಾಯಿಂದ ಹೇಳಿ ದುಡ್ಡು ಕೀಳುವ ಮಂತ್ರ-ತಂತ್ರಗಳೆಂದು ತಿಳಿಯುತ್ತಾರೆ. ಮತ್ತು ಯೋಗ್ಯ ದಾನ-ಧರ್ಮಗಳೆಂದರೆ ಛತ್ರದಕ್ಷಿಣೇ ದೇಶಾವರ ಪೂಜೆ- ಪುನಸ್ಕಾರ ಇವುಗಳೇ ಸರಿಯೆಂದು ತಿಳಿಯುತ್ತಾರೆ. ಅಂದರೆ ಆಕಾಲದಲ್ಲಿ ಹವ್ಯಕ ಸಮಾಜದಲ್ಲಿ ವಿದ್ಯಾಪ್ರಸಾರ ಏನೇನೂ ಸಾಲದು ಅಥವಾ ಇರಲಿಲ್ಲವೆಂಬುದನ್ನು ಈ ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತವೆ. ಆದರೆ ಪಟ್ಟಣದಲ್ಲಿರುವ ಹವ್ಯಕೇತರ ಮೇಲ್ವರ್ಗಗಳಲ್ಲಿ ವಿದ್ಯಾವಂತರು ಇದ್ದರೆಂದು ತೋರುತ್ತದೆ. ಈ ನಾಟಕದಲ್ಲಿ ಬರುವ ವರ್ತಕವರ್ಗ ಮತ್ತು ನಾಡಿಗರ ಪಾತ್ರಗಳು ಈ ಊಹೆಯನ್ನು ನಿಜವಾಗಿಸುತ್ತದೆ. ವಿದ್ಯೆಯ ಪರಿಣಾಮದಿಂದಲೇ (ವಿದ್ಯಾವಂತರಾಗಿದ್ದುದರಿಂದಲೇ) ನಾಡಿಗರು ಹವ್ಯಕರ ಮೇಲೆ ರಾಯರಿಂದಾಗುತ್ತಿರುವ ಅನ್ಯಾಯ, ಮೋಸಗಳನ್ನು ಗುರುತಿಸಬಲ್ಲವರಾಗಿದ್ದಾರೆ. ಆದರೆ ಹವ್ಯಕರಿಗೇ ಅದರ ಅರಿವು ಬಂದ ಹೊರತು ತಮ್ಮ ಮಾತುಗಳಿಂದ ಬರಿಯ ಕಂಠ ಶೋಷಣೆಯಾಗುವುದೆಂದು ಅವರಿಗೂ ಅನ್ನಿಸುತ್ತದೆ. ವಿದ್ಯಾ ಪ್ರಸಾರ ಹವ್ಯಕ ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಮದ್ದಾಗಬಲ್ಲದು ಎಂಬುದನ್ನು ಲೇಖಕರು ಗುರುತಿಸಿದ್ದಾರೆ. ನಾಡಿಗರ ಮಾತುಗಳಲ್ಲಿರುವಂತಹದೇ ಕಳಕಳಿ ಹಾಗೂ ಹವ್ಯಕರ ಸಮಸ್ಯೆಗಳಿಗೆ ಮೂಲವನ್ನು ಗುರುತಿಸುವ ಪ್ರಯತ್ನ ನ್ಯಾಯಾಧೀಶರ ಭಾಷಣದಲ್ಲಿಯೂ ಕಂಡು ಬರುತ್ತದೆ.

ಹತ್ತೊಂಭತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಮಟ್ಟಿನ ಸಾಮಾಜಿಕ ಜಾಗೃತಿ ಕಂಡು ಬಂತು. ವಿದ್ಯೆಯನ್ನು ಕಲಿಯುವ ಸಲುವಾಗಿಯೋ ಉದ್ಯೋಗಕ್ಕಾಗಿಯೋ ಮುಂಬೈಗೆ ಹೋದವರಲ್ಲಿ ಕೆಲವರು ತಮ್ಮ ಸುತ್ತ ಮುತ್ತಲಿನ ಸಮಾಜಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿದರು. ಅಲ್ಲಿಯ ಸುಧಾರಣಾವಾದಿಗಳ ಕಾರ್ಯಗಳನ್ನು ನೋಡಿ, ತಮ್ಮ ಸಮಾಜದಲ್ಲಿಯೂ ಅಂತಹದೇ ಬದಲಾವಣೆಗಳನ್ನು ತರಬೇಕೆಂದು ಬಯಸಿದರು. ಕೆಲವರು ಸಭೆ, ಸಮ್ಮೇಳನಗಳ ಮೂಲಕ, ಬರವಣಿಗೆಯ ಮೂಲಕ ಸಮಾಜವನ್ನು ಎಚ್ಚರಿಸುವ ಕಾರ್ಯಗಳನ್ನೂ ಕೈಕೊಂಡರು. ಬಾಲ ವಿವಾಹ ಪದ್ಧತಿಯನ್ನು ಖಂಡಿಸುವ ಸಭೆ, ವ್ಯಾಖ್ಯಾನಗಳು ಜಿಲ್ಲೆಯಲ್ಲಿ ಅಲ್ಲಲ್ಲಿ ಜರುಗಿದ್ದನ್ನು ಪ್ರಸ್ತುತ ನಾಟಕವೇ ಉಲ್ಲೇಖಿಸುತ್ತದೆ. ಮುಂದೆ ಒಂದೆರಡು ದಶಕಗಳಲ್ಲಿಯೇ ಅಕದಾಸ ಗಣಪತಿ ಭಟ್ಟರು ವಿಧವಾವಿವಾಹ ಪ್ರಚಾರವನ್ನು ಕೈಕೊಂಡು ಗಮನಾರ್ಹ ಸೇವೆ ಸಲ್ಲಿಸಿದರು. ಅವರು ಸುಮಾರು ನೂರಕ್ಕೂ ಹೆಚ್ಚು ವಿಧವಾ ವಿವಾಹಗಳನ್ನು ಮಾಡಿಸಿದರಲ್ಲದೇ ಸ್ವತಃ ವಿಧವೆಯೊಬ್ಬಳನ್ನು (ಮಂಕಾಳಮ್ಮ) ಮದುವೆಯಾಗಿ ಇತರರಿಗೆ ಮಾದರಿಯಾದುದನ್ನು ಇಲ್ಲಿ ಉಲ್ಲೇಖಿಸಬಹುದು. ವೆಂಕಟರಮಣ ಶಾಸ್ತ್ರಿಯವರ **ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ** ಮತ್ತು ಶಿವರಾಮಧಾರೇಶ್ವರರ **ಕನ್ಯಾ ವಿಕ್ರಯ**

ಈ ಎರಡೂ ಕೃತಿಗಳ ಮೂಲ ಉದ್ದೇಶ ಸಮಾಜ ಸುಧಾರಣೆಯೇ ಆಗಿದೆ. **ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ**ದ ಲೇಖಕರಂತೂ ತಮ್ಮ ಹೆಸರಿನ ಬದಲು 'ಹವ್ಯಕ ಹಿತೇಚ್ಛು' ಎಂದೇ ಮುದ್ರಿಸಿ, ಆ ಉದ್ದೇಶವನ್ನು ಮತ್ತು ಹವ್ಯಕ ಸಮಾಜದ ಬಗೆಗಿರುವ ತಮ್ಮ ಕಳಕಳಿಯನ್ನು ಚೆನ್ನಾಗಿಯೇ ವ್ಯಕ್ತಪಡಿಸಿದ್ದಾರೆ.

ಭಾಷಾ ಪ್ರಯೋಗ :

ಹೊಸಗನ್ನಡ ಅರುಣೋದಯ ಕಾಲದಲ್ಲಿ ಅನೇಕ ಹೊಸತನಗಳಿಗೆ ಧೈರ್ಯ ಮಾಡಿದ ಶ್ರೇಯಸ್ಸು ವೆಂಕಟರಮಣ ಶಾಸ್ತ್ರಿಗಳದ್ದು ಎಂಬುದನ್ನು ಈ ಹಿಂದೆಯೇ ಕಂಡುಕೊಂಡಿದ್ದೇವೆ. ಅಂತೆಯೇ ನಾಟಕವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಆಡುನುಡಿಗಳಲ್ಲಿ ಬರೆಯುವ ಹಾಗೂ ಮುದ್ರಿಸುವ ಸಾಹಸ ಮಾಡಿದ್ದು ಆಶ್ಚರ್ಯವನ್ನೂ ಹೆಮ್ಮೆಯನ್ನೂ ಉಂಟುಮಾಡುತ್ತವೆ. ನಾಟಕದ ವಿಷಯ ಹವ್ಯಕ ಸಮಾಜದಲ್ಲಿ ಪ್ರಚಲಿತವಿದ್ದ ಅನಿಷ್ಟ ಪದ್ಧತಿಯನ್ನೇ ಕುರಿತದ್ದು; ನಾಟಕದ ಮುಖ್ಯ ಉದ್ದೇಶ ಅಂಥ ಪದ್ದತಿಯ ವಿರುದ್ಧ ಸಮಾಜವನ್ನು ಎಚ್ಚರಿಸುವುದೇ ಆಗಿದೆ. ಆದುದರಿಂದ ಗ್ರಂಥಸ್ಥ ಭಾಷೆಗಿಂತ ಆ ಸಮಾಜದ ಜನರ ಆಡುಮಾತೇ ಹೆಚ್ಚು ಪರಿಣಾಮಕಾರಿಯೆಂದು ಅವರಿಗಾದರೂ ಅನ್ನಿಸಿರಲಿಕ್ಕೆ ಸಾಕು. ಅಥವಾ, ಇನ್ನೊಂದು ಊಹೆಯೆಂದರೆ, ಪಾತ್ರಗಳೇ ತಮ್ಮ ತಮ್ಮ ಭಾಷೆಯನ್ನು ನಿರ್ಧರಿಸಿಕೊಂಡಿರುವುದು. ಅಂದರೆ, ಆಯಾ ಪಾತ್ರಗಳ ಬಾಯಿಯಿಂದ ಅವರವರಿಗೆ ತಕ್ಕ ಹಾಗೂ ಸಹಜವಾದ ಮಾತನ್ನು ಹೇಳಿಸಿದ್ದರ ಪರಿಣಾಮವಾಗಿಯೇ ಬಹುತೇಕ ಆಡುಮಾತುಗಳಿಂದ ಕೂಡಿದ ಈ ಕೃತಿ ಜನ್ಮತಾಳಿರುವುದು. ಹೀಗೆ, ಕಾರಣ ಏನೇ ಇದ್ದರೂ, ಭಾಷೆಯ ಸಾಮಾಜಿಕ ಅಧ್ಯಯನ ಮಾಡಬೇಕೆನ್ನುವವರಿಗೆ ಇಲ್ಲಿ ಸಾಕಷ್ಟು ಅವಕಾಶವಿದೆ. ನಾಟಕದಲ್ಲಿ ಅಂದಿನ ಘಟ್ಟದ ಕೆಳಗಿನ, ಘಟ್ಟದ ಮೇಲಿನ ಹವ್ಯಕರ ಆಡುಮಾತುಗಳಲ್ಲದೆ, ಪ್ರಾಸಂಗಿಕವಾಗಿ ಬರುವ ಘಟ್ಟದ ಮೇಲಿನ ಕೊಂಕಣಿ ಭಾಷೆ (ರಾಯರ ಭಾಷೆ)[೯] ಕುಂದಾಪುರದಿಂದ ಕೆಲಸಕ್ಕೆ ಬಂದಿರುವ ಆಳಿನ ಭಾಷೆ[೧೦] ಸ್ಥಳೀಯ ಶಿಷ್ಟ ಭಾಷೆ(ನಾಡಿಗರ ಭಾಷೆ)[೧೧] ಮತ್ತು ಅಂದಿನ ಕೋರ್ಟ್ ಭಾಷೆ (ಗ್ರಂಥಸ್ಥ ಭಾಷೆ)[೧೨] ಹೀಗೆ ಅನೇಕ ಪ್ರಭೇದಗಳನ್ನು ಇಲ್ಲಿ ಗುರುತಿಸಬಹುದು. ಜೊತೆಗೆ ಹವ್ಯಕರು ಪಟ್ಟಣದ ಜನರೊಂದಿಗೆ ಮಾತನಾಡುವಾಗ ಹೇಗೆ ಭಾಷೆಯನ್ನು ಬದಲಾಯಿಸಿಕೊಳ್ಳಲು (Code Switching) ಅಂದರೆ ಶಿಷ್ಟಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಎಂಬುದೂ ನಮ್ಮ ಆಸಕ್ತಿಯನ್ನು ಕೆರಳಿಸುವ ಅಂಶ. ನಾಟಕದಲ್ಲಿ ಬರುವ ಹವ್ಯಕ ಪಾತ್ರಗಳೆಲ್ಲ ಅವಿದ್ಯಾವಂತರಾಗಿರುವುದರಿಂದ ಸಂಪೂರ್ಣವಾಗಿ ಸ್ಥಳೀಯ ಶಿಷ್ಟ ಕನ್ನಡವನ್ನು ಮಾತನಾಡಲು ಅವರಿಂದ ಸಾಧ್ಯವಾಗುವುದಿಲ್ಲ. ಅಂತೆಯೇ ಅವರ ಔಪಚಾರಿಕ ಭಾಷೆಯಲ್ಲಿ (Formal Speech) ಹವ್ಯಕ ಕನ್ನಡ ಹಾಗೂ ಶಿಷ್ಟ ಕನ್ನಡ ಇವೆರಡೂ ಮಿಶ್ರಗೊಳ್ಳುವುದನ್ನು ನಾವು ಗಮನಿಸಬಹುದು. ಉದಾಹರಣೆಗೆ, ದಾಸಪ್ಪ ಹೆಗಡೆ, ರಾಯರ ಹತ್ತಿರ ಮಾತನಾಡಿರುವ

ರೀತಿಯನ್ನು ಗಮನಿಸಿ : 'ಮಾಡಿದ ಭೂಮಿ ವೈಸಲಿಕೇನ್ ಆಗೋದಿಲ್ಲಾ. ಈ ಬಡ್ಡೀ 'ಕೊಡೂಕೂ' ನನ್ನಿಂದಾಗದೂ; ಪರಾಕೆ ದೂಲಬಡ್ಡೀ ಪ್ರಕಾರ ಮಾಡಿಕೊಡೀ. ಆ ಭೂಮಿೊ ಮತ್ತು ನನ್ನ ಭೂಮಿ ಸಹಾ ಕೂಡ್ಸಿ ನಿಮಗೆ ತೋರಡೂ **ಮಾಡಕೊಡತೀ; ಅಕ್ಕಾದರೆ ಹೇಳಿ** ? ಶಿರ್ಶಿಗೆ **ಬಪ್ಪದಬಂದಿದ್ದೀ;** ದಸ್ತೈವ್ರೋಜು ಬರಸಿಕೊಟ್ಟೀ ಹೋಗಬಿಡತೇನೇ. (ಪು. ೩೫)'

ಮೇಲಿನ ಮಾತುಗಳಲ್ಲಿ ದಪ್ಪ ಅಕ್ಷರದವು ಹವ್ಯಕರಲ್ಲಿ ಬಳಕೆಯಲ್ಲಿದ್ದವು. ಉಳಿದವುಗಳಲ್ಲಿ ಕೆಲವು ಹವ್ಯಕ ನುಡಿಯಲ್ಲೂ ಇವೆ: ಶಿಷ್ಟ ಭಾಷೆಯಲ್ಲೂ ಇವೆ. ಅವತರಣಿಕೆ ಮೂಲಕ ಗುರುತಿಸಿರುವ ಶಬ್ದ, ಅವೆರಡೂ ಮಾತಿನ ರೂಪಗಳಲ್ಲಿ ದೊರೆಯದೆ, ಕೆಳವರ್ಗದ ಜನರ ಭಾಷೆಯಲ್ಲಿ ವಿಶೇಷವಾಗಿ ದೊರೆಯುವಂತಹವು. ಹವ್ಯಕರು ನಿತ್ಯದ ಕೆಲಸ-ಕಾರ್ಯಗಳಲ್ಲಿ ಕೃಷಿಕಾರ್ಮಿಕರೊಂದಿಗೆ ಹೆಚ್ಚಿನ ಸಂಪರ್ಕ ಹೊಂದುತ್ತಾರೆ. ಅಂತೆಯೇ ಅವರೊಂದಿಗೆ ವ್ಯವಹರಿಸುವಾಗ ಹೆಚ್ಚಾಗಿ ಅವರವರ ಭಾಷೆಯನ್ನೇ ಅವರವರ ಜೊತೆಗೆ(ಸ್ಥಳೀಯರು ಮತ್ತು ಕುಂದಾಪುರದ ಕಡೆಯವರು) ಆಡುವುದನ್ನು ರೂಢಿಮಾಡಿಕೊಂಡಿರುತ್ತಾರೆ. ಅಂಥ ರೂಢಿಯಿಂದ ಹವ್ಯಕೇತರರ ಜೊತೆ ಮಾತನ್ನಾಡುವಾಗ ಕೆಲವೊಮ್ಮೆ ಆ ಶಬ್ದಗಳೂ, ಅಪರಿಗರಿವಿಲ್ಲದಂತೆ ಬಂದು ಬಿಡುತ್ತವೆ. ಅಂತಹದಕ್ಕೆ ಉತ್ತಮ ಉದಾಹರಣೆ, ಮೇಲಿನ 'ಕೊಡೂಕೂ' ಶಬ್ದ. ಹವ್ಯಕದಲ್ಲಿ ಇದು'ಕೊಡಲ್ಲೆ' ಅಥವಾ 'ಕೊಡೂಲೆ' ಎಂದಾಗುತ್ತದೆ. ಶಿಷ್ಟ ಕನ್ನಡದಲ್ಲಿ "ಕೊಡಲಿಕ್ಕೆ ಕೂಡ" ಅಥವಾ 'ಕೊಡಲೂ' ಎಂದಾಗಬೇಕು. ಇವಲ್ಲದೆ, ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಮತ್ತು ಹವ್ಯಕರಿಗೆ ವಿಶಿಷ್ಟವಾದ (ಅಥವಾ ೧೯ ನೇಯ ಶತಮಾನದ ಕನ್ನಡದಲ್ಲಿದ್ದು, ಈಗ ಶಿಷ್ಟ ಕನ್ನಡದಲ್ಲಿ ಪ್ರಚಲಿತವಿಲ್ಲದ) ಕೆಲವು ಶಬ್ದಗಳಿವೆ. ದುಂಬದಾರೆ (ತುಂಬುಧಾರೆ ?), ಮಾಣಿ (ಹುಡುಗ, ಮಗ) ಕೂಸು (ಹೆಣ್ಣು ಹುಡುಗಿ, ಮಗಳು), ತೋಡು (ವ್ಯವಸ್ಥೆ, ಮಾರ್ಗ) ದೊಡ್ಡೊಳ (ದೊಡ್ಡ ಕೋಣೆ) ರವಸ (ಚೆನ್ನಾಗಿ), ಅಜೋಯಂತ (ಕಷ್ಟಪಟ್ಟು), ತಲಪುಟಾ (ನಾಶ), ಮರೇಲಿ (ಆಶ್ರಯದಲ್ಲಿ) , ಕೈಪೇತು (ಮೋಸ), ಬಿಲ್ಯೋ (ಬಲ್ಲೆಯೋ). ಅಬ್ಬೆ (ತಾಯಿ), ಅಮ್ಮ (ವಿಧವೆ), ಮಂಞಾಣ್ಣೌ (ಮೊನ್ನೆ), ದಿಂಡು (ಶೋಭನ), ನಗನ ಪಟೆ (ಹಣದ ಪೆಟ್ಟಿಗೆ), ಕೊಟ್ಟೆಕೊನೆ (ಅಡಿಕೆ ವ್ಯವಸಾಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಶಬ್ದ) ಮುಂತಾದ ಶಬ್ದಗಳನ್ನು ಹೆಸರಿಸಬಹುದು. ಭಾಷಾವಾರು ಪ್ರಾಂತರಚನೆಯಾಗುವ ಮೊದಲು ಉತ್ತರ ಕನ್ನಡ ಜಿಲ್ಲೆಯು ಮುಂಬಯಿ ಇಲಾಖೆಗೆ ಸೇರಿತ್ತು. ಅದಕ್ಕೂ ಮುನ್ನ ಅಲ್ಲಿ ಮಹಾರಾಷ್ಟ್ರದ ಪೇಶ್ವೆಗಳೂ ವಿಜಾಪುರದ ಅದಿಲ್‌ಶಾಹಿಗಳೂ ಆಳಿದ್ದುಂಟು. ಆದುದರಿಂದ ಆಡಳಿತ ಮತ್ತಿತರ ಕಾರಣಗಳಿಂದ ಮರಾಠಿ, ಉರ್ದು, ಹಿಂದುಸ್ತಾನೀ ಶಬ್ದಗಳನ್ನು ನಾವು ಉತ್ತರ ಕನ್ನಡ ಜಿಲ್ಲೆಯ ಕನ್ನಡವಲ್ಲಿ, ಅದರಂತೆ ಹವ್ಯಕ ಕನ್ನಡವಲ್ಲಿಯೂ ಕಾಣಬಹುದು. ಇವಕ್ಕೆ ಉದಾಹರಣೆಯಾಗಿ ಪ್ರಸ್ತುತ

ನಾಟಕದಲ್ಲಿ ಕಂಡುಬರುವ ಅಂಥ ಕೆಲವು ಶಬ್ದಗಳನ್ನು ನೋಡಬಹುದು: ಪುಷ್ಕಳ (ಬೇಕಾದಷ್ಟು), ಶಿವಾಯ (ಹೊರತು), ತಾಕಾಪೂರ್ತಿ (ಮಜ್ಜಿಗೆ ಪೂರ್ತಿ), ವ್ಯಾದೆ (ಗಡುವು), ಕಬೂಲು (ಒಪ್ಪಿಗೆ), ಲಗ್ಯಾಸು, ಅಲ್ಯಾದಾ (ಬೇರೆ), ಫಜೀತಿ (ಕಷ್ಟ), ದಸ್ತೈವೋಜು, ಖಾತೆ. ಶಿಪಾಯಿ, ಮೊಕದ್ದಮೆ, ಶರಾ, ತಜವೀಜ (ಸಿದ್ಧತೆ), ರುಸುಮು (ಹಣ.) ಪಕೀಕತ್ತು (ಸಮಾಚಾರ), ರಾಸ್ತ (ಸರಿ), ಟೇವಣೆ (ಜಮಾ), ಕಾಗ್ತ, ಕಾದಗ (ಕಾಗದ), ವಗೈರೆ (ಇತ್ಯಾದಿ). ಆಂಗ್ಲ ಭಾಷೆಯ ಪ್ರಭಾವವೂ ಆಗ ತೊಡಗಿತ್ತು ಎನ್ನುವುದಕ್ಕೆ ಬೂಕು, ಪೊಲಿಸ್‌ನೋರು, ಶೆಷನ್ ಕೋರ್ಟು, ಸಮನ್ಸ, ರಿಜಿಸ್ತ್ರಿ ಮುಂತಾದ ಶಬ್ದಗಳು ಸಾಕ್ಷಿ.

ಹವ್ಯಕ ಭಾಷೆಯಲ್ಲಿ ಅನುನಾಸಿಕವೂ ಒಂದು ಧ್ವನಿಮಾ ಆಗಬಲ್ಲದು. ಪ್ರಸ್ತುತ ನಾಟಕದಲ್ಲಿಯೇ ಇದು ಅನುಭವಕ್ಕೆ ಬರುತ್ತದೆ. ಉದಾಹರಣೆಗೆ 'ಆ ಕೂಸ್ಯಾವುದೂ ಅಂಬ್ರಿ?' ಎನ್ನುವ ವಾಕ್ಯದಲ್ಲಿ ಆ ಎಂಬುದು ದರ್ಶಕ ಸರ್ವನಾಮವಾಗಿದೆ. ಅದೇ 'ಆ ಬೇಡಾ ಅಂದ್ರೆ ಕೇಳವ್ರೋರ್ಯಾರು ?' ಎಂಬುದರಲ್ಲಿ ಆ ಶಬ್ದದ ಅರ್ಥ **ನಾನು** ಎಂದಾಗುತ್ತದೆ. ಅಂದರೆ ಆ ಕಾರವನ್ನು ಅನುನಾಸಿಕಯುಕ್ತವಾಗಿ ಉಚ್ಚರಿಸಿದರೆ ಅದರ ಅರ್ಥ ಬದಲಾಗುತ್ತದೆ. ಇದರಂತೆ **ಅಂವ**–ಅವನು (ಪು ೬), **ಇಂವ**–ಇವನು (ಪು ೬), **ಅವ**–ಅವಳು (ಪು ೨೪), **ಇವ**–ಇವಳು (ಪು ೨೭) ಮುಂತಾದ ಶಬ್ದಗಳಲ್ಲಿ ಅನುನಾಸಿಕೀಕರಣ ಲಿಂಗಭೇದವನ್ನುಂಟು ಮಾಡಿರುವುದನ್ನು ನೋಡಬಹುದು.

ಹವ್ಯಕರಲ್ಲಿ ಗೌರವಸೂಚಕ ಬಹುವಚನದ ಬಳಕೆ ಕ್ವಚಿತ್ತು. ಕುಟುಂಬದಲ್ಲಿ ಗಂಡಸು, ತನಗೆ ಹೆಣ್ಣು ಕೊಟ್ಟ ಅತ್ತೆ, ಮಾವರೊಂದಿಗೆ ಮಾತ್ರ ಬಹುವಚನದಲ್ಲಿ ಮಾತನಾಡುತ್ತಾನೆ. ಇನ್ನು ಕುಟುಂಬದ ಹೊರಗೆ ಅಪರಿಚಿತರೊಂದಿಗೆ ಅಥವಾ ಸಂಬಂಧಿಕರಲ್ಲದವರೊಂದಿಗೆ ಮಾತನಾಡುವಾಗ ಅವರ ಅಂತಸ್ತನ್ನು ನೋಡಿ, (ಸಮಾನ ಅಥವಾ ಹೆಚ್ಚಿನ ಅಂತಸ್ತಿನವರೊಂದಿಗೆ), ಬಹುವಚನವನ್ನು ಉಪಯೋಗಿಸುವನು. ಪ್ರಸ್ತುತ ನಾಟಕದಲ್ಲಿ ಗಣೇಶಭಟ್ಟ ಇಗ್ಗಪ್ಪ ಹೆಗಡೆಯ ಕುಟುಂಬದವನೂ ಅಲ್ಲ, ಶಿವಭಟ್ಟನ ಕುಟುಂಬದವನೂ ಅಲ್ಲ. ಅಂತೆಯೇ ಹೊರಗಿನವನು. ಎಲ್ಲರೂ ಅವನೊಂದಿಗೆ ಬಹುವಚನದಲ್ಲಿ ಮಾತನಾಡುತ್ತಾರೆ. ಇದಕ್ಕೆ ಪ್ರತಿಯಾಗಿ ಅವನೂ ಬಹುವಚನದಲ್ಲೇ ಮಾತನಾಡಬೇಕು. ಆದರೆ ನಾಟಕದಲ್ಲಿ ಗಣೇಶಭಟ್ಟನದು ವಿಶಿಷ್ಟ ಪಾತ್ರ. ಅವನು 'ಉಳ್ಳವರೊಂದಿಗೆ' ಒಂದು ರೀತಿ ವರ್ತಿಸಿದರೆ 'ಇಲ್ಲದವರೊಂದಿಗೆ' ಮತ್ತೊಂದು ರೀತಿ ವರ್ತಿಸುತ್ತಾನೆ. ಇಗ್ಗಪ್ಪ ಹೆಗಡೆ, ವಾಸಪ್ಪ ಹೆಗಡೆಯವರನ್ನು ಬಹುವಚನದಲ್ಲಿ ಸಂಬೋಧಿಸಿದರೆ, ಶಿವಪ್ಪ ಭಟ್ಟನನ್ನು ಏಕವಚನದಲ್ಲಿ ಮಾತನಾಡಿಸುತ್ತಾನೆ. ಘಟ್ಟದ ಮೇಲೆ ತಿರುಗುವ ತಾನು ಹೆಚ್ಚಿನವನು, ಘಟ್ಟದ ಮೇಲಿನ ಅನೇಕ 'ಹೆಗಡೆಕ್ಕಳ' ಪರಿಚಯ ತನಗಿದೆ ಎಂಬ ಅಹಮಿಕೆ ಅವನಿಗಿದ್ದಿರಬಹುದು.

ಶಿವಪ್ಪ ತನ್ನ ಊರಿನವ ಎಂಬ ತಾತ್ಪರ್ಯವೂ ಇರಬಹುದು – ಒಟ್ಟಿನಲ್ಲಿ ಯಾರ್‍ಯಾ-ರೊಂದಿಗೆ ಹೇಗ್ಹೇಗೆ ಸಂಭಾಷಿಸುತ್ತಾನೆ ಎಂಬುದರ ಮೇಲಿಂದಲೂ ಗಣೇಶ ಭಟ್ಟನ ವ್ಯಕ್ತಿತ್ವವನ್ನು ಅರಿಯಲು ಸಾಧ್ಯವಿದೆ. ಮೇಲೆ ಹೇಳಿದ ಗೌರವ ಸೂಚಕ ಬಹು-ವಚನಕ್ಕೆ **ಲಿ**(ೀ) ಎನ್ನುವುದು ಪ್ರತ್ಯಯ. ವಾಸಪ್ಪ ಹೆಗಡೆ ಗಣೇಶಭಟ್ಟನೊಂದಿಗೆ ಮಾತನಾಡುವ ಸಂದರ್ಭದಲ್ಲೊಮ್ಮೆ 'ಇಷ್ಟೆಲ್ಲ ಶ್ರಮ ಪಟ್ಟದ್ದು ವ್ಯರ್ಥವೇ ಸರಿ-ಯಲೀ ?' ಎನ್ನುತ್ತಾನೆ. ಅದೇ ಏಕವಚನ ಪ್ರಯೋಗವಾಗಿದ್ದರೆ, **ಲಾ** (ಪುಲ್ಲಿಂಗ) ಅಥವಾ **ಲೇ** (ಸ್ತ್ರೀಲಿಂಗ) ಎಂಬ ಪ್ರತ್ಯಯ ಸೇರುತ್ತಿತ್ತು. ಇದೇ ರೀತಿ, 'ಹಾಗಾದರೆ ನೀವು ಹೇಳಿದ್ದೇ ಆತೂ ಅಂತಾತ**ಲೀ**,' "ಅಂತೂ ಚಪ್ಪರದ ಖರ್ಚು ನೋಡಿಕೆಂಡು ೨॥ ಸಾವಿರ ಕೊಡೋಯಂತ ನಾವು ಮಾತಾಡಿತ್ತ**ಲೀ**" ಮುಂತಾದ ವಾಕ್ಯಗಳನ್ನು ನೋಡಬಹುದು.

ಹವ್ಯಕ ಆಡುನುಡಿಯ ವೈಶಿಷ್ಟ್ಯಗಳನ್ನು ಹೇಳುವಾಗ ಹಳಗನ್ನಡದಲ್ಲಿ ಪ್ರಯೋಗದಲ್ಲಿದ್ದು, ಈಗ ಶಿಷ್ಟ ಕನ್ನಡದಲ್ಲಿ ಇಲ್ಲದ ಸಮಾವೇಶಕ, ಅಸಮಾವೇಶಕ ಸರ್ವನಾಮಗಳನ್ನು ಉಲ್ಲೇಖಿಸಬೇಕು. ಏಕೆಂದರೆ ಕನ್ನಡದ ಉಪಭಾಷೆಗಳಲ್ಲಿ ಹವ್ಯಕ ಕನ್ನಡ ಮಾತ್ರ ಅವನ್ನು ಕೆಲಮಟ್ಟಿಗೆ ಉಳಿಸಿಕೊಂಡಿವೆ: (ಅಲ್ಲಿಯೂ ಕೆಲಪ್ರದೇಶ ಗಳಲ್ಲಿ ಈಗೀಗ ಕಮ್ಮಿಯಾಗುತ್ತಿದೆ). ೧೯ನೆಯ ಶತಮಾನದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅದು ಸ್ಪಷ್ಟವಾಗಿಯೇ ಇತ್ತು ಎಂಬುವಕ್ಕೆ ರುಜುವಾತು ಪ್ರಸ್ತುತ ನಾಟಕದಲ್ಲಿ ದೊರೆಯುತ್ತದೆ. ಸಮಾವೇಶಕ ಸರ್ವನಾಮವೆಂದರೆ ಉತ್ತಮ ಪುರುಷ ಬಹುವಚನ ಸರ್ವನಾಮವನ್ನು ಉಪಯೋಗಿಸುವಾಗ ಎದುರಿಗಿದ್ದವರನ್ನು ಸೇರಿಸಿ ಕೊಂಡು ಹೇಳುವುದು. ಅವರನ್ನು ಬಿಟ್ಟು ಹೇಳಿದರೆ ಅದು ಅಸಮಾವೇಶಕ ಸರ್ವ ನಾಮವಾಗುತ್ತದೆ. ಈ ವ್ಯತ್ಯಾಸವನ್ನು ಹೊಸಗನ್ನಡ ಸರ್ವನಾಮ ಗುರುತಿಸು ವುದಿಲ್ಲ. ಹವ್ಯಕರಲ್ಲಿ **ಯಂಗ** (ಅಸಮಾವೇಶಕ) **ನಂಗ** ಅಥವಾ **ನಾವು** (ಸಮಾ ವೇಶಕ) ಎಂಬ ರೂಪಗಳಿವೆ. 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ'ದಲ್ಲಿ **ಯಂಗೋ** (ಪು. ೮, ೧೨), **ಯಂಗಳ** (ಪು ೨೦), **ಯಮ್ಮ** (ಪು. ೨. ೨೦), **ಯಮ್ಮಲ್ಲಿ** (**ಪು** ೨) ಮುಂತಾದ ಅಸಮಾವೇಶಕ ಸರ್ವನಾಮ ರೂಪಗಳ, **ನಾವು** (ಪು ೯, ೧೨, ೩೯), **ನಮ್ಮ** (ಪು ೩೯) ಇತ್ಯಾದಿ ಸಮಾವೇಶಕ ರೂಪಗಳ ಪ್ರಯೋ ಗಗಳಿವೆ.

ಹವ್ಯಕರು ಮಾತನಾಡುವಾಗ, ಪ್ರಶ್ನಾರ್ಥಕ ವಾಕ್ಯದ ಕೊನೆಗೆ **ಅಂಬೀ**, **ಬಿಲ್ಯ** (<ಬಲ್ಲಿಯೋ) ಮುಂತಾದವನ್ನು ಸೇರಿಸುವುದು ಹೆಚ್ಚು. ಪ್ರಸ್ತುತ ನಾಟ ಕದಲ್ಲಿ **ಅಂಬೀ**, **ಅಂಬೇ**, **ಅಂಬ್ರೀ** ಮುಂತಾದ ರೂಪಗಳು ವಿಶೇಷ ಪ್ರಮಾಣ ದಲ್ಲಿ ಬಳಕೆಯಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ ಒಂದು ಪ್ರಯೋ

ಗವನ್ನಿಲ್ಲಿ ಕೊಡಬಹುದು. 'ಇದಕ್ಕೇನು ಮಾಡೋ **ಅಂಬ್ರಿ** ?' (ಪು ೭). ಇದೇರೀತಿ **ಬಿಲ್ಯಾ** ಪ್ರಯೋಗವನ್ನು 'ತಂಗೀ ಸಾವಿತ್ರೀ ದೊಡ್ಡೋರಮನೆ ನಿನಗಕ್ಕು **ಬಿಲ್ಯೋ.**' (ಪು ೧೦) ಎಂಬ ವಾಕ್ಯದಲ್ಲಿ ನೋಡಬಹುದು. ಹವ್ಯಕ ಆಡುನುಡಿಯ ಶಬ್ದಗಳಲ್ಲಿ ಮತ್ತು ಅವುಗಳ ಉಚ್ಚಾರಗಳಲ್ಲಿ ವೈಶಿಷ್ಟ್ಯವಿರುವಂತೆ ನುಡಿಗಟ್ಟುಗಳ ಬಳಕೆಯಲ್ಲಿಯೂ ಒಂದು ವಿಶೇಷತೆ ಇದೆ. ಕನ್ನಡದ ಇತರ ಆಡುಮಾತುಗಳಂತೆ ಹವ್ಯಕ ನುಡಿಯೂ ಅಷ್ಟೇ ದೇಶೀಯ ಸೊಬಗಿನಿಂದ ಕೂಡಿದೆ ಎಂಬುದನ್ನು ಈ ಅಂಶವೂ ಸ್ಪಷ್ಟಪಡಿಸುತ್ತದೆ. ಪ್ರಸ್ತುತ ನಾಟಕದಲ್ಲಿಯೂ ಇಂಥ ನುಡಿಗಟ್ಟುಗಳಿಗೆ ಹೇರಳ ಉದಾಹರಣೆಗಳು ದೊರೆಯುತ್ತವೆ. ಕೆಲವೊಮ್ಮೆ ಸಂಭಾಷಣೆ ನುಡಿಗಟ್ಟುಗಳಿಂದಲೇ ಮುಂದುವರೆದದ್ದುಂಟು. ಪು ೩-೪ರಲ್ಲಿ ಗಣೇಶ ಭಟ್ಟ... ಈಗ ಸುಮಾರು **ನಿಂಬೇಮರ ದಡತಕ್ಕೆ ಬಂಜು, ಹಣಕ್ಕೇನ್ ಬಡ್ಡಿ ಬೀಳ್ವ ಹಾಗಿಲ್ಲೇ.**'

ವಾಸ: ಹಾಗಾದ್ರೆ ಅದರ ಇತ್ತಲಾಗಿ **ತಿರಗಸೂ ಯತ್ನಾ ಮಾಡೀ** ನೋಣ್ರೋ, ನಿಮಗೂ ಇವರಲ್ಲಿ ಏನಾದ್ರೂ **ಮರ್ಯಾದಿ ಶಿಗೋ** ಹಾಗೆ ಮಾಡ್ವೋ, ಏನಂಬ್ರೀ ?

ಗಣೇ:...... ಹೋದ ವರಷ ಯಲ್ಲಾಪುರದ ಕಡೆಯೋರೆಲ್ಲಾ ಬಂದು ೨ ಸಾವಿರ ರೂಪ್ಯಾ ಪರಿಯಂತ್ರ **ಹಾದು ಹೋಜೋ.**

ವಾಸ:...... ಬಂದದ್ದು ಲಗ್ನ ಮಾಸಾ, ಮತ್ಯಾರಾದ್ರೂ **ಗಂಟು ಬಿದ್ದು ತಿರಿಗ್ಸಿ ಹೊಡದ್ರೂ ಹೊಡದೋ** ಅದ್ರಿಂದ ಬೇಗ ಹೊರಡೋ–ಹೀಗೆ ಸಂಭಾಷಣೆ ಮುಂದುವರೆದು ಇಗ್ಗಪ್ಪ ಹೆಗಡೆಗೊಂದು ಹೆಣ್ಣನ್ನು ಗಂಟುಹಾಕಿದುದನ್ನು ಮುಂದೆ ಕಾಣುತ್ತೇವೆ. ನಾಟಕದಲ್ಲಿ ಬರುವ ಇನ್ನೊಂದೆರಡು ನುಡಿಗಟ್ಟುಗಳನ್ನು ನೋಡೋಣ:

ಬದುಕಿನ ಲೆಖ್ಖ : ಮೂರುಸಾವಿರ ಅಂದ್ರೆ ಯಲ್ಲ್ಯಾಗಾತ್ರಾ ? ಏನ್ ಬದಕೀಗೆ ಲೆಖ್ಖ ಇದ್ದೋ ಇಲ್ಯೋ? (ಪು ೬).

ಪ್ರಯೋಜನ ಹಾಕು : ಅವರೀಗೂ ಏನಾದ್ರೂ ಮಂದೈವತ್ತರೂಪ್ಯಾನ ಪ್ರಯೋಜನಾ ಕೈಯಲ್ಲಿ ಹಾಕಿ ಬಿಡವ್ರೋ? (ಪು ೮)

ತಿಕ್ಕಿ ತಿಕ್ಕಿ ಹದಮಾಡು : ಅಂವನ್ನ ತಿಕ್ಕಿ ತಿಕ್ಕಿ ಹದ ಮಾಡಬೇಕಾದ್ರೆ ಇಷ್ಟೊತ್ತಾತು. (ಪು ೧೨).

ಕೈಸೇತು ಹಾಕು :) ಈಗ ಸುಮ್ಮಂಗೆ ಕೊತಕೊಂಡ್ರೆ ನಾಳೀಗೆ ರಾಯರ
ತ್ವಂಚೋಹಂಚು :) ಮನೆಯೋರು ಕೈಸೇತು ಹಾಕಿಬಿಟ್ರೋ ಅಂದ್ರೆ
) ತ್ವಂಚೋ ಹಂಚ ಆಗಿ ಹೋಗತು (ಪು ೩೦).

ಸೊನ್ನೇ ಸುತ್ತು : ಅವರೀಗ್ ಸೊನ್ನೇ ಸುತ್ತ್ಯಾಗತಾ ? (ಪು ೧೨) ಇತ್ಯಾದಿ.

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನದಲ್ಲಿ ಬರುವ ವ್ಯಕ್ತಿನಾಮಗಳಲ್ಲಿ ಕೆಲವನ್ನು ಗಮನಿಸಬಹುದು; ಬಹುತೇಕ ಅವೆಲ್ಲ ಮೂಲದಲ್ಲಿ ದೇವರ ಹೆಸರುಗಳಾಗಿವೆ.

ವಿಘ್ನೇಶ್ವರ > ಇಗ್ಗ + ಅಪ್ಪ—ಇಗ್ಗಪ್ಪ

ವಾಸುದೇವ > ವಾಸ + ಅಪ್ಪ—ವಾಸಪ್ಪ

ವಿಷ್ಣು > ಬಿಷ್ಟ + ಅಪ್ಪ—ಬಿಷ್ಟಪ್ಪ

ವೆಂಕಟರಮಣ > ಯೆಂಕ + ಮಾಣಿ—ಯೆಂಕಮಾಣಿ

ಶಂಕರ > ಸಂಕರ > ಸಂಕ + ಅಪ್ಪ—ಸಂಕಪ್ಪ ?

ಹೀಗೆ, ಸಂಸ್ಕೃತ ಹೆಸರುಗಳನ್ನು ಕನ್ನಡದ ಜಾಯಮಾನಕ್ಕೆ ತಿರುಗಿಸಿಕೊಂಡಿರುವುದನ್ನು ನೋಡಬಹುದು. ಜೊತೆಗ ಶಿವಪ್ಪ, ಅಣ್ಣಪ್ಪ, ಕೇಶಪ್ಪ, ಕಾಶಪ್ಪ, ಸುಬ್ಬಪ್ಪ ಮುಂತಾದ ಹೆಸರುಗಳಲ್ಲೂ ಅಪ್ಪ ಎಂಬ 'ಉತ್ತರ ಪದ' ಸೇರಿಕೊಂಡಿರುವುದರಿಂದ ಅದು ಪುರುಷರನ್ನು ಸಂಬೋಧಿಸುವ ಶಬ್ದವೆನ್ನಬಹುದು. **'ಯೆಂಕಮಾಣಿ'**ಯಲ್ಲಿ **ಮಾಣಿ** (ಹುಡುಗ, ಮಗ) ಎಂಬ ಶಬ್ದ ಸಾಮಾನ್ಯವಾಗಿ ಮನೆ ಜನರು ಕರೆಯುವ ಹೆಸರಾಗಿದ್ದು ಊರಿಗೆಲ್ಲಾ ಅವನು **ಮಾಣಿಯೇ** ಆಗಿರುವುದು ಊರ ಜೊತೆಗಿನ ಅವನ ಸಲಿಗೆಯ ಸಂಬಂಧವನ್ನು ಸೂಚಿಸುತ್ತವೆ. ಅದರಂತೆ ಕಾಶಿಮಂಜಭಟ್ಟ ಎನ್ನುವಾಗ ಮಂಜಭಟ್ಟ ಎನ್ನುವವನೊಬ್ಬ ಆಗಾಗ ಕಾಶಿಗೆ ಯಾತ್ರಾರ್ಥಿಗಳನ್ನು ಕರೆದುಕೊಂಡು ಹೋಗಿ ಬರುವವನಾಗಿರಬೇಕು ದೇವಸ್ಥಾನದಲ್ಲಿ ದೇವರ ಪೂಜೆ ಮಾಡುವ ಭಟ್ಟರೆ 'ದೇವಸ್ಥಾನ ಭಟ್ರು'. ಗಪ್ಪಮ್ಮ ಎಂಬುದು "ಗಣಪತಿ" ಹೆಸರಿನ ಸ್ತ್ರೀಲಿಂಗ ರೂಪ. ಸುಬ್ಬಮ್ಮ, ತಿಮ್ಮಮ್ಮ, ತಿಪ್ಪಮ್ಮ ಇವೆಲ್ಲ ಹವ್ಯಕರಲ್ಲಿ ಸ್ತ್ರೀಯರ ಸಾಮಾನ್ಯ ಹೆಸರುಗಳೇ. ಗರ್ಭಿಣಿಯ ತನಿಖೆಗಾಗಿ ಮಠದಿಂದ ನೇಮಿಸಲ್ಪಟ್ಟವನು, 'ಆಚಾರ್ಯ ಭಟ್ಟ.' ಅವನು ಜನರ ಬಾಯಲ್ಲಿ 'ಆಚಾರ ಭಟ್ಟ'ನಾಗಿದ್ದಾನೆ. ಜೊತೆಗೆ ಲಂಚ ತಿಂದು 'ಅನಾಚಾರ ಭಟ್ಟ' ನಾಗುತ್ತಾನೆ.

ಇನ್ನು, ನಾಟಕದಲ್ಲಿ ಉಕ್ತವಾದ ಊರುಗಳ ಹೆಸರುಗಳು ಕಾಲ್ಪನಿಕವಾದವು ಗಳಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಆ ಹೆಸರಿನ ಊರುಗಳನ್ನು ಇಂದೂ ನಾವು ಗುರುತಿಸಬಹುದು. ಅವುಗಳನ್ನು ಪರಿಶೀಲಿಸಿದರೆ, ಅವೆಲ್ಲವೂ ಮಲೆನಾಡಿನ ವಿಶಿಷ್ಟ ಭೌಗೋಳಿಕ, ನೈಸರ್ಗಿಕ ಪರಿಸರವನ್ನು ಸೂಚಿಸುತ್ತಿರುವದು ಕಂಡುಬರುತ್ತದೆ. ಉದಾಹರಣೆಗೆ, 'ಮುಂಡಿಗೇ**ಸರ**', 'ಅಳೀ**ಸರು**', 'ಬಾಳೇ**ಸರು**' ಇವುಗಳಲ್ಲಿರುವ ಎರಡನೆಯ ಆಕೃತಿಮಾ **ಸರ** ತಗ್ಗಿನಲ್ಲಿರುವ ತೋಟ ಅಥವಾ ಮರಗಳ ಸಾಲನ್ನು (ಗುಂಪನ್ನು) ಸೂಚಿಸುತ್ತದೆ. 'ಹಂದಿ **ಗೋಣ**' ದಲ್ಲಿರುವ–**ಗೋಣ** ಆಕೃತಿಮಾ, ಕೊಳ>ಕೊಣ>ಕೋಣ>ಗೋಣವಾಗಿ ಪರಿವರ್ತನೆ ಹೊಂದಿರಬಹುದು. ಒಟ್ಟಿನಲ್ಲಿ ಅದು ನೀರಿನ ಆಶ್ರಯದ ಸೂಚಕ ತಂಪು ಪ್ರದೇಶ. ಇದೇ ರೀತಿಯ ಅರ್ಥವನ್ನು 'ಶಿರೇ**ಕುಳಿ**'. 'ಹೊಸ**ಕುಳಿ**'ಗಳಲ್ಲಿರುವ **ಕುಳಿ** ಸೂಚಿಸುತ್ತವೆ. 'ಕುಳಿ' ಎಂದರೆ 'ಹೊಂಡ', 'ತಗ್ಗು' ಎಂಬ ಅರ್ಥವಿದ್ದು, ನೀರಿನ ಸೆಲೆಯನ್ನೇ ಅದು ಹೊಂದಿದೆ. 'ಭೆತ್ತಗೇರಿ' ಎಂಬ ಊರಿನ ಹೆಸರಿನಲ್ಲಿ ಕೇರಿ>ಗೇರಿ ಯಾಗಿರಬಹುದು ಅಥವಾ ಕೆರೆ>ಗೇರೆ>ಗೇರಿ(ಅಜ್ಞಾನದಿಂದ) ಯಾಗಿರಲೂ ಬಹುದು. 'ನೀರತೋಟ' ಹೆಸರೇ ಸೂಚಿಸುವಂತೆ, ನೀರಿನ ವಿಪುಲಾಶ್ರಯವನ್ನು ಹೊಂದಿದ ತೋಟದ ಪ್ರದೇಶ. 'ಅಜ್ಜಿಬಳ್ಳು'ವಿನಲ್ಲಿ '—**ಬಳ್ಳು**' ಶಬ್ದಕ್ಕೆ ಮೂಲದಲ್ಲಿ 'ಪಾಳ' ಅಥವಾ 'ಬಾಳ' ಎಂದಿದ್ದು 'ವ್ಯವಸಾಯ ಯೋಗ್ಯ ಪ್ರದೇಶ' ಅಥವಾ 'ದತ್ತಿಯಾಗಿ ದೊರೆತ ಹೊಲ' ಎಂಬ ಅರ್ಥವಿದ್ದಿರಬಹುದು. ಅಥವಾ 'ಬೋಳುಂಜಿ' ಎಂದರೆ 'ನದೀ ಮಾರ್ಗದಲ್ಲೇ ಇರುವ ಕೃಷಿಗೆ ಯೋಗ್ಯವಾದ ಸ್ಥಳ' ಎಂಬ ಅರ್ಥವಿದೆ.[೧೪] ಅದೇ ಪಲ್ಲಟಗೊಂಡ, ಅಂಜಿ+ ಬೊಳ್ ಆಗಿ, ಅಂಜಿಬೊಳ>ಅಜ್ಜಿಬೊಳ್>ಅಜ್ಜಿಬೊಳ್>ಅಜ್ಜಿಬಳ್ಳು ಆಗಲು ಸಾಧ್ಯವಿದೆ. ಈ ಎರಡನೆಯ ಅರ್ಥವೇ ಮೂಲದಲ್ಲಿರುವ ಸಾಧ್ಯತೆ ಹೆಚ್ಚು. 'ಮಡಗದ್ದೆ'ಯಲ್ಲಿರುವ –**ಗದ್ದೆ** ಆಕೃತಿಮಾ ಅನೇಕ ಹಳ್ಳಿಗಳ ಹೆಸರುಗಳಲ್ಲಿ ಕಂಡು ಬರುತ್ತದೆ. **ಮಡ** ಪೂರ್ವ ಆಕೃತಿಮಾ, **ಮಡುವು** ಶಬ್ದದ ಸಂಕ್ಷಿಪ್ತರೂಪವಾಗಿರಬೇಕು. 'ಶಿರ್ಸಿ' ಊರಿಗೆ ಮೊದಲು 'ಸಿರಸಿ','ಸಿರಿಸೆ' ಎಂಬ ರೂಪವಿದ್ದುದು ಶಾಸನದಿಂದ ತಿಳಿದು ಬರುತ್ತದೆ[೧೫]. ಇಲ್ಲಿ'–**ಸೆ** ಎಂಬುದು ಒಂದು ಪ್ರತ್ಯಯ. ಇದರ ಮೂಲ ಪದವೇನು ಅಥವಾ ಅರ್ಥವೇನು ಎಂಬುದು ಸ್ಪಷ್ಟವಿಲ್ಲ.[೧೬] 'ಬಿಸ್ಲ**ಕೊಪ್ಪ**' ದಲ್ಲಿ –**ಕೊಪ್ಪ** ಎಂಬ ಆಕೃತಿಮಾ ಕರ್ನಾಟಕದಲ್ಲಿ ಅನೇಕ ಊರುಗಳ ಹೆಸರುಗಳಲ್ಲಿ ಕಂಡುಬರುತ್ತಿದ್ದು, ಗುಂಪಾಗಿ ನೆಲೆಸಿರುವ ಒಂದು ಹಳ್ಳಿ ಅಥವಾ ಕೇರಿ ಎಂಬ ಅರ್ಥ ಹೊಂದಿದೆ. 'ಕಾರವಾರ'ದಲ್ಲಿರುವ 'ವಾಡಾ' (ಮರಾಠಿ ಮೂಲ)> ವಾರ'ವಾಗಿದೆ. ಪೂರ್ವಪದ **ಕಾರ** ಜಲಸಂಬಂಧವನ್ನು ಸೂಚಿಸುತ್ತದೆ. ಆದುದರಿಂದ ಸಮುದ್ರತೀರದಲ್ಲಿರುವ 'ಕಾರವಾರ' ಜಲಪ್ರದೇಶವನ್ನು ನಿರ್ದೇಶಿಸುತ್ತದೆ ಎನ್ನಬಹುದು. ಈ ಎಲ್ಲ ಊರುಗಳ ಹೆಸರುಗಳನ್ನು ಐತಿಹಾಸಿಕವಾಗಿ, ಶಾಸನ

ಸ್ಥಳ ಪುರಾಣಗಳ ನೆರವಿನಿಂದ ಅಧ್ಯಯನ ಮಾಡಿದಲ್ಲಿ ಇನ್ನೂ ಸ್ವಾರಸ್ಯಕರವಾದ ವಿಷಯಗಳು ಬೆಳಕಿಗೆ ಬರಬಹುದು

ಪ್ರಸ್ತುತ ನಾಟಕದ ಕರ್ತೃವಿಗೆ ಸಂಸ್ಕೃತ ಭಾಷೆಯ ಜ್ಞಾನವಿರುವುದು ಅವರು ಬಳಸಿರುವ ಸಂಸ್ಕೃತ ಕನ್ನಡ ಶಬ್ದಗಳಿಂದ ಮತ್ತು ಕನ್ನಡ ವಾಕ್ಯ ರಚನಾ ವಿಧಾನಗಳಿಂದ ತಿಳಿದುಬರುತ್ತದೆ. ಕಿಂಬಹುನಾ (ಪ್ರ ೪೪), ಧನಾಶಾ (ಪ್ರ ೪೫), ಸಭಾ (ಪ್ರ ೪೭), ಧೃಷ್ಟೋತ್ಪತ್ತಿ (ಪ್ರ ೪೩), ದುರ್ವಾಲಿಕ (ಪ್ರ ೪೩), ದ್ವಾರಾ, (ಪ್ರ ೪೬), ತಿಷ್ಠೋಗತಿ (ಪ್ರ ೧೧), ಯಥೇಷ್ಟ (ಪ್ರ ೧೦), ಅಮೇಧ್ಯ (ಪ್ರ ೩೮) ಮುಂತಾಗಿ ಸಂಸ್ಕೃತ ಶಬ್ದಗಳನ್ನು ಹೆಸರಿಸಬಹುದು. ನಾಟಕದಲ್ಲಿ ಬಹಳಷ್ಟು ಶಬ್ದಗಳಲ್ಲಿ ದೀರ್ಘ ಕಂಡುಬರುತ್ತಿದ್ದು, ಅದು ಹವ್ಯಕ ಆಡುನುಡಿಯನ್ನು ಬರವಣಿಗೆಗೆ ಇಳಿಸಿದ್ದರ ಫಲವೆಂದು ಹೇಳಬಹುದಾದರೂ, ಕೆಲವೆಡೆ ಸಂಸ್ಕೃತದ ದೀರ್ಘ ಪ್ರಭಾವವಿದೆಯೆಂದು ಹೇಳಬೇಕು. ಜೊತೆಗೆ, " ಈಗ ಸಂಬಂಧತ್ವ ವಿದ್ಯಮಾನಗಳ ಕಡೆಗೆ ದೃಷ್ಟಿಕೊಟ್ಟು ಸೂಕ್ಷ್ಮ ವಿಚಾರ ಮಾಡಿನೋಡಿದರೆ, ಇವಳು ಧರ್ಮಭೀರುತನದಿಂದಲೂ ಪರರ ದುರ್ಬೋಧನೆಯಿಂದಲೂ ಕೂಡಾ ಈ ಕೃತ್ಯವನ್ನು ಮಾಡಿರುತ್ತಾಳೆ." ಎಂಬಂಥ (ಆಕಾಲದ) ಶಿಷ್ಟಕನ್ನಡದ ವಾಕ್ಯಗಳನ್ನೂ ಗಮನಿಸಬಹುದು.

ಲಿಪಿ ಬಳಕೆಯ ದೃಷ್ಟಿಯಿಂದಲೂ ಈ ನಾಟಕದಲ್ಲಿ ಕೆಲವು ವೈಶಿಷ್ಟ್ಯಗಳಿವೆ. ಹವ್ಯಕ ಭಾಷೆಯನ್ನು ತದ್ವತ್ತಾಗಿ ಲಿಪಿಗಿಳಿಸುವುದು ಕಷ್ಟದ ಕೆಲಸ. ಆಡುಮಾತಾದರಿಂದ ದೀರ್ಘ, ಒತ್ತಕ್ಷರ, ಅನುನಾಸಿಕಗಳೂ ಹೆಚ್ಚು. ಕೆಲವೆಡೆ ಆ (ಒ) ಮತ್ತು ಯಕಾರಗಳನ್ನು ಸೇರಿಸಿ, ಒತ್ತಕ್ಷರ ರೂಪದಲ್ಲಿ ಬರೆಯಲಾಗಿದೆ. ಉದಾಹರಣೆಗೆ, **ರೂಪ್ಯಾ** (ಪ್ರ ೫), **ರ್‍ಯಾರು** (ಪ್ರ ೫), ಶಿ**ವ್ಯಾ** (ಪ್ರ ೨೭), **ಹ್ಯೊದು** (ಪ್ರ ೬), ಬೇ**ಕ್ಯಾ**ದ್ರು (ಪ್ರ ೨೩), ಬೇ**ಡ್ಯಾ**ದು (ಪ್ರ ೨೧) ಇತ್ಯಾದಿ

ಅನುನಾಸಿಕ ಆಕಾರವನ್ನು ಆ^0 ಎಂಬ ರೀತಿಯಲ್ಲಿ ಬರೆಯಲಾಗಿದೆ. ಕೆಲವೆಡೆ ಅನುನಾಸಿಕ ದ್ವಿತ್ವದ ಬದಲು ಅನುಸ್ವಾರ ಮತ್ತು ಅನುನಾಸಿಕಗಳನ್ನು ಕೂಡಿಸಿ ಬರೆಯಲಾಗಿದೆ. ಉದಾಹರಣೆಗೆ, ದುಜ್ಜ**ಂಣ** (ಪ್ರ ೧), **ಹೆಂಣೀಗೆ** (ಪ್ರ ೭) ಸುಂಣ (ಪ್ರ ೭), ಇತ್ಯಾದಿ. ಮೂಲಪ್ರತಿಯಲ್ಲಿ ಅಕ್ಷರಗಳು ಸುಮಾರು ೧೪ ಪಾಯಿಂಟ ಗಾತ್ರದಲ್ಲಿದ್ದು ಸುಂದರವಾಗಿವೆ ಎನ್ನಬಹುದು. ಕನ್ನಡ ಕೃತಿಗಳ ಮುದ್ರಣಕ್ಕಾಗಿಯೇ ಅಕ್ಕಸಾಲಿಗರಿಂದ ಮಾಡಿಸಿಕೊಂಡ ಈ ಅಕ್ಷರಗಳಲ್ಲಿ ಕೆಲವು ಒತ್ತಕ್ಷರಗಳು, ಅರ್ಧಾಕ್ಷರಗಳು ಚಿಹ್ನೆಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಮುಖಪುಟದಲ್ಲಿ ವಿಶ್ವಕರ್ಮಿಗಳ ಕುಸುರಿ ಕೆಲಸದ ಅಂಚುಕಟ್ಟಿ ಹೂಬಳ್ಳಿಯನ್ನು ಸೇರಿಸಿದ್ದಾರೆ ಮುಖಪುಟದ ಕೆಳಭಾಗದಲ್ಲಿ ಎಡಗಡೆ (**ಕ್ರಯ ೨ ಆಣೆ**) ಮತ್ತು ಬಲಗಡೆಯಲ್ಲಿ (**ಟ. ಖ. ೬ ಪೈ**) ಎಂದೂ ಟಪಾಲು ಖರ್ಚನ್ನು ಬರೆಯಲಾಗಿದೆ. ನಾಟಕದಲ್ಲಿ ಮಾತಿನ ನಡುವೆ ನಿಲುಗಡೆ ಅವಶ್ಯವೆಂದು ಕಂಡುಬಂದಲ್ಲಿ * ಈ ಚಿಹ್ನೆಯನ್ನು ಉಪಯೋಗಿ

ಸಲಾಗಿದೆ. ಕೆಲವೊಮ್ಮೆ ಹೇಳಬೇಕಾದ ವಾಕ್ಯವನ್ನೇ ಅರ್ಧ ಹೇಳಿ, ದೀರ್ಘ ನಿಲುಗಡೆಯನ್ನು ಸೂಚಿಸಲಾಗಿದೆ. ಇದರಿಂದ ಹೇಳುವುದಕ್ಕಿಂತ ಹೇಳದೇ ಇದ್ದುದೇ ಹೆಚ್ಚು ಪರಿಣಾಮಕಾರಿಯೆನಿಸುತ್ತದೆ. ಉದಾಹರಣೆಗೆ ಮುಖ್ಯ ಈ ರಂಡೇ ಕಾಲದಲ್ಲಿ ಸುಮ್ಮನೆ ಹಾಳಪ್ಪ ಕಾಲಿ ಬಂದದ್ದೂ, ಇವಳದ್' * * * * (ಪು ೨೬).

ಈ ನಾಟಕದಲ್ಲಿ ತಾರ್ಕಿಕವಾದ ದೋಷವೆಂದು ಹೇಳಲಾಗದಷ್ಟು ಒಂದೆರಡು ಚಿಕ್ಕ ನ್ಯೂನತೆಗಳಿವೆ. ಪು. ೩೭-೩೮ ರಲ್ಲಿ ವಾಸಪ್ಪ ಹೆಗಡೆಯ ಜೊತೆಗೆ **ನಂಜುಂಡ ಹೆಗಡೆಯನ್ನು** (ವಾಸಪ್ಪ ಹೆಗಡೆಯ ಹೆಂಡತಿಯ ತಮ್ಮ) ಪೋಲೀಸರು ಕೋಳ ಹಾಕಿ ಕರೆದುಕೊಂಡು ಹೋದರೆಂದು ಹೇಳಲಾಗಿದೆ. ಪು ೪೧ ರಲ್ಲಿ ವಾಸಪ್ಪ ಹೆಗಡೇಗೆ ಗರ್ಭಖೂನಿ ಪ್ರಕರಣದಲ್ಲಿ ಸಹಾಯ ಮಾಡಿದವನು ಅವನ ಭಾವ **ಹಿರಣ್ಯಪ್ಪ** ಎಂದಿದೆ. ಕೊನೆಯಲ್ಲಿ ನ್ಯಾಯಾಧೀಶರು ಶಿಕ್ಷೆ ನೀಡುವುದು **ನಂಜುಂಡ ಹೆಗಡೆಗೆ** (ಪು ೪೭). ಆದುದರಿಂದ ಮಧ್ಯೆ ಹಿರಣ್ಯಪ್ಪನ ಹೆಸರು ತಪ್ಪಾಗಿ ಬಂದಿದೆ ಎಂದೇ ಹೇಳಬೇಕು. ಎರಡನೆಯದು, ವಾಸಪ್ಪ ಹೆಗಡೆಗೆ ಇಗ್ಗಪ್ಪ ಹೆಗಡೆ ಮರಣಹೊಂದಿದ ಸುದ್ದಿಯನ್ನು ತಿಳಿಸಲು ಬಂದವನು ತಾನು ಇಗ್ಗಪ್ಪ ಹೆಗಡೆಯವರಲ್ಲಿ ಕೆಲಸ ಮಾಡುವ ಆಳು ಎಂದು ತನ್ನ ಪರಿಚಯ ಹೇಳಿಕೊಳ್ಳುತ್ತಾನೆ. ಅವರ ಮುಂದೆ ಸತ್ತವರು ಯಾರು ? ಎಂದು ಕೇಳಿದಾಗ, ಅವರ ಹೆಸರು ನೆನಪಾಗದೇ ತಲೆತುರಿಸಿಕೊಳ್ಳುತ್ತಾನೆ. ಸ್ವಲ್ಪ ಹೊತ್ತು ಆಲೋಚನೆ ಮಾಡಿ ಇಗ್ಗಪ್ಪ ಹೆಗಡೆಯ ಹೆಸರನ್ನು ಹೇಳುತ್ತಾನೆ (ಪು ೨೯). ಇದು ಆಳಿಗೆ ಸಹಜವಾದ್ದೋ ಅಥವಾ ಲೇಖಕರ ದೋಷವೋ ತಿಳಿಯದು.

ಮೊದಲನೆಯ ಮುದ್ರಣದಲ್ಲಿ ಹೀಗಾದರೆ, ಎರಡನೆಯ ಮುದ್ರಣದಲ್ಲಿ ಮೂಲದಲ್ಲಿ ಕೆಲವು ವಾಕ್ಯಗಳನ್ನು ಕೈಬಿಡಲಾಗಿದೆ. ಮೂಲಪ್ರತಿಯ ಪುಟ ೧೮ರಲ್ಲಿ 'ಸಾವಿ: ಅಂತಾ ಇದುವರೇಗೆ ಮಳ್ಳು ಒಡದಿತ್ತಿಲ್ಲೇ. ಈಗ ಅದಕ್ಕೂ ಶುರುವಾದೂ ಅಂತ ಕಾಣ್ತು. (ಗಂಡನ ಕಡೆಗೆ ನೋಡಿ) ಇಂಥಾ ಅಪಶಬ್ದ ಹೇಳೂದಕ್ಕೆ ದೇವರು ನಿಂಗೋಕ್ಕೆ ಹ್ಯಾಗೆ ಬುದ್ಧೀ ಕೊಟ್ಟಾ ಹೇಳಿ ? **ಇದುವರೇಗೆ ನಿಂಗೋ ಕೋಣೇಲಿ ಮಲಗದ್ದೇ ಇಲ್ಲಾ ?**

ಇಗ್ಗ : ಭಾವಾ ಆ ಕೋಣೆಗೆ ಹೋಯದನಿಲ್ಲೇ ಅಂತ ಹೇಳತನಿಲ್ಲೇ: ದಿಂಡಾಗಿ ತುಸಾ ದಿವಸ ಕೋಣೇಲೇ ಮಲೀಕತ್ತಿದ್ದೇ. ಆದ್ರೂ ಯನ್ನಲ್ಲೇನಾ ತಾಕತ್ತಿದ್ದಿತ್ತಿಲ್ಲೇ. ಹಣಾ ಕೊಟ್ಟು ಮದ್ವೆಯಾದ ಕಿಚ್ಚೀಗೆ ಮೈಮುಟ್ಟಿಕೊಂಡು ಮಲಗತಿದ್ದೇ ಶಿವಾಯ್ ಮತ್ತೇನಾದ್ರೂ ಇದ್ರೇ ನೀ ಇಟ್ಕಾಸೆ ಹೋಗ್.

ವಾಸ : 'ಸಾವಿತ್ರೀ'ಅಂದ ಸುಕಬದಾನ ಹಲಬತಾ : ನೀ ಸುಮ್ಮನಿರು. ಮರುಮುದ್ರಣದಲ್ಲಿ (ಪು. ೨೭ ರಲ್ಲಿ) ದಪ್ಪ ಅಕ್ಷರಗಳ ಈ ವಾಕ್ಯಗಳು ಮಾಯ

ವಾಗಿವೆ. ಲೇಖಕರಿಗೇ ಅಂದಿನ ಕಾಲದಲ್ಲಿ ಬಾರದ ಅಳುಕು? ಮರುಮುದ್ರಣದ ಪ್ರಕಾಶಕರಿಗೆ ಯಾಕೆ ಬಂತೋ ತಿಳಿಯದು. ಬಾಲವಿವಾಹ, ವಿಷಮ ದಾಂಪತ್ಯಗಳು ಅನೇಕ ದುರಂತಗಳಿಗೆ ಎಡೆಮಾಡಿಕೊಟ್ಟಿರುವುದಕ್ಕೆ ಮುಖ್ಯ ಆಂತರಿಕ ಕಾರಣವನ್ನು ಮೇಲಿನ ನೈಜ ಸಂಭಾಷಣೆ ತೆರೆದು ತೋರಿಸುತ್ತದೆ.

ಈ ನಾಟಕದಿಂದ ಹವ್ಯಕ ಸಂಸ್ಕೃತಿಯನ್ನು ಕುರಿತು ಕೆಲವು ವಿಷಯಗಳು ತಿಳಿದು ಬರುತ್ತವೆ. ಸಾಮಾನ್ಯವಾಗಿ ಯಾರನ್ನಾದರೂ ಮಾತನಾಡಿಸುವ ಮೊದಲು ಅವರ ಲಕ್ಷ್ಯ ತಮ್ಮತ್ತ ಸೆಳೆಯುವ ಉದ್ದೇಶದಿಂದ ಮೊದಲು ಆ ವ್ಯಕ್ತಿಯ ಹೆಸರು (ಕೆಲವೊಮ್ಮೆ ಸಂಬಂಧ ವಾಚಕ ಶಬ್ದವನ್ನೂ ಸೇರಿಸಿ), ಅವರ ಮುಂದೆ **ಅಂದೀ** ಎಂಬ ಪದ ಸೇರಿಸುವುದು ಕಂಡುಬರುತ್ತದೆ. ಪು. ೧೩ ರಲ್ಲಿ ವಾಸಪ್ಪ ಹೆಗಡೆ, ಗಣೇಶಭಟ್ಟನೊಂದಿಗೆ ಮಾತನ್ನು ಇನ್ನೇನು ಪ್ರಾರಂಭಿಸಬೇಕು, ಆ ಸಂದರ್ಭದಲ್ಲಿ, '**ಗಣೇಶಭಟ್ರೇ ಅಂದೀ**' ಯೀಗ ಯಂಗ ಯೇನ್ ಮಾಡೋ ಅಂಬೀ ?' ಎಂದು ಪ್ರಶ್ನಿಸುತ್ತಾರೆ. ಆದರೆ ಈ ರೀತಿ **ಅಂದೀ** ಸೇರಿಸುವಿಕೆ, ಸಮಾಜದ ಹೊರಗಿನ ವ್ಯಕ್ತಿಗಳೊಂದಿಗೆ ಮಾತನಾಡುವಾಗಲೂ ಕೆಲವೊಮ್ಮೆ ಬಂದು ಬಿಡುತ್ತಿತ್ತು ಎಂಬುದಕ್ಕೆ ವಾಸಪ್ಪ ಹೆಗಡೆ, ನಾಡಿಗರೊಂದಿಗೆ ಮಾತನಾಡುವ ಸಂದರ್ಭವನ್ನು ನೋಡಬಹುದು. ಅವನು, ಅವರ ಅಂಗಡಿಗೆ ಹೋದವನೇ 'ನಾಡಿಗ್ರೇ ನಮಸ್ಕಾರಾ **ಅಂದೀ**' ಎಂದುಮೊದಲು ನುಡಿಯುತ್ತಾನೆ.

ಹವ್ಯಕರನ್ನು ಅವರ 'ಕವಳ'ದ ಚಟದಿಂದಾಗಿ ಬೇಗನೇ ಗುರುತಿಸಬಹುದು. ಯಾವಾಗಲೂ ಎಲೆ-ಅಡಿಕೆಗಳನ್ನು ಜಗಿಯುತ್ತಲೇ ಇರುವ ಹವ್ಯಕನಿಗೆ ತಂಬಾಕು ಬೇಕು. **ಇ. ವಿ. ಪ್ರಹಸನ** ನಾಟಕ ಪ್ರಾರಂಭವಾಗುವುದೇ ಹೊಗೆಸೊಪ್ಪಿನ ಪ್ರಸ್ತಾಪದಿಂದ.

ಸಾಮಾನ್ಯವಾಗಿ ಜಾತಕ, ಮುಹೂರ್ತ ಇವುಗಳಲ್ಲಿ ನಂಬಿಕೆ ಹವ್ಯಕರಿಗಿದೆ. 'ಸರ್ವಸಿದ್ಧಿ ತ್ರಯೋದಶಿ' ಎನ್ನುವ ಮಾತನ್ನು ಸರ್ವರೀತಿಯ ಲಾಭಗಳಿಸುವ ಗಣೇಶಭಟ್ಟನೇ ನುಡಿಯುತ್ತಾನೆ. ಉಳಿದವರಿಗೆ ಅದು ನಂಬಿಕೆಯಾದರೆ, ಗಣೇಶಭಟ್ಟನಿಗೆ ಹಣಮಾಡುವ ತಂತ್ರವಾಗುತ್ತದೆ. ಜಾತಕವಾಗದಿದ್ದರೆ, ಮದುವೆಗೆ ಹೆಣ್ಣಿನ ಮನೆಯವರು ಒಪ್ಪುವುದಿಲ್ಲವೆಂಬ ಹೆದರಿಕೆಯಿಂದ ವಾಸಪ್ಪ ಹೆಗಡೆ ಲಂಚ ಕೊಟ್ಟು ಜೋಯಿಸರ ಹತ್ತಿರ ಜಾತಕವಾಗುತ್ತದೆಂದು ಹೇಳುವಂತೆ ಗಣೇಶಭಟ್ಟನಿಗೆ ತಿಳಿಸುತ್ತಾನೆ. ಈ ರೀತಿ ನಂಬಿಕೆಯ ಜನರಿದ್ದಂತೆ, ಮೋಸಮಾಡುವ ಜನರೂ ಇದ್ದರೆಂದು ತಿಳಿದುಬರುತ್ತದೆ. ಹವ್ಯಕರ ಮದುವೆಯ ಖರ್ಚು ಯಾವ ರೀತಿಯದಿರುತ್ತಿತ್ತೆಂದು (ಗಣೇಶಭಟ್ಟ ನಿಜವಾಗಿ ಅಷ್ಟು ಖರ್ಚುಮಾಡಿರದಿದ್ದರೂ) ತಿಳಿಯಲು ಈ ನಾಟಕದ ಪು ೧೯-೨೦ ಗಳನ್ನು ನೋಡಬಹುದು. ಊರ ದೇವಸ್ಥಾನ, ಸಾಮಾನ್ಯವಾಗಿ ಜನರ ಸುಖ-ಕಷ್ಟಗಳ ವಿತರಣೆಯ ಸ್ಥಳ ಹಾಗೂ ಸುದ್ದಿ ಹರಡುವಿಕೆಯ ಕೇಂದ್ರವಾಗಿರುತ್ತಿತ್ತೆಂಬುದನ್ನು 'ಮಂಜಗದ್ದೇ ದೇವಸ್ಥಾನದಲ್ಲಿ' ನಡೆಯುವ

ದೃಶ್ಯ ಚಿತ್ರಿಸುತ್ತದೆ. (ನೋಡಿ ೩೬-೩೯). ದೇವರ ಅಥವಾ ಆತ್ಮೋನ್ನತಿಯ ವಿಚಾರ ವೊಂದನ್ನು ಬಿಟ್ಟು ಮತ್ತೆಲ್ಲ ವಿಷಯವನ್ನೂ ಅವರು ಅಲ್ಲಿ ಮಾತನಾಡುತ್ತಾರೆ ಎಂಬುದನ್ನು ವಿಡಂಬಿಸುವ ಉದ್ದೇಶವೂ ಲೇಖಕರಿಗಿದ್ದಂತಿದೆ. ಕೊನೆಗೆ ಸಹಜವಾಗಿ ಎಂಬಂತೆ ಕಾಶಪ್ಪ ಹೆಗಡೆ, 'ಇದೆಲ್ಲಾ ರಗಳೆ ನಮಗ್ಯಾಕೆ ? ನಾವು ಸಮ್ಮೃಷ್ಟತ್ತೀಗೆ ಹೋಪೋ ವಿಳಿ ?' (ಪು. ೩೯) ಎನ್ನುತ್ತಾನೆ.

ಪ್ರಸ್ತುತ ನಾಟಕದಲ್ಲಿ ಕೆಲವು ಸಮಾಜಗಳ (ಜಾತಿಗಳ) ಜನರ ಸ್ವಭಾವವನ್ನು ಕುರಿತು ಅಪ್ರತ್ಯಕ್ಷವಾಗಿ, ಕೆಲವೊಮ್ಮೆ ಪ್ರತ್ಯಕ್ಷವಾಗಿ ವಿಮರ್ಶಿಸಲಾಗಿದೆ. ಹವ್ಯಕರನ್ನು ಕುರಿತು ಇಡೀ ನಾಟಕವೇ ಒಂದು ವಿಮರ್ಶೆ ಎಂಬುದಂತೂ ಸರಿಯೆ. ಜೊತೆಗೆ 'ಹವ್ಯಕರು ಅಂದರೆ ಭೋಳೇರು. ಅವರ ಶ್ರಮದ ಫಲದಿಂದ ಪೇಟೆಯಲ್ಲಿರುವ ನಾವೆಲ್ಲ ಸುಖಜೀವಿಗಳಾಗಿದ್ದೇವೆ... ಈ ಜಾತಿಯ ಜನರು ಸಾಲದ ಬಡ್ಡಿ, ಹೆಂಣಿನ ತಿರಾ. ಲಂಚ, ರುಷುವತ್ತು. ಇವು ಮೂರರಿಂದ ಅಗದೀ ಕೆಟ್ಟು ನಿಃಸಾರವಾಗುತ್ತಾ ಬಂದರೂ ಇಂಥ ದೂರದೃಷ್ಟಿಯ ಸಕಾ ಈ ಜನರ ಸಂಪರ್ಕದಲ್ಲಿ ಸಹ ಇಲ್ಲಾ' ಎಂಬ (ಪು ೧೬-೧೭) ಮಾತುಗಳಲ್ಲಿ ನಾಡಿಗರು ಇದನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಕೊಂಕಣಿಗರ ಸ್ವಭಾವದ ಚಿತ್ರಣ ರಾಯರ ಪಾತ್ರದಲ್ಲಿದೆ. ಇಷ್ಟು ಸಾಲದೆಂಬಂತೆ ಲಕ್ಷ್ಮಣರಾಯರು 'ಆವ್ರೆ ಈ ಬ್ಯೆಂಯರ್ ಜಾತೀ ಮಾತ್ರ ಯಾರ್ಯಾರೂ ನಂಬ ಬಾರದು, ಬಾಯಲ್ಲೊಂದು, ಹೊಟ್ಟೆಯಲ್ಲೊಂದು. ಆಡೋದೊಂದು, ಮಾಡೋ ದೊಂದು, ತಮ್ಮ ಕೆಲಸಕ್ಕೆ ಬಂದಾಗ ಮಾತ್ರ ಬೆಕ್ಕಿನಂತೆಯೇ ಸರಿ-ಕೆಲ್ಸ ತೀರಿತೋ ಕಡೆಗೆ ಹುಲಿ' (ಪ್ರ.೪೦) ಎಂದು ಹೇಳುತ್ತಾರೆ.

ಮಠದ ಒಳ-ಹೊರಗನ್ನೆಲ್ಲ ಚೆನ್ನಾಗಿ ಬಲ್ಲ ಲೇಖಕರಿಗೆ ಕೆಲವು ವಿಷಯಗಳಲ್ಲಿ ಅಸಮಾಧಾನವಿದೆ ಮಠಾಧೀಶರ ನಿಷ್ಕ್ರಿಯತೆ, ಸೇವಕರ ಧನ ಲೋಭ ಅವರನ್ನು ಕ್ರುದ್ಧಗೊಳಿಸಿದ್ದುಂಟು, ನಾಟಕದಲ್ಲಿ ಅಲ್ಲಲ್ಲಿ ಇವನ್ನು ವ್ಯಕ್ತಪಡಿಸಿದರೂ. ಕೊನೆಯಲ್ಲಿ ಜಡ್ಜ್‌ರ ತೀರ್ಪಿನ ಸಂದರ್ಭದ ಭಾಷಣದಲ್ಲಿ 'ಹವ್ಯಕ ಬ್ರಾಹ್ಮಣರಲ್ಲಿ ೪-೬ ಮಠಾಧಿಪತಿಗಳು ಇದ್ದು, ಅವರು ಹವ್ಯಕ ಸಮಾಜದಲ್ಲಿ ಗರ್ಭಖೂನಿಗಳಂಥ ದುರಾಚಾರಗಳು ನಡೆಯುವುದನ್ನು ನೋಡಿಯೂ ಸುಮ್ಮನಿರುವದು ಶೋಚನೀಯ ಸಂಗತಿ' ಎಂದು ಹೇಳಿಸಿದ್ದಾರೆ.

ಲೇಖಕರ ಸಾಮಾಜಿಕ ಕಳಕಳಿ ಯಾವ ತೆರದಿದ್ದಿತೆಂಬುದನ್ನು ನಾವು ಈಗಾಗಲೇ ಅರಿತಿದ್ದೇವೆ. ಜಿಲ್ಲೆಯ ರಾಜಕೀಯ ಆಡಳಿತವೂ ಜನರಿಗೆ ಅನುಕೂಲವಾಗುವಂತೆ ಇರಬೇಕೆಂಬ ಇರಾದೆ ಅವರದ್ದಾಗಿತ್ತು. ಇಂಥ ಸದಿಚ್ಛೆ ಅವರಲ್ಲಿತ್ತು ಎಂಬುದಕ್ಕೆ ನಾಟಕದಿಂದ ಒಂದು ಪುರಾವೆ ಒದಗಿಸಬಹುದು. ಪುಟ ೩೯ ರಲ್ಲಿ, ಕಾರವಾರ ಸೆಶನ್ ಕೋರ್ಟನ್ನು ಶಿರ್ಶಿಗೆ ಬದಲಾಯಿಸಿದ ವಿಷಯ ಕುರಿತು ಒಂದು ಸಂಭಾಷಣೆ ಈ ರೀತಿ ಇದೆ:

‘**ಲಕ್ಷು** : ಏನು ಭಿಷ್ಟಪ್ಪನವರೇ, ಕಾರವಾರ ಶೆಷನಕೋರ್ಟು ಶಿರ್ಶಿಗೆ ಬಂದದ್ದರಿಂದ ಜನರಿಗೆ ಬಹಳ ಅನುಕೂಲವಾದಂತೆ ಆಗಿರುತ್ತದಲ್ಲವೋ ?

ಭಿಷ್ಟ : ಅದೆಲ್ಲ ಹೌದು; ಆದರೆ ಇದೇನೂ ಶಾಶ್ವತವಲ್ಲಾ, ಸಾಹೇಬರು ಹವಾ ಬದಲಾಯಿಸಲಿಕ್ಕೆ ಬಂದಿದ್ದಾರೆ. ಇನ್ನು ಒಂದೆರಡು ತಿಂಗಳಲ್ಲಿ ಪುನಃ ಕಾರವಾರಕ್ಕೆ ಹೋದಾರೆಂತ ಕಾಣುತ್ತದೆ.’

ಇಲ್ಲಿ ಕೋರ್ಟು ಸ್ಥಳಾಂತರಗೊಂಡಿದ್ದು, ಬ್ರಿಟಿಷ್ ಅಧಿಕಾರಿಗಳ ಇಚ್ಛೆ, ಅನುಕೂಲಗಳಿಗಾಗಿಯೇ ಹೊರತು, ಜನರಿಗೆ ಸೌಲಭ್ಯವನ್ನು ಒದಗಿಸಬೇಕೆಂಬ ದೃಷ್ಟಿಯಿಂದಲ್ಲ. ಬ್ರಿಟಿಷರ ರಾಜಕೀಯ ನೀತಿ, ದುರಾಡಳಿತ ವ್ಯವಸ್ಥೆಗಳನ್ನು ಕುರಿತು ಅವರು **ಹವ್ಯಕ ಸುಭೋಧ**ದಲ್ಲಿ ಸಾಕಷ್ಟು ಕಟುವಾಗಿಯೇ ಬರೆಯುತ್ತಿದ್ದುದನ್ನು ಈ ಹಿಂದೆಯೇ ಸ್ಮರಿಸಲಾಗಿದೆ.

ಹವ್ಯಕರು ವಿಶಿಷ್ಟ ಸಂಸ್ಕೃತಿಯುಳ್ಳವರು. ಅವರನ್ನು ‘ವೈದಿಕ ವ ಕೃಷಿಕ’ರೆಂದು ಕರೆಯುವ ರೂಢಿ ಇಂದಿಗೂ ಜಿಲ್ಲೆಯಲ್ಲಿದೆ. ತಮ್ಮ ವೈದಿಕ ವೃತ್ತಿಗೆ ಧಕ್ಕೆ ಬಾರದ ರೀತಿಯಲ್ಲಿ ಅವರು ಕೃಷಿಕರ್ಮವನ್ನು ಕೈಕೊಂಡಿದ್ದಾರೆ. ಘಟ್ಟದ ಮೇಲಿನ ಭಾಗದಲ್ಲಂತೂ ವೈದಿಕ ವೃತ್ತಿಯ ಜನರು ಆ ಸಮಾಜದ ಒಂದು ಭಾಗ ಅಷ್ಟೇ. ಉಳಿದವರೆಲ್ಲ ಕೃಷಿಯನ್ನವಲಂಬಿಸಿದ ಜನರು. ಬಹುತೇಕವಾಗಿ ಘಟ್ಟದ ಕೆಳಗಿನ ಆಳುಗಳ ಸಹಾಯದಿಂದ ಕೃಷಿ ಕಾರ್ಯವನ್ನು ಸಾಗಿಸುತ್ತಿದ್ದ ಘಟ್ಟದ ಮೇಲಿನ ಹವ್ಯಕರು ತಮ್ಮ ಬೆಳೆಯನ್ನೆಲ್ಲ ಸಾಲದ ಅಸಲು ಪರಿಹರಿಸಿಕೊಳ್ಳಲು ‘ರಾಯರ ಮನೆಗೆ’ ಚೆಲ್ಲುತ್ತಿದ್ದರು. ಅವರು ‘ಧೂಳಬಡ್ಡಿ’, ‘ಚೌಲಬಡ್ಡಿ’ ಮತ್ತಾವುದೋ ರೀತಿಯ ಹೆಚ್ಚಿನದರ ಬಡ್ಡಿಗಳನ್ನು ಹಾಕಿ ಕೆಲವೊಮ್ಮೆ ಸಾಲವನ್ನೇ ಹೆಚ್ಚು ‘ಹೊಗಳಿಸಿ’ ಬರೆ, ಹವ್ಯಕರ ಶೋಷಣೆ ಮಾಡುತ್ತಿದ್ದರು. ಆದುದರಿಂದ ಆ ಕಾಲದ ನಿಜವಾದ ಬಂಡವಾಳಶಾಹಿಗಳೆಂದರೆ ಪಟ್ಟಣದ ವರ್ತಕರು. ತೋಟ–ಗದ್ದೆಗಳಲ್ಲಿ ದುಡಿಯುವ ಕೃಷಿಕಾರ್ಮಿಕರ ಶೋಷಣೆ ಹವ್ಯಕರಿಂದಾಗುವ ಸಾಧ್ಯತೆಗಳಿದ್ದರೂ, ಅವರ ಭೋಳೇತನವನು ದುರುಪಯೋಗಪಡಿಸಿಕೊಳ್ಳುವ ಕೆಲಸಗಾರರೂ ಇಲ್ಲದಿರಲಿಲ್ಲ. ‘ಮಗಳ ಮದುವೆ.’ ‘ಹೆಂಡತಿಯ ಸೀಕು’ ಇತ್ಯಾದಿ ಕಾರಣಗಳನ್ನೊಡ್ಡಿ ಹೆಚ್ಚು ಹಣ ಸುಲಿಯುವುದಲ್ಲದೇ. ಪೈ ಸಾಲದೊಂದಿಗೆ ಹೇಳದೇ ಕೇಳದೇ ಓಡಿಹೋಗುತ್ತಿದ್ದುದೂ ಉಂಟು. ಪ್ರಸ್ತುತ ನಾಟಕದಲ್ಲಿ ಇಗ್ಗಪ್ಪ ಹೆಗಡೆಯ ತೋಟದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಹೊಸಬಳಿ ಪಂಚಗ್ರಾಮದವರು ಊರಿಗೆ ಹೋಗಿ ಉಳಿತುಕೊಂಡ ಉಲ್ಲೇಖ ಬರುತ್ತದೆ (ನೋಡಿ. ಪು ೨೪). ಒಂದು ಕಡೆ ಕೆಲಸಗಾರರ ತೊಂದರೆ (ಮೋಸ), ಇನ್ನೊಂದೆಡೆ ವ್ಯಾಪಾರಸ್ಥರ ಸುಲಿಗೆ. [illegible] ಸಂಸಾರ ತಾಪತ್ರಯ, ಕಿರಿ, ರೋಗ ರುಜಿನ ಮುಂತಾದವುಗಳಿಂದ ಹವ್ಯಕರು ಸೋತು, ನಿರ್ವೀರ್ಯವಾಗತೊಡಗಿದ್ದರು. ಮಲೇರಿಯಾ ರೋಗದ [illegible] ಪರಿಣಾಮ, [illegible] ಸ್ವಾಸ್ಥ್ಯ.

ಆಧುನಿಕ ವಿಚಾರಧಾರೆಗಳಿಂದ ಪ್ರಭಾವಿತರಾದ ಜನರಿಂದ ಸಮಾಜದ ಅನಿಷ್ಟಗಳ ನಿವಾರಣಾ ಪ್ರಯತ್ನ -ಇವುಗಳಿಂದ ಹವ್ಯಕ ಸಮಾಜ ೨೦ನೆಯ ಶತಮಾನದ ೩-೪ ನೆಯ ದಶಕಗಳಿಂದ ಸ್ವಲ್ಪ ಸುಧಾರಿಸುತ್ತ ಬಂದಿತೆನ್ನಬಹುದು.

ಇದುವರೆಗಿನ ವಿವೇಚನೆಯಿಂದ ಈ ನಾಟಕ ಅನೇಕ ದೃಷ್ಟಿಗಳಿಂದ ಕುತೂಹಲ ಹುಟ್ಟಿಸಬಲ್ಲ ಕೃತಿಯೆಂಬುದು ವಿದಿತವಾಗುತ್ತದೆ. ಯಾರೇ ಆಗಲಿ ಪ್ರಾಮಾಣಿಕವಾಗಿ ಒಂದು ಸಮಸ್ಯೆಯನ್ನು ಸಹಜ ಸನ್ನಿವೇಶಗಳಲ್ಲಿ ಯಥಾವತ್ತು ಇರುವಂತೆ ಚಿತ್ರಿಸಿದಾಗ ಅದು ಸಹೃದಯರನ್ನು ಸ್ಪಂದಿಸುತ್ತದೆ. **ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ** ಅಂಥ ಒಂದು ಕೃತಿ. ವಿಷಮ ಹಾಗೂ ಬಾಲವಿವಾಹದಿಂದ ಆಗಬಹುದಾದ ಪರಿಣಾಮವನ್ನು ಅದರ ಸುತ್ತಮುತ್ತಲಿನ ಸಾಮಾಜಿಕ ಸಮಸ್ಯೆಗಳೊಂದಿಗೆ ನಾಟಕ ತುಂಬ ವಾಸ್ತವಿಕ ರೀತಿಯಲ್ಲಿ ಚಿತ್ರಿಸುತ್ತದೆ. ಜನರಲ್ಲಿ ವಿದ್ಯಾಪ್ರಸಾರವಾಗಿ ಸ್ವತಂತ್ರ ಆಲೋಚನಾಶಕ್ತಿ ಕುದುರಿದಾಗಲೇ (ಜನಜಾಗೃತಿ ಆದಾಗಲೇ) ಅವರು ತಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಲು ಸಾಧ್ಯವಾದೀತು- ಎಂಬುದು ಲೇಖಕರ ಸ್ಪಷ್ಟಮತ. ಆದರೆ ಇದನ್ನು ಅವರು ತಿಳಿಸಿದ್ದು ಪ್ರಭುಸಮ್ಮಿತ ರೀತಿಯಿಂದಲ್ಲ, ಕಾಂತಾಸಮ್ಮಿತದಿಂದ. ಹವ್ಯಕರ ಬಗ್ಗೆ ಕಳಕಳಿಯಿದ್ದ ವಿದ್ಯಾವಂತ ಪಾತ್ರಗಳು ಸಹಾನುಭೂತಿಯಿಂದ ಹವ್ಯಕ ಸಮಾಜದ ಅಂದಿನ ಸ್ಥಿತಿಗೆ ಕಾರಣಗಳನ್ನು ಗುರುತಿಸುತ್ತವೆ. ವಿದ್ಯೆಬುದ್ಧಿಗಳಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಎಂದೂ ನಿಟ್ಟುಸಿರುಬಿಡುತ್ತವೆ.

ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನಹೊರಬಂದದ್ದು ಕನ್ನಡದಲ್ಲಿ ಐತಿಹಾಸಿಕ ಪೌರಾಣಿಕ ನಾಟಕಗಳು ಜನಪ್ರಿಯವಾಗುತ್ತಿದ್ದ ಕಾಲದಲ್ಲಿ. ಸಾಮಾಜಿಕ ಸಮಸ್ಯೆಗಳು ನಾಟಕಕ್ಕೆ ವಸ್ತುಗಳಾಗಬಲ್ಲವೆಂಬ ಕಲ್ಪನೆ ಇನ್ನೂ ಮೊಳೆಯದಿದ್ದ ಕಾಲದಲ್ಲಿ. ಅದೂ ಕೂಡ ತನ್ನ ಸಮಾಜಕ್ಕೇ, (ತಾನು ಹುಟ್ಟಿಬೆಳೆದ ಸಮಾಜಕ್ಕೆ) ಸಂಬಂಧಿಸಿದ ಸಮಸ್ಯೆಗಳ ಚಿತ್ರಣ. ನಾಟಕಕ್ಕಾಗಿ ಬಳಸಿದ ಭಾಷೆ, ಆ ಸಮಾಜದ್ದೇ ಆಡುನುಡಿ. ಹೀಗೆ ಆಡುನುಡಿಯಲ್ಲಿಯೇ ಸಂಪೂರ್ಣವಾಗಿ ಒಂದು ಕೃತಿ ರಚಿಸುವ ಪ್ರಥಮ ಪ್ರಯತ್ನ ಈ ನಾಟಕದ್ದು. ಇದು ಯಶಸ್ವಿಯಾಗಿದ್ದಷ್ಟೇ ಅಲ್ಲ; ಮುಂದಿನ ಇಂಥ ಪ್ರಯತ್ನಗಳಿಗೂ ಸ್ಫೂರ್ತಿಯನ್ನು ನೀಡಿತು. ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅನೇಕರು ಹವ್ಯಕ ಭಾಷೆಯಲ್ಲಿ ಕೃತಿ ರಚಿಸುವ ಪ್ರಯತ್ನ ಮಾಡಿದ್ದುಂಟು[೧೮]. ಅಲ್ಲದೆ ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಅಪ್ಪಚ್ಚು ಕವಿ ಕೊಡವ ಭಾಷೆಯಲ್ಲಿ ಕೆಲವು ಕೃತಿಗಳನ್ನು ರಚಿಸಿದನು. ಇಂಥ ಪ್ರಯತ್ನಗಳಿಂದ ಕೃತಿ ಪ್ರಸಾರ, ಅರ್ಥಸಂವಹನ ಸೀಮಿತಗೊಳ್ಳುತ್ತದೆಂಬ ಆಕ್ಷೇಪವಿದ್ದರೂ, ಪ್ರಾದೇಶಿಕ ನುಡಿಯ ಪ್ರಭಾವ, ಪರಿಣಾಮಗಳನ್ನು ಅಲ್ಲಗಳೆಯುವಂತಿಲ್ಲ[೧೯]. ಹೀಗೆ ವಸ್ತು, ಭಾಷೆ ನಿರೂಪಣೆ ಈ ಎಲ್ಲ ದೃಷ್ಟಿಯಿಂದಲೂ ಕ್ರಾಂತಿಯನ್ನುಂಟು ಮಾಡಿದ ಕೃತಿ ಇದು. ಸಹಜವಾಗಿ ಅನ್ನಿಸಿದ್ದನ್ನು ಸ್ವಾಭಾವಿಕವಾಗಿ ಚಿತ್ರಿಸುವ ಕಲೆಗಾರಿಕೆ ಮತ್ತು ಎದೆಗಾರಿಕೆ ಎರಡೂ

ಈ ಲೇಖಕರಲ್ಲಿದ್ದು, ಅದೇ ಮುಖ್ಯವಾಗಿ ಇಂದಿನ ಸ್ವಾತಂತ್ರ್ಯಪ್ರಿಯ ಬರಹಗಾರರಿಗೆ ರೋಚಕವೆನಿಸುವ ಅಂಶವಾಗಿದೆ.

ಅಡಿಟಿಪ್ಪಣಿಗಳು

೧. ಶಿವರಾಮ ಧಾರೇಶ್ವರರ **ಕನ್ಯಾವಿಕ್ರಯಕ್ಕೂ** ಈ ಪಟ್ಟ ಸಿಗಬೇಕು ಎಂದು ಪ್ರಾ. ಶ್ರೀನಿವಾಸ ಹಾವನೂರ ಹೇಳಿರುವುದಾದರೂ ಅವರೇ ಗಮನಿಸಿದಂತೆ ಅವುಗಳಿಗೆ ಮಧ್ಯೆ ೧೭ ದಿನಗಳ ಮಾತ್ರದ ಅಂತರವಿದೆ.
ನೋಡಿ, ಹಾವನೂರ, ಶ್ರೀನಿವಾಸ, **ಹೊಸಗನ್ನಡ ಅರುಣೋದಯ**
ಮೈಸೂರು, ೧೯೭೪, ಪು. ೪೧೩

೨. ನೋಡಿ, ರಂಗನಾಥ, ಎಚ್. ಕೆ. **ಕರ್ನಾಟಕ ರಂಗಭೂಮಿ**, ಮೈಸೂರು, ೧೯೭೮, ಪು. ೩೦೭, ೩೪೫
ಇದಲ್ಲದೆ, ಅವರು ಪಾತ್ರಾಭಿನಯ, ರಂಗಸಜ್ಜಿಕೆಗಳನ್ನು ಕುರಿತು ಕೆಲವು ಉತ್ತಮ ಮಾತುಗಳನ್ನಾಡಿದ್ದಾರೆ. (ಪು. ೩೪೬); ನೋಡಿ, ಸುಬ್ಬಣ್ಣ, ಕೆ. ವಿ. **'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ಕ. ವಿ. ವಿಶ್ವಕೋಶ** ಮೈಸೂರು, ೧೯೭೯, ಪು. ೭೪–೭೫. ಶ್ರೀ ಕೆ.ವಿ. ಸುಬ್ಬಣ್ಣನವರು ಇದನ್ನು ರೇಡಿಯೋ ಪ್ರಸಾರಕ್ಕೆ ಅಳವಡಿಸಿದ್ದಾರೆ.

೩. ನೋಡಿ, ಶರ್ಮಾ, ಲಿಂಗೇಶ, (ಪ್ರಕಾಶಕರು) **ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ** (ದ್ವಿತೀಯ ಮುದ್ರಣ), ಧಾರವಾಡ. ೧೯೫೩. (ಮುನ್ನುಡಿ) ಪು. ೫

೪. ಇದಕ್ಕೆ ಪ್ರಾರಂಭದಲ್ಲಿ **ಹವ್ಯಕ ಸುಬೋಧ** ಮತ್ತು **ಕಾರವಾರ ಚಂದ್ರಿಕೆ** ಎಂಬ ಹೆಸರಿದ್ದುದಾಗಿ ತಿಳಿದುಬರುತ್ತದೆ.

೫. ನೋಡಿ, ಹಾವನೂರ, ಶ್ರೀನಿವಾಸ. **ಪೂರ್ವೋಕ್ತ**, ಪು. ೨೯೧.

೬. **ಅದೇ**, ಪು. ೨೯೦

೭. ಈ ಸ್ವಾರಸ್ಯಕರ ವಿಷಯವನ್ನು ಕೆ. ವಿ. ಸುಬ್ಬಣ್ಣನವರು ಪತ್ರ ಮುಖೇನ ತಿಳಿಸಿದರು. ಶ್ರೀ ಶರ್ಮಾ ಮತ್ತು ಹಲವರು ಇದನ್ನು ಪ್ರಹಸನವೆಂದು ಭಾವಿಸಿದ್ದಾರೆ, ಅದು ಸರಿಯಲ್ಲ. ಅದು ವಿವಾಹ ಪ್ರಹಸನ; ಇಗ್ಗಪ್ಪ ಹೆಗಡೇ ವಿವಾಹವೆಂಬ ಪ್ರಹಸನ ಅಲ್ಲ; ಇಗ್ಗಪ್ಪ ಹೆಗಡೆ ಮಾಡಿಕೊಂಡ 'ವಿವಾಹ ಪ್ರಹಸನ', 'ವಿವಾಹದ ಆಭಾಸ'.

೮. ಲೇಖಕರು ನಾಟಕದ ಒಂದು ಅಂಕ ಮುಗಿದ ಮೇಲೆ, ಮುಂದಿನ ಅಂಕ ಪ್ರಾರಂಭ ಮಾಡುವಾಗ ಕೆಲವೊಮ್ಮೆ ಮಧ್ಯದ ಕಥೆಯನ್ನು ಬರೆಯುತ್ತಾರೆ. ಇದರಿಂದ ಅಂಕದಿಂದ ಅಂಕಕ್ಕೆ ಅವರೆಷ್ಟು ಕತೆ ಓಡಿಸಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತದೆ. ಜೊತೆಗೆ ಲೇಖಕರಿಗೆ ರಂಗ ಪ್ರಯೋಗ ಕಲ್ಪನೆ ಸ್ಪಷ್ಟವಾಗಿರಲಿಲ್ಲ ಎಂಬ ಭಾವನೆ ಉಂಟಾಗುತ್ತದೆ.

(ಈ ಪ್ರಕಾರ ಹೇಳಿ ಮಲಗಲಿಕ್ಕೆ ಹೋಗುತ್ತಾನೆ. ಇತ್ತಲಾಗಿ ವಾಸಪ್ಪ ಹೆಗಡೇ, ಇಗ್ಗಪ್ಪ ಹೆಗಡೇ, ಇವರು ಮರುದಿವಸ ಸಂಧ್ಯಾಕಾಲಕ್ಕೆ ಮನೆಗೆ ಸೇರುತ್ತಾರೆ. ಮರುದಿವಸ ವಾಸಪ್ಪ ಹೆಗಡೆಯು ಇಗ್ಗಪ್ಪ ಹೆಗಡೆಯ ಹತ್ತಿರ ನೀನು ಈ ಹೊತ್ತು ಶಿರ್ಶಿಗೆ ಹೋಗಿ ರಾಯರ ಮನೆಯಲ್ಲಾಗತಕ್ಕ ಕೆಲಸ ವನ್ನು ತೀರಿಸಿಕೊಂಡು ಕೂತುಕೋ. ತಾನು ನಾಳೇ ಬೆಳಿಗ್ಗೆ ಎದ್ದು ನಾಡಿಗರ ಅಂಗಡಿಗೆ ಬರುತ್ತೇನೆಂದು ಹೇಳಿ ತನ್ನ ಮನೆಗೆ ಹೋಗುತ್ತಾನೆ.)
ಪು. ೧೩

(ಇಷ್ಟರಲ್ಲಿ ನಾಡಿಗರು ದಸ್ತೈವೇಜು ಬರೆದುಕೊಡುತ್ತಾರೆ. ಇವರಿಬ್ಬರು ಶಿರಸಿಯ ಕೆಲಸವನ್ನೆಲ್ಲ ತೀರಿಸಿಕೊಂಡು ಬಂದು ಮನೆಗೆ ಹೋಗಿ ಅಲ್ಲಿಂದ ಘಟ್ಟದ ಕೆಳಗೆ ಹೋಗುತ್ತಾರೆ). ಪು. ೧೮

(ಎಲ್ಲರೂ ಅಲ್ಲಿಂದ ಮರುದಿವಸ ಪ್ರಾತಃಕಾಲಕ್ಕೆ ಎದ್ದು ಘಟ್ಟದ ಮೇಲೆ ಹೋಗುತ್ತಾರೆ. ಕೆಲವು ತಿಂಗಳಲ್ಲಿ ಗಣೇಶಭಟ್ಟರು ಪುನಹಾ ಊರಿಗೆ ಬರುತ್ತಾರೆ)
ಪು ೨೦

೯. ರಾಯರು ಶಾನುಭೋಗನ ಹತ್ತಿರ ಮಾತನಾಡುವಾಗ ಕೊಂಕಣಿ ಬಳಸುತ್ತಾರೆ. ಈ ವಾಕ್ಯಗಳನ್ನು ನೋಡಿ, 'ಕಿತವೋ ? ಮಂಜ್ಯ ಶೇಣೀ ದಸ್ತೈವೋಜಾರಿ ಕಾಂಯ್ ಶಬ್ದದವರ ಚೌಕ್ ಯತ್ತನಾ. ಥೈಂ ಯಥಾ ಯೋಗ್ಯ ಬೊರ್ಯೊಲಾ "ರಾಯರ ಮನೆಯವರ ಸಾಲಾ ತೀರಿಸಿಕೊಂಡು, ಈ ಭೂಮಿಯ ಮೇಲೆ ಅವರಿಗಿರೂ ಅಡ್ವು ಪರಿಹರಿಸಿಕೊಂಡು ಬರೋದು " ಅಸ್ಸನಾ. ಅತ್ತೆಗೆಲ್ಲೇಕ್ ಪೂಳೊಯಿ್ ತೆಂಗಲ್ ದಸ್ತೈವಚ್ ಕಾಡ್'. ಕೊಂಕಣಿ ಭಾಷೆಯ ಪ್ರಯೋಗದಲ್ಲಿ ಸನ್ನಿವೇಶ ಸಹಜತೆ ಇದ್ದರೂ ನಗರವರ್ತಕರಿಂದ ಹವ್ಯಕರ ಶೋಷಣೆ ಭಾಷೆಯ ಮೂಲಕವೂ ಹೇಗೆ ಆಗುತ್ತದೆ ಎಂಬುದನ್ನು ತೋರಿಸುವ ವಿಡಂಬನೋದ್ದೇಶ ನಾಟಕಕಾರಲ್ಲಿ ಇದ್ದಿರಬಹುದು.

೧೦. ಉದಾಹರಣೆಗೆ ನೋಡಿ:

'ನಂ ಕೇಳಗ್ **ಬ್ಯಾಂ**? ನಾನ್ ಇಗ್ಗಪ್ಪ ಹೆಗಡೀರಲ್ಲಿ ಗೈಕಿದ್ದ ಆಳು. **ಹೊತ್ರರ** ಬಂದು ವಂದ್ **ಭಟ್ರಂಬ್ರು** ಹೆಗಡೀರ ಮನೀ ತಂಕ ಹೋಗಿ ಶುದ್ದೀ ಮುಟ್ಟಿಸಿ **ಬರಕ್ಕಂದ್ರು, ಹಾಗಂಬ್ರಾಯಿ** ನಾಬಂದೇ ವಡೆಯನೇ ? (ಪು. ೨೮)

೧೧. ಸ್ಥಳೀಯ ಶಿಷ್ಟ ಭಾಷೆಯ ಪರಿಚಯಕ್ಕೆ ನಾಡಿಗರ ಭಾಷೆಯನ್ನು ನೋಡ ಬಹುದು... "ಈಗ ಈ ರಗಳೆಗಳೆಲ್ಲಾ ನನಗ್ಯಾಕೆ? ನನ್ನಿಂದಾಗೋ ಕೆಲ್ಸಾ ಹ್ಯಾಗೆ ಹೇಳುವಿರೋ ನಾನು ಹಾಗೆ ಮಾಡಿಕೊಡಲಿಕ್ಕೆ ಸಿದ್ಧನಿದ್ದೇನೆ. ಯಾಕೆ? ಹವ್ಯಕರು ಅಂದರ ಭೋಳೇರು, ಅವರ ಶ್ರಮದ ಫಲದಿಂದ ನಾವೆಲ್ಲರೂ ಸುಖಜೀವಿಗಳಾಗಿದ್ದೇವೆ. ಅಂಥವರು ಯಾವ ತರಹದಿಂದಲೂ ವಿನಾಕಾರಣ ಹಾಳಾಗುವುದನ್ನು ನೋಡಿದರೆ ನಮಗೆ ಪಶ್ಚಾತ್ತಾಪವಾಗುತ್ತದೆ..."

೧೨. ನ್ಯಾಯಾಧೀಶರ ಭಾಷಣ, ಅಂದಿನ ಗ್ರಂಥಸ್ಥ ಭಾಷೆಯಲ್ಲಿ ಬರೆಯಲ್ಪಟ್ಟಿದೆ ಉದಾಹರಣೆಗೆ ಈ ಕೆಳಗಿನ ಸಾಲುಗಳನ್ನು ನೋಡಿ :
'...ಇವರೆಲ್ಲರೂ ಕೋರ್ಟಿಗೆ ಬಂದದ್ದು ಇದೇ ಮೊದಲನೇ ಸರ್ತಿಯಾಗಿರು- ತ್ತದೆ. ಇದರಿಂದ ಇವರ ಈ ದುಷ್ಕೃತ್ಯಕ್ಕೆ ಕಾಯಿದೆಯಿಂದ ಹೇಳುವ ಪೂರ್ಣ ಶಿಕ್ಷೆಯನ್ನು ಕೊಡುವುದರಲ್ಲಿ, ಕೋರ್ಟಿನವರು ಕನಿಕರ ಪಡುತ್ತಾರೆ. ಆದರೆ ಕೋರ್ಟಿನವರು ಇವರಲ್ಲಿ ಕೃಪೆ ಮಾಡಿ ೧ನೇ ಅಪರಾಧಿಯಾಳೆಂಬ ಸಾವಿತ್ರಿಗೆ ೩ ತಿಂಗಳ ಸಾದಾ ಕೈದನ್ನೂ ಹಾಗೂ ೨-೩ನೇ ಅಪರಾಧಿ ಗಳಿಗೆ ಪ್ರತಿ ಇಸಮು ಒಂದರ ೬ ತಿಂಗಳ ಕಠಿಣ ಶಿಕ್ಷೆಯನ್ನೂ ಕೂಡ ವಿಧಿಸಿ ರುತ್ತಾರೆ.' (ಪು. ೪೭)

೧೩. ಈಗ ಕೆಲವೆಡೆ 'ಸಂಗ' ಶಬ್ದವನ್ನು ಅಸಮಾವೇಶಕ ಅರ್ಥದಲ್ಲಿಯೇ ಬಳಸು ತ್ತಾರೆ.

೧೪. ನೋಡಿ, ಭಟ್ಟ, ರಘುಪತಿ, ಕೆಮ್ತೂರು– **ತುಳು ನಾಡಿನ ಸ್ಥಳನಾಮಗಳು** ಬೆಂಗಳೂರು, ೧೯೭೬, ಪು. ೫೦

೧೫. ನೋಡಿ, **ಎ. ಕ.** VIII ೪೫(೧೩೦೦)

೧೬. ನೋಡಿ, ಚಿದಾನಂದ ಮೂರ್ತಿ, **ಎಂ.** 'ಕರ್ನಾಟಕ ಸ್ಥಳನಾಮಗಳು', **ವಾಗರ್ಥ** ಬೆಂಗಳೂರು, ೧೯೮೧, ಪುಟಗಳು ೩೦-೩೧

೧೭. ಈ ಸಂದರ್ಭದಲ್ಲಿ ತಮ್ಮಲ್ಲಿರುವ ಮೂಲ ಪ್ರತಿಯ ನಕಲನ್ನು ಪರಿಶೀಲಿಸಲು ಅವಕಾಶ ಮಾಡಿಕೊಟ್ಟ ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ

ಮುಖ್ಯಸ್ಥರಾದ ಡಾ. ಶ್ರೀನಿವಾಸ ಹಾವನೂರ ಅವರಿಗೆ ಕೃತಜ್ಞತೆಗಳು.

೧೮. ಶ್ರೀ ಜಿ. ಆರ್. ಹೆಗಡೆ, ವಿ. ಜಿ. ಭಟ್ಟ, ಜಿ. ಎನ್. ಸಭಾಹಿತ, ಪಿ. ಎಮ್. ಹೆಗಡೆ, ಕಿಲಾರ ಭಾಸ್ಕರ ಹೆಗಡೆ, ನಾಗರಾಜ ಭಟ್ ಮುಂತಾದವರು ಇಂತಹ ಪ್ರಯತ್ನಗಳನ್ನು ಮಾಡಿದ್ದುಂಟು.

೧೯. '**ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ**ದಂತಹ ನಾಟ್ಯ ಕೃತಿಗಳು ಹೈಗರ ಭಾಷೆಯನ್ನು ಕೈಬಿಟ್ಟಿದ್ದರೆ ಆಗಬಹುದಾಗಿದ್ದ ಹಾನಿ ಮಾರಕವಾಗಬಹುದಾಗಿತ್ತು' ಎಂದು ಡಾ. ಜಿ. ಎಸ್. ಆಮೂರರು ಸರಿಯಾಗಿ ಸೂಚಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ನೋಡಿ. **ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು**, ಬೆಂಗಳೂರು, ೧೯೮೧, ಪು. ೧೧.

ಆಧಾರ ಗ್ರಂಥಗಳು

೧. ಚಿದಾನಂದ ಮೂರ್ತಿ, ಎಂ. **ವಾಗರ್ಥ**, ಬೆಂಗಳೂರು, ೧೯೮೧

೨. ಧಾರವಾಡಕರ, ರಾ. ಯ. **ಹೊಸಗನ್ನಡ ಸಾಹಿತ್ಯದ ಉದಯಕಾಲ**, ಧಾರವಾಡ. ೧೯೭೫

೩. ನಿರಂಜನ, **ಪುಷ್ಪಹಾರ**, ಮಂಗಳೂರು, ೧೯೫೭

೪. ಭಟ್ಟ, ರಘುಪತಿ, ಕೆಮ್ತೂರು, **ತುಳುನಾಡಿನ ಸ್ಥಳನಾಮಗಳು**, ಬೆಂಗಳೂರು, ೧೯೭೯

೫. ರಂಗನಾಥ, ಎಚ್. ಕೆ. **ಕರ್ನಾಟಕ ರಂಗಭೂಮಿ**, ಮೈಸೂರು, ೧೯೭೮

೬. ಸುಬ್ಬಣ್ಣ, ಕೆ. ವಿ. 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'; ನಾಯಕ, ಹಾ. ಮಾ. (ಸಂ). **ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ**, ಮೈಸೂರು, ೧೯೭೯, ಪು ೭೫

೭. ಹರಿಕೃಷ್ಣ ಭರಣ್ಯ, **ಪ್ರವೇಶ**, ಪಾಣಾಜೆ, ೧೯೮೧

೮. ಹಾವನೂರ, ಶ್ರೀನಿವಾಸ, **ಹೊಸಗನ್ನಡ ಅರುಣೋದಯ**, ಮೈಸೂರು ೧೯೭೪

ಹಳ್ಳಿದೂರಿಗೆ ಪ್ಯಾಟಿದೂರಿಗೆ ಕದನ *

● ಜಿ. ಎಸ್. ವಡಗಾಂವಿ

ಹಳ್ಳಿದೂರಿಗೆ ಪ್ಯಾಟಿದೂರಿಗೆ ಕದನ ಬಿದ್ದಾವ ಬಾಳ ಕಂತ್ರಾಟ
ನಾ ಹೆಚ್ಚ ನೀ ಹೆಚ್ಚ ಅಂದ ಬಡತಾಡತಾವ ನಾಡಾನ ಹಳ್ಳೆಲ್ಲ ಗಬಗೊಟ್ಟ
ಹಳ್ಳಿದೂರ ಹಳಿಂಗಳಿ ಹಾಕ್ಯತಿ ಪಣಾ, ಅಂತೈತಿ ನನ್ನಿಂದ ನಿನ್ನಪ್ಯಾಟಿ
ಸಂತಿ, ಸವದಿ, ಸಂಕ್ರಟ್ಟಿ, ಸಾವಳಗಿ ಮಾತಾಡತಾವ ಅವರ ಬೆನ್ನಕಟ್ಟಿ.

ಹಂದಿಗುಂದ, ಹಳ್ಳೂರ ಹಂಚಿಕಿ ತಗದ ಹಮ್ಮೀಲಿ ಬಂದಾವ ಉಪರಾಟಿ
ಬೆನವ್ಯಾಲ ಇರತನ ಬಿಟ್ಟಿಗಿಟ್ಟೀರೆಂದ, ಬೇಲಸಿ ಕೇಳತೈತಿ ಯರಗಟ್ಟಿ
ಗೊಲಬಾಂವಿ, ಪಲಬಾಂವಿ ಬಲಬಾಂವಿ ಮಾಡಕೋತ ಬಾ ಇವಳಂತ
ಬಂದು ನಡಾ
ನಾಗನೂರ, ನಾವಲಗಿ ನಾಡಾಗಿನ ಹಳ್ಳೆಲ್ಲ ಹೊಸೂರಾಗ ಬಂದಾದು
ಬಂದ ಮಾಟಿ.

ಹೊಸೂರ ಅಂತೈತಿ ನನ್ನ ಹೆಸರ ತಗೀಬ್ಯಾಡ ಪ್ಯಾಟಿ, ನನ್ನ ಹೊರತ ಇಲ್ಲ
ನಿನ್ನS ಗತಿ.

ಮೆಂತಿಪಲ್ಯ, ಮೂಲಂಗಿ ನನ್ನ ಬಣಿಗ್ಯ ಆದರ ತುಂಬತೈತಿ ನಿನ್ನ ಹೊಟ್ಟಿ.
ಕೋತಂಬರಿ ಕೊಂಡಕೊಂಡ ಹ್ಯಾಂಗ ಒಯ್ಯತಿ ಆಂಬರದಾಗ ಹಾಕಿ
ಸರಬರಾಸುರೂತಿ
ಕಲ್ಲೊಳ್ಳಿ ಅಂತೈತಿ. ಮಾತ ಖರೆ ಐತಿ, ನಾ ಬಂದರ ನೆರೂತೈತಿ ನಿನ್ನ ಸಂತಿ.

ಲಕ್ಷಂತ ರೂಪಾಯಿ ಇದ್ರ ಏನ ಸುಡತಿ, ಜ್ವಾಳಾ ತರದರ ಕಣ್ಣ ಪಿಳಿ-ಪಿಳಿ ಬಿಡತಿ
ವಾಡ, ವಡ್ರಟ್ಟಿ, ವಪ್ರಮಟ್ಟಿ ಸುದ್ದಿ ಕೇಳಿ ಬಂದು ಒಳೆ ರಪ್ಪಾಟಪ್ಪಾ

ನಾ ಹೆಚ್ಚ ನೀ ಹೆಚ್ಚ ಅಂದ ಬಡತಾಡತಾವ ನಾಡಾನ ಹಳ್ಳೆಲ್ಲ ಗಬಗೊಟ್ಟಿ.
ಸುತ್ತ ಪ್ಯಾಟಿಗೆಲ್ಲ ಪತ್ತSರ ಬಿಟ್ಟೀತ, ಒತ್ತರ ಬಾ ಎಂದ ಜಮಖಂಡಿ
ಬಾದಾಮಿ, ಬಳ್ಳಾರಿ, ಬಾಗಲಕೋಟಿ. ಬೆಳಗಾಂವಿ ಬಂದ ಕೂಡ್ಯಾವ
ಹರಿಹೊಳಿದಂಡಿ.

---

* ಇದೊಂದು ಜನಪದ ಗೀತೆ, ಹಾಡಿದವರು : **ಚೌರವ್ವ ಕೊಣ್ಣೂರ**
ಸಂಗ್ರಹಕಾರರು : **ಜಿ. ಎಸ್. ವಡಗಾಂವಿ**

ಶಾರದೂರ ಹಳ್ಳಿದೂರಿಗೆ ಹೇಳತಾವ ತಮ್ಮ ಪ್ಯಾಟಿ ತಾವ ಹೆಚ್ಚವಾಡಿ
ಸೊಟ್ಟ ಹಳ್ಳೀನ ಹೋಟೆದ್ದ ಬರತಿ ನಮ್ಮ ಪ್ಯಾಟಿ ದುಡ್ಡಿನಾನೆ ವಾಡಿ

ತೊತ್ತಿನಾಂಗ ನೀ ಹೊತ್ತ ತಂದ ಕೊಡತಿ ಕುತ್ತಲ್ಲಿ ಸರುವೆಲ್ಲಾ ಕಾಳಾಕಡಿ
ಬಾಸುಳಿ ಸ್ವಾವಾಸ ಬಂದ ನಮ್ಮಲ್ಲಿ ಒಯ್ಯಿತೀರಿ, ಯಾಲಕ್ಕಿ,
ಜಾಜಿಕಾಯಿ, ವೋಡೇಕಡ್ಡಿ·

ಹಡದ ಹಸಿವ್ಯಿಯ್ಯಾಗ ಹಾಕ ನಿನ್ನ ಬರೀ ಜ್ವಾಳಾ, ತಿಂದ ಹಾವುತೈತಿ ನಿನ್ನ ಕಿಪ್ಪಡಿ
ಹೆಣ್ಣಗಟ್ಟಿ ವಾಡಿ ಬಟ್ಟಿಗೆ ಹಾಕುವದು ನಮ್ಮ ಸಕ್ಕರಿ

ಮುಚ್ಚಿ ಬೆಲ್ಲ ಇದ್ರ ಆಗತೈತಿ ಸರುವೆಲ್ಲ ಕಾರ್ಯ, ದಂಡಿಕುಬಸ
ಒಯ್ಯುವಾಗ ಬೇಕ ಕೊಬ್ಬರಿ
ಅದಕ ಲೆಕ್ಕ ಕೊಟ್ಟ ಹೆಂಗ ಜಕ್ಕಸತ ಒಯ್ಯತೀರಿ
ಅಸಿಕಿ ಆಸಂಗೀಗೆ ಬಂತ ಬಲಬಿರಿ, ಉಪ್ಪ ಸಿಟ್ಟಿಗೇರಿ ಬಡಿತ ಹಾಲಸ್ವಾರಿ
ಜಗಳಾ ತಗವ ಜಗದಾಳ ಜಾವಂದ ನಡದೀತ ಬಾಳಿಕಾಯಿ ಬುಟ್ಟಿ ಒಕ್ಕೊಟ್ಟ
ನಾ ಹೆಚ್ಚ ನೀ ಹೆಚ್ಚ ಅಂದ ಬಡತಾಡತಾವ ನಾಡಾನ ಹಳ್ಳೆಲ್ಲ ಗಬಗೊಟ್ಟ

.ಪಾತ್ರ ಹೇಳತನ ಕುತ್ತ ಕೇಳರಿ ಅಂತೈತಿ ಹಳ್ಳಿ ಹಾರೂಗೇರಿ ಹಿಡಕಲ್ಲ
ಬಂಕಿ ಕಾಡಿವರ ಜಾನಾ ಬೇಡತೀರಿ ಅದ ನಮ್ಮ ಜ್ವಾಳದ್ದ ಹೌಂದಲ್ಲ?

ಬೆಲ್ಲ ಬೆಲ್ಲ ಅಂದ ಬೇಲಸಿ ಹೇಳತೀರಿ ವಾರಿಗಟ್ಟಿ ಅದನ ಕಡಿವ್ಹಾಂಗಿಲ್ಲ
ನಮ್ಮ ಗೋದಿ ಕಡ್ಲ್ಯಾಗ ಅಂಜಿ ತೂಗ್ಗತೈತಿ ಕಡಗೀನ ಕಾಲಾದ ವಾಳಸ್ಯೆಲ

ಬಾಗೋಡಿ ಅಂತೈತಿ ಬರಾ ಬಿದ್ದ ವರುಷ ಯಾರು ಕೇಳಲಿಲ್ಲ ನಿನ್ನ ಬೆಲ್ಲಾ
ಜ್ವಾಳ ಇಲ್ಲದರ ಡೋಗಿ ಉಳ್ಯಾಡತಾವ, ಹಾದ್ಯಾದಿಗೆ ಕಿಸದಾವ ಹಲ್ಲಾ.

ಮೆಣಸಿನಕಾಯಿ ನಾನ ಮುಂದ ಮೂಡಲಗೆದ್ದ ನಿಂತ ಮಾಡತೈತಿ ಬಳೇಗುಲ್ಲಾ
ಅರಬಾಂವಿ ಎದ್ದ ಬಂದ ಅಪ್ರಾಸಿ ಅಂತೈತಿ, ಕಿತ್ತ ಒಗೀರಿ ನಮ್ಮ ಬೀಸುಕಲ್ಲ.

ಪ್ಯಾಟೀನ ತಂದಿಟ್ಟ ಬಾಳ ಬಿಗೀಗೆ ಅಮ್ಮ ಅಂತ ಅನಗಸತೈತಿ ಮುಸೋಡಿಗಿ
ಅಳಿತನಕ ಅಳ್ಳ್ಯ ಬಂದ ತಯಾರಾಗಿ ಆಗ ಬಸೂತಿರಿ ನಮ್ಮ ಸ್ಯಾಂವಿಗಿ.

ಮುದವಿ–ಮುಂಜಿ ಆದರ ನಿಮ್ಮ ಸೌಭಾಗ್ಯ, ಓಡ್ಯಾಡತಾವ ನಮ್ಮ ಮುಗ್ಗಿ
ಹೋಳಿಗಿ ನಾಹೆಚ್ಚ ನೀ ಹೆಚ್ಚ..............

ಇಷ್ಟ ಕೇಳಿ ಪ್ಯಾಟಿಗೋಳ ಸಿಟ್ಟಿಗೇರಿ ಬಯ್ಯತಾವ ಹಲ್ಕಟ್ಟ ಅದೀರಿ ಅಂತ ಹಳ್ಳೀಗಿ
ವಜನತನ ಏನ ಬಲ್ಲೀರಿ ಒಣಾವಾದಾ ಹಾಕತೀರಿ ನುಚ್ಚ ತಿಂದ ಒಂದ ಕೊಸವಿಗಿ

ಕಾಳಕಡಿ ಕಡ್ಲೀದು ಬಾಳಬಾಳ ಹೇಳತೀರಿ ಮಾನ–ಪಾನ ಜಾಸ್ತಿ ಐತಿ
ನಮ್ಮ ದುಡ್ಡೀ

ಮದವಿ-ಮುಂಜಿ ಆದರ ಮತ್ತ ನಿಮಗ ಹೇಳತಸ ಹೊಟ್ಟಾ–ಕಣಕಿ
ಆಯೇರಿ ಮಾಡ ಬೀಗರಿಗೆ

ಸೀರಿ ಶೆಲ್ಲೆ ಮುಂಡಾಸ ಬಂದ ನಮ್ಮಲ್ಲಿ ಒಯ್ಯೀತೀರಿ ।
ಅರಿಶಿನ ಮಸಾಲಿ ಮದಲ ಮಾಡಿ ಜೀರಿಗಿ
ಮಸಾಲಿ ಹಾಕಿರಿ ಮೆನಸಿನಕಾಯಿ ಹುಟ್ಟ ನೆಕ್ಕತಿ ಹೆಟ್ಟಿ ಅಂಬರ ಗಡಿಗಿ

ಅನ್ನ ಕೆಡತೈತಿ ಮನಸ್ಯಾಗ ಆಪತ್ತ ಬಂದ
ಓದ ಕಾರ್ಯಕ್ಕ ಹಾಕತೀರಿ ನೀರಾಗ ತೇದ
ಮೂರ್ತ ನೋಡಿ ಓದಿ ಹೇಳತೀರಿ ಪಂಚಾಂಗದಾಗ
ಆ ಪಂಚಾಂಗ ಬತ್ತ ನಮ್ಮ ಮುಂಬೈದು
ಹೊಲಾ ಹರಗುವ ಕುಡಾ ಕೆಬ್ಬನ ಸುದಾ ನಮ್ಮದು
ಬೀಸುಕಲ್ಲಿನ ಅನಸ ಸುದಾ ನಮ್ಮದು
ಪುಂಡಿಪಲ್ಯ ಅಂದರ ಒಂದ ಪರ್ಯಾಣ ತುಂಬ ತಿಂತೀರಿ
ಹಳ್ಳಿ ಸಕ್ಕರಿ ಸವಿ ಏನ ಬಲ್ಲೆ ಕರದಂಟ
ನಾ ಹೆಚ್ಚ ನೀ ಹೆಚ್ಚ..........................

ಪುಂಡಿಪಲ್ಯ ಅಂಪರ ಪೆಟ್ಟ ಹತ್ತೀದ ಹಳ್ಳಿಗೋಳ
ಬಡದಾಡಲಾಕ ಎದ್ದು ಒಳೀ ಜಾಡಸಿ
ಹುಣಶ್ಯಾಳ ಮುನ್ಯಾಳ ಸುಸದಳ್ಳಿ ಎದ್ದನಿಂತ
ಕೆಟ್ಟಗಣ್ಣೀಲೆ ನೋಡತಾವ ಕ್ಯಾಕರಿಸಿ

ದೂರ ನಿತ್ತ ದೂಪದಾಳ ದುರಗವನಾಣಿ ಹಾಕ್ತೈತಿ
ಹೋಗಬ್ಯಾಡ ಪ್ಯಾಟಿ ನಿನ್ನ ಮೋತಿ ತೋರಸಿ
ಕೊಣ್ಣೂರ ಬಂದ ನಿನ್ನ ಕೊಲ್ಲಿ ಹಿಡದನಂತೈತಿ
ಕೊಲ್ಲಾಪುರಕ ಆಗಲಿ ನಡಿ ನಿನ್ನ ಚವಕಸಿ
ಬಾಳ ದಿಸ ಆತ್ರಿ ನಾವು ಬಡೆದಾಡಿ ಸಾವು ಅವು
ನ್ಯಾಯ ಮಾಡಬೇಕ್ರಿ ಬರೋಬರಿ ಸೋಸಿ

ಸಣ್ಣ ಕಟ್ಲೆ ಅಲ್ಲ ಇದ ಸಾವಕಾಶ ಮಾಡತೀನಿ
ಅಂದ ಹೇಳಿ ಬಿಟ್ಟ ತಾರೀಖ ನೇಮಿಸಿ
ಹಳ್ಳಿ–ಪ್ಯಾಟಿ ಎಡತಾಕಿ ಬ್ಯಾಸತ್ತ ತಾವಾಗಿ
ಒಂದ ಆದವು ಅಬಸಾತ

ಶಾರ ಬನ್ಹಟ್ಟಿ ವಾಯಿನೆ ಸುತ್ತ–ಮುತ್ತ
ಸತ್ಯುಳ್ಳ ಕಾಡಸಿದ್ಧನ ಸಾಕ್ಷಿಯಂತ
ಸಣ್ಣ ಹುಡುಗರ ಶಾಯಿಲಿಂದ ಕೈಮಾಡಿ ಹೇಳತಾರ
ಮಲ್ಲ ಬಸ್ಯಾನ ಅಕ್ಷರ ಗಟ್ಟಿಮುಟ್ಟಿ

ನಾ ಹೆಚ್ಚ ನೀ ಹೆಚ್ಚ.................

ಮುದನೂರ ಗ್ರಾಮದ ಶಾಸನಗಳು

● ಬಿ. ಆರ್. ಹಿರೇಮಠ

● ಹನುಮಾಕ್ಷಿ ಗೋಗಿ

ಉತ್ತರಕರ್ನಾಟಕದ ಶಾಸನಸಂಪತ್ತು ವಿಪುಲವೂ ವೈವಿಧ್ಯಪೂರ್ಣವೂ ಆದುದಾಗಿದೆ. ಆದರೆ ಬೆಳಗಾವಿ, ಗುಲಬುರ್ಗಾ, ಬೀದರ, ರಾಯಚೂರ ಜಿಲ್ಲೆಗಳಲ್ಲಿ ನಡೆದ ಶಾಸನಗಳ ಪರಿವೀಕ್ಷಣಾಕಾರ್ಯ ಅತ್ಯಂತ ಅಲ್ಪವೆಂದೇ ಹೇಳಬೇಕು ಬಹಳ ದಿನಗಳಿಂದ ಈ ಅಸ್ಪೃಶ್ಯತೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ನಮಗೆ ೧೯೭೬ ರಲ್ಲಿ ಗುಲಬುರ್ಗಾ ಜಿಲ್ಲೆಯ ಕೆಲವು ಪ್ರದೇಶಗಳ ಶಾಸನ ಹಾಗೂ ಹಸ್ತಪ್ರತಿಗಳ ಪರಿವೀಕ್ಷಣಾಕಾರ್ಯ ಮಾಡುವ ಅವಕಾಶ ಲಭಿಸಿತು. ಈ ಸಮಯದಲ್ಲಿ (೨೧-೧-೧೯೭೬ ರಿಂದ ೨೫-೧-೧೯೭೬ ರ ವರೆಗೆ) ನಾವು ಮುದನೂರ, ಯಡ್ರಾಮಿ, ಕರಡಕಲ್ಲ, ಬೈಚಬಾಳ, ಕೆಂಭಾವಿ ಮುಂತಾದ ಗ್ರಾಮಗಳಲ್ಲಿ ಶಾಸನ-ಹಸ್ತಪ್ರತಿಗಳ ಪರಿವೀಕ್ಷಣಾ, ಸಂಗ್ರಹಕಾರ್ಯ ಕೈಕೊಂಡೆವು. ಇದರ ಫಲವಾಗಿ ಮುದನೂರ ಗ್ರಾಮವೊಂದರಲ್ಲಿಯೇ ನಮಗೆ ಒಟ್ಟು ಹದಿನೇಳು ಶಿಲಾಶಾಸನಗಳು ದೊರೆತವು. ಎಲ್. ಡಿ. ಬಾರ್ನೆಟ್ ಅವರು ಸೂಚಿಸುವ ಜೇಡರ ದಾಸಿಮಯ್ಯನ ಉಲ್ಲೇಖವಿರುವ ಶಾಸನ ಮಾತ್ರ ಈಗ ಈ ಗ್ರಾಮದಲ್ಲಿ ಕಂಡುಬರುವುದಿಲ್ಲ. ಇದಲ್ಲದೆ ಮೆಕೆಂಝಿಯ ಸಂಗ್ರಹದಲ್ಲೂ ಮುದನೂರ ಗ್ರಾಮದ ಒಂದು ಶಾಸನವಿದೆ. ಪರಿವೀಕ್ಷಣಾ ಸಮಯದಲ್ಲಿ ಇದು ನಮ್ಮ ಕಣ್ಣಿಗೆ ಬೀಳಲಿಲ್ಲ. ಹೀಗಾಗಿ ಮೆಕೆಂಝಿ ಸಂಗ್ರಹದ ಈ ಶಾಸನವನ್ನೂ ಇಲ್ಲಿ ಸೇರಿಸಿಕೊಳ್ಳಲಾಗಿದೆ. ಹೀಗೆ ಮುದನೂರ ಗ್ರಾಮದ ಹದಿನೆಂಟೂ ಶಾಸನಗಳನ್ನು ಒಟ್ಟಾಗಿ ಅಭ್ಯಸಿಸಿ, ಇವುಗಳಿಂದ ತಿಳಿದುಬರುವ ವಿವರಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಮುದನೂರ ಗ್ರಾಮವು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಗರ-೩೦೦ ರ ಅಥವಾ ೫೦೦ ರಾಜಕೀಯ ವಿಭಾಗದಲ್ಲಿ ಸಮಾವೇಶವಾಗಿದ್ದಿತು. ಮುದಿನೀರ, ಮುದಿನೀರ ತೀರ್ಥ ಎಂಬಿವು ಈ ಗ್ರಾಮದ ಪ್ರಾಚೀನ ರೂಪಗಳು. ಈ ಗ್ರಾಮವು ಶ್ರೀರಾಮದತ್ತಿ ಸರ್ವನಮಸ್ಯದಗ್ರಹಾರ, ದಕ್ಷಿಣವಾರಣಾಸಿ ಎಂದೂ ಪ್ರಖ್ಯಾತಿ ಪಡೆದಿದ್ದಿತು.

ಬಸವಪೂರ್ವಯುಗದ ಶಿವಶರಣ ಜೇಡರ ದಾಸಿಮಯ್ಯನ ಕಾರ್ಯಕ್ಷೇತ್ರ, ಪಾವನ ಇದು ರಾಜಕೀಯ- ಧಾರ್ಮಿಕ ಹಾಗೂ ಆರ್ಥಿಕ ಚಟುವಟಿಕೆಗಳ ಆಗರವೆನಿಸಿದ್ದಿತು.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಐದು ಶಾಸನಗಳೂ (ಕ್ರಿ. ಶ. ೧೦೯೯, ೧೧೦೦, ೧೧೦೫, ಸು. ಶ. ೧೨, ೧೨) ಭೂಲೋಕಮಲ್ಲ ಸೋಮೇಶ್ವರನ ಆಳ್ವಿಕೆಯನ್ನು ಹೇಳುವ ಎರಡು ಶಾಸನಗಳೂ (ಕ್ರಿ. ಶ. ೧೧೨೯, ೧೧೪೦) ಇಮ್ಮಡಿ ಜಗದೇಕಮಲ್ಲನ ಎರಡು ಶಾಸನಗಳೂ (ಕ್ರಿ. ಶ. ೧೧೪೬, ೧೧೫೪) ತ್ರೈಲೋಕ್ಯಮಲ್ಲ ಮೂರನೆಯ ತೈಲಪನ ಒಂದು ಶಾಸನವೂ (ಕ್ರಿ. ಶ. ೧೧೬೦) ಕಳಚುರಿ ಬಿಜ್ಜಳ, ಸೋವಿದೇವ ಹಾಗೂ ಆಹವಮಲ್ಲರ ಒಂದೊಂದು ಶಾಸನಗಳೂ, (ಕ್ರಿ ಶ. ೧೧೬೭, ೧೧೭೫, ೧೧೮೨) ಯಾದವ ಭಿಲ್ಲಮನ ಒಂದು ಶಾಸನವೂ (ಕ್ರಿ. ಶ. ೧೧೮೮) ಸಿಂಗಣನ ಎರಡು ಶಾಸನಗಳೂ (ಕ್ರಿ. ಶ. ೧೨೧೮, ೧೨೧೮) ಮುದನೂರ ಗ್ರಾಮದಲ್ಲಿರುತ್ತವೆ. ಇದರಿಂದ ಈ ಪ್ರದೇಶ ಕಲ್ಯಾಣ ಚಾಲುಕ್ಯ, ಕಳಚುರಿ, ಹಾಗೂ ಯಾದವ ಅರಸುಮನೆತನಗಳ ಆಡಳಿತಕ್ಕೆ ಒಳಪಟ್ಟಿದ್ದಿತೆಂಬ ಅಂಶ ಸ್ಪಷ್ಟವಾಗುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಿಂದಲೂ ಮುದನೂರ ಗ್ರಾಮ ಸುಪ್ರಸಿದ್ಧ ಅಗ್ರಹಾರವಾಗಿದ್ದಿತು. ಆದುದರಿಂದ ಇಲ್ಲಿಯ ಶಾಸನಗಳು ಈ ಗ್ರಾಮವನ್ನು 'ಸರ್ವನಮಸ್ಯದ ಅಗ್ರಹಾರ'. 'ಶ್ರೀರಾಮದತ್ತಿ' ಎಂದು ಬಾಯ್ತುಂಬ ಬಣ್ಣಿಸುತ್ತವೆ. ಮಧ್ಯಕಾಲೀನ ಕರ್ನಾಟಕದ ಗ್ರಾಮಾಡಳಿತದಲ್ಲಿ ಪ್ರಧಾನಪಾತ್ರ ವಹಿಸಿದವರು ಮಹಾಜನ ಮತ್ತು ಊರೊಡೆಯ ಅಥವಾ ಪುರಪ್ರಭುಗಳು. ಈ ಮಹಾಜನರು ಗ್ರಾಮದ ರಾಜಕೀಯ–ಸಾಮಾಜಿಕ–ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳ ನಾಯಕವ್ಯಕ್ತಿಗಳೆನಿಸಿದ್ದರು. ಈ ಮುದನೂರ ಅಗ್ರಹಾರದಲ್ಲಿ ಐದುನೂರು ಮಹಾಜನರು ಇದ್ದರು. ಇಲ್ಲಿಯ ಬಹುಸಂಖ್ಯೆಯ ಶಾಸನಗಳು ಈ ಮಹಾಜನರ ವ್ಯಕ್ತಿತ್ವದ ವೈವಿಧ್ಯವನ್ನು ಕೀರ್ತಿಸುತ್ತಿವೆ. ಮುದನೂರ ಮಹಾಜನರ ಗುಣವಿಶೇಷಗಳನ್ನು "ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿ ಶೀಲಗುಣ ಸಂಪನ್ನರುಂ ಸಮಸ್ತ ವಿದ್ವಜ್ಜನ ಪ್ರಸನ್ನರುಂ ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಷಟ್ಕರ್ಮ ನಿರತಕಾಪಾಸಾಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪರರುಂ ಅನೇಕ ಯಜ್ಞಾವಭೃತಾವಗಾಹನ ಪವಿತ್ರೀಕೃತ ಶರೀರರುಂ ಮಾರ್ತಾಂಡೋಜ್ವಳ ಕೀರ್ತಿಯುತರನೇಕ ತರ್ಕ್ಕ ವ್ಯಾಕರಣ ಕಾವ್ಯ ನಾಟಕ ವೇದಾನ್ತ ಸಿದ್ಧಾಂತಾಭಿಜ್ಞರುಂ ಸಕಳಕಳಾ ಸರ್ವಜ್ಞರುಂ ಅನೇಕ ಲೋಕಾಲೋಕ ಪರಮ ಪರಂಜ್ಯೋತಿರ್ಮ್ಮೂರ್ತಿಯಾಂತರ್ಗ್ಗತ ಶರೀರಯುಕ್ತರುಂ ಸದಾಶಿವಭಕ್ತರುಂ" ಎಂದು ಶಾಸನಗಳು ವರ್ಣಿಸುತ್ತವೆ.

ಸಿಂದವಂಶದ ಜೋಗಮರಸ(ಕ್ರಿ. ಶ.೧೧೦೫),ಗೋಮದೇವರಸ (ಸು.ಶ.೧೨) ಹಾಗೂ ಅಯ್ಯಣಾಮಾತ್ಯರು (ಸು. ಶ. ೧೨) ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರರಾಗಿಯೂ ಕೊಮಾರಸ್ವಾಮಿ(ಕ್ರಿ. ಶ.೧೦೯೯) ದಂಡನಾಯಕನಾಗಿಯೂ ರಾಜಕಾರ್ಯ ಮಾಡಿದರೆ ಗಯಾಧರನು (ಕ್ರಿ. ಶ. ೧೧೪೭) ಇಮ್ಮಡಿ ಜಗದೇಕಮಲ್ಲನ ದಂಡನಾಯಕನಾಗಿಯೂ ಕಪ್ಪದೇವರಸನು ಮಹಾಮಂಡಲೇಶ್ವರನಾಗಿಯೂ (ಕ್ರಿ.ಶ.೧೧೫೪) ಹೈಹಯವಂಶದ ಮಲ್ಲಿದೇವರಸರು (ಕ್ರಿ. ಶ. ೧೧೨೯) ಭೂಲೋಕಮಲ್ಲ ಸೋಮೇಶ್ವರನ ಮಹಾಮಂಡಲೇಶ್ವರರಾಗಿಯೂ ಈ ಪ್ರದೇಶವನ್ನು ಆಳಿದರು. ಈ ಗ್ರಾಮದ ಶಾಸನಗಳಲ್ಲಿ ಸಿಂದವಂಶದ ಜೋಗಮರಸ ಹಾಗೂ ಕಪ್ಪದೇವರಸರ ವರ್ಣನೆ ಮಾತ್ರ ವಿವರವಾಗಿ ಬಂದಿರುತ್ತದೆ. ಮೆಕೆಂಜಿ ಸಂಗ್ರಹದಲ್ಲಿರುವ ಮುದನೂರ ಶಾಸನವೊಂದರಿಂದ ಕಪ್ಪದೇವರಸನ ತಂದೆಯಾದ ಲಕ್ಷ್ಮರಸನೂ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾಗಿದ್ದ ಸಂಗತಿ ಗೊತ್ತಾಗುತ್ತದೆ (Mec vol 334 LR No. 26, P 753-755). ಕ್ರಿ. ಶ. ೧೧೦೫ರ ಶಾಸನವೊಂದು ಮಹಾಮಂಡಲೇಶ್ವರ ಜೋಗಮರಸನನ್ನು "ಸಕಳ ವಿದ್ಯಾಧೀಶ್ವರಂ ಗೋಧರ್ಮ್ಮ ಚತುರ್ಮ್ಮುಖಂ ವಿವೇಕಗುಣ ರತ್ನಾವಳಿಶಿಖಾಮಣಿಯೂಖಂ ರಾಜ್ಯಾಸ್ಥಾನ ಜನಮುಖಪದ್ಮಿನೀ ಸರೋವರ ರಾಜಹಂಸ ಸರಸ್ವತೀ ಕರ್ಣ್ಣಾವತಂಸಂ ಬಗೆಕಾಱ ಸ್ಪರಿಶಲಿಂಗಂ ಚಂದಲದೇವಿಯರಣುಗಂ ಶೀಘ್ರ ಬಗೆಕಾಱಂ ಕೋಪಾನಳಂ ಪ್ರತಿವಾದಿ ಜಳಧಿ ಬಡವಾನಳಂ ಸಿದ್ಧಿಬುದ್ಧಿ ದಿಶಾಪಟ್ಟಂ ಗಾಯಕಮುಖ ಲಲಾಟಪಟ್ಟಂ ಬಗೆಕಾಱ ವಾದಿಗಜಸಿಂಗಂ ಸಾರಂಗ ಸಂಗೀತ ಗಾಯಕ ಪ್ರಸಂಗಂ ಮಹಾಕಾಳಿ ಮಹಾಲಕ್ಷ್ಮೀ ಲಬ್ಧವರ ಪ್ರಸಾದಂ ಮೃಗಮದಾಮೋದಂ ದುಷ್ಟ ಬಗೆಕಾಱಂ ಹೃದಯಾಕಂಪಂ ಬಗೆಕಾಱಂ ಜಗಝಂಪಂ ವಿದಗ್ಧ ವಿದ್ವಾಂಸ ಹೃದಯ ಸೂಱಂಕಾಱಣಯ್ಯಸಂಕಕಾಱಂ" ಎಂದು ಬಗೆಬಗೆಯಾಗಿ ಬಣ್ಣಿಸುತ್ತದೆ. ಇದರಿಂದ ಜೋಗಮರಸನ ಬಹುಮುಖವ್ಯಕ್ತಿತ್ವದ ಪರಿಚಯವಾಗುತ್ತದೆ. ಇದಲ್ಲದೆ ಪೆರ್ಜುಂಕದ ಸುಂಕವೆರ್ಗಡೆ ಮಾದೆಯ ನಾಯಕ, ಮಹಾಸಾಮಂತ ಹುಂಡೆಯ ನಾಯಕ ಹಾಗೂ ಹೆಗ್ಗಡೆ ಬಮ್ಮೆಯನಾಯಕರು ಕ್ರಿ. ಶ. ೧೧೨೯ ರಲ್ಲಿ ಕಲ್ಯಾಣ ಚಾಲುಕ್ಯ ಭೂಲೋಕಮಲ್ಲ ಸೋಮೇಶ್ವರನಲ್ಲಿದ್ದರು. ಮಹಾಪ್ರಧಾನ ದಂಡನಾಯಕ ಬಮ್ಮಿದೇವರಸ ಮತ್ತು ಶ್ರೀಕರಣ ವೈಜಯ್ಯರು ಕಳಚುರಿ ಸೋವಿದೇವನ (ಕ್ರಿ. ಶ. ೧೧೭೫) ಕಾಲದಲ್ಲಿ ರಾಜಕಾರ್ಯ ನಿರ್ವಹಿಸಿದ್ದಾರೆ. ಹಗರಿಟ್ಟಿಗೆ ನಾಡ ಹೆರ್ಜುಂಕದ ಸುಂಕವೆರ್ಗಡೆ ನಾಗೆಯ ನಾಯಕ (ಕ್ರಿ. ಶ. ೧೧೨೯), ಸಗರ ನಾಡ ಸಂಧಿವಿಗ್ರಹಿ ಆದಿಸೆಟ್ಟಿಯರ ಉಲ್ಲೇಖಗಳೂ ಇಲ್ಲಿಯ ಶಾಸನಗಳಲ್ಲಿವೆ.

ಲಕುಲೀಶಪಾಶುಪತದ ಎಳಮೇಲ ಸಿಂಹಪರ್ಷೆಯ ಶೈವಧರ್ಮ ಈ ಪ್ರದೇಶದಲ್ಲಿ ದಟ್ಟವಾಗಿ ಹಬ್ಬಿದ್ದಿತು. ಈ ಧರ್ಮದ ಯತಿಗಳು ದೇವಾಲಯ ಹಾಗೂ

ವಿದ್ಯಾಕೇಂದ್ರಗಳ ನಿರ್ಮಾಣಕಾರ್ಯದಲ್ಲಿ ಬಹಳಷ್ಟು ಆಸಕ್ತಿ ವಹಿಸಿದ್ದರು. ಹೀಗಾಗಿ ಇಲ್ಲಿ ಶಿವದೇವಾಲಯಗಳೂ ವಿದ್ಯಾಕೇಂದ್ರ(=ಮಠ)ಗಳೂ ಬೆಳೆದುಬರಲು ಸಾಧ್ಯವಾಯಿತು. ಇವುಗಳಲ್ಲಿ ಜರುಗುವ ಕಾರ್ಯಗಳು ಸಾಂಗವಾಗಿ ನಡೆಯಲು ಶೈವಯತಿಗಳೇ ದಾನ ಸ್ವೀಕರಿಸುವ ಉಪಕ್ರಮದಲ್ಲಿ ಪಾಲ್ಗೊಂಡರು. ಹೀಗೆ ಲಕುಲೀಶ ಪಾಶುಪತ ಶೈವಯತಿಗಳು ದೇವಾಲಯ ನಿರ್ಮಾಣ–ವಿದ್ಯಾಕೇಂದ್ರ ಸ್ಥಾಪನೆ–ದಾನಸ್ವೀಕರಣ ದಂಥ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳತ್ತ ಆದ್ಯ ಗಮನ ಹರಿಸಿದರು. ಇದರಿಂದ ಅಂದಿನ ಸಮಾಜದಲ್ಲಿ ಧಾರ್ಮಿಕಭಾವನೆ, ತ್ಯಾಗಗುಣಗಳು ಬಲವಾಗಿ ಬೆಳೆದುಬರಲು ಸಾಧ್ಯವಾಯಿತು.

ಬಸವಪೂರ್ವಯುಗದ ಶರಣ ಜೇಡದಾಸಿಮಯ್ಯನ ಆರಾಧ್ಯದೈವ ರಾಮನಾಥ. ಈ ರಾಮನಾಥ ದೇವಾಲಯ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದಿಂದಲೂ ಅತ್ಯಂತ ಪ್ರಸಿದ್ಧಿ ಪಡೆದಿದ್ದವು. ಅಂದಿನಿಂದಲೂ ಮುದನೂರ ಗ್ರಾಮ ಲಕುಲೀಶ ಪಾಶುಪತದ ಎಂಮೇಲ ಸಿಂಹಪರ್ಷೆಯ ಪ್ರಬಲವಾದ ಕೇಂದ್ರವಾಗಿದ್ದಿತು. ಇಲ್ಲಿಯ ಬಹುಸಂಖ್ಯೆಯ ಶಾಸನಗಳಲ್ಲಿ ಈ ಎರಡೂ ದೇವಾಲಯಗಳ ಉಲ್ಲೇಖ ಮೇಲಿಂದ ಮೇಲೆ ಬರುತ್ತದೆ. ಇದರಿಂದ ರಾಮೇಶ್ವರ ಅಥವಾ ರಾಮನಾಥ ಮತ್ತು ಲಕ್ಷ್ಮಣೇಶ್ವರ ದೇವಾಲಯಗಳು ಈ ಗ್ರಾಮದ ಪ್ರಮುಖ ದೇವಾಲಯಗಳಾಗಿದ್ದವೆಂಬ ಅಂಶ ವಿದಿತವಾಗುತ್ತದೆ.

ದಂಡನಾಯಕ ಕುಮಾರಸ್ವಾಮಿ ಪ್ರತಿಷ್ಠಾಪಿಸಿದ ಮೂಲಸ್ಥಾನ ಕುಮಾರೇಶ್ವರ ದೇವಾಲಯದ ಉಲ್ಲೇಖ ಕ್ರಿ. ಶ. ೧೧೯೯ರ ಶಾಸನವೊಂದರಲ್ಲಿದೆ. ಇದಲ್ಲದೆ ಮಾಚೇಶ್ವರ, ಬೊಂಕೇಶ್ವರ, ಭೈರವ, ಚಂದೇಶ್ವರ, ಅಗಸ್ತ್ಯೇಶ್ವರ, ಮಾರ್ಕಂಡೇಯ, ನಾರಾಯಣ ದೇವಾಲಯಗಳೂ ಇಲ್ಲಿದ್ದುದನ್ನು ಶಾಸನಗಳು ಸೂಚಿಸುತ್ತವೆ.

ಕ್ರಿ. ಶ. ೧೧೭೧ರ ಹೂವಿನಹಡಗಲಿ ಶಾಸನ ಸಿಂಹಪರ್ಷೆಯ ಮಲೆಯಾಳ ಪಂಡಿತನು ಕಲ್ಯಾಣ ಚಾಲುಕ್ಯರ ಸಮಯದಲ್ಲಿ ಮುದಿನೀರ ತೀರ್ಥದ ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದುದನ್ನು ತಿಳಿಸಿವೆ, ಗೋಕರ್ಣರಾಶಿ ಪಂಡಿತ ದೇವರ ಪ್ರಶಿಷ್ಯ ತೇಜೋರಾಶಿ ಪಂಡಿತನು ಕಲ್ಯಾಣ ಚಾಲುಕ್ಯರ ಸಮಯದಲ್ಲಿ ಮುದಿನೀರ ತೀರ್ಥದ ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿಯೂ(ಸು. ಶ. ೧೨) ಬಲ್ಲಜೀಯನು ಕಳಚುರಿ ಪುರ ಕಾಲದಲ್ಲಿ ರಾಮೇಶ್ವರದೇವಾಲಯದ ಸ್ಥಾನಿಕನಾಗಿಯೂ(ಕ್ರಿ. ಶ. ೧೧೬೭) ಇದ್ದುದನ್ನು ಈ ಗ್ರಾಮದ ಶಾಸನಗಳು ಉಲ್ಲೇಖಿಸುತ್ತವೆ. ಇದಲ್ಲದೆ ಬ್ರಹ್ಮರಾಶಿ ಪಂಡಿತ ಹಗರಿಟ್ಟಗೆಯ ಉಗ್ರ ಭೀಮೇಶ್ವರ ದೇವಾಲಯದ ಸ್ಥಾನಪತಿಯಾಗಿದ್ದ ಸಂಗತಿ ಕ್ರಿ. ಶ. ೧೧೯೯ರ ಶಾಸನದಿಂದ ಗೊತ್ತಾಗುತ್ತದೆ.

ಮಧ್ಯಕಾಲೀನ ಕರ್ನಾಟಕದ ಮೌಲ್ಯಗಳಲ್ಲಿ ದಾನವೂ ಒಂದು. ಈ ದಾನ ಮೌಲ್ಯವನ್ನು ಬದುಕಿದ ಜನರು ದೇವಾಲಯದ ವಿವಿಧ ಕಾರ್ಯಗಳಿಗಾಗಿ ಬಹುವಿಧದ ಬಹುಮೊತ್ತದ ದತ್ತಿಗಳನ್ನು ನೀಡಿದ್ದಾರೆ. ಮಹಾಜನರು-ಚಕ್ರವರ್ತಿಗಳು (ಕಲ್ಯಾಣ ಚಾಲುಕ್ಯ, ಕಳಚುರಿ) – ಮಹಾಮಂಡಲೇಶ್ವರರು – ದಂಡನಾಯಕರು-ವರ್ತಕರು-ವರ್ತಕ ಸಂಘಗಳು– ಸಾಮಾನ್ಯರು – (ರಾಜವರ್ಗದ) ಸ್ತ್ರೀಯರು ವಿಶೇಷವಾಗಿ ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳ ಅಂಗಭೋಗ, ರಂಗಭೋಗ, ಚೈತ್ರ, ಪವಿತ್ರ, ನಂದಾದೀವಿಗೆ, ನೈವೇದ್ಯಗಳಿಗಾಗಿ ಭೂಮಿ–ಹಣಗಳನ್ನು ವೈಯಕ್ತಿಕ ವಾಗಿ ಇಲ್ಲವೆ ಸಾಮೂಹಿಕವಾಗಿ ದಾನ ಮಾಡಿದ್ದಾರೆ. ಹೀಗೆ ಸಮಾಜದ ವಿವಿಧ ವರ್ಗದ ಜನರು ದೇವಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದು ತಿಳಿದು ಬರುತ್ತದೆ.

ಈ ಗ್ರಾಮದಲ್ಲಿ ಸ್ಥಾಪನೆಯಾದ ಉತ್ತರೇಶ್ವರ ದೇವಾಲಯಕ್ಕೆ ಸಿಂದವಂಶದ ಮಹಾಮಂಡಲೇಶ್ವರ ಜೋಗಮರಸನ ಮಡದಿ ತಾರಾದೇವಿ ಕ್ರಿ. ಶ. ೧೧೦೫ ರಲ್ಲಿ ಭೂಮಿ ದಾನ ಮಾಡಿದುದು ಇಲ್ಲಿ ಗಮನಿಸುವಂಥದಾಗಿದೆ.

ದೇವಾಲಯದ ನಂದಾದೀವಿಗೆಯ ಎಣ್ಣೆಗಾಗಿ ದೇವರ ಹೆಸರಿನಲ್ಲಿ ಎಣ್ಣೆಯ ಗಾಣಗಳಿರುತ್ತಿದ್ದವು. ಶಾಸನಗಳು ಉಲ್ಲೇಖಿಸುವ "ರಾಮನಾಥ ದೇವರ ಶಿಲಾಗಾಣ ಕ್ರಿ. ಶ. ೧೧೮೨") "ಉಗ್ರಮಾರ್ತಂಡದೇವರ ಶಿಲಾಗಾಣ (ಕ್ರಿ. ಶ. ೧೧೮೨)" ಗಳು ರಾಮನಾಥ ಹಾಗೂ ಉಗ್ರಮಾರ್ತಂಡದೇವರ ಹೆಸರಿನಲ್ಲಿ ಸ್ಥಾಪಿಸಿದ ಎಣ್ಣೆಯ ಗಾಣಗಳಾಗಿರುತ್ತವೆ.

ಶಾಸನಗಳಲ್ಲಿ ಬರುವ "ರಾಮೇಶ್ವರದೇವರ ಗದ್ದೆ. ರಾಮೇಶ್ವರದೇವರ ಮಾನ್ಯದ ಗದ್ದೆ (ಕ್ರಿ. ಶ, ೧೧೯೯)", "ರಾಮೇಶ್ವರ ದೇವರ ಮಾನ್ಯದ ಕೆಯಿ (ಕ್ರಿ. ಶ. ೧೧೦೫)" "ಚಂದೇಶ್ವರ ದೇವರ ಕೆಯ್ (ಕ್ರಿ. ಶ. ೧೧೯೯)", "ಬೊಂಕೇಶ್ವರ ದೇವರ ಕೆಯಿ (ಕ್ರಿ.ಶ. ೧೧೯೯)" ಎಂಬ ಉಲ್ಲೇಖಗಳು ರಾಮೇಶ್ವರ, ಚಂದೇಶ್ವರ, ಬೊಂಕೇಶ್ವರ ದೇವಾಲಯಗಳ ಹೆಸರಿನಲ್ಲಿರುವ ಭೂಮಿಯನ್ನು ಸೂಚಿಸುತ್ತವೆ.

ಕಲ್ಯಾಣ ಚಾಲುಕ್ಯರಿಂದ ಮೊದಲುಗೊಂಡು ಯಾದವರ ಕಾಲದ ವರೆಗೂ ಮುದನೂರ ಗ್ರಾಮ ಪ್ರಮುಖವಾದ ವಾಣಿಜ್ಯಕೇಂದ್ರವೆನಿಸಿದ್ದಿತು. ಅಯ್ಯಾವೊಳೆ ಐನೂರ್ವರು, ಮೂವತ್ತಾರುಬಾಡದ ಮುಮ್ಮುರಿದಂಡರು, ಸಗರವೈನೂರುಂ ಬಾಢದ ಸೆಟ್ಟಿಗುತ್ತರು, ಆರುಂ ಶಾಸನದ ಮನೆಯ ಸೆಟ್ಟಿಯರು, ನಕರರು ಎಂಬ

ವರ್ತಕ ಪ್ರಕಾರದವರೂ ಮೂವತ್ತಾರುಂ ಬೀಡಿನ ಉಭಯ ನಾನಾದೇಸಿಯರು (ವಿವಿಧ ವರ್ತಕ ಪ್ರಕಾರದವರು) ಭತ್ತ, ಜೋಳ, ಅಡಿಕೆ, ಮೆಣಸು, ಜೀರಗಿ, ಸಾಸಿವೆ, ಇಂಗು, ಎಲೆ, ಅಕ್ಕಿ, ಶುಂಠಿ, ಬೆಲ್ಲ, ಅರಿಷಿಣ, ಕರ್ಪೂರ, ಕಸ್ತೂರಿ ಮುಂತಾದ ಸರಕುಗಳನ್ನು ಪಸುಬೆಯಲ್ಲಿ ತುಂಬಿ ಎತ್ತು-ಕತ್ತೆ-ಕೋಣಗಳ ಮೇಲೆ ಹೇರಿಕೊಂಡು ಬಂದು ಮುದನೂರ ಸಂತೆಯಲ್ಲಿ (ತೂಗಿ-ಅಳೆದು-ಎಣಿಸಿ) ಮಾರುತ್ತಿದ್ದರು.

ಮಾಡಗೆಯ* ರಾಮಿಸೆಟ್ಟಿ ಈ ಭಾಗದ ಸುಪ್ರಸಿದ್ಧ ವರ್ತಕನಾಗಿದ್ದ (ಕ್ರಿ. ಶ. ೧೧೨೯). ಇದಲ್ಲದೆ ಸೆಟ್ಟಿಗುತ್ತ ದೇವಣಸೆಟ್ಟಿ (ಕ್ರಿ. ಶ. ೧೧೮೫), ಸಗರ ಐನೂರುಂ ಬಾಡದ ಸೆಟ್ಟಿಗುತ್ತ ರೇಚಸೆಟ್ಟಿ (ಕ್ರಿ.ಶ. ೧೨೧೮), ಹಗರಿಟ್ಟಗೆ ನಾಡಸೆಟ್ಟಿ ಮೂಲಿಸೆಟ್ಟಿ (ಕ್ರಿ. ಶ. ೧೧೨೯), ಸಗರ ಐನೂರುಂ ಬಾಡದ ಕೇಣಿಕಾರರನ್ನೂ (ಕ್ರಿ. ಶ. ೧೧೨೯) ಶಾಸನಗಳು ಹೆಸರಿಸುತ್ತವೆ.

ಸ್ತ್ರೀ ಸಮಾಜಕ್ಕೆ ಸಂಬಂಧಿಸಿದಂತೆ ಇಲ್ಲಿ ಸಿಗುವ ವಿವರಗಳು ಅತ್ಯಂತ ವಿರಳ. ಕ್ರಿ. ಶ. ೧೧೧೫ರ ಶಾಸನವೊಂದು ಸಿಂದವಂಶದ ಮಹಾಮಂಡಲೇಶ್ವರ ಜೋಗಮರಸನ ಮನೋನಯನವಲ್ಲಭೆ ತಾರಾದೇವಿಯನ್ನು ಉಲ್ಲೇಖಿಸುತ್ತ " ಅನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಳ ಭೋಗ ಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆ ಕಳಹಂಸಯಾನೆ ಶೃಂಗಾರ ವಿದ್ಯಾಧರೆ ಸಕಳ ಕಳಾಧರೆ ಧರಾಕಾಂತಶ್ರೀಪ್ರರ ಮಕುಟ ಚೂಡಾಮಣಿ ಪರಿವಾರ ಚಿಂತಾಮಣಿಯಾಶ್ರಿತಜನ ಕಲ್ಪತರು ಅಮೃತವಾಣಿ ಸಮಸ್ತಿತ ಗಾತ್ರಪವಿತ್ರೆ ಸುಜನೈಕವಿ ತ್ರೆ ಶ್ರೀ ರಾಮೇಶ್ವರ ದೇವರ ಲಬ್ಧವರ ಪ್ರಸಾದೆ ದಾನ ವಿನೋದೆ ಸಕಳಧರ್ಮಶಾಸ್ತ್ರಾರ್ಥ ಪ್ರಮೋದೆ ಕಸ್ತೂರಿಕಾಮೋದೆ " ಎಂದು ವರ್ಣಿಸುತ್ತದೆ. ಇದರಿಂದ ತಾರಾದೇವಿಯ ರೂಪ-ಸಂಪತ್ತು-ವಿದ್ವತ್ತು-ಪರೋಪಕಾರ-ದಾನ-ಧರ್ಮ ಗುಣಗಳು ತಿಳಿದುಬರುತ್ತವೆ.

ಹೊಸಂತಿಲ ಹಾಗ (ಹೊಸ್ತಿಲ ತೆರಿಗೆ, ಕ್ರಿ. ಶ. ೧೨೧೪), ಗಾಣಾಯ (ಎಣ್ಣೆಯ ಗಾಣದ ತೆರಿಗೆ. ಕ್ರಿ. ಶ. ೧೧೪೨), ಬೀರವಣ (ಸಾಗೆಯ ತೆರಿಗೆ ? ಕ್ರಿ. ೧೧೨೯), ಸೆಟ್ಟಿದೆರೆ (ವರ್ತಕರ ತೆರಿಗೆ, ಕ್ರಿ. ಶ. ೧೨೨೯), ಅರುವಣ (ಅಲ್ಪ ತೆರಿಗೆ ? ಕ್ರಿ. ಶ. ೧೧೭೫), ಬಿಳ್ಕೊಡೆ (ಕ್ರಿ. ಶ. ೧೧೨೫), ಹೆಪ್ಪುಂಕ (ಎಲೆ ಅಡಿಕೆಯ ತೋಟದ ಸುಂಕ ? ಕ್ರಿ. ಶ. ೧೧೪೬), ವಡ್ಡರಾವುಳ (ಅಡಿಕೆಯ ಸುಂಕ ?, ಕ್ರಿ. ಶ. ೧೧೪೬) ಎಂಬಿವು ಮಧ್ಯಕಾಲೀನ ಕರ್ನಾಟಕದ ತೆರಿಗೆಗಳಾಗಿದ್ದು, ಇವು ಈ ಪ್ರದೇಶದಲ್ಲಿಯೂ ಪ್ರಚಲಿತದಲ್ಲಿದ್ದವು. "ಮುವಿನೀರ ಹವಿನೆಂಟು ಸಾಸಿರ

* ಇದು ಒಂದು ಗ್ರಾಮದ ಹೆಸರು.

ಮತ್ತರು ಭೂಮಿ " ಎಂಬ ವಾಕ್ಯ ಅಂದಿನ ಮುದನೂರ ಗ್ರಾಮದ (ಸುತ್ತಮುತ್ತಲಿನ) ಒಟ್ಟು ಭೂಮಿಯ ವಿಸ್ತೀರ್ಣವನ್ನು ಸೂಚಿಸುವಂತಿದೆ.

ಮುದನೂರಿನಲ್ಲಿ ದೊರೆಯುವ ಹದಿನೇಟೂ ಶಾಸನಗಳು ಗದ್ಯದಲ್ಲಿರುತ್ತವೆ. ಮಹಾಜನರು, ಮಹಾಮಂಡಲೇಶ್ವರರು ಹಾಗೂ ಮಹಾಮಂಡಲೇಶ್ವರರ ಸತಿಯರನ್ನು ಮಾತ್ರ ಪ್ರಶಸ್ತಿ ಗದ್ಯದಲ್ಲಿ ವರ್ಣಿಸಲಾಗಿದೆ. ಈ ಪ್ರಶಸ್ತಿ ಗದ್ಯದ ಬಂಧ ಅತ್ಯಂತ ಮನೋಹರವೂ ಬಂಧುರವೂ ಆದುದಾಗಿರುತ್ತದೆ.

ಒಟ್ಟಿನಲ್ಲಿ ಈ ಶಾಸನಗಳ ಅಧ್ಯಯನದಿಂದ ಮುದನೂರ ಗ್ರಾಮ ಕಲ್ಯಾಣ ಚಾಲುಕ್ಯರ ಅವಧಿಯಿಂದ ಯಾದವರ ಕಾಲದವರೆಗೆ ಅಗ್ರಹಾರವಾಗಿ-ಲಕುಲೀಶ ಪಾಶುಪತ ಶೈವದ ನೆಲೆಯಾಗಿ-ವಾಣಿಜ್ಯ ಕೇಂದ್ರವಾಗಿ ಕಂಗೊಳಿಸಿದ ವಿಷಯ ಸ್ಪಷ್ಟವಾಗುತ್ತದೆ. ಮುದನೂರ ಗ್ರಾಮದ ಎಲ್ಲ ಶಾಸನಗಳ ಪಾಠ ಹೀಗಿರುತ್ತವೆ.*

ಚಿಕ್ಕ ಮುದನೂರ : ೧

ಭೃಂಗಿ ಗುಡಿಯ ಮುಂದೆ ಬಿದ್ದಿರುವ ಕಂಬದ ಮೇಲೆ ಪ್ರಸ್ತುತ ಶಾಸನವಿರುತ್ತದೆ.ಕಲ್ಯಾಣಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಹುಟ್ಟಿದ ಶಾಸನವಿದು.

ಅಗ್ರಹಾರ ಮುದಿನೀರ ಊರೊಡೆಯ ಪ್ರಮುಖವಾಗಿ ಐದುನೂರು ಮಹಾಜನರು ಕು(ಕೊ)ಮಾರಸ್ವಾಮಿ ದಂಡನಾಯಕ ಪ್ರತಿಷ್ಠಾಪಿಸಿದ ಕುಮಾರೇಶ್ವರ ದೇವರ ಅಂಗಭೋಗ, ರಂಗಭೋಗ, ನೈವೇದ್ಯ, ನಂದಾದೀವಿಗೆ ಹಾಗೂ ಜೀರ್ಣೋದ್ಧಾರ ಕಾರ್ಯಗಳು ನಿರಂತರವಾಗಿ ನಡೆಯಲು ಹಗರಿಟ್ಟಿಗೆಯ ಉಗ್ರಭೀಮೇಶ್ವರ ದೇವಾಲಯದ ಸ್ಥಾನಾಚಾರ್ಯ ಬ್ರಹ್ಮರಾಶಿ ಪಂಡಿತರ ಕಾಲು ತೊಳೆದು ಭೂಮಿ, ಗಾಣ, ಪಣ, ಅಂಗಡಿಗಳನ್ನು ದಾನವಾಗಿ ಕೊಟ್ಟಿದ್ದಾರೆ. (ಮುದಿನೀರ) ಊರೊಡೆಯ ಮುಖ್ಯವಾಗಿ ಸಮಸ್ತ ಮಹಾಜನರು, ವರ್ತಕಪ್ರಕಾರದವರಾದ ನಕರರು ಹಾಗೂ ಬಣಜವೈಸೂರ್ವರು(ಬಣಂಜಿಗರು) ರಾಮೇಶ್ವರ ದೇವರ ಅಂಗಭೋಗ, ನೈವೇದ್ಯಗಳಿಗಾಗಿ ಸಂತೆಯ ಆಯ ಮತ್ತು ಭೂಮಿಗಳನ್ನು ದತ್ತಿಯಾಗಿ ಸಲ್ಲಿಸಿದ್ದಾರೆ. ಹೀಗೆ ಈ ಶಾಸನದಲ್ಲಿ ಎರಡು ದಾನಗಳ ಉಲ್ಲೇಖವಿರುತ್ತದೆ.

---

* ಈ ಶಾಸನಗಳ ಅಧ್ಯಯನ ಹಾಗೂ ಪ್ರಕಟಣೆಗೆ ಅವಕಾಶ ಕಲ್ಪಿಸಿಕೊಟ್ಟ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ಪರಿವೀಕ್ಷಣಾ ಕಾರ್ಯದಲ್ಲಿ ಸಹಕರಿಸಿದ ಪ್ರೊ. ಎಂ. ಎಂ. ಪಡಶೆಟ್ಟಿ ಅವರಿಗೂ ಸಕಲ ಸಹಾಯಗಳನ್ನು ನೀಡಿ ಉಪಕರಿಸಿದ ಮುದನೂರ ಗ್ರಾಮದ ಶಿವಬಸಪ್ಪ ಪಡಶೆಟ್ಟಿ ಅವರಿಗೂ ಅನಂತ ಕೃತಜ್ಞತೆಗಳು.

ಸಾಲು ೨೦-೨೩ ರಲ್ಲಿ ಬರುವ “ ಶ್ರೀಮಚ್ಚಾಳುಕ್ಯ ವಿಕ್ರಮಕಾಲದ ೨೪ನೆಯ ಪ್ರಮಾದಿ ಸಂವ್ವಚ್ಛರದ ಪುಶ್ಯದಮಾವಾಸ್ಯೆ ಬ್ರಿಹಸ್ಪತಿವಾರ ಉತ್ತರಾಯಣ ಸಂಕ್ರಮಣ ವ್ಯತೀಪಾತ'' ಕ್ರಿ. ಶ. ೧೧೯೯ ಡಿಸೆಂಬರ ೧೪ ಬುಧವಾರಕ್ಕೆ ಸಮಾನವಾಗಿರುತ್ತದೆ.

● ಇಲ್ಲಿ ಬರುವ ಹಾಳಕಟ್ಟೆ, ಬಬ್ಬುಲೆಯ ಕಟ್ಟೆ, ಅಗ್ಗಿಣಿಯ ದಾರಿ, ಜನ್ನದ ಬಾವಿ ಮೊದಲಾದ ಸ್ಥಳಸೂಚಿ ಪದಗಳನ್ನೂ ಕುಂಬಿಗೆ ಎಂಬ ವಿಶೇಷಪದವನ್ನೂ ಗಮನಿಸಬೇಕು. ಮುವನೂರ ಗ್ರಾಮದ ಪ್ರಾಚೀನರೂಪ ಮುದಿನೀರ.

ಒಂದನೆಯ ಮುಖ :

೧ ಸ್ವಸ್ತಿ [॥*] ಸಮಸ್ತ ಭುವನಾಶ್ರಯಂ ಶ್ರೀ ಪ್ರಿಥ್ವೀವ-

೨ ಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾ-

೩ ರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರ-

೪ ಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯ-

೫ ಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾ ಚಂ-

೬ ದ್ರಾರ್ಕ್ಕ ತಾರಂಬರಂ ಸಲುತ್ತಮಿರೆ [। *] ಕಲ್ಯಾಣಪುರ-

೭ ದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂ-

೮ ಗೆಯ್ಯುತ್ತಮಿರೆ [॥ *] ಯಮನಿಯಮ ಸ್ವಾಧ್ಯಾಯ ಧ್ಯಾ-

೯ ನಧಾರಣ ಮೌನಾನುಷ್ಠಾನ ಜಪಸಮಾಧಿ ಶೀ-

೧೦ ಲಗುಣಸಂಪನ್ನರುಂ ಸಮಸ್ತ ವಿದ್ವಜ್ಜನ ಪ್ರಸನ್ನರುಂ

೧೧ ಯಜನಯಾಜನ ಅಧ್ಯಯನ ಅಧ್ಯಾಪನ

೧೨ ದಾನ ಪ್ರತಿಗ್ರಹ ಶ(ಷ)ಟ್ಕರ್ಮ್ಮ ನಿರತರೌಪಾಸನಾ-

೧೩ ಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪರರುಂ

೧೪ ಅನೇಕ ಯಜ್ಞಾವಭ್ರಿತಾವಗಾಹನ ಪವಿ-

೧೫ ತ್ರೀಕ್ರಿತ ಶರೀರರುಂ ಮಾರ್ತ್ತಾಂಡೋಜ್ವಳ ಕೀರ್ತ್ತಿಯುತರ-

೧೬ [ನೇಕ ತರ್ಕ್ಕವ್ಯಾಕರಣ] ಕಾವ್ಯ ನಾಟಕ ವೇದಾಂತ

೧೭ [ಸಿದ್ಧಾಂತಾ]ಭಿಜ್ಞರುಂ ಸಕಳಕಳಾ ಸರ್ವ್ವ-

೧೮ [ಜ್ಞರುಂ] ...... ಸರ್ವ್ವನಮಸ್ಯದಗ್ರಹಾರ

ಎರಡನೆಯ ಮುಖ :

೧೯ ದಕ್ಷಿಣ ವಾರಣಾಸಿ ಮುದಿಸೀರೂರೊಡೆಯ ಪ್ರಮುಖಪ–
೨೦ ಶೇಶ(ಷ) ಮಹಾಜನಂಗಳೈಸೂರ್ವ್ವರುಂ ಶ್ರೀಮಚ್ಚಾಳುಕ್ಯ ವಿಕ್ರ–
೨೧ ಮ ಕಾಲದ ೨೪ನೆಯ ಪ್ರಮಾದಿ ಸಂವ್ವತ್ಸರದ ಪುಶ್ಯ(ಷ್ಯ)–
೨೨ ದಮಾವಾಸ್ಯೆ ಬ್ರಿಹಸ್ಪತಿವಾರ ಉತ್ತರಾಯಣ ಸಂ–
೨೩ ಕ್ರಮಣ ವ್ಯತೀಪಾತದಂದು ಶ್ರೀ ಕೊ[ಮಾ]ರ ಸ್ವಾಮಿ ದಂಣ್ಣನಾ–
೨೪ ಯಕರು ಪ್ರತಿಷ್ಠೆ ಮಾಡಿಸಿದ ಮೂಲಸ್ತಾನಂ ಶ್ರೀ–
೨೫ ಕುಮಾರೇಶ್ವರದೇವರಂಗಭೋಗ ನಿವೇದ್ಯಕ್ಕಂ ನಂದಾದೀವಿಗೆಗಂ ಜೀ–
೨೬ ರ್ಣ್ನೋದ್ಧಾರಕ್ಕಂ ಹಗರಿಟಗೆಯ ಶ್ರೀಮದುಗ್ರಭೀಮೇ–
೨೭ ಶ್ವರದೇವರ ಸ್ಥಾನದಾಚಾರ್ಯ್ಯರು ಬ್ರಹ್ಮರಾಶಿ
೨೮ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕ ಮಾಡಿ ಹಾ–
೨೯ ಳ ಕಟ್ಟೆಯುಲು ಶ್ರೀ ರಾಮೇಶ್ವರದೇವರ ಗದ್ದೆಯಿಂ ಅನಂತ–
೩೦ ರಂ ಬಡಗಲು ಮೂಡಲು ಕೋಲಲು ದೇವರಿಗೆ ಬಿಟ್ಟ
೩೧ ಗದ್ದೆ ಕಂಮ್ಮ ೪೫೦ [।*] ಅದಱ ಬಳಿಯ ಹಾಳಸೆಲಸೊಳಗಾಗಿ ಬಬ್ಬ–
೩೨ ಲೆಯ ಕಟ್ಟೆಯುಲು ಶ್ರೀರಾಮೇಶ್ವರದೇವರ ಮಾನ್ಯದ
೩೩ ಗದ್ದೆಯಿಂ ಮೂಡಲು ಆ ಕಟ್ಟೆಯ ಕಾಲಿಂದಂ ಪಡುವಲು
೩೪ ಗದ್ದೆ ಹಾಗವೊಂದು [।*]ಶ್ರೀರಾಮೇಶ್ವರದೇವರ ಕೆಯ್ಯಿಂ ಪಡುವ–
೩೫ ಲು ಅಗ್ಗಣಿಯ ದಾರಿಯಿಂ ಮೂಡಲು ಕೆಯ್ಮತ್ತರು ಪ–
೩೬ ದಿನೆಂಟು [।*]ಜಂಸದ ಬಾವಿಯಿಂ ತೆಂಕ ತೋಂಟ ಮತ್ತರೊಂದು [।*] ದೇವ–
೩೭ ರ ಕೇರಿಯೊಳಗಣ ಗಾಣವೊಂದು ಅಂಗಡಿ [೧೫ ॥ ಪೂ]–

ಮೂರನೆಯ ಮುಖ :

೩೮ ರೊಡೆಯ ಪ್ರಮುಖ ಅಶೇಶ(ಷ) ಮಹಾಜನಂಗಳುಂ
೩೯ ನಖರಂಗಳುಂ ಬಣಜವ್ವೈಸೂರ್ವ್ವರುಂ ಶ್ರೀರಾಮೇಶ್ವರ ದೇವ–
೪೦ ರಂಗಭೋಗ ನಿವೇದ್ಯಕ್ಕೆ ಬಿಟ್ಟ ಧರ್ಮ್ಮದಂತೆಂದಡೆ । ಹೊ(ಪೂ)–
೪೧ [ರಿ*]ಗೆ ಬಂದ ಮಾಱಿದ ಘತ್ತದಲು ಹೊಂಗೆ ಬಳ್ಳವೊಂದು
೪೨ ಸಂಣ್ಣತ ಮಾಸವೆರಡು ಸಟ್ಟುಗ ಹೋಱ । ದಾವಪಾಡದಿಂ ತೆಂ–

೪೩ ಕಲು ಚಂದೇಶ್ವರ ದೇವರ ಕೆಯ್ಯಿಂ ಮೂಡಲು ಪಾಚೇಶ್ವರದಿಂ ಬ–
೪೪ ಡಗಲು ಬೊಂಕೇಶ್ವರದ ಕೆಯ್ಯಿಂ ಮತ್ತರು ೨೪ [।*] ಇದರಿಂ ಬಡಗಲು ಗದ್ದೆ
೪೫ ಭೈರವದೇವರಿಗೆ ಪೊಲದ ಕಟ್ಟೊಳಗೆ ಗದ್ದೆ ಕಮ್ಮಂ ೪೫೦ [।*] ಪಗರಿ–
೪೬ ಟ್ಟಿಗೆಯು ಭೀಮೇಶ್ವರ ದೇವರ ಕಕ್ಕೇಙ್ಕಕ್ಕೆವೇಶ್ವರ ದೇವರ
೪೭ ರ ಮುದಿನೀರ ಕುಮಾರೇಶ್ವರ ದೇವರ ಬೊಂಕೇಶ್ವರ ದೇವರ
೪೮ ಕುಂಬಿಗೆವೊಂದು ॥ ಇ (ಈ) ಧರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ
೪೯ ವೇದ ಪಾರಗರಪ್ಪ ಬ್ರಾಹ್ಮಣರ್ಗ್ಗೆ ವಾರಣಾಸಿ ತಟದಲ್ಲಿ
೫೦ ಸಹಸ್ರ ಕವಿಲೆಯ ಕೊಟ್ಟ ಫಲಮಕ್ಕು । ಇದಕ್ಕೊಂ–
೫೧ ದಾನುಂ ಅಂನ್ಯಾಯವಂ ಚಿಂತಿಸಿದವರ್ಗ್ಗೆ ವಾರಣಾಸಿಯಲು
೫೨ ಸಹಸ್ರ ಕವಿಲೆಯ ಅಳಿದ ದೋಸಂ(ಷಂ) ಸಾರ್ಗ್ಗು॥ ಸ್ವದತ್ತಾಂ ಪರ
೫೩ ದತ್ತಾಂ ವಾ ಯೋ ಹರೇತಿ ವಿಂಸತಿ [।*] (ಸ) ಷಷ್ಟಿರ್ವ್ವರಿಶ ಸಹಸ್ರಾ–
೫೪ ಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ।

೨

ಗೋಪಾಲಸ್ವಾಮಿ ದೇವಾಲಯದ ಹಿಂದಿರುವ ಜೀರ್ಣಮಂಟಪದ ಎರಡನೆಯ ಕಂಬದ ನಾಲ್ಕನೆಯ ಮುಖ ಹಾಗೂ ಎರಡನೆಯ ಮುಖಗಳ ಮೇಲ್ಭಾಗದಲ್ಲಿ ಈ ಶಾಸನವನ್ನು ಕಂಡರಿಸಲಾಗಿದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕ ಮಲ್ಲನ ಆಳಿಕೆಯಲ್ಲಿ ಈ ಶಾಸನ ಹುಟ್ಟಿರುತ್ತದೆ.

ಅಗ್ರಹಾರ ಮುದಿನೀರ ಐದುನೂರು ಮಹಾಜನರ ಸನ್ನಿಧಾನದಲ್ಲಿ ಮಹಾ ಪ್ರಧಾನನೂ ಸುಂಕವೆಗ್ಗಡೆಯೂ ಆದ ಗಯಾಧರ ದಂಡನಾಯಕನು ಈ ಗ್ರಾಮದ ಪದಿನೆಂಟು ಸಾವಿರ ಮತ್ತರು ಭೂಮಿಯೊಳಗಿನ ಹೆರ್ಜುಂಕ ಹಾಗೂ ಪಡ್ಡರಾವುಳ ತೆರಿಗೆ ಹಣವನ್ನು ರಾಮೇಶ್ವರದೇವರ ಅಂಗಭೋಗ, ನೈವೇದ್ಯ, ನಂದಾದೀವಿಗೆ, ವಿದ್ಯಾಸತ್ರ ಮುಂತಾದವುಗಳಿಗೆ ದಾನವಾಗಿ ನೀಡಿದ್ದಾನೆ. ಇದಲ್ಲದೆ ಮುಂಮುರಿ ದಂಡ, ಮೂವತ್ತಾರು ಬೀಡಿನ (=ಸ್ಥಳದ) ಉಭಯ ನಾನಾದೇಸಿಯರು ಮುದಿನೀರಿನಲ್ಲಿ ಮಹಾಸಭೆಯಾಗಿ ನೆರೆದು ರಾಮೇಶ್ವರ ದೇವಾಲಯಕ್ಕೆ ಕೊಟ್ಟ ದತ್ತಿಯೊಂದರ ವಿಷಯವೂ ಇಲ್ಲಿದೆ.

ಸಾಲು ೧೧–೧೪ ರಲ್ಲಿಯ "ಜಗದೇಕಮಲ್ಲದೇವವ ರ್ಷದ ೯ಯ ಅಕ್ಷಯ ಸ[ಂ*]ವತ್ಸರದ ಪುಷ್ಯ ಬಹುಳ ೧ ಬ್ರಿಹಸ್ಪತಿವಾರ

೫ ಶ್ರೀರಾಮಂ ತದನುಜದ್ವಿಜವಿಸಷ್ಟಾರಿಷ್ಟತೀ-
೬ ರ್ತ್ಥವಾರಿ ಸಂಸ್ಪ್ರುಷ್ಟ ಪವಿತ್ರಗಾತ್ರರು-
೭ ಮಪ್ಪ ಶ್ರೀಮತ್ಸರ್ವ್ವನಮಶ್ಯದಗ್ರಹಾ-
೮ ರಂ ದಕ್ಷಿಣವಾರಣಾಸಿ ಮುದಿನೀರೂರೊಡೆ-
೯ ಯು ಪ್ರಮುಖ ಅಶೇಷ ಮಹಾಜನಂಗ-
೧೦ ಳು ಶ್ರೀ ಲಕ್ಷ್ಮೇಶ್ವರ ದೇವರ ಅಂಗಭೋಗ ನೈ-
೧೧ ವೇದ್ಯಕ್ಕೆ ಅಲ್ಲಿಯ ಸ್ಥಾನಿಕ ಬಲ್ಲಜೀಯರಿಗೆ
೧೨ ಕರಡಿಕಲ್ಲ ದಾರಿಯಿಂ ಬಡಗಲು ಆ ದೇವ-

ಒಂದನೆಯ ಮುಖದ ಕೆಳಭಾಗ

೧೩ ರ ಪೂರ್ವ್ವದ ಮಾಂನ್ಯದ ಪತ್ತುಗೆಯ ಬಡಗ-
೧೪ ಲು ಪೂರ್ವ್ವಬಾಧ ಪರಿಹಾರವಾಗಿ ಧಾರೆ-
೧೫ ಯೆಱೆದು ಬಿಟ್ಟ ಕೆಯಿ ಮಾಣಿಕೇಶ್ವರದ
೧೬ ಮತ್ತರು ೧೨ [॥*] ಇ(ಈ) ಧರ್ಮ್ಮವನಾರೊರ್ವ್ವರು ಪ್ರ-
೧೭ ತಿಪಾಳಿಸಿದವರ್ಗ್ಗೆ ಗಂಗೆ ವಾರಣಾಸಿಯ-
೧೮ ಲುಂ ಕುರುಕ್ಷೇತ್ರದೊಳು [ಂ*] ಚತುರ್ವ್ವೇದ ಪಾರಗ-
೧೯ ರಪ್ಪ ಬ್ರಾಹ್ಮಣರಿಗೆ ಸಹಸ್ರ ಕವಿಲೆ-
೨೦ ಯ ದಾನಂ ಮಾಡಿದ ಫಲವಕ್ಕು ॥ ಇ (ಈ) ಧರ್ಮ್ಮವಂ-
೨೧ ನಾರೊರ್ವ್ವರು ಕಿಡಿಸಿದಾತಂಗಂ ಉಪೇಕ್ಷಿಸಿದವರ್ಗ್ಗೆ ಗಂಗೆ-
೨೨ ವಾರಣಾಸಿಯಲುಂ ಕುರುಕ್ಷೇತ್ರದೊಳುಂ ಚತುರ್ವ್ವೇದ-
೨೩ ಪಾರಗರಪ್ಪ ಬ್ರಾಹ್ಮಣರುಮಂ ಸಹಸ್ರ ಕವಿಲೆ-
೨೪ ಯನಳಿದ ದೋಶಂ(ಷಂ) ಸಾರ್ಗ್ಗು ॥ ಓಂ ನಮಃ ಶಿವಾಯ ॥

೪

ಕಳಚುರಿ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲದ ಈ ಶಾಸನವನ್ನು ಗೋಪಾಲಸ್ವಾಮಿ ದೇವಾಲಯದ ಎರಡನೆಯ ಕಂಬದ ಒಂದು ಹಾಗೂ ಎರಡನೆಯ ಮುಖದ ಕೆಳಭಾಗದಲ್ಲಿ ಕಡರಿಸಲಾಗಿದೆ.

ಅಗ್ರಹಾರ ಮುದಿನೀರ ಗ್ರಾಮದ ಪ್ರಭು ಮುಖ್ಯವಾದ ಅಶೇಷ ಮಹಾಜನ, ಮಹಾಪ್ರಧಾನ ಸೇನಾಧಿಪತಿ ದಂಡನಾಯಕ ಕುಮಾರ ಬಮ್ಮದೇವರಸ ಹಾಗೂ

ಶ್ರೀಕರಣ ವೈಜಯ್ಯರು ಲಕ್ಷ್ಮಣೇಶ್ವರದೇವರ ಅಂಗಭೋಗ-ರಂಗಭೋಗ ಮತ್ತು ನೈವೇದ್ಯಗಳಿಗಾಗಿ ದೇವರಕೇರಿಯ ಅರುವಣವನ್ನು ದಾನವಾಗಿ ನೀಡಿದ ವಿಷಯ ವಿಲ್ಲಿದೆ.

ಸಾಲು ೨-೫ ರಲ್ಲಿ ಬರುವ "ರಾಯಮುರಾರಿ ಸೋವಿದೇವ ವರ್ಷದ ೯ ನೆಯ ಮನ [ಮಥ] ಸ[ಂ*] ವ್ವಛ್ಚರದ ಆಶ್ವಯುಜದಮಾವಾಸ್ಯೆ ಬ್ರಿಹಸ್ಪತಿ ವಾರ ವ್ಯತೀಪಾತಮುತ್ತರಾಯಣ ಶಂ(ಸಂ)ಕ್ರಮಣ" ಎಂಬ ಮಿತಿಯು ಕ್ರಿ. ಶ. ೧೧೭೫ ಅಕ್ಟೋಬರ ೧೬ ಗುರುವಾರಕ್ಕೆ ಸಮಾನವಾಗಿರುತ್ತದೆ.

● 'ದೇವರಕೇರಿಯರುವಣ' ಪದ ಗಮನಿಸುವಂಥದಾಗಿದೆ. ದತ್ತಿ ಬಿಟ್ಟ ಭೂಮಿ ಯಿಂದ ಅರ್ಧ (= ಅರ) ತೆರಿಗೆಯನ್ನೋ, ಹೆಸರಿಗೆ ಮಾತ್ರ ತೆಗೆದುಕೊಳ್ಳುವ ತೆರಿಗೆ ಯನ್ನೋ ಇದು ಸೂಚಿಸುವಂತೆ ಕಾಣುತ್ತದೆ (ನೋಡಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ ೩೯೭)

ಒಂದನೆಯ ಮುಖದ ಕೆಳಭಾಗ

೧ ಸ್ವಸ್ತಿ [।*] ಶ್ರೀಮತು ಕಳಚುರ್ಯ್ಯ ಭುಜಬಳ ಚಕ್ರ-
೨ ವರ್ತ್ತಿ ರಾಯಮುರಾರಿ ಸೋವಿದೇವವರ್ಷದ-
೩ ನೆಯ ಮನ[ಮಥ] ಸ [ಂ*] ವ್ವಛ್ಚರದ ಆಶ್ವಯುಜದ-
೪ ಮಾವಾಸ್ಯೆ ಬ್ರಿಹಸ್ಪತಿವಾರ ವ್ಯತೀಪಾ-
೫ ತಮುತ್ತರಾಯಣ ಶಂ(ಸಂ)ಕ್ರಮಣ-
೬ ದಂದು ಶ್ರೀರಾಮದತ್ತಿ ಸರ್ವ್ವನಮ-
೭ ಸ್ಯವಗ್ರಹಾರ ದಕ್ಷಿಣಾವಾರಣಾಸಿ
೮ ಮುದಿನೀರ ಪ್ರಭು ಮುಖ್ಯ ಅಶೇಶ(ಷ) ಮಹಾಜ-
೯ ನಂಗಳುಂ ಶ್ರೀಮನ್ಮಹಾಪ್ರಧಾನಂ ಸೇನಾ-
೧೦ ಧಿಪತಿ ಮಹಾಪ್ರಚಂಡ ದಂಡನಾಯಕ ಕು-
೧೧ ಮಾರಂ ಬಮ್ಮಿದೇವರಸರುಂ ಶ್ರೀಕರಣಂ

ಎರಡನೆಯ ಮುಖದ ಕೆಳಭಾಗ

೧೨ ● ದೆ ವೈಜಯ್ಯಂಗಳುಂ ಶ್ರೀ ಲಕ್ಷ್ಮಣೇಶ್ವ-
೧೩ ರ ದೇವರಂಗಭೋಗ ನೈವೇದ್ಯಕ್ಕೆ ಆ ದೇವರ

೧೪ ಕೇರಿಯುರುವಣಮಂ ಸರ್ವ್ವಬಾಧಾ ಪರಿ-
೧೫ ಹಾರವಾಗಿ ಆ ಚಂದ್ರಾರ್ಕ್ಕ ತಾರಂಬರಂ ನ-
೧೬ ಡೆವಂತಾಗಿ ಧಾರೆಯೆಱದು ಬಿಟ್ಟರು ॥

೫

ಗೋಪಾಲಸ್ವಾಮಿ ದೇವಾಲಯದ ಮೂರನೆಯ ಕಂಬದ ಎರಡನೆಯ ಹಾಗೂ ಮೂರನೆಯ ಮುಖದ ಕೆಳಭಾಗದಲ್ಲಿರುವ ಈ ಶಾಸನ. ಕಳಚುರಿ ಆಹವಮಲ್ಲನ ಕಾಲದಲ್ಲಿ ಹುಟ್ಟಿದೆ.

ಶ್ರೀರಾಮದತ್ತಿ ಸರ್ವನಮಸ್ಯದ ಅಗ್ರಹಾರ ಮುದಿನೀರ ಗ್ರಾಮದ ಲಕ್ಷ್ಮಣೇಶ್ವರ ದೇವರ ನಂದಾದೀವಿಗೆಯ ಎಣ್ಣೆಗಾಗಿ ಕೆಂಬಾವಿಯ ತೆಲ್ಲಿಗ ಕೇಶಿಯಣ್ಣ ಕಲ್ಲುಗಾಣ ಮಾಡಿಸಿಕೊಟ್ಟ ಉಲ್ಲೇಖವಿದೆ. ಇದಲ್ಲದೆ ಮುದಿನೀರ ಪ್ರಭು ಮುಖ್ಯವಾಗಿ ಸಮಸ್ತ ಮಹಾಜನರೂ ಸೆಟ್ಟಿಗುತ್ತ ಮತ್ತು ಮುಮ್ಮುರಿದಂಡರೆಂಬ ವರ್ತಕಪ್ರಕಾರದವರೂ ಕೂಡಿ ನೀಡಿದ ದಾನವೊಂದರ ಪ್ರಸ್ತಾಪವೂ ಇಲ್ಲಿದೆ.

ಸಾಲು ೨-೪ರಲ್ಲಿ ಬರುವ "ಶ್ರೀಮದಾಹವಮಲ್ಲದೇವವ [ರ್ಷ*]ದ ೪ ನೆಯ ಶುಭಕ್ರಿತು ಸಂವತ್ಸರ [ಮಾ]ರ್ಗ್ಗಶಿರ ಬಹುಳ ೧೩ ಬ್ರಿಹಸ್ಪತಿ [ವಾರ*]" ಮಿತಿಯು ಕ್ರಿ. ಶ. ೧೧೮೨ ನವಂಬರ ೨೫ ಗುರುವಾರಕ್ಕೆ ಸಮಾನವಾಗಿರುತ್ತದೆ.

ಎರಡನೆಯ ಮುಖದ ಕೆಳಭಾಗ

೧ ಸ್ವಸ್ತಿ [।*] ಕಳಚು [ರ್ಯ್ಯ ಚ]-
೨ ಕ್ರವರ್ತ್ತಿ ಶ್ರೀಮದಾಹಮಲ್ಲದೇವ [ವರ್ಷ*]-
೩ ದ ೪ ನೆಯ ಶುಭಕ್ರಿತು ಸಂವತ್ಸ [ರ ಮಾ*]-
೪ ರ್ಗ್ಗಶಿರ ಬಹುಳ ೧೩ ಬ್ರಿಹಸ್ಪತಿ[ವಾರ*]-
೫ ದಂದು ಶ್ರೀರಾಮದತ್ತಿ ಸರ್ವ್ವನಮಸ್ಯ[ದಗ್ರ*]-
೬ ಹಾರಂ ದಕ್ಷಿಣ ವಾರಣಾಸಿ ಮುದಿ[ನೀರ*]
೭ ಶ್ರೀ ಲಕ್ಷ್ಮಣೇಶ್ವರದೇವರ್ಗ್ಗೆ ನಂದಾದೀ [ವಿಗೆಯೆ*] -
೮ ಣ್ಣೆಗೆ ಕೆಂಬಾವಿಯ ತೆಲ್ಲಿಗ ಪೈಜಿಮ....
೯ ಮಗಂ ಕೇಶಿಯಣಂ ಶಿಲಾಗಾಣಮಂ [ಮಾ*]-
೧೦ ಡಿಸಿ ಸರ್ವ್ವನಮಸ್ಯದಗ್ರಹಾರಂ [ಮುದಿ*]-

೧೧ ಸೀರ ಪ್ರಭುಮುಖ್ಯಮಶೇಷ(ಷ) ಮಹಾ[ಜನಂಗ*]-
೧೨ ಳುಂ ಸೆಟ್ಟಿಗುತ್ತ ದೇವಣಸೆ-

ಮೂರನೆಯ ಮುಖದ ಕೆಳಭಾಗ

೧೩ [ಟ್ಟಿ ಸ*]ಮಸ್ತ ಮುಂಮುರಿದಂಡಂಗಳುಮಿ-
೧೪ [ರ್ದ್ದು*] ಸರ್ವ್ವಬಾಧೆ ಪರಿಹಾರವಾಗಿ
೧೫ ರಾಮನಾಥದೇವರ ಶಿಲಾಗಾಣದಿಂ
೧೬ ಶ್ರೀಮದುಗ್ರ ಮಾರ್ತ್ತಂಡದೇವ
೧೭ ಗಾಣದಿಂ ಬಡಗಲು ಸಾಧ್ಯಂ ಮಾಡಿ
೧೮ ಚಂದ್ರಾರ್ಕ್ಕ ತಾರಂಬರಂ ಬಿಟ್ಟರು[॥*] ಈ
೧೯ [ಧ*]ರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ ವಾರ-
೨೦ [ಣಾ*]ಸಿ ಕುರುಕ್ಷೇತ್ರನಲು ಚತುರ್ವ್ವೇದ ಪಾ-
೨೧ (ರಗ*)ರಪ್ಪ ಬ್ರಾಹ್ಮಣರ್ಗ್ಗೆ ಸಹಸ್ರ ಕವಿಲೆಯ್ಮಂ ಕೊ-
೨೨ ಟ್ಟ ಫಲಂಮಕ್ಕು [॥*] ಈ ಧರ್ಮ್ಮವಂ ಕಿಡಿಸಿದವರ್ಗ್ಗೆ ವಾ-
೨೩ (ರ*)ಣಾಸಿ ಕುರುಕ್ಷೇತ್ರದಲು ಚತುರ್ವ್ವೇದ ಪಾರ-
೨೪ [ಗ*]ರಪ್ಪ ಬ್ರಾಹ್ಮಣರುಮಂ ಸಹಸ್ರ ಕವಿಲೆ-
೨೫ ಯ್ಮಂ ಕೊಂದ ದೋಶ(ಷಂ) ಸಾರ್ಗ್ಗು॥ ಶ್ರೀ ಶ್ರೀ ಶ್ರೀ (॥*)

೬

ಗೋಪಾಲಸ್ವಾಮಿ ದೇವಾಲಯದ ಒಂದನೆಯ ಕಂಬದ ಒಂದು ಹಾಗೂ ಎರಡನೆಯ ಮುಖದ ಮೇಲ್ಭಾಗದಲ್ಲಿರುವ ಪ್ರಸ್ತುತ ಶಾಸನ, ಯಾದವ ಭಿಲ್ಲಮ ದೇವನ ಕಾಲದಲ್ಲಿ ಹುಟ್ಟಿದೆ.

ಲಕ್ಷ್ಮಣೇಶ್ವರ ದೇವರ ಚೈತ್ರ-ಪವಿತ್ರ ಪರ್ವಗಳಿಗೆ ನೀಡಿದ ಸಂತೆಯ ಆಯ ಈ ಶಾಸನದ ವಿಷಯವಾಗಿರುತ್ತದೆ.

ಸಾಲು ೧-೩ ರಲ್ಲಿ ಬರುವ "ಭಿಲ್ಲಮದೇವವರ್ಷದ ೨ನೆಯ ಪ್ಲವ[ಂ]ಗ ಸಂವತ್ಸರದ ಫಾಲ್ಗುಣ ಬಹುಲಮವಾಸ್ಯ ಸೋಮವಾರ ಸೂರ್ಯ್ಯಗ್ರಹಣ" ಎಂಬ ಮಿತಿಯ ಉಲ್ಲೇಖ ಕ್ರಿ. ಶ. ೧೧೮೮ ಫೆಬ್ರುವರಿ ೨೯ ಸೋಮವಾರಕ್ಕೆ ಸರಿಯಾಗಿ ಹೊಂದುತ್ತದೆ.

● ಇಲ್ಲಿ ಈ ದಾನವನ್ನು ಪ್ರತಿಪಾಳಿಸುವವರು: ಮುಂಮುರಿದಂಡರು, ಉಭಯನಾನಾದೇಸಿಯರು ಹಾಗೂ ಐನೂರ್ವರು.

ಒಂದನೆಯ ಮುಖದ ಮೇಲ್ಭಾಗ

೧ ಸ್ವಸ್ತಿ [।*] ಶ್ರೀಮತು ಭಿಲ್ಲಮದೇವ ವರ್ಷದ ೨ ನೆಯ ಪ್ಲವ[ಂ]-
೨ ಗ ಸಂವತ್ಸರದ ಪಾಲ್ಗುಣ ಬಹುಲಮವಾಸ್ಯ
೩ ಸೋಮವಾರ ಸೂರ್ಯ್ಯಗ್ರಹಣ ನಿ-
೪ ಮಿತ್ತವಾಗಿ ಶ್ರೀಲಕ್ಷ್ಮಣೇಶ್ವರ ದೇವರ ಚಯಿ-
೫ ತ್ರ ಪಯಿ(ವಿ)ತ್ರ ಕ್ಕೆ ಬಿಟ್ಟ ಕೆಯಿ ಎಂತೆಂದೊಡೆ ಏತ್ತು
೬ ಕತ್ತೆ ಕೋಣನ ಹೇಱು ೫ಕ್ಕಂ ಹಸುಬೆಯುಲು
೭ ತ [ಂ*]ದಡಕೆಯು ಮಾಱಿದಡೆ ಹೊಂಗೆ ಹತ್ತಡಕೆಲೆ ಕೊಡಲು
೮ ಆ ದೇವರ ಕ..ಕ್ಷೇ ..ಸಾಸಿರ್ಬ್ಬರು. –
೯ ಲ್ಲಿ ಎಲೆ [ಸು] ಪೇಱುಂಗೆ [೧೦೦॥] ಇ(ಈ) ಧರ್ಮ್ಮವಂ
೧೦ ಉಭಯ ಸಾಮ್ಯದರಸುಗಳು ಮುಂಮುರಿ [ದಂ*]–
೧೧ ಡಂಗಳು ಉಭಯ ನಾನಾದೇಸಿ ರಾಜ್ಯವೈ–
೧೨ ನೂರ್ಬ್ಬರುಂ ಪ್ರತಿಪಾಳಿಸುವರು [||*]

ಎರಡನೆಯ ಮುಖದ ಮೇಲ್ಭಾಗ

೧೩ ಇ (ಈ) ಧರ್ಮ ಮನಾರೊಬ್ಬರು ಪ್ರತಿಪಾಳಿಸಿವಗ್ಗೆ ಗಂಗೆ
೧೪ ವಾರಣಾಸಿ ಕುರುಕ್ಷೇತ್ರದಲು ಚತುರ್ವ್ವೇದ ಪಾರ–
೧೫ ಗರಪ್ಪ ಬ್ರಾಹ್ಮಣರ್ಗ್ಗೆ ಸಹಸ್ರ ಕವಿಲೆಯಂ ದಾ-
೧೬ ನಂ ಮಾಡಿದ ಪಲಮಕ್ಕು [।।*] ಇ (ಈ) ಧರ್ಮ್ಮಮನಾರೊಬ್ಬರು ಪ್ರ–
೧೭ ತಿಪಾಳಿಸಿದರವರ್ಗ್ಗೆ ಗಂಗೆ ಬಾರಣಾಸಿ ಅಕ್ಕು [||*]
೧೮ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುಂ–
೧೯ ಧರಾಂ [।*]ಷಷ್ಟಿರ್ವ್ವರುಷ ಸಹಸ್ರಾಣಿ ವಿಷ್ಟಾಯಾಂ ಜಾ–
೨೦ ಯತೇ ಕ್ರಿಮಿಃ ॥

೭

ಗೋಪಾಲಸ್ವಾಮಿ ದೇವಾಲಯದ ಹಿಂದಿರುವ ಜೀರ್ಣಮಂಟಪದ ಒಂದನೆಯ ಕಂಬದ ಮೂರು ಹಾಗೂ ನಾಲ್ಕನೆಯ ಮುಖದ ಮೇಲ್ಭಾಗದಲ್ಲಿ ಈ ಶಾಸನವಿದ್ದು, ಯಾದವ ಸಿಂಗಣದೇವನ ಆಳಿಕೆಯ ಕಾಲಕ್ಕೆ ಸಂಬಂಧಿಸಿದುದಾಗಿದೆ

ಅಯ್ಯಾವೊಳೆ ಐನೂರ್ವರು ಸ್ವಾಮಿಗಳು, ಉಭಯ ನಾನಾದೇಸಿಯರ ಮುಮ್ಮುರಿದಂಡರು, ಸೆಟ್ಟಿ ಮೊದಲಾದ ವರ್ತಕ ಪ್ರಕಾರದವರು ರಾಮನಾಥ ದೇವಾಲಯದ ಅಂಗಭೋಗ-ರಂಗಭೋಗ ಹಾಗೂ ನಂದಾದೀವಿಗೆಗಾಗಿ ಕೊಟ್ಟ ಸಂತೆಯ ಆಯವೂ ಸೆಟ್ಟಿಯೊಬ್ಬನಿಗೆ ನೀಡಿದ ವೃತ್ತಿಯ ವಿಷಯವೂ ಇಲ್ಲಿ ಉಲ್ಲೇಖಗೊಂಡಿವೆ.

ಸಾಲು ೩–೪ ರಲ್ಲಿ ಬರುವ "ಸಕವರ್ಷ ೧೧೪[೦] ಸುದ್ಧ ಬಹುಧಾನ್ಯ ಸಂವತ್ಸರದ ಜೇಷ್ಟ ಬಹುಳ ೧೦ ಸೋಮವಾರ" ಎಂಬ ಮಿತಿಯು ಕ್ರಿ. ಶ. ೧೨೧೮ ಜೂನ ೧೯ ಮಂಗಳವಾರಕ್ಕೆ ಸಮಾನವಾಗಿದೆ.

● 'ಹೊಸಂತಿಲ ಹಾಗ' ಗಮನಿಸುವ ಪದವಾಗಿದೆ.

ಮೂರನೆಯ ಮುಖದ ಮೇಲ್ಭಾಗ

೧ ಸ್ವಸ್ತಿ[।*] ಶ್ರೀಮತು ಯಾದವ ನಾರಾಯಣ

೨ ಪ್ರತಾಪ ಚಕ್ರವರ್ತ್ತಿ ಸಿಂಗಣದೇವ ವ . . ಸಕವರ್ಷ

೩ ೧೧೪[೦] ಶುದ್ಧ ಬಬುಧಾನ್ಯ ಸಂವತ್ಸರದ ಜೇಷ್ಟ

೪ ಬಹುಳ ೧೦ ಸೋಮವಾರದಂದು ಶ್ರೀಮದ–

೫ ಯ್ಯ . . . . ಸ್ವಾಮಿಗಳುಂ ಮು–

೬ . . . . ಯನಾನಾದೇಸಿ

೭ . . . . . . ಮುಂಮುರಿದಂಡ ಸಗರ–

೮ [ವಯಿನೂಱಱ ಬಾಡ]...... ಮುಖ್ಯ ಸಮಸ್ತ ಗ್ರಾ

೯ ಯ್ತರುಂ . . . . .ಸೆಟ್ಟಿ–

೧೦ ಯರುಂ ಹಂನ್ನಿಬ್ಬರ್ರುಂ . . . . . .

೧೧ . . . . . . ಅಂಗಭೋಗ ರಂಗಭೋಗ ನಂದಾದೀ-

೧೨ ವಿಗೆ ನಯಿವೇದ್ಯಕ್ಕಂ ಬಿಟ್ಟರು [॥*] ಸಗರವಯಿನೂಱ

ನಾಲ್ಕನೆಯ ಮುಖದ ಮೇಲ್ಭಾಗ

೧೩ ಬಾಡದೊಳಗೆ ಎತ್ತು ಕತ್ತೆ ಕೋ೧ . . . '
೧೪ ಗ್ರಾಮಾನುಗ್ರಾಮದಲು ಅ . . . .
೧೫ ರವಾಡ ನಾಯಕಬಾಡ ದೇವಾವಾಡವೆಂಸ್ನದೆ
೧೬ ಮುಂನ್ನೂರ್ವ್ವರಲು ಹೊಸಂತಿಲ ಹಾಗ .
೧೭ ಪ್ರತಿಪಾಳಿಸ್ಸಿಯಿದಾತ ನಾಡ ತೇಜವಂ. -
೧೮ ವಧರ್ಮ್ಮಕ್ಕನಕು ಮಂಗಳ ಮಹಾ ಶ್ರೀ ಶ್ರೀ [॥*]
೧೯ ಶ್ರೀಮತ ನಾಡುಗಳು ಸಂಧಿವಿಗ್ರ . . . ಜಸೆಟ್ಟಿ-
೨೦ ಗೆ ಕೊಟ್ಟ ವ್ರಿತ್ತಿ ಸಗರವಯ್ನೂಳಿ'ಂ
೨೧ ಬಾಡವೊಳಗೆ ಆಗ್ರಹಾರ ಕರಿಬಾಳ ವೇವವಾಡೆ ನಾಯಕವಾಡ
ಗ್ರಾಮಾನುಗ್ರಾಮದಲು ನೆ ೧ ಬಾರಿ –
೨೨ ಕ ದೇವಣಂಗೆಲೆ ೧[।*] ಸ್ವಧರ್ಮದಿಂದಿಕ್ಕಿದಾವ ನಾಡ ತೇಜ-
೨೩ ವಂ ಪುನ ಮಾಡಿದಾತ ವುದಾಶೀನ ಮಾಡಿದಾವ ವಲ-
೨೪ ರಂತಹನಲ್ಲ ಮಂಗ[ಳ] ಮಹಾ ಶ್ರೀ ಶ್ರೀ ॥

೮

ಗೋಪಾಲಸ್ವಾಮಿ ದೇವಾಲಯದ ಹಿಂದಿರುವ ಜೀರ್ಣಮಂಟಪದ ಎರಡನೆಯ ಕಂಬದ ಎರಡು ಹಾಗೂ ಒಂದನೆಯ ಮುಖದ ಕೆಳಭಾಗದಲ್ಲಿ ಈ ಶಾಸನವಿದೆ.

ಇದು ಯಾದವ ಚಕ್ರವರ್ತಿ ಸಿಂಗಣದೇವನ ಆಳಿಕೆಯ ಕಾಲದಲ್ಲಿ ಹುಟ್ಟಿದು ದಾಗಿರುತ್ತದೆ.

ಅಯ್ಯಾವೊಳೆ ಐನೂರ್ವರುಸ್ವಾಮಿಗಳು ಮುಖ್ಯವಾಗಿ ಉಭಯನಾನಾದೇಸಿ, ಮೂವತ್ತಾರು ಗ್ರಾಮದ ಮುಂಮುರಿದಂಡ, ಸಗರ ಐನೂರು ಗ್ರಾಮದ ಸೆಟ್ಟಿ ಗುತ್ತ ರೇಚಸೆಟ್ಟಿ, ಆರುಂ ಶಾಸನದ ಮನೆಯ ಸೆಟ್ಟಿ. ಮುದಿನೀರ ಕೇಸರ ಸೆಟ್ಟಿ ಪ್ರಮುಖ ಎರಡ್ಡೈಸೂರ್ವರು (ಅಯ್ಯಾವೊಳೆ ಐನೂರ್ವರು + ಐದುನೂರು ಮಹಾ ಜನರು) ಹಾಗೂ ಬಸವೂರ ಸೌಧೋರೆ ಸಾತಿಸೆಟ್ಟಿ ಮುಂತಾದ ವರ್ತಕಪ್ರಕಾರ ದವರು (ರಾಮೇಶ್ವರ) ದೇವಾಲಯಕ್ಕೆ ದಾನ ನೀಡಿದ ಸಂಗತಿಯನ್ನು ಈ ಶಾಸನ ತಿಳಿಸುವಂತಿದೆ.

ಸಾಲು ೨–೪ ರಲ್ಲಿ ಬರುವ "ಸಿಂಗಣದೇವ ವರ್ಶ(ರ್ಷ)ದ ೧೯ ನೆಯ ಬಹು ಧಾನ್ಯಂ ಸಂವತ್ಸರದ ಜೇಷ್ಟ ಬಹುಳ ೧೩ ಸು(ಶು)ಕ್ರವಾರ" ಮಿತಿಯು ಕ್ರಿ. ಶ. ೧೨೧೮ ಜೂನ ೨೨ ಶುಕ್ರವಾರಕ್ಕೆ ಸಮಾನವಾಗಿದೆ.

● ಮೂವತ್ತಾಱುಂ ಬಾಡ ಮುಂಮುರಿದಂಡ, ಸಗರವಯಿನೂಱುಂಬಾಡ ಸೆಟ್ಟಿಗುತ್ತ, ಆಱು ಶಾಸನದ ಮನೆಯ ಸೆಟ್ಟಿ ಇವಗಳನ್ನು ಗಮನಿಸಿರಿ.

ಎರಡನೆಯ ಮುಖದ ಕೆಳಭಾಗ

೧ ಸ್ವಸ್ತಿ [।*] ಶ್ರೀಮತು ಯಾದವನಾರಾಯ-
೨ ಣಂ ಪ್ರತಾಪ ಚಕ್ರವರ್ತ್ತಿ ಸಿಂಗಣದೇ-
೩ ವ ವರ್ಶ(ಷ)ದ ೧೯ ನೆಯ ಬಹುಧಾನ್ಯಂ ಸಂವತ್ಸ-
೪ ರದ ಜೇಷ್ಟ ಬಹುಳ ೧೩ ಸು(ಶು)ಕ್ರವಾರದಂದು
೫ ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಸತ
೬ ವೀರಶಾಸನ ಲಬ್ಧಾನೇಕ ಗುಣಗಣಾಳಂ-
೭ ಕ್ರಿತರಪ್ಪ ಶ್ರೀಮದಯ್ಯಾವೊಳೆಯಯಿ-
೮ ನೂರ್ವ್ವರ್ಸ್ವಾಮಿಗಳಿಂ ಮುಖ್ಯ ಕಂನ್ನಡ ನಾ-
೯ [ಲ್ವ*] ಇವರು ಭಯನಾನಾದೇಸಿ ಮೂ-
೧೦ ವತ್ತಾಱುಂ ಬಾಡು ಮುಂಮುರಿದಂಡಂಗಳು [೦]
೧೧ ಸಗರವಯಿನೂಱುಂ ಬಾಡ ಸೆಟ್ಟಿಗುತ್ತ ರೇಚ-
೧೨ ಸೆಟ್ಟಿಯುಂ ಆಱುಂ ಶಾಸನದ ಮನೆಯ
೧೩ ಸೆಟ್ಟಿಯರು[೦*] ಮಾದಿನೀರ ಕೇಸರಸೆಟ್ಟಿ ಮುಖ್ಯ ಎ-
೧೪ ರಡಯಿನೂರ್ವ್ವರು[೦*] ಬಸನೂರ ಸೌಧ-
೧೫ ರೆ ಸಾತಿಸೆಟ್ಟಿ ಹಂನ್ನೆರ. ಗಕಂ ಗ... -

ಒಂದನೆಯ ಮುಖದ ಕೆಳಭಾಗ

೧೬ [ಬರ್ಮ್ಮ] ಕೂಚಿಯಂ ತಂದು ವಂದು..., ವೆಱ -
೧೭ ಯ ದಾಸಿ ಕೇಸವ ಕೇಸೆಟ್ಟಿಯ ಕೈಯಲು ಕೊಟ್ಟು -
೧೮ ಱಂ ಕೊಂಬುದುಯಿದನೊಂದೆ ಒಬ್ಬರೊ-
೧೯ ಬ್ಬರು . ಬದಲು ...ಕೊಟ್ಟಡೆ ಮಾಡು...
೨೦ ಸೀರುಬ . ಕೊಟ್ಟಾತ ಕೊಂಡಾತ ಯಿಱಿದ ಬೀರ-
೨೧ ದ ಸೇನಬೋವ ಸಾಯಸೋಲ್ವರು ಹಂ . ವ್ರಿತ್ತಿ-
೨೨ ದಱಸವೆ ಗಳಿ ಕೊಡುವೆ ಅಚೆಯ. ತನತನಗೆ
೨೩ ಮಾಡಿದಾತ ಮುಂಮುರಿದಂಡ... ಸೆಟ್ಟಿಯ-
೨೪ ... (ಸಾಸನಗನಲ್ಲಿ) ಆತ ಸಮಯ [ದ್ರೋ*]ಹಿ ಇ [ಈ]-
೨೫ ರ್ವ್ವಗ್ಗ್ರದಿರು ಹನ್ನೆರ್ಡರಲ್ಲು ಬೀರಗರು ಸಾಲಬ-
೨೬ . ಸಮಯಧರ್ಮವೆಂಬಱುವೊಳದಡಾತನಾ-
೨೭ .... ಮಂಗಳ ಮಹಾ ಶ್ರೀ ಶ್ರೀ [॥*]

೯

ಗೋಪಾಲಸ್ವಾಮಿ ದೇವಾಲಯದ ಹಿಂದಿರುವ ಜೀರ್ಣಮಂಟಪದ ಎರಡು ಹಾಗೂ ಒಂದನೆಯ ಕಂಬಗಳ ಮೂರನೆಯ ಮುಖ ಮತ್ತು ಒಂದನೆಯ ಮುಖದ ಕೆಳಭಾಗದಲ್ಲಿರುವ ಈ ಶಾಸನದಲ್ಲಿ ಅರಸುಮನೆತನ, ಅರಸನ ಉಲ್ಲೇಖಗಳಿರುವುದಿಲ್ಲ.

ಸಗರ ಐನೂರು ಗ್ರಾಮದ ಸಮಸ್ತ ಗ್ರಾಯಿತರು ಮುಖ್ಯವಾಗಿ ಸೆಟ್ಟಿಗುತ್ತರು, ಆರುಂ ಶಾಸನದ ಮನೆಯ ಸೆಟ್ಟಿಯರು, ಹನ್ನೆರಡು ಸಾಸಿರವ ಬಿಲ್ಲಮುನ್ನೂರ್ವರು ಪ್ರಮುಖ ಹದಿನೆಂಟು ಸಮಯದವರು, ನಾಡ ಸಂಧಿವಿಗ್ರಹಿ ಆದಿಸೆಟ್ಟಿ ಮುಂತಾದವರು ಶಾಸನದಮನೆ ಮುದಿನೀರಿನಲ್ಲಿ ಮಹಾಸಭೆಯಾಗಿ ನೆರೆದು (ರಾಮೇಶ್ವರ) ದೇವಾಲಯಕ್ಕೆ ಸಂತೆಯ ಆಯವನ್ನು ದತ್ತಿಯಾಗಿ ಕೊಟ್ಟ ಉಲ್ಲೇಖವಿದೆ.

ಮಿತಿಯ ಉಲ್ಲೇಖವಿರದಿದ್ದರೂ ಲಿಪಿಯ ಸ್ವರೂಪವನ್ನು ಗಮನಿಸಿ, ಈ ಶಾಸನದ ಕಾಲ ಸುಮಾರು ಹದಿಮೂರನೆಯ ಶತಮಾನವೆಂದು ಹೇಳಬಹುದಾಗಿದೆ.

● ಗಮನಿಸಿ : ಹಂಣ್ಣೆಚ್ಛಾಸಿರ ಬಿಲ್ಲ ಮುಂನೂರ್ವ್ವರು, ಹದಿನೆಂಟು ಸಮಯರು ಇತ್ಯಾದಿ.

ಮೂರನೆಯ ಮುಖದ ಕೆಳಭಾಗ

೧ ಸ್ವಸ್ತಿ [।*] ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತು
೨ ಸಗರಪಯಿನೂಱುಂ ಬಾಡದ ಸಮ-
೩ ಸ್ತ ಗ್ರಾಂಗಿತರುಂ ಮುಖ್ಯ ಸೆಟ್ಟಿಗುತ್ತ ಆಱುಂ ಸಾ-
೪ ಸನದ ಸೆಟ್ಟಿಯರುಂ ಹಂಣ್ಣೆಚ್ಛಾಸಿರ ಬಿಲ್ಲ ಮುಂ-
೫ ನೂರ್ವ್ವರುಂ ಮುಖ್ಯ ಹದಿನೆಂಟು ಸಮ-
೬ ಯರುಂ ನಾಡಸಂಧಿವಿಗ್ರಹಿ ಆದಿಸೆಟ್ಟಿ ಬಾರಿ .
೭ ದೆ. . ನಿಂತಿನಿತುಂ ಶ್ರೀಮತ್ ಸಾಸನದ ಮ-
೮ ನೆ ಮುದಿನೀರಲು ಮಹಾನಾಡಾಗಿ ನೆರೆದೇಕಸ್ಥರಾ-
೯ ಗಿ ಮಾಡಿದ ಶಾಸನದ ಕ್ರಮವೆಂತೆಂದಡೆ ಹೊದ್ದಿ(?)
೧೦ ದ ಹಬು ತುನ್ನೂರುಂ ಮಾಡಿಹೆನೆಂದವತೆ ಕು-
೧೧ ಡದ ಕೊಡಲಿ... ದಯಾದಲು ಸಕುತನಲ್ಲ-
೧೨ ಪಾರ . ಗೆ ಸಂಪ್ರತಿಯಿಂ ಸಾಮ್ಯ ಸಂಕುದಳ್ಳಾ-
೧೩ ರೆ ನಾಡಿಂಗಿದಿರು ಹೊಱ. ೪:ನಾ. ಹೋ-
೧೪ ಗಿ ಕ. ವೆುರ . ಣ . ಕೊಂಬ ಸಂಪ. .-

೧೫ .ರು. ನಾಯಕ ಸ[ಗರವ]-
೧೬ ಯಿನೂಱುಂ ಬಾಡದೊಳಗೆ ಸಿ . . , .
೧೭ . .ಮುಂಮ್ಮುರಿದಂಡ ಸೆಟ್ಟಿಗುತ್ತ . . . . . . -

ಒಂದನೆಯ ಮುಖದ ಮೇಲ್ಭಾಗ

೧೮ ಮತ್ತಂ ಮಹಾನಾಡುಂಗಳು
೧೯ ಬಿಟ್ಟ ಆಯ [।*] ಶ್ರೀ ರಾಮನಾಥ ದೇ[ಪ]ಗ್ಗೆ
೨೦ ಹೊಂಗೆ ಅಡಕೆ ೨೦ ಪಡಪಗೆ ವಳಿ–
೨೧ ಗೆ ಹೇಱುಂಗೆ ೧೦೦ ಹೊಂಗೆ ಮೆಣಸು ಸೊ-
೨೨ ಳಸ ೨ ಜೀರಗೆ ಹೊಂಗೆ ಮಾನ ೨ ಸಾಸವಿ
೨೩ ಮಾನ ೨ ಇಂಗು ಹೊಂಗೆ ಗದ್ಯಾಣಂ ೫
೨೪ ಎಲೆಯಕ್ಕಿ ಗದ್ಯಾಣಂ ೫ ಶುಂಠಿ ಪ-
೨೫ ಲ ೫ ಬೆಲ್ಲ ಹೊಂಗೆ ಪಲಂ ೧೦ ಅರಿಸಿನ
೨೬ ಹೊಂಗೆ ಪಲಂ ೧೦ । ಕಪ್ಪೂರ್ನ ಕಸ್ತುರಿ[॥*]

ಹಿರಿಯ ಮುದನೂರ:

೧೦

ಕಲ್ಯಾಣಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ ಈ ಶಾಸನವನ್ನು ರಾಮನಾಥ ದೇವಾಲಯದ ಬಲಭಾಗದಲ್ಲಿ ಇಡಲಾಗಿದೆ.

ಮಹಾಮಂಡಲೇಶ್ವರ ಗೋಮದೇವರಸರು ಹಾಗೂ ಮುದಿನೀರ ಮಹಾಜನರು ಅಗಸ್ತ್ಯೇಶ್ವರದೇವರಿಗಾಗಿ ಸ್ಥಾನಾಚಾರ್ಯ ತೇಜೋರಾಶಿ ಪಂಡಿತರಿಗೆ ಧಾರಾಪೂರ್ವಕವಾಗಿ ಬಿಟ್ಟ ಭೂದಾನವನ್ನು ಈ ಶಾಸನ ತಿಳಿಸುತ್ತದೆ. ಪೂಜಾರಿ ಓಜರನಿಗೆ ದಾನ ನೀಡಿರುದನ್ನೂ ಇಲ್ಲಿ ಉಲ್ಲೇಖಿಸಲಾಗಿದೆ.

ಸಾಲು ೧-೩ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ವಿಕ್ರಮ ವರಿಷದ ೪೯ನೆಯ ಶ್ರೀಮುಖ ಸಂವಚ್ಛರದ ಪುಷ್ಯ ಸುದ್ಧ ಬ್ರಿಹಸ್ಪತಿವಾರ ಉತ್ತರಾಯಣ ಸಂಕ್ರಾಂತಿ"ಯು ಕ್ರಿ. ಶ. ೧೦೯೩ ಡಿಸೆಂಬರ ೨೨ ಅಥವಾ ೨೯ ಗುರುವಾರಕ್ಕೆ ಸಮಾನವಾಗಿರುತ್ತದೆ.

- ಗಮನಿಸಿರಿ : ಬಬುಲೆಯ ಕಟ್ಟೆ, ಪುಚ್ಚರಿ ಗದ್ದೆ,

೧ ಸ್ವಸ್ತಿ [।*] ಶ್ರೀಮಚ್ಚಾಳುಕ್ಯ ವಿಕ್ರಮ ವರಿಷದ ೪೬ನೆಯ
೨ ಶ್ರೀಮುಖ ಸಂವಚ್ಛರದ ಪುಷ್ಯ ಸುದ್ಧ ಬ್ರಿಹಸ್ಪ–

೩ ತಿವಾರ ಉತ್ತರಾಯಣ ಸಂಕ್ರಾಂತಿ ನಿಮಿತ್ತದಿಂ ಶ್ರೀಮ-
೪ ನ್ಮಹಾಮಂಡಳೇಸ್ವರಂ ಗೋಮದೇಪರಸರು ಶ್ರೀಮದ-
೫ ಗ್ರಹಾರಂ ಮುದಿನೀರೂರೊಡೆಯ ಪ್ರಮುಖ ಮಹಾಜ-
೬ ನಂಗಳುಂ ಶ್ರೀ ಅಗಸ್ತ್ಯೇಸ್ವರದೇವರ್ಗ್ಗೆ ಬಬುಲೆಯ ಕಟ(ಟ್ಟೆ)ವೊಳ-
೭ ಗೆ ಮಾರ್ಕ್ಕಂಡೇಸ್ವರ ದೇವರ ಗದ್ದೆಯಿಂ ಮೂಡಲು ನಾರ-
೮ ಯಣ ದೇವರ ಗದ್ದೆಯಿಂ ಪಡುವಲು ತೇಜೋರ(ರಾ)ಸಿ ಪ[ಂ*]ಡಿ-
೯ ತರ್ಗ್ಗೆ ಧಾರ(ರಾ)ಪೂರ್ವ್ವಕಂ ಮಾಡಿಕೊಟ್ಟ ಗದ್ದೆ ಹಾಗ ಒಂದು ಅ-
೧೦ ದಱ ನೀರು ಸೂಳು ಸಹಿತವಾಗಿ ॥ ಮಂನೆಯ ಗದ್ದೆಯೊಳಗೆ
೧೧ ರಾಮದೇವರ ಗದ್ದೆಯಿಂ ಬಡಗಲು ಪೂಜಾರಿ ವೋಜರಸಂಗೆ
೧೨ ಧಾರಾಪೂರ್ವ್ವಕಂ ಮಾಡಿ ಪುಚ್ಚರಿ ಗದೆ(ದ್ದೆ) ಹಾಗ॥ ಆರೊರ್ವ್ವರು
೧೩ ನಡೆವರೊ ನಡೆವರ ಧಂರ್ಮ್ಮ [॥*]

೧೧

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಹುಟ್ಟಿದ ಈ ಶಾಸನ, ಭೀಮರಾಯ ಬಲವಂತಗೌಡ ನರಸಣಗಿ ಅವರ ಮನೆಯ ಬಲ ಭಾಗದಲ್ಲಿದೆ.

ಮಹಾಜನರ ವರ್ಣನೆಯನ್ನು ವಿವರಿಸುವ ಈ ತುಂಡುಶಾಸನ, ಅಪೂರ್ಣವಾಗಿದೆ. ಹೀಗಾಗಿ ಉಳಿದ ಯಾವ ಅಂಶಗಳೂ ಗೊತ್ತಾಗುವುದಿಲ್ಲ.

ಸಾಲು ೧–೨ ರಲ್ಲಿ ಬರುವ "[ವಿ]ಕ್ರಮ ಕಾಲದ ೨೪ನೆಯ ಪ್ರಮಾದಿ.... ಬಹುಳ ೧ ಆದಿವಾರ" ಮಿತಿಯು ಕ್ರಿ. ಶ. ೧೧೦೦ ಜನೆವರಿ ೨೯ಕ್ಕೆ ಸಮಾನವಾಗಿದೆ.

೧ ಸ್ವಸ್ತಿ [।*] .. ..[ವಿ]ಕ್ರಮ ಕಾಲದ ೨೪ನೆಯ ಪ್ರಮಾದಿ
೨ ....ಬಹುಳ ೧ ಆದಿವಾರದಂದು ಯಮನಿಯ-
೩ ಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪ ಸ-
೪ ಮಾಧಿ ಶೀಳ ಸಂಪನ್ನರ್ ಸಮಸ್ತ ವಿದ್ವಜ್ಜನ ಪ್ರಸನ್ನರ್ ಯ-
೫ ಜನ ಯಾಜನ ಅಧ್ಯಯನ ಅಧ್ಯಾಪನ ದಾನ
೬ ಪ್ರತಿಗ್ರಹ ಷಟ್ಕರ್ಮ್ಮ ನಿರತರ್ ದ್ವಿಜಗುರುದೇವ ಪೂಜಾ*

೧೨

ರಾಮನಾಥ ದೇವಾಲಯದ ಹೊರಗೆ ಇರುವ ಈ ಶಾಸನ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದುದಾಗಿರುತ್ತದೆ.

* ಉಳಿದ ಭಾಗ ಒಡೆದುಹೋಗಿದೆ.

ಆರನೆಯ ವಿಕ್ರಮಾದಿತ್ಯನ ಮಹಾಮಂಡಲೇಶ್ವರ ಜೋಗಮರಸನ ಹೆಂಡತಿ ತಾರಾದೇವಿ ಮಹಾಜನರಿಗೆ ಇಪ್ಪತ್ತುಗದ್ಯಾಣ ಹಣ ಕೊಟ್ಟು ಪಡೆದ ಭೂಮಿಯನ್ನು ಉತ್ತರೇಶ್ವರ ದೇವಾಲಯಕ್ಕೆ ದಾನವಾಗಿ ನೀಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ.

ಸಾಲು ೨೮-೩೦ ರಲ್ಲಿ ಬರುವ "ಚಾಳುಕ್ಯ ವಿಕ್ರಮ ಕಾಲದ ೩೦ನೆಯ ಪಾರ್ತ್ಥಿವ ಸಂವತ್ಸರದ ಪುಷ್ಯ ಬಹುಳ ೨ ಬೃಹಸ್ಪತಿವಾರಮುತ್ತರಾಯಣ ಸಂಕ್ರಮಣ" ಮಿತಿಯು ಕ್ರಿ. ಶ. ೧೧೦೫ ಡಿಸೆಂಬರ ೨೪ ಆದಿತ್ಯವಾರಕ್ಕೆ ಸಮಾನವಾಗಿರುತ್ತದೆ.

● ಹಾಯುವಣಕಟ್ಟೆ, ಊರೊಡೆಯರ ಮಾನ್ಯ, ಉತ್ತರೇಶ್ವರ ದೇವಾಲಯ ಹಾಗೂ ತಲ್ಸಂಬಂಧಿ ಪದಗಳು ಗಮನಿಸುವಂಥವಾಗಿವೆ.

೧ ಸ್ವಸ್ತಿ [।*] ಸಮಸ್ತ ಭುವನಾಶ್ರಯ[ಂ*] ಶ್ರೀಪೃಥ್ವೀವಲ್ಲಭ ಮಹಾ-

೨ ರಾಜಾಧಿರಾಜ ಪರಮೇಶ್ವರ[ಂ*] ಪರಮಭಟ್ಟಾರಕಂ ಸತ್ಯಾಶ್ರ-

೩ ಯಕುಳತಿಳಕ [ಂ*] ಚಾಳುಕ್ಯಾಭರಣಂ ಶ್ರೀಮತ್ರಿಭುವನಮ-

೪ ಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ

೫ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ [॥*] ಕಲ್ಯಾ-

೬ ಣಪುರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾ-

೭ ಜ್ಯಂಗೆಯ್ಯುತ್ತಮಿರೆ[॥*] ತತ್ಪಾದ ಪದ್ಮೋಪಜೀವಿ[॥*] ಸಮಧಿಗತ ಪಂ-

೮ ಚಮಹಾಶಬ್ದ ಮಹಾಮಂಡಳೇಶ್ವರಂ ಸಕಳ ವಿದ್ಯಾಧೀಶ್ವರಂ ಗೋ-

೯ ಧರ್ಮ್ಮ ಚತುರ್ಮ್ಮುಖಂ ವಿವೇಕಗುಣ ರತ್ನಾವಳಿ ಶಿಖಾಮ-

೧೦ ಯೂಖಂ ರಾಜಮಾಸ್ಥಾನ ಜನಮುಖ ಪದ್ಮಿನೀ ಸ-

೧೧ ರೋವರ ರಾಜಹಂಸ[ಂ*] ಸರಸ್ವತೀ ಕರ್ಣ್ಣಾವತಂಸಂ ಬಗೆಕಾಱ ಸ್ಪರಿತ

೧೨ ಲಿಂಗ[ಂ*] ಚಂದಲದೇವಿಯರಣುಗಂ ಶೀಘ್ರ ಬಗೆಕಾಱ[ಂ*] ಕೋ-

೧೩ ಪಾನಳ[ಂ*] ಪ್ರತಿವಾದಿ ಜಳನಿ ಬಡವಾನಳ[ಂ*] ಸಿದ್ಧಬುದ್ಧಿ ದಿಶಾಪ-

೧೪ ಟ್ಟಂ ಗಾಯಕಮುಖ ಲಲಾಟಪಟ್ಟ[ಂ*] ಬಗೆಕಾಱ ಮಾವಿಗಜ ಶಿ(ಸಿ)ಂಗ
[ಂ*] ಸಾರಂಗ

೧೫ ಸಂಗೀತ ಗಾಯಕ ಪ್ರಸಂಗ[ಂ*] ಮಹಾಕಾಳಿ ಮಹಾಲಕ್ಷ್ಮೀಲಬ್ಧವರ

೧೬ ಪ್ರಸಾದಂ ಮೃಗಮದಾಮೋದಂ ದುಷ್ಟ ಬಗೆಕಾಱ[ಂ*] ಹೃದಯಾಕಂ-
೧೭ ಪಂ ಬಗೆಕಾಱ ಜಗರಕ್ಷಂಪಂ ವಿದಗ್ಧ ವಿದ್ವಾಂಸ ಹೃದಯ
೧೮ ಸೂಱೆಕಾಱಣಾಮ್ಯನಂಕಾಱ[ಂ*] ಶ್ರೀಮನ್ಮಹಾಮಣ್ಡಳೇ-
೧೯ ಶ್ವರಂ ಬಗೆಕಾಱ ಚಕ್ರವರ್ತ್ತಿ ಕಟಕಾಭರಣಂ ಜೋಗಮರಸರು-
೨೦ ಮಿವರ ಮನೋನಯನವಲ್ಲಭೆಯರಪ್ಪನಪರತ ಪರಮ ಕಲ್ಯಾ-
೨೧ ಣಾಭ್ಯುದಯ ಸಹಸ್ರಫಳ ಭೋಗ ಭಾಗಿನಿ ದ್ವಿತೀಯ ಲ-
೨೨ ಕ್ಷ್ಮೀ ಸಮಾನೆ ಕಳಹಂಸಯಾನೆ ಶೃಂಗಾರ ವಿದ್ಯಾಧರೆ ಸ-
೨೩ ಕಳ ಕಳಾಧರೆ[ಯು ಧರಾ]ಕಾಂತಱ್ಪಿರ ಮಕುಟ ಚೂಡಾ-
೨೪ ಮಣಿ ಪರಿವಾರ ಚಿಂತಾಮಣಿಯಾಶ್ರಿತಜನಕಲ್ಪತರು
೨೫ ಅಮೃತವಾಣಿ ಸಮನ್ವಿತ ಗಾತ್ರಪವಿತ್ರೆ ಸುಜನೈಕಮಿತ್ರೆ
೨೬ ಶ್ರೀರಾಮೇಶ್ವರದೇವರ ಲಬ್ಧವರ ಪ್ರಸಾದೆ ದಾನ ವಿನೋದೆ ಸಕಳಧ-
೨೭ ರ್ಮ್ಮಶಾಸ್ತ್ರಾರ್ತ್ಥಪ್ರಮೋದೆ ಕಸ್ತೂರಿಕಾಮೋದೆಯರಪ್ಪ
೨೮ ಶ್ರೀಮತ್ತಾರಾದೇವಿಯರು ಚಾಳುಕ್ಯವಿಕ್ರಮ ಕಾಲದ ೩೦ ನೆ-
೨೯ ಯ ಪಾರ್ತ್ಥಿವ ಸಂವತ್ಸರದ ಪುಷ್ಯ ಬಹುಳ ೨ ಬೃಹಸ್ಪತಿ-
೩೦ ವಾರಮುತ್ತರಾಯಣ ಸಂಕ್ರಮಣ ನಿಮಿತ್ತಂ ಯಮ-
೩೧ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನು-
೩೨ ಷ್ಠಾನ ಜಪಸಮಾಧಿ ಶೀಳ ಸಂಪನ್ನರಪ್ಪ ಶ್ರೀಮ-
೩೩ ದಗ್ರಹಾರಂ ಮುದಿನೀರೂರೊಡೆಯ ಪ್ರಮುಖ-
೩೪ ಪಶೇಷ ಮಹಾಜನಂಗಳ್ಗೆ ಅಯ್ವತ್ತು ಗದ್ಯಾಣ ಪೊನ್ನ ಕೊಟ್ಟು ಧಾ-
೩೫ ರಾಪೂರ್ಬ್ಬಕ ಮಾಡಿಸಿಕೊಂಡು ಶ್ರೀಮದುತ್ತರೇ-
೩೬ ಶ್ವರ ದೇವರ್ಗ್ಗೆ ತೆಂಕ ಪೊಲದಲು ರಾಮೇಶ್ವರದೇವರ ಮಾನ್ಯ-
೩೭ ದ ಕೆಯ್ಯಿಂ ಪಡುವಲು ಬಿಟ್ಟ ಕೆಯ್ಮತ್ತರ್ ೧೦ [।*] ಊರೊಡೆಯ
೩೮ ಪ್ರಮುಖ ಮಹಾಜನಂಗಳ್ ಅರಸಿಗೆ ತಪ್ಪಂದಿಯಾಗಿ ಬಿಟ್ಟ
೩೯ ಕೆಯ್ಮತ್ತರ್ ೧೦ [।*] ಅನ್ತು ಮತ್ತರ್ ೨೦ [॥*] ಹಾಱುವಣ ಕಟ್ಟೆಯ
೪೦ ಊರೊಡೆಯರ ಮಾನ್ಯದ ಗದ್ದೆಯಿಂ ಬಡಗಲು ಬಿಟ್ಟ ಗದ್ದೆ
೪೧ ಮತ್ತರ್ ೧ [॥*] ಈ ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ ವಾರಣಾ
ಸಿಯಲು

೪೨ ಕುರುಕ್ಷೇತ್ರದಲು ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರ್ಗ್ಗೆ ಸಾ-
೪೩ ಸಿರ ಕವಿಲೆಯುಂ ಕೊಟ್ಟ ಫಲಮಕ್ಕುಂ [।*] ಈ ಧರ್ಮ್ಮಮನಳಿ-
೪೪ [ವವರ್ಗ್ಗ*]ಪೇಕ್ಷಿಸಿದವರ್ಗ್ಗೆ ವಾರಣಾಸಿಯಲು ಕುರುಕ್ಷೇತ್ರದಲು [ಚ-
೪೫ ತುರ್ವೇ*]ದ ಪಾರಗರಪ್ಪ ಬ್ರಾಹ್ಮಣರುಮಂ ಕವಿಲೆಯುಮನಳಿ-
೪೬ ದ ದೋಷ ಸಾರ್ಗ್ಗು ॥ ಬಹುಭಿರ್ವ್ವಸುಧಾ ದತ್ತಾ ರಾಜಭಿಃ
೪೭ ಸಗರಾದಿಭಿಃ [।*] ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ
೪೮ ತಸ್ಯ ತದಾ ಫಲಂ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹ-
೪೯ ರೇತ ವಸುಂಧರಾಂ [।*] ಷಷ್ಟಿರ್ವ್ವರಿಷ ಸಹಸ್ರಾಣಿ ವಿಷ್ಟಾ-
೫೦ ಯಾಂ ಜಾಯತೇ ಕ್ರಿಮಿಃ॥ ಅಕರಸ್ಯ ಕರಿಕರಣಂ ಗೋ-
೫೧ ಸಹಸ್ರ ವಧಃಸ್ಮೃತ [।*] ಕರಂ ಪ್ರವಿತ್ತಿ ವಿಚ್ಛೇದಾತ್ ದೋಷಾ-
೫೨ ದಿ ಫಲಮುಚ್ಚ ॥ ಶ್ರೀ ಸೂರ್ಯ್ಯಾಯ ನಮೋ ॥
೫೩ ....ಧರ್ಮ್ಮಮನಿರದಳಿದಾತಂ [ವಾ*]-
೫೪ ರಣಾಸಿಯಲು ಗೋದ್ವಿಜ[ರುಮು*]ನಳಿದ
೫೫ ದುರ್ಗ್ಗತಿಗಳಿದಿಕ್ಕುಂ॥ ಚಂದ್ರ ಸೂರ್ಯರ್... ॥
೫೬ ..ವರ" ॥

೧೩

ರಾಮನಾಥ ದೇವಾಲಯದ ಎರಡನೆಯ ಕಂಬದ ಮೇಲ್ಭಾಗದಲ್ಲಿ ಈ ಶಾಸನ ವಿರುತ್ತದೆ. ಇದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯನ್ನು ಉಲ್ಲೇಖಿಸುತ್ತದೆ.

ಮುದನೂರ ಮಹಾಜನರು ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯ ತೇಜೋರಾಶಿ ಪಂಡಿತರಿಗೆ ಹಣ ಹಾಗೂ ಭೂಮಿ ದಾನ ಮಾಡಿದ ವಿಷಯ ಈ ಶಾಸನದಲ್ಲಿರುತ್ತದೆ.

ಸಾಲು ೧೬ ರಲ್ಲಿಯ "ವೃದ್ಧ ಅಷ್ಟಮಿ ಸೋಮವಾರ ವ್ಯತೀಪಾತ" ಎಂಬ ಮಿತಿಯು ಅಪೂರ್ಣವಾಗಿದ್ದರೂ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯನ್ನು ಹೇಳುವುದರಿಂದ ಈ ಶಾಸನದ ಕಾಲ ಸುಮಾರು ೧೧-೧೨ ನೆಯ ಶತಮಾನ ವೆಂದು ನಿರ್ಧರಿಸಬಹುದಾಗಿದೆ.

ಒಂದನೆಯ ಮುಖದ ಮೇಲ್ಭಾಗ

೧ ಸ್ವಸ್ತಿ [।*] ಸಮಸ್ತ ಭುವನಾಶ್ರಯ[ಂ*] ಶ್ರೀಪೃಥ್ವೀವಲ್ಲಭ[ಂ*]
೨ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರ-
೩ ಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವ-
೪ ನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರ-
೫ ವರ್ದ್ಧಮಾನಮಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ [।*] ಕಲ್ಯಾಣ-
೬ ಪುರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯು-
೭ ತ್ತಮಿರೆ [॥*] ಶ್ರೀಮತು . . . ಬಾಹುಪ್ರತಾಪ . . .
೮ . . . .
೯ ಅಯ್ಯಣಾಮಾತ್ಯಂ ಶ್ರೀಮನ್ಮಹಾಮಣ್ಡಳೇಶ್ವರಂ ದೇವರ
೧೦ . . . . ಪ್ರೇಮನಾಥಂ ಗೊಟ್ಟಂ ॥ ಯಮ ನಿಯಮ
೧೧ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾಣ ಜಪ ಸಮಾ-
೧೨ ಧಿ ಶೀಲಗುಣ ಸಂಪನ್ನರಪ್ಪ ಶ್ರೀರಾಮದತ್ತಿ ಸರ್ವ್ವನಮಸ್ಯದ-
೧೩ ಗ್ರಹಾರಂ ದಕ್ಷಿಣ ವಾರಣಾಸಿ ಮುದಿನೀರೂರೊಡೆಯ ಪ್ರ-
೧೪ ಮುಖ ಅಶೇಷ ಮಹಾಜನ . . . .
೧೫ ಗದ್ಯಾಣ ಪೊಂನ . . . . , ...
೧೬ ದ್ಧ ಅಷ್ಟಮಿ ಸೋಮವಾರ ವ್ಯತೀಪಾತದಂದು ಶ್ರೀರಾಮೇಶ್ವ-
೧೭ ರ ದೇವರ . . . . ಆಚಾರ್ಯ್ಯರೊಳಗಾಗಿ ನಾ . . . .
೧೮ ... ರಿಗಂ ದೇವರ ಮುಂನಿನ ಮಾಂನ್ಯದ ಗದ್ದೆಯಿಂ ಪ-
೧೯ ಡುವಲು ಹೊಱನೆಲ ನೀರು ಸೂಳು ಸಹಿತವಾಗಿ ಅಲ್ಲಿಯಾಚಾರ್ಯ್ಯ-
೨೦ ರು ತೇಜೋರಾಶಿ ಪಂಡಿತರಿಗೆ ಧಾರಾಪೂರ್ವ್ವಕಂ ಮಾಡಿ ಬಿಟ್ಟ ಗದ್ದೆ ಮತ್ತರೊಂ-
೨೧ ದು ॥ ಈ ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ ಗಂಗೆ ವಾರಣಾಸಿ ಕುರು-
೨೨ ಕ್ಷೇತ್ರದಲ್ಲು ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರ್ಗ್ಗೆ ಸಹಸ್ರ ಕ-
೨೩ ಪಿಲೆಯುಂ ದಾನ ಮಾಡಿದ ಫಲಮಕ್ಕು ॥ ಈ ಧರ್ಮ್ಮಮನಾರೊಬ್ಬ-

೨೪ ರು ಕಿಡಿಸಿದಪಗ್ಗೆ ಗಂಗೆ ವಾರಣಾಸಿ ಕುರುಕ್ಷೇತ್ರದಲು ಚತುರ್ವೇದ-

೨೫ ಪಾರಾಗರಪ್ಪ ಬ್ರಾಹ್ಮಣರುಮಂ ಸಹಸ್ರ ಕವಿಲೆಯುಮನ-

೨೬ ಳಿದ ದೋಷ(ಷ) ಸಾಗ್ಗಂ ।। ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧ-

೨೭ ರಾಂ [। *] ಷಷ್ಟಿರ್ವ್ವರ್ಷ ಸಹಸ್ರಾ(ಸ್ರಾ)ಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ।।

೧೪

ರಾಮೇಶ್ವರ ದೇವಾಲಯದ ಉತ್ತರ ದಿಕ್ಕಿನ ಜಾಲಿಗಿಡದ ಕೆಳಗಿರುವ ಈ ಶಾಸನ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಗೆ ಸಂಬಂಧಿಸಿದುದಾಗಿದೆ.

ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಲಕ್ಷ್ಮರಸನ ಮಗನಾದ ಕಪ್ಪದೇವರಸನು ಕರಣರು ಹಾಗೂ ಮಹಾಜನರ ಅನುಮತಿಯಿಂದ ಬ್ರಹ್ಮಪುರಿಯ ಸತ್ರದ ಅಗ್ಗಿಷ್ಟಿಗೆಗೆ ಹಣದಾನ ಮಾಡಿದ ವಿಷಯವನ್ನು ಈ ಶಾಸನ ಹೇಳುತ್ತದೆ.

ಇಲ್ಲಿ ಮಿತಿಯನ್ನು ಹೇಳಿರದಿದ್ದರೂ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಉಲ್ಲೇಖವಿರುವುದರಿಂದ ಈ ಶಾಸನದ ಕಾಲ ಸುಮಾರು ೧೧-೧೨ನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

* ಸ್ವಸ್ತಿ [। *] ಸಮಸ್ತ ಭುವನಾಶ್ರಯಂ ಶ್ರೀಪ್ರುಥುವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ । ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ॥ ಕಲ್ಯಾಣಪುರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ॥ ತತ್ಪಾದ ಪದ್ಮೋಪಜೀವಿ [॥ *] ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಂ ಸಕಳ ವಿದ್ಯಾಧೀಶ್ವರಂ ಸ್ಥಾನ ಚತುರ್ಮ್ಮುಖಂ ಸಕಳಗುಣರತ್ನಾವಳಿ ಶಿಖಾಮಯೂಖ ರಾಜಾಸ್ಥಾನ ಜನಮುಖ ಪದ್ಮಿನೀ ಸರೋವರ ರಾಜಹಂಸಂ ಸರಸ್ವತೀ ಕರ್ಣ್ನಾವತಂಸಂ ಬಗೆಕಾರ ಸ್ಪರಿಶಲಿಂಗಂ ಚಂದಲದೇವಿಯರಣುಗಂ ಶಸ್ತ್ರ(ಶೀಘ್ರ) ಬಗೆಕಾರ ಕೋಪ ಕೋಪಾನಳ ವೈರಿ ವಾದಿ ವಾರ್ಧಿ ಬಡಬಾನಳ ಸಿದ್ಧಿ ಬುದ್ಧಿ ವಿದ್ವಿಷ್ಟ ಗಾಯಕ ಪ್ರಸಂಗ ಮೃಗಮದಾಮೋದ ಮಷ್ಟ ಬಗೆಕಾರ

* ಈ ಶಾಸನವನ್ನು ಮೆಕೆಂಝಿ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.
Mec. vol, 334 L. R. No. 26 P, 753-755

ಪ್ರಿಯಾಕೇಪ ಬಗೆಕಾರ ಜಗಝಂಪ ವಿದಗ್ಧ ವಿದ್ವಜ್ಜನ ಹೃದಯ ಸೂರೆಕಾರ ಅ ಸ್ಸ್ಯನಂಕಕಾರ ಬಗೆಕಾರ ಚಕ್ರವರ್ತ್ತಿ ಕಟಕಾಭರಣಂ ಶ್ರೀಮನ್ಮಹಾಮಂಡಳೇಶ್ವರಂ ಲಕ್ಷ್ಮರಸನ ಕುಮಾರ ಕಪ್ಪದೇವರರಸರು । ಅವರ ದುರ್ಗದಾಳೊಡೆಯ ನಾಯಕ ಪ್ರಮುಖ ಕರಣಂಗಳುಂ ಮಹಾಜನಂಗಳೈನೂರ್ವ್ವರುಂ ಸಮಸ್ತರ ವಪ್ಪಗಳಿಂದ ದೇವರ ಬ್ರಂಹ್ಮಪುರಿಯ ಸತ್ರವ ಅಗ್ಗಿಷ್ಟಿಗೆಯಕ್ಕೆ ಬಿಟ್ಟ ವ್ರಿತ್ತಿ ವಕ್ಕಲದೆರೆಯಲೊಂದ ರೆಪೀಸವಂ ಅಂನ್ಯಾಯ ಕಾಹು ಕಾಣಿಕೆಯೊಳಗಾಗಿ ಯೇನು ಬಂದಡಾ ಪೂರೊಡೆಯ ಪ್ರಮುಖ ಮಹಾಜನಂಗಳುಂ ಸಮಸ್ತ ಪ್ರಜೆಗಳುಂ ಕೊಡುವರು ॥ ಯಿಾ ಧರ್ಮ್ಮಮಂ ಪ್ರತಿಪಾಲಿಸಿದವರ್ಗ್ಗೆ ವಾರಣಾಸಿಯಲು ಕುರುಕ್ಷೇತ್ರದಲು ಚತುರ್ವೇದ ಪಾರಗರಪ್ಪ ಬ್ರಾಹ್ಮಣರ್ಗ್ಗೆ ಸಹಸ್ರ ಕವಿಲೆಯುಮಂ ಕೊಟ್ಟ ಫಲಮಕ್ಕು ॥ ಯಿಾ ಧರ್ಮ್ಮಮನಳಿದಾತಂಗೆ ವಾರಣಾಸಿಯಲು ಕುರುಕ್ಷೇತದಲು ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರುಮಂ ಸಹಸ್ರ ಕವಿಲೆಯುಮಂ ಕೊಂದ ದೋಷಂ ಸಾಗ್ಗು ॥

೧೫

ರಾಮನಾಥದೇವಾಲಯದ ಒಳಗಿನ ಗೋಡೆಯ ಕಲ್ಲಿನಲ್ಲಿ ಕಂಡರಿಸಲಾದ ಈ ಶಾಸನ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರನ ಆಳಿಕೆಯ ಕಾಲವನ್ನು ಹೇಳುತ್ತದೆ.

ಮಹಾಮಂಡಲೇಶ್ವರ ಮಲ್ಲಿದೇವರಸರು ಅಗ್ರಹಾರ ಮುದಿನೀರ ಊರೊಡೆಯ ಹಾಗೂ ಐದುನೂರು ಮಹಾಜನರು ಉತ್ತರಾಯಣ ಸಂಕ್ರಾಂತಿ ನಿಮಿತ್ತವಾಗಿ ಮಾರ್ಕಂಡೇಶ್ವರದೇವರ ಪೂಜೆ, ಅಂಗಭೋಗ, ನೈವೇದ್ಯಗಳಿಗಾಗಿ ಭೂಮಿಯನ್ನೂ ಗಾಣವನ್ನೂ ದತ್ತಿಯಾಗಿ ಕೊಟ್ಟಿದ್ದಾರೆ. ನಕರರು, ಸೊಲ್ಲಿಗ ಸಮಯಗಳು ನೀಡಿದ ದಾನವೂ ಮಹಾಸಾಮಂತ ಹಾಡೆಯ ನಾಯಕ, ಹೆಗ್ಗಡೆ ಬಮ್ಮೆಯನಾಯಕ, ಹಗರಿಟ್ಟಿಗೆನಾಡಸೆಟ್ಟಿ, ಹೆರ್ಜುಂಕದ ಸುಂಕವೆರ್ಗಡೆ ನಾಗೆಯ ನಾಯಕರು ಬಿಲ್ಲೊಡೆ, ಸೆಟ್ಟಿದೆರೆ, ವಪ್ಪಾರಾವುಳ, ಎತ್ತಿನೊಕ್ಕ, ಸಾಂಗೆಯ ಜೀರವಣ, ಸೇಸೆ ಇತ್ಯಾದಿಗಳನ್ನು ದತ್ತಿಯಾಗಿ ಬಿಟ್ಟ ಉಲ್ಲೇಖವೂ ಇಲ್ಲಿರುತ್ತದೆ.

ಸಾಲು ೧೫-೧೬ ರಲ್ಲಿ ಬರುವ "ಶ್ರೀ ಮಚ್ಚಾಳುಕ್ಯ ವಿಕ್ರಮ ವರ್ಷದ ೫೪ನೆಯ ಸೌಮ್ಯ ಸಂವತ್ಸರದ ಪುಷ್ಯ ಸು ೧೨ ಸೋಮವಾರದಂದಿನುತ್ತರಾಯಣ ಸಂಕ್ರಾನ್ತಿ" ಮಿತಿಯು ಕ್ರಿ. ಶ. ೧೧೨೯ ಡಿಸೆಂಬರ ೨೪ ಗುರುವಾರಕ್ಕೆ ಸಮಾನವಾಗಿರುತ್ತದೆ.

● 'ಮುಂಡಗ' (ಗ್ರಾಮನಾಮ) ಹಾಗೂ 'ಸೊಲ್ಲಿಗ ಸಮಯ' ಪದಗಳು ಗಮನಿಸುವಂಥವಾಗಿವೆ.

೧ ಸ್ವಸ್ತಿ [।*] ಶ್ರೀ ಜಯಾಭ್ಯುದಯಶ್ಚ॥ ಸ್ವಸ್ತಿ ಸಮಸ್ತ ಭುವನಾಶ್ರಯ ॥ ಶ್ರೀಪ್ರಿಥ್ವೀವಲ್ಲಭ

೨ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾ-

೩ ಳುಕ್ಯಾಭರಣಂ ಶ್ರೀಮದ್ಭೂಲೋಕಮಲ್ಲದೇವರ ವಿಜಯ ರಾಜ್ಯಮುತ್ತ ರೋತ್ತರಾಭಿವ್ರಿ-

೪ ದ್ಧಿ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕತಾರಂಬರಂ ಕಲ್ಯಾಣದ ನೆಲೆವೀಡಿನಲು ಸುಖಸಂಕಥಾ-

೫ ವಿನೋದದಿಂ ರಾಜ್ಯಂ ಗೆಯ್ಯುತ್ತಮಿರೆ [॥*] ತತ್ಪಾದ ಪದ್ಮೋಪಜೀವಿ [॥*] ಸ್ವಸ್ತ್ಯನೇಕ ಭಂಗುರ ತರತ್ತರಂಗ ಸುಗ-

೬ ತವಿಖಿಚ್ಛಾಯ ಲವಣಾಬ್ಧಿ ವಳಯ ವಳಯಿತ ವೇಳಾವನ ಗಂ ಗಾ ತೀ ರ ಪಾರಿಯಾತ್ರ ತನ್ಮಧ್ಯಗೋ-

೭ ಶ್ವರಂ ಮಾಹಿಷ್ಮತೀಪ್ರರವರಾಧೀಶ್ವರಂ ಕಾರ್ತ್ತಿವೀರ್ಯ್ಯ ಕು ಳಾ ನ್ವ ವ (ಸ್ವಯ) ಸ(ಶ)ರತ್ನಮೆಯ ಸಂಪೂರ್ನ್ನ ಚಂದ್ರ. . –

೮ ವಾಪುರೇಂದ್ರ . . ಸತ್ಯಮಾಂಧಾತಂ ಸತ್ಯವಿಖ್ಯಾತಂ ಕ್ಷತ್ರಿಯ ಪವಿತ್ರಕದನ ತ್ರಿಣೇತ್ರ-

೯ ಕಂ ಶ್ರೀಗಾತಾಭಾರ್ಯ್ಯಂ ಮಂದರಧೈರ್ಯ್ಯಂ ಏಕಾಂಗವೀರ[ಂ*] ಮದ ನಾವತಾರಂ ಗುಣಮಣಿಭೂಷ . -

೧೦ ಲ ಪಟುಘೋಷಣಂ ಚತುಸ್ಸಮುದ್ರ ಪರ್ಯ್ಯಂತ ಕೀರ್ತ್ತಿ ವಿಖ್ಯಾತಂ ಶೋಭ ನದೀಜಾತಂ ವಿದ್ವಿಷ್ಟಗ . .–

೧೧ ಠೀರವ[ಂ*] ಮಾಕರ್ಕ್ಕಲ ಭೈರವಂ ರಿಪುಮಂಡಳಿಕ ಸರಭ ಭೇರುಂಡ[ಂ*] ಜಗದೋರ್ವ್ವಗಂಡನಾಶ್ರಿತಜ-

೧೨ ನ ಚಿಂತಾಮಣಿ ಮಂಡಳಿಕ ಮಕುಟ ಚೂಡಾಮಣಿಯಾಳಿಂ ಮುಂನ್ನಿಜೀವ ವೈರಿ ಚತುರರಗಬಲಮನೇಕಾಂ-

೧೩ ಗದೊಳ್ಗೆಲ್ದರಿ ಭೂಪಾಲರ ಶಿರಮಂ ಪರಿದಿಕ್ಕುವ ಶರಣಾಗತ ವಜ್ರಪಂಜರಂ ವೈರಿ ದಿಕ್ಕುಂಜರಂ

೧೪ ಶ್ರೀಮನ್ಮಹಾಮಂಡಳೇಶ್ವರಂ ಮಲ್ಲಿದೇವರಸರುಂ ಶ್ರೀಮದಗ್ರಹಾರಂ ಮುದಿ ನೀರಊರೊಡೆಯ ಪ್ರಮು-

೧೫ ಖ ಮಹಾಜನಂಗಳಯುೂ್ಬ್ಬರುಂ ಸ್ವಸ್ತಿ ಶ್ರೀಮಚ್ಛಕಾಕ್ಯ ವಿಕ್ರಮ ವರ್ಷದ
೫೪ ನೆಯ ಸೌಮ್ಯ

೧೬ ಸಂವತ್ಸರದ ಪುಷ್ಯ ಸು ೧೨ ಸೋಮವಾರದಂದಿನುತ್ತರಾಯಣ ಸಂಕ್ರಾಂ
ಪಬ್ಬ ನಿಮಿತ್ತದಿಂ

೧೭ ಶ್ರೀಮಾರ್ಕಂಡೇಶ್ವರದೇವರ ಪೂಜೆಪುರಸ್ಕಾರಕ್ಕಂ ದೇವರಂಗಭೋಗನಿವೇ
ದ್ಯಕ್ಕಂ ಧಾರಾಪೂರ್ವ್ವಕಂ

೧೮ ಮಾಡಿಬಿಟ್ಟ ಬಡಗವೊಲದ ಒಳಗೆಯ ದಾರಿಯಿಂ ಪಡುವ ವೂ ಕೊಡೆಯರ
ಮಾನ್ಯದಿಂ ತೆಂಕ ಬಿಟ್ಟ ಕೆ-

೧೯ ಯಿ ಮತ್ತರು ೧೨[।*] ಬಬ್ಬುಲಿಗಟ್ಟೆಯ ಮೂಡಲ ಕೆಯಿಂ ಮೂಡಣ
ಬೆಳೆಯ ಸೂಳು ಸಹಿತ ಬಿಟ್ಟಗದ್ದೆ

೨೦ ಕಂಮ್ಮ ೪೦೦[।*] ದೇವರ ನಂದಾದೀವಿಗೆಗೆ ಬಿಟ್ಟ ಗಾಣ ೧[।*] ನಖ
ರಂಗಳು ಅಂಗಡಿಯಲು ಬಿಟ್ಟ ಸೊಂಟಿಗೆ ಜೋಳಮಾ-

೨೧ ನ ೧[।*] ಅಂಗಡಿಯಲು ಚೈತ್ರದಲು ವೀಸ ೫ ಚೈತ್ರದಲು ವೀಸ ೫ [।*]
ಸೊಲ್ಲಿಗ ಸಮಯಂಗಳು ಬಿಟ್ಟ ಧ-

೨೨ ರ್ಮ್ಮ ಹಟ್ಟಿಗೆ ಅರೆವೀಸ[।*] ಶ್ರೀಮನ್ಮಹಾಮಂಡಳೇಶ್ವರಂ ಮಲ್ಲಿ
ದೇವರಸರು ಮಂಡಗೆಯ ರಾವಿಸೆ-

೨೩ ಟ್ಟಿಯ ಎತ್ತಿನೊಕ್ಕ ೧ಱ ಬಿಲ್ಕೊಡೆ ಕಾಹುಕಾಣಿಕೆ ಸೇಸೆ ನಾಡೋಪಾದಿ
ಮೂಲೆಗ್ರಾಸವೊಳಗಾಗಿವಾಗೆ-

೨೪ ಯೆಱಿಮ ಕೊಟ್ಟರು[॥*] ಸಗರ ೫೦೦ ಱುಂ ಬಾಡದ ಚು(ಕೆ)ೀಣಿಕಾಱ
ರಕ್ಕ ಕೋಲ್ಕಾಱರಕ್ಕ ಅಡ್ಡಂ ಬರ ಸಲ್ಲ ಪೆ-

೨೫ ಜ್ಜುಂಕದ ಸುಂಕವೆಗ್ಗಡೆ ಮಾದೆಯ ನಾಯಕ ಮಂಡಗೆಯ ರಾಮಿಸೆಟ್ಟಿಯ
ಎತ್ತಿನೊಕ್ಕ ೧ಱ ಕೊಟ್ಟ

೨೬ ಕಾಣಿಕೆ... ಪೆಜ್ಜುಂಕ ಮೂಲೆಗ್ರಾಸವೊಳಗಾಗಿ ಸಗರ ೫೦೦ಱುಂ ಬಾಡ
ದಲು ಅಡ್ಡಂ ಬರ ಸಲ್ಲ ಶ್ರೀ-

೨೭ ಮನ್ಮಹಾಸಾಮಂತಂ ಹಂಡೆಯನಾಯಕನುಂ ಹೆಗ್ಗಡೆ ಬಂಮ್ಮಯ
ನಾಯಕನುಂ ಮಂಡಗೆಯ-

೨೮ ಸೆಟ್ಟಿಯ ಎತ್ತಿನೊಕ್ಕ ೧ ಱ ಕಾಹುಕಾಣಿಕೆ ಸೇಸೆ ಬಿಲ್ಕೊಡೆ ಮೂಲೆ ನಾಡೋ
ಪಾದಿ ಗ್ರಾಸವೊಳಗಾಗಿ

೨೯ ಬಿಟ್ಟ ಗ ೩೦೦ ಉಱಲು ಸಲ್ವಂತಾಗಿ ಧಾರೆಯೆಱದು ಕೊಟ್ಟರು[॥*] ಪಗ ರಿಟ್ಟಿಗೆ ನಾಡಸೆಟ್ಟಿ ಮೂಲಿಸೆಟ್ಟಿ ಎತ್ತಿ-

೩೦ [ನೊಕ್ಕ*] ೧ಱ ಸೆಟ್ಟಿವೆಱಯುಂ ಧಾರೆಯೆಱದು ಕೊಟ್ಟ[।*] ಪಗ. ರಿಟ್ಟಗನಾಡ ಹೆಜ್ಜುಂಕದ ಸುಂಕವೆಗ್ಗಡೆ ನಾ-

೩೧ [ಗಯ] ನಾಯಕಂ ಮಂಡಗೆಯ ರಾಮಿಸೆಟ್ಟಿಯು ಎತ್ತಿನೊಕ್ಕ ೧ಜ ಕಾಹು ಕಾಣಿಕೆ . . . . ಹೆಜ್ಜುಂಕ ಮೂಲೆ-

೩೨ ಗ್ರಾಸವೊಳಗಾಗಿ ಹಗರಿಟ್ಟಗೆ ೩೦೦ಱ ಒಳಗಡ್ಡಂ ಬಾರದಂತಾಗಿ ಧಾರೆಯೆಱದು ಕೊಟ್ಟ ಬಾಗಿಲ ರೇವೆಯ ನಾಯ-

೩೩ [ಕನುಂ ಮಂಡಗೆಯ ರಾಮಿಶೆಟ್ಟಿಯು] ಎತ್ತಿನೊಕ್ಕ ೧ಕ್ಕೆ ಸಗರ ೫೦೦ಱುಂ ಬಾಡದ ವಡ್ಡರಾವುಳಮುಂ ಬಿಟ್ಟ ಬಿ . . . .

೩೪ ......೧ಕ್ಕಂ ಎತ್ತಿನೊಕ್ಕಂ ಸಾ೧ಗೆ ಬೀರವಣ ಸೇಸೆ ಇನಿಸುಮಂ ಬಿಟ್ಟ ವು....

೩೫ . . . .

೩೬ ಇನ್ತೀ ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ ವಾರಣಾಸಿ ಕುರು ಕ್ಷೇತ್ರದಲು [ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರಿಗೆ]

೩೭ [ಸಹಸ್ರ] ಕವಿಲೆಗಳಂ ಕೊಟ್ಟ ಫಲಮಕ್ಕು ॥ ಈ ಧರ್ಮ್ಮವಂ ಕಿಡಿಸಿದಾತಂಗೆ ಆ ತೀರ್ತ್ಥ[ದಲು ಬ್ರಾಹ್ಮಣರುಮಂ ಸಹಸ್ರ ಕವಿಲೆಗಳಂ]

೩೮ ಕೊಂದ ಮಹಾಪಾತಕಂ ಸಾರ್ಗ್ಗುಂ[*॥] ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

೧೬

ಈ ಶಾಸನ ರಾಮನಾಥ ದೇವಾಲಯದ ಒಂದನೆಯ ಕಂಬದ ಮೇಲ್ಭಾಗ ದಲ್ಲಿದ್ದು, ಕಲ್ಯಾಣಚಾಲುಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರನ ಆಳಿಕೆ ಯನ್ನು ಉಲ್ಲೇಖಿಸುತ್ತದೆ.

ಅಲ್ಲಲ್ಲಿ ಸವೆದಿರುವ ಈ ಶಾಸನದಲ್ಲಿ ಮುದನೂರ ಮಹಾಜನರು ರಾಮೇಶ್ವರ ದೇವಾಲಯದ ಅಂಗಭೋಗ ಇತ್ಯಾದಿ ಕಾರ್ಯಗಳಿಗಾಗಿ ನೀಡಿದ ದತ್ತಿಯ ವಿಷಯ ಇಲ್ಲಿದೆ.

ಸಾಲು ೭-೯ ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ವಿಕ್ರಮದೇವ ವರ್ಷದ ೭ನೆಯ [ರುಧಿರೋದ್ಗಾರಿ]ನಾಮ ಸಂವತ್ಸರದ .... ಆದಿವಾರಮುತ್ತರಾಯಣ ಸಂಕ್ರಮಣ" ಮಿತಿಯು ಕ್ರಿ. ಶ. ೧೦೮೩ಕ್ಕೆ ಸಮಾನವಾಗಿರುತ್ತದೆ. ಇದು ಮೂರ ನೆಯ ಸೋಮೇಶ್ವರನ ಆಳಿಕೆಯ ಕಾಲವಲ್ಲ.

ಒಂದನೆಯ ಮುಖದ ಮೇಲ್ಭಾಗ

೧ ಸ್ವಸ್ತಿ[।*] ಸಮಸ್ತ ಭುವನಾಶ್ರಯ[ಂ*] ಮಹಾ-
೨ ರಾಜಾಧಿರಾಜ ಪರಮೇಸ್ವ(ಶ್ವ)ರ ಪರಮಭಟ್ಟಾರಕಂ ಸತ್ಯಾಶ್ರಯ
೩ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮದ್ಭೂಲೋಕಮಲ್ಲದೇವರ
೪ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ಧ್ದಮಾನಮಾ-
೫ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ[।*] ಕಲ್ಯಾಣದ ನೆಲೆವೀಡಿನೊ-
೬ ಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ [।।*]
೭ . . . . . . ಶ್ರೀಮಚ್ಚಾಳುಕ್ಯ ವಿಕ್ರಮದೇ-
೮ ವ ವರ್ಷದ ೭ನೆಯ [ರೌದ್ರಿ]ನಾಮ ಸಂವತ್ಸರದ
೯ . . . . . . ಆದಿವಾರಮುತ್ತರಾಯಣ ಸಂಕ್ರಮಣ-
೧೦ ದನ್ದು ಶ್ರೀರಾಮೇಶ್ವರ ದೇವರ್ಗ್ಗೆ ಮುಂದಿನೀರ ಮಹಾಜನಂ
೧೧ . . . .
೧೨ ಶ್ರೀರಾಮೇಶ್ವರ ದೇವರಂಗಭೋಗಕ್ಕಂ. , . .

ಒಂದನೆಯ ಮುಖದ ಕೆಳಭಾಗ

೧೩ . . . ಧಾರಾಪೂರ್ವ್ವಕಂ ಮಾಡಿ ಬಿಟ್ಟರ್ ।।
೧೪ ಸಾಮಾನ್ಯೋಯಂ ಧರ್ಮ್ಮಸೇತುಂ ನೃಪಾಣಾಂ ಕಾಲೇ ಕಾ-
೧೫ ಲೇ ಪಾಲನೀಯೋ ಭವದ್ಭಿಃ [।*] ಸರ್ವ್ವಾ[ನೇ*]ತಾನ್ನಂ ಭಾಗಿನ
೧೬ ಪಾರ್ತ್ಥಿವೇಂದ್ರಾಂ ಭೂಯೋ ಭೂಯೋ ಯಾಚತೇ ರಾ-
೧೭ ಮಭದ್ರ ।। ಈ ಧರ್ಮ್ಮವನು ಪ್ರಪೇಕ್ಷಿಸಿ ನಡಸುವರು ನಡ-
೧೮ ಸುವರ ಧರ್ಮ್ಮ ।।

೧೭

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲದೇವನ ಕಾಲದ ಶಾಸನವಿದಾಗಿದ್ದು, ರಾಮೇಶ್ವರ ದೇವಾಲಯದ ಹತ್ತಿರದಲ್ಲಿರುತ್ತದೆ.

ಇಮ್ಮಡಿ ಜಗದೇಕಮಲ್ಲನ ಮಹಾಮಂಡಳೇಶ್ವರ ಕಪ್ಪದೇವರಸನು ರಾಮನಾಥ ದೇವರ ತಪೋಧನ, ವಿದ್ಯಾಸತ್ರ, ಅಂಗಭೋಗ, ನೈವೇದ್ಯ ಕಾರ್ಯಗಳಿಗಾಗಿ-ಮಹಾಜನರ ಕೈಯಲ್ಲಿ ಧಾರಾಪೂರ್ವಕ ಮಾಡಿಸಿಕೊಂಡು-ಸ್ಥಾನಾಚಾರ್ಯ ತೇಜೋ

ರಾಶಿ ಪಂಡಿತರ ಪಾವ ತೊಳೆದು ಭೂಮಿಯನ್ನು ದಾನವಾಗಿ ಕೊಟ್ಟಿದ್ದಾನೆ. ಇದ ರೊಂದಿಗೆ ಅಪ್ಪಣ್ಣ ಭಟ್ಟೋಪಾಧ್ಯಾಯನು ರಾಮನಾಥ ದೇವಾಲಯದ ನಂದಾ ದೀವಿಗೆಗಾಗಿ ಕೊಟ್ಟ ಕಲ್ಲುಗಾಣದ ಮೇಲಿನ ತೆರಿಗೆಯನ್ನು ಮಹಾಮಂಡಳೇಶ್ವರ ಕಪ್ಪದೇವರಸ ಹಾಗೂ ಮಹಾಜನರು ವಿನಾಯಿತಿ ಮಾಡಿದ ಉಲ್ಲೇಖವೂ ಇಲ್ಲಿದೆ.

ಸಾಲು ೧೨–೧೩ ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ವಿಕ್ರಮ ಕಾಲದ ೫ನೆಯ ದುಂದುಭಿ ಸಂವತ್ಸರದ ವೈಶಾಖ ಬಹುಳ ೨ ಬ್ರಿಹಸ್ಪತಿವಾರಮುತ್ತರಾಯಣ ಸಂಕ್ರಮಣ'' ಮಿತಿಯು ಕ್ರಿ. ಶ. ೧೦೮೨ ಎಪ್ರಿಲ ೧೭ ರವಿವಾರಕ್ಕೆ ಸಮಾನ ವಾಗಿದೆ.

ಸಾಲು ೩೪–೩೫ ರಲ್ಲಿ ಬರುವ "ಶ್ರೀಮಚ್ಚಾಳುಕ್ಯ ಪ್ರತಾಪ ಚಕ್ರವರ್ತಿ ಜಗ ದೇಕಮಲ್ಲದೇವ ವರ್ಷದ ೧೬ನೆಯ ಪ್ರಭವ ಸಂವತ್ಸರದ ಪುಷ್ಯ ಸುದ ೧ ಬ್ರಿಹಸ್ಪತಿ ವಾರ" ಮಿತಿಯು ಕ್ರಿ. ಶ. ೧೧೫೪ ಡಿಸೆಂಬರ ೭ ಮಂಗಳವಾರಕ್ಕೆ ಸರಿಸಮಾನ ವಾಗಿರುತ್ತದೆ.

● "ಸದಾಶಿವ ಭಕ್ತರುಮಪ್ಪ ಶ್ರೀಮದಗ್ರಹಾರಂ ಮುದಿನೀರೂರೊಡೆಯ ಪ್ರಮುಖವಶೇಷ ಮಹಾಜನ'' ಎಂಬ ವಾಕ್ಯವನ್ನು ಲಕ್ಷಿಸಬೇಕು.

೧ ಸ್ವಸ್ತಿ [।*] ಸಮಸ್ತ ಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿ ರಾಜ ಪರಮೇಸ್ವ(ಶ್ವ)ರಂ ಪರಮಭಟ್ಟಾರಕಂ ಸತ್ಯಾಶ್ರಯ–

೨ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲದೇವರ ನಿಜಯರಾಜ್ಯ ಮುತ್ತರೋತ್ತ–

೩ ರಾಭಿವೃದ್ಧಿ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ [।*] ಕಲ್ಯಾಣಪುರದ ನೆಲೆವೀಡಿನೊ–

೪ ಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರ[॥*] ತತ್ಪಾದ ಪದ್ಮೋಪಜೀವಿ [॥*] ಸಮಧಿಗತ ಪಂಚಮಹಾ–

೫ ಶಬ್ದ ಮಹಾಮಂಡಳೇಸ್ವ(ಶ್ವ)ರಂ ಸಕಳ ವಿದ್ಯಾಧೀಶ್ವರ ಗಾಂಧರ್ವ್ವ ಚತು ರ್ಮ್ಮುಖ ವಿವೇಕಗುಣ ರತ್ನಾವಳಿ ಸಿ(ಶಿ)–

೬ ಖಾಮಣಿಯೂಖಂ ರಾಯಾಸ್ಥಾನ ಜನಮುಖ ಪದ್ಮಿನೀ ಸರೋವರ ರಾಜ ಹಂಸು ಸರಸ್ವತೀ ಕರ್ಣ್ನಾವತಂಸಂ ಬಗೆ-

೭ ಕಾಜಿ ಸ್ಪರ್ಶಲಿಂಗಂ ಪಟ್ಟಮಹಾದೇವಿಯರಣುಗಂ ಶೀಘ್ರ ಬಗೆರಾಜಿ ಕೋಪ ಕೋಪಾನಳಂ ಪ್ರತಿವಾದಿ ಜಳ-

೮ ಧಿ ಒಡವಾನಳ ಸಿದ್ಧಿ ಬುದ್ಧಿ ದಿಃಾಪಟ್ಟಂ ಗಾಯಃಪುಃಖ ಉಲುಃ ಪಟ್ಟ [ಂ*] ಬಗೆಕಾಃಱ ವಾದಿಗಜ ಸಿಂಘಂ ಸಾ–

೯ ರಂಗ ಸಂಗೀತ ಗಾಯಕ ಪ್ರಸಂಗಂ ಮಹಾಕಾಳಿ ಮಹಾಲಕ್ಷ್ಮೀ ಲಬ್ಧವರ ಪ್ರಸಾದಂ ವಿಪ್ರಗಮದಾವೋ–

೧೦ ದಂ ದುಷ್ಟಬಗೆಕಾಱಂ ಹೃದಯಾಕಂಪಂ ಬಗೆಕಾಱ ಜಗಚ್ಛಂಪಂ ವಿದಗ್ಧ ವಿದ್ವಜ್ಜನ ಹೃದ–

೧೧ ಯ ಸೂಱಕಾರನಯ್ಯ ಸಂಕಕಾಱ[ಂ] ಶ್ರೀಮನ್ಮಹಾಮಣ್ಡಳೇಶ್ವರಂ ಬಗೆಕಾಱ ಚಕ್ರವರ್ತ್ತಿ ಕಟಕಾ–

೧೨ ಭರಣಂ ಕಪ್ಪದೇವರಸರು ಶ್ರೀಮಚ್ಚಾಳುಕ್ಯ ವಿಕ್ರಮಕಾಲದ ೫೦ನೆಯ ದುಂದುಭಿ ಸಂವತ್ಸ–

೧೩ ರದ ವೈಶಾಖ ಬಹುಳ ೨ ಬ್ರಿಹಸ್ಪತಿವಾರವುತ್ತರಾಯಣ ಸಂಕ್ರಮಣ ನಿಮಿತ್ತದಿಂ

೧೪ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾ(ನ) ಅನುಷ್ಠಾನ ಜಪ ಸಮಾಧಿ ಶೀ–

೧೫ ಳಗುಣ ಸಂಪನ್ನರುಂ ಸಮಸ್ತ ವಿದ್ವಜ್ಜನ ಪ್ರಸನ್ನರುಂ ಯಜನ ಯಾಜ ನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹ ಷ–

೧೬ ಟ್ಕಕರ್ಮ್ಮಂ ನಿರತರೌಪಾಸನಾಗ್ನಿಹೋತ್ರ ದ್ವಿಜಗುರು ದೇವಪೂಜಾ ತತ್ಪ ರರನೇಕ ಯಜ್ಞಾವಭೃತಾವಗಾಹನ ಪವಿತ್ರೀಕ್ರಿ–

೧೭ ತ ಶರೀ[ರ*]ರುಂ ಮಾರ್ತ್ತಾಂಡೋಜ್ವಳ ಕೀರ್ತ್ತಿಯುತರನೇಕ ತರ್ಕ್ಕ ವ್ಯಾಕ ರಣ ಕಾವ್ಯ ನಾಟಕ ವೇದಾಂನ್ತ ಸಿದ್ಧಾಂತಾಭಿ–

೧೮ ಜ್ಞರುಂ ಸಕಳಕಳಾ ಸರ್ವ್ವಜ್ಞರನೇಕ ಲೋಕಾಲೋಕ. ಪರಮ ಪರಂಜ್ಯೋತಿ ರ್ಮ್ಮಯಾಂತರ್ಗ್ಗತ ಶರೀರಯು–

೧೯ ಕ್ತರುಂ ಸದಾಶಿವ ಭಕ್ತರುಮಪ್ಪ ಶ್ರೀಮದಗ್ರಹಾರಂ ಮುದಿನೀರೂರೊಡೆಯ ಪ್ರಮುಖವಶೇಷ

೨೦ ಮಹಾಜನಂಗಳ ಕೈಯ್ಯಲು ಶ್ರೀ ಕಪ್ಪದೇವರಸರು ಧಾರಾಪೂರ್ವ್ವಕಂ ಮಾಡಿಸಿಕೊಂಡು ಶ್ರೀ–

೨೧ ರಾಮೇಶ್ವರ ದೇವರ್ಗ್ಗಂ ತಪೋಧನರ್ಗ್ಗಂ ವಿದ್ಯಾಸತ್ರಕ್ಕಂ ದೇವರಂಗ ಭೋಗ ನಿವೇದ್ಯಕ್ಕಂ ಅಲ್ಲಿಯ ಆಚಾರ್ಯ್ಯ–

೨೨ ರು ಗೋಕರ್ಣ್ಣರಾಶಿ ಪಂಡಿತ ದೇವರ ಪ್ರಶಿಷ್ಯರಪ್ಪ ತೇಜೋರಾಶಿ ಪಂಡಿತ ದೇವರ ಕಾಲಂ ಕರ್ಚ್ಚಿ ಧಾ-

೨೩ ರಾಪೂರ್ವ್ವಕವ ಾಡಿ ಹಾಳಕಟ್ಟೆ ುು ಗದ್ದೆಯು ಉತ್ತಮದರ್ಜೀವಿತ ಬಳಿ ಸಹಿತವೊಂದು ಅಪಟ [ನೀ]-

೨೪ ರ ಸೂಳು ಸಹಿತಂ ಆ ಗದ್ದೆಗೆ ಸಿದ್ಧಾ ುದೊಳಗೆ ಆವಲಂಬಣವಾಗಿ ಇಳಿಹುವ ಗದ್ಯಾಣ ಹದಿ-

೨೫ ನೈಯ್ದು [॥*] ಈ ಧರ್ಮ್ಮವಂ ಪ್ರತಿಪಾಳಿಸಿವವರ್ಗ್ಗೆ ಗಂಗೆ ವಾರಣಾಸಿ ಕುರುಕ್ಷೇತ್ರದಲು ವೇದಪಾರಗರ-

೨೬ ಪ್ಪ ಬ್ರಾಹ್ಮಣರ್ಗ್ಗೆ ಸಾಸಿರ ಕವಿಲೆಯುಂ ಕೊಟ್ಟ ಫಳಮಕ್ಕು ॥ ಇ (ಈ) ಧರ್ಮ್ಮಮನಳಿದವರ್ಗ್ಗೆ ಉಪೇಕ್ಷಿಸಿದರ್ಗ್ಗೆ

೨೭ ವಾರಣಾಸಿಯುಲು ಕುರುಕ್ಷೇತ್ರದಲು ವೇದಪಾರಗರಪ್ಪ ಬ್ರಾಹ್ಮಣರುಮಂ ಸಹಸ್ರ ಕ-

೨೮ ವಿಲೆಯುಮಂಸಳಿದ ದೋಷಂ ಸಾಗ್ಗು೯॥ ಸಾಮಾನ್ಯೋಯಂ ಧರ್ಮ್ಮ ಸೇತುನ್ರಿಪಾಣಾಂ ಕಾಲೇ ಕಾಲೇ

೨೯ ಪಾಲನೀಯೋ ಭವದ್ಭಿಃ[।*] ಸರ್ವ್ವಾನೇತಾನು ಭಾಗಿನಃ ಪಾರ್ತ್ಥಿವೇಂದ್ರಾನು ಭೂಯೋ ಭೂಯೋ ಯಾಚ-

೩೦ ತೇ ರಾಮಚಂದ್ರಃ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ[।*] ಷಷ್ಟಿರ್ವ್ವರಿಷ ಸಹಸ್ರಾ (ಸ್ರಾ)ಣಿ ವಿಷ್ಟಾ-

೩೧ ಯಾಂ ಜಾಯತೇ ಕ್ರಿಮಿಃ॥ ಬಹುಭಿರ್ವ್ವಸುಧಾ ದತ್ತಾ ರಾಜಭಿಃ ಸಗರಾದಿಭಿಃ [।*] ಯಸ್ಯ ಯಸ್ಯ ಯದಾ

೩೨ ಭೂಮಿಃ ತಸ್ಯ ತಸ್ಯ ತದಾ ಫಳಂ ॥ [ಊ]ರ ಧನಕ್ಕೆ ಮಂಣೆಯರಾಳ್ಕೆಯ ಅರಸರಕ್ಕೆ ಕೊಂಡೆಯರಕ್ಕೆ ಯಾ-

೩೩ ರಾದೊಡವಿದನಳಿದಂದೋರಂತಿರೆ ರೌರವಕ್ಕೆ ಗಳಗಳನಿಳಿವರು[॥*] ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

೩೪ ಸ್ವಸ್ತಿ [।*] ಶ್ರೀಮಚ್ಚಾಳುಕ್ಯ ಪ್ರತಾಪಚಕ್ರವರ್ತ್ತಿ ಜಗದೇಕಮಲ್ಲದೇವ ವರ್ಷದ ೧೬ನೆಯ ಪ್ರಭವ ಸಂವತ್ಸರದ ಪುಷ್ಯ

೩೫ ಸುದ್ಧ(ಶುದ್ಧ) ೧ ಬ್ರಿಹಸ್ಪತಿವಾರದಂದು ವುತ್ತರಾಯಣ ಸಂಕ್ರಮಣ ನಿಮಿತ್ತವಾಗಿ ಶ್ರೀಮತು ಹುಣಿಸಿಗೆಯ....

೩೬ ಅಪ್ಪಂಣ ಭಟ್ಟೋಪಾಧ್ಯಾಯರು ಶ್ರೀರಾಮೇಶ್ವರದೇವರ ಸಂದಾದೀವಿಗೆಗೆ
ಕೊಟ್ಟ ಕಲ್ಲಗಾಣವನು ಶ್ರೀಮನ್ಮಹಾಮಂಡಳೇಸ್ವ(ಶ್ವ)ರಂ
೩೭ ಬಗೆಕಾಱ ಚಕ್ರವರ್ತ್ತಿ ಕಟಕಾಧಿಪರ್ ಕಪ್ಪದೇವರಸರು ಶ್ರೀಮದಗ್ರಹಾರ
ಮುದಿನೀರೂರೊಡೆಯ ಪ್ರಮು-
೩೮ ಖವಸೇ(ಶೇ)ಷ ಮಹಾಜನಂಗಳುಂ ಆ ಗಾಣವ ಪೆಱಿವುವಂ ಗ್ರಾಣಾಯಿ
ಲ್ಲವಂ ಸರ್ಬ್ಬನಮಾನ್ಯವಾಗೆ ಶ್ರೀರಾಮೇ-
೩೯ ಸ್ವರದೇವರ್ಗ್ಗೆ ಕೊಟ್ಟರು ‖ ಶ್ರೀ ಶ್ರೀ [‖*]

೧೮

ಕಲ್ಯಾಣ ಚಾಲುಕ್ಯ ಮೂರನೆಯ ತ್ರೈಲಪನ ಕಾಲದ ಶಾಸನವಿದು. ಇದನ್ನು ರಾಮನಾಥ ದೇವಾಲಯದ ಹೊರಗೆ ನಿಲ್ಲಿಸಲಾಗಿದೆ. ಈ ಕಲ್ಲಿನ ಬಲಭಾಗದಲ್ಲಿ ಪ್ರಸ್ತುತ ಶಾಸನವನ್ನು ಕಂಡರಿಸಲಾಗಿದೆ.

ಅಗ್ರಹಾರ ಮುದನೂರ ಗ್ರಾಮದ ಐದುನೂರು ಮಹಾಜನರು ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳಿಗೆ ಭೂಮಿದಾನ ಮಾಡಿದ ಉಲ್ಲೇಖ ಇಲ್ಲಿರುತ್ತದೆ.

- ಸಾಲು ೧೫-೨೧ ರಲ್ಲಿ ಬರುವ " ಶ್ರೀಮಚ್ಚಾಳುಕ್ಯ ನೂರ್ಮ್ಮಡಿ ತ್ರೈಳೋಕ್ಯ ಮಲ್ಲದೇವ ವರ್ಷದ ೯ ನೆ [ಯ ಶಾರ್ವ್ವರಿ] ಸಂವ್ವಚ್ಛರದ [ಆಶ್ವಯುಜ]ದಮಾವಾಸ್ಯೆ ಸೋಮವಾರ [ಉತ್ತರಾಯಣ] ಸಂಕ್ರಮಣ" ಮಿತಿಯು ಕ್ರಿ. ಶ. ೧೧೮೦ ಅಕ್ಟೋಬರ ೨೦ ಸೋಮವಾರಕ್ಕೆ ಸಮಾನವಾಗಿದೆ.

೧ [ಸ್ವಸ್ತಿ [।*] ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ*]
೨ [ಮಹಾರಾ*]ಜಾಧಿರಾಜಂ ಪರಮೇಶ್ವರ [ಪರಮ ಭಟ್ಟಾರಕಂ ಸ*]-
೩ [ತ್ಯಾಶ್ರಯ*] ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರೈ-
೪ [ಳೋಕ್ಯಮಲ್ಲ]ದೇವರ ವಿಜಯರಾಜ್ಯಮುತ್ತರೋತ್ತರಾಭಿ-
೫ ವೃದ್ಧಿ ಪ್ರವರ್ಧ್ದಮಾನಮಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ [।*]
೬ ಕಲ್ಯಾಣಪುರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾ-
೭ ಜ್ಯಂ ಗೆಯ್ಯುತ್ತಮಿರೆ ‖ ಯಮ ನಿಯಮ ಸ್ವಾಧ್ಯಾಯ ಧ್ಯಾನ-
೮ ಧಾರಣ ಮೋನಾನುಷ್ಠಾನ ಜಪಸಮಾಧಿ ಶೀಲಗುಣ-
೯ ಸಂಪನ್ನರ್ ಸಮಸ್ತ ವಿದ್ವಜ್ಜನ ಪ್ರಸಂನ್ನರ್ ಯಜನ ಯಾ-

೧೦ ಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಷಟ್ಕ-

೧೧ ರ್ಮ್ಮ ನಿರತರೌ ಪಾಸಾಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪ-

೧೨ ರರುಂ ಅನೇಕ ಯಜ್ಞಾವಭೃತಾಪಗಾಪನ ಪವಿತ್ರೀಕೃತ-

೧೩ ಶರೀರರುಂ ಮಾರ್ತ್ತಾಂಡೋಜ್ವಳ ಕೀರ್ತ್ತಿಯುತರುಂ ಅನೇಕ ತರ್ಕ್ಕ

೧೪ ವ್ಯಾಕರಣ ಕಾವ್ಯ ನಾಟಕ ವೇದಾಂತ ಸಿದ್ಧಾಂತಾಭಿಜ್ಞರುಂ

೧೫ ಸಕಳಕಳಾ ವಿದ್ಯಾಧರರಪ್ಪ ಶ್ರೀರಾಮಪತ್ತಿ ಸರ್ವ್ವ-

೧೬ ನಮಸ್ಯದಗ್ರಹಾರಂ ದಕ್ಷಿಣವಾರಣಾಸಿ ಮು-

೧೭ ದಿನೀರೂರೊಡೆಯ ಪ್ರಮುಖ ಅಶೇಷ ಮಹಾ-

೧೮ ಜನಂಗಳ್ಗೆನೂರ್ವ್ವರು ಶ್ರೀಮಚ್ಚಾಳುಕ್ಯ ನೂರ್ಮ್ಮ-

೧೯ ಡಿ ತ್ರೈಳೋಕ್ಯಮಲ್ಲದೇವ ವರ್ಷದ ೯ ನೆ-

೨೦ [ಯ ಶಾರ್ವ್ವರಿ] ಸಂವ್ವಚ್ಛರದ [ಆಶ್ವಯುಜ]ದಮಾವಾಸ್ಯೆ

೨೧ ಸೋಮವಾರ [ಉತ್ತರಾಯಣ] ಸಂಕ್ರಮಣದಂದು ಶ್ರೀಮ-

೨೨ ದಗ್ರಹಾರದ ದೇವ ರಾಮೇಶ್ವರಕ್ಕಂ ಹಾಳಕಟ್ಟೆಯುಲು

೨೩ ಶ್ರೀ ಲಕ್ಷ್ಮಣೇಶ್ವರ ದೇವರಿಗೆ . ಯುಲು ಮತ್ತರ . -

೨೪ ಮೂಡಲು ಧಾರಾಪೂರ್ವ್ವಕಂ ಮಾಡಿ ಹೊಜಿನೆಲ

೨೫ ಸೂಳು ಸಹಿತಂ ಬಿಟ್ಟ ಕಮ್ಮ . . . . . .

೨೬ ಕಮ್ಮಂ ೪೫೦ [॥*] ಇ(ಈ) ಧರ್ಮ್ಮಮನಾರೊಬ್ಬರು ಪ್ರತಿಪಾಳಿ-

೨೭ ಸಿದರ್ಗ್ಗೆ ಗಂಗೆ ವಾರಣಾಸಿಯಲು ಕುರುಕ್ಷೇ-

೨೮ ತ್ರದಲು ಚತುರ್ವ್ವೇದ ಪಾರಗರಪ್ಪ ಬ್ರಾಹ್ಮ-

೨೯ ಣರಿಗೆ ಸಹಸ್ರ ಕವಿಲೆಯುಂ ದಾನ

೩೦ ಮಾಡಿದ ಫಲಪಕ್ಕುಂ॥ ಇ(ಈ) ಧರ್ಮ್ಮಮನಳಿದಾತಂಗೆ

೩೧ ವಾರಣಾಸಿಯಲು ಕುರುಕ್ಷೇತ್ರದಲು ಚ-

೩೨ ತುರ್ವ್ವೇದ ಪಾರಗರಪ್ಪ ಬ್ರಾಹ್ಮಣರುಮಂ

೩೩ ಸಹಸ್ರ ಕವಿಲೆಯುಮನಳಿದ ದೋಶ(ಷ) ಸಾ-

೩೪ ರ್ಗ್ಗಂ॥ ಸ್ವದತ್ತಾಂ ಪರದತ್ತಾಂ ವಾ ಯೋ **ಹರೇತ** ವಸುಂಧ-

೩೫ ರಾಂ [।*] ಷಷ್ಟಿರ್ವ್ವರಿಷ ಸಹಶ್ರಾ(ಸ್ರಾ)ಣಿ ವಿಷ್ಟಾ-

೩೬ ಯಾಂ ಜಾಯತೇ ಕ್ರಿಮಿಃ ॥

ಬಾರೋಕ್ ವಾಸ್ತುಕಲೆ ಮತ್ತು ಶಿಲ್ಪಕಲೆ

● ಎಸ್. ಸಿ. ಪಾಟೀಲ

'ಬಾರೋಕ್ ಕಲೆ' ಪಾಶ್ಚಿಮಾತ್ಯಕಲಾಸಂಪ್ರದಾಯದಲ್ಲಿ ಕಾಣಿಸಿಕೊಂಡ ಒಂದು ಕಲಾಪ್ರಕಾರ. (ಕಲಾಶೈಲಿ). ಭಾರತೀಯರಲ್ಲಿ ವೇಸರ, ನಾಗರ, ದ್ರಾವಿಡ ಕಲಾಶೈಲಿಗಳಂತೆ ಪಾಶ್ಚಿಮಾತ್ಯರಲ್ಲಿ ಗೊತಿಕ್, ಬಾರೋಕ್, ರೋಕೋಕೋ ಎಂಬ ವಿನೂತನ ಕಲಾ ಶೈಲಿಗಳು ಬೇರೆ ಬೇರೆ ಕಾಲಮಾನಗಳಲ್ಲಿ ಬೆಳೆದು ಬಂದಿವೆ. 'ಬಾರೋಕ್ ಕಲೆ' ಹೆಚ್ಚು ಜನಪ್ರಿಯತೆಯನ್ನು ಪಡೆದ ಕಲೆಯಾಗಿದೆ.

ಯುರೋಪಿನಲ್ಲಿ ಹದಿನಾರನೆಯ ಶತಮಾನದ ಉತ್ತರಭಾಗದಿಂದ ಹಿಡಿದು ಹದಿನೆಂಟನೆಯ ಶತಮಾನದ ಪೂರ್ವಭಾಗದವರೆಗಿನ ಅವಧಿಯಲ್ಲಿ ಸೃಷ್ಟಿಗೊಂಡ ಚಿತ್ರ. ವಾಸ್ತು, ಶಿಲ್ಪಕಲೆಗಳಲ್ಲಿ ಹೊರಬಂದ ಒಂದು ವಿನೂತನಕಲಾ ಚಳುವಳಿಯನ್ನು ಬಾರೋಕ್ ಕಲೆ ಎಂದು ಕರೆಯುತ್ತಾರೆ. ವೈವಿಧ್ಯಮಯವಾದ ವಿವಿಧ ಅಂಶಗಳಲ್ಲಿ ಮೇಳೈಸಿಕೊಂಡು ಸಮರಸವನ್ನು ಪ್ರಚೋದಿಸುವಂತಹ ಕಲಾಮಾಧ್ಯಮದ ವಿಭಿನ್ನ ಅಭಿವ್ಯಕ್ತಿ ಮಾಧ್ಯಮವೇ ಬಾರೋಕ್ ಕಲೆ. ಪ್ರಸ್ತುತ ಲೇಖನದಲ್ಲಿ ಬಾರೋಕ್ ವಾಸ್ತುಕಲೆ ಮತ್ತು ಶಿಲ್ಪಕಲೆಯನ್ನು ಕುರಿತು ಮಾತ್ರ ವಿವೇಚಿಸಲಾಗಿದೆ.

೧. ಬಾರೋಕ್ ವಾಸ್ತುಕಲೆ : (Baroque Architecture)

ವಾಸ್ತುವಿನ್ಯಾಸದಲ್ಲಿ ಬಾರೋಕ್ ತನ್ನದೇ ಆದ ವೈವಿಧ್ಯವನ್ನು ಹೊಂದಿದೆ. ಭಾವಾವಿಷ್ಟಯುಗ*ದ ಅವಧಿಯಲ್ಲಿ ಇಟಲಿಯಲ್ಲೆಲ್ಲಾ ಅನೇಕ ಚರ್ಚು, ಸನ್ಯಾಸಿಮಠ, ನಗರಚೌಕ ಹಾಗೂ ಇನ್ನಿತರ ವಾಸ್ತುಕೃತಿಗಳು ನಿರ್ಮಾಣಗೊಂಡವು. ಹೊರ ನೋಟಕ್ಕೆ ಈ ಕಾಲದ ವಾಸ್ತುಕಾರರು ಗೊತಿಕ್‌ಯುಗದವರಂತೆ ಅಂಥ ವಾಸ್ತು ಕೃತಿಗಳ ಬಾಹ್ಯಾಲಂಕಾರವನ್ನು ಹೆಚ್ಚಿಸಲು ಅಲಂಕಾರಗಳಲ್ಲಿ ಸ್ತಂಭ, ಮುಚ್ಚಿಗೆ, ಕುಂಬಕ ಮೊದಲಾದವುಗಳ ನಿರ್ವಹಣೆಯಲ್ಲಿ ಇನ್ನಿಲ್ಲದಷ್ಟು ಆಡಂಬರದ ಕೆಲಸ ತೋರಿಸಿದರು.[1] ಹೀಗೆ ಆಡಂಬರದ ಉಡಿಗೆಯಲ್ಲಿಯೇ ಬಾರೋಕ್ ವಾಸ್ತುವಿನ್ಯಾಸ ರೂಹು ತಳೆದದ್ದು.

---

* ಬಾರೋಕ್ ಕಲೆಯ ಕಾಲವನ್ನು ಬಾರೋಕ್ ಯುಗವೆಂದೂ ಇನ್ನು ಕೆಲವು ಸಲ ಭಾವಾ ವಿಶಿಷ್ಟ ಯುಗವೆಂದೂ ಕರೆಯುವುದು ರೂಢಿಯಾಲ್ಲಿದೆ.

1. ಡಾ. ಶಿವರಾಮ ಕಾರಂತ "ಕಲಾ ಪ್ರಪಂಚ" ಪುಟ 293

ಪದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಇಟಲಿಯ ಶ್ರೇಷ್ಠ ಕಲಾವಿದ ಮೈಕೆಲ್ ಎಂಜೆಲೋನನ್ನು ಬಾರೋಕ್ ವಾಸ್ತುಕಲೆಯ ಜನಕನೆಂದು ಪರಿಗಣಿಸುತ್ತಾರೆ. ಪ್ಲಾರೆನ್ಸ್‌ನಲ್ಲಿ ನಿರ್ಮಿಸಿದ ಮೆಡಿಸಿಮಂಶದ ಗುಲಿಯಾನೋ ಎಂಬ ಅರಸನ ಸಮಾಧಿ ರಚನೆ ಮತ್ತು ಲೋರೆಂಟಿಯನ್ ಲೈಬ್ರರಿ ಕಟ್ಟಡದ ಪ್ರವೇಶಾಂಗಣಗಳ ರಚನೆಯಲ್ಲಿ ಬಾರೋಕ್ ಕಲೆಯ ಮೂಲತತ್ವಗಳನ್ನು ಸುಲಭವಾಗಿ ಗುರುತಿಸಬಹುದು. ಬೃಹತ್ ಪ್ರಮಾಣದ ಸಂತ ಪೀಟರನ ಇಗರ್ಜಿ ಗೋಪುರದ ಕಾರ್ಯ, ಈತನ ವಾಸ್ತುಶಿಲ್ಪಶಾಸ್ತ್ರ ಪರಿಣತಿಗೆ ಸಾಕ್ಷಿಯಾಗಿವೆ.[2] ಬಾರೋಕ್ ವಾಸ್ತುವಿನ್ಯಾಸ ರಚನೆಯ ಮುಂಚೂಣಿಯಲ್ಲಿರುವ ಬರ್ನಿನಿ (೧೫೯೮-೧೬೮೦) ಬೊರೋಮಿನಿ (೧೫೯೯-೧೬೬೭), ಗುರ್ವಿನೊ ಗುರ್ವಿನಿ (೧೬೨೪-೧೬೮೩) ಪ್ರಸಿದ್ಧವಾಸ್ತುಕಾರರೆಂದು [3] ಕರೆಯಿಸಿಕೊಳ್ಳುತ್ತಾರೆ.

ಇಟಲಿಯ ಪ್ಲಾರೆನ್ಸ ನಗರದ ಬರ್ನಿನಿ ಪ್ರಸಿದ್ಧವಾಸ್ತುಕಾರನಾಗಿ, ಶಿಲ್ಪಕಾರನಾಗಿ ಅದ್ವಿತೀಯ ಕಾರ್ಯಗೈದ ಮಹಾಕಲಾವಿದ. ಇವನ ವಾಸ್ತುಕೃತಿ ಸೇಂಟ್ ಪೀಟರ್ಸ್ ಬೆಸೆಲಿಕಾವಸ್ಥೆಯನ್ನು ಉದಾಹರಿಸಬಹುದಾಗಿದೆ. "ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಕಂಡುಬಂದ ಬಾರೋಕ್‌ಶೈಲಿ ವಾಸ್ತುಶಿಲ್ಪಕ್ಕೂ ಅನ್ವಯವಾಯಿತು ಇದಕ್ಕೆ ಶ್ರೇಷ್ಠ ನಿದರ್ಶನ ೧೫೦೬ ರಲ್ಲಿ ಆರಂಭವಾಗಿ ೬೦ ವರ್ಷಗಳ ಕಾಲ ನಿರ್ಮಾಣ ಕಾರ್ಯನಡೆದ ರೋಮ್‌ನಗರದ ಸಂತಪೀಟರನ ಇಗರ್ಜಿ ಸಂಪ್ರದಾಯ ಶೈಲಿಯಲ್ಲಿ ಆ ಇಗರ್ಜಿಗಾಗಿ ನಕಾಶೆ ತಯಾರಿಸಿದವನು ವಾಸ್ತುಶಿಲ್ಪಿ ಬರ್ಮಾಂಟೆ. ಆ ನಕಾಶೆಯನ್ನು ಬದಲಾಯಿಸುತ್ತ ಹೋದವರಲ್ಲಿ ಚಿತ್ರಕಾರ ರ್‍ಯಾಫೇಲನೂ ಒಬ್ಬ. ಮೈಕೆಲ್ ಎಂಜಲೊ ತನ್ನ ೭೦ ನೆಯ ವಯಸ್ಸಿನಲ್ಲಿ ಈ ಇಗರ್ಜಿ. ಕಟ್ಟಡಕ್ಕೆ ೪೩೦ ಅಡಿಗಳ ಗುಮ್ಮಟ ರೂಪಿಸಿದ ಇಪ್ಪತ್ತು ವರ್ಷಗಳ ಮೇಲೆ ಆತ ತೀರಿಕೊಂಡಾಗಲೂ ಆ ಗುಮ್ಮಟದ ಕಾರ್ಯ (ರಚನೆ) ಮುಗಿದಿರಲಿಲ್ಲ. ಮುಂದೆ ಆ ದೇಗುಲದ ಬಹಿರಂಗವನ್ನು ಮತ್ತು ವಿಶಾಲ ಸಭಾಂಗಣವನ್ನು ಉಚಿತ ರೀತಿಯಲ್ಲಿ ತುಂಬಿಸುವ ಹೊಣೆ ಬರ್ನಿನಿಯ ಪಾಲಿಗೆ ಬಂದಿತು. ಐವತ್ತು ವರ್ಷಗಳ ಕಾಲ ಆ ಕೆಲಸಕ್ಕಾಗಿ ಆತ ಶ್ರಮಿಸಿದನಂತೆ[4] ಎಂಬುದಾಗಿ ಬರೆಯುತ್ತಾರೆ.

---

2. ಟ"ಜ್ಞಾನ ಗಂಗೋತ್ರಿ" ಸಂಪುಟ-5 ಪುಟ 403

3. ವಿವರಗಳಿಗೆ ನೋಡಿ "Encyclopedia Britanica" (Educational) Vol 3 Page 186

4 "ಜ್ಞಾನ ಗಂಗೋತ್ರಿ" ಸಂಪುಟ 5 ಪುಟ 33

ಇಟಲಿಯ ವಾಸ್ತುಕಾರ ಬೋರೋಮಿನಿ 'ಸನ್ ಕರ್ಲೊ ಅಲ್ಲೇಕ್ವ್ಯಟ್ರೊ ಫೌಂಟೇನ್'[5] ಎಂಬ ಚರ್ಚಿನ ವಾಸ್ತುರಚನೆಯನ್ನು ಮಾಡಿದ್ದಾನೆ. ಇದು ೧೬೩೭-೧೬೫೦ ರ ಅವಧಿಯಲ್ಲಿ ಮುಗಿಯಿತು. ಈ ಮಂದಿರವನ್ನು ಪ್ರವೇಶಿಸುವ ಅಂಗಣದ ಆಚೀಚೆ ಸರಳ ರೋಮನ್ ಕಮಾನುಳ್ಳ ಮೇಲಂತ್ತಸಲ್ಲಿ ಎರಡು ನೀಳ ಪಡಸಾಲೆ ಗಳಿವೆ.ಅವೆರಡನ್ನು ಜೋಡಿಸುವ ಚರ್ಚಿನ ಮುಂಭಾಗಕ್ಕೆ ಚಾಪದ ಆಕೃತಿಯದ್ದಾಗಿದೆ. ಅಲ್ಲಿ ರೋಮನ್ ಕಮಾನುಗಳುಳ್ಳ ಬಾಗಿಲು ಕಿಟಕಿಗಳ ಸುಂದರ ಆವರ್ತನೆ ಯನ್ನು ಕಾಣುತ್ತೇವೆ. ಇದರ ಉನ್ನತ ಶಿಖರವುಳ್ಳ ಎರಡು ಅಂತಸ್ತಿನ ರಚನೆಯಿದೆ. ಅದರ ನಾಲ್ಕೂ ಸುತ್ತಣ ಗೋಡೆಗಳು ನಾಲ್ಕು ಅರ್ಧ ವೃತ್ತಾಕಾರದ ಕವುಳಿಗಳಂತೆ ನಿಲ್ಲಿಸಿದವುಗಳಾಗಿವೆ. ಅವುಗಳ ಮೇಲಕ್ಕೆ ಒಂದು ಸುಂದರ ಶಿಖರವೂ ಬರುತ್ತದೆ, ಇದರ ಆ ಬಾಹ್ಯ ಆಕಾರದಲ್ಲಿ ಸರಳತೆ ಇದೆ. ಲಾಲಿತ್ಯವಿದೆ, ಸಂಯಮವಿದೆ, ಇಂತಹ ಮಂದಿರಗಳ ಆಂತರಿಕ ರಚನೆ ಮತ್ತು ಅಲಂಕಾರ ಭಾವಾವಿಷ್ಟ (ಬಾರೋಕ್) ಯುಗದಲ್ಲಿ ಪರಮಾವಧಿಯ ಅಲಂಕರಣೆಯನ್ನು ಪಡೆಯುತ್ತದೆ.[6] ಇದು ಇಟಲಿ, ಜರ್ಮನಿ ಮೊದಲಾದ ಒಂದೊಂದು ಪ್ರಾಂತದಲ್ಲಿಯೂ ವಿಭಿನ್ನ ತೆರನಾದ ಸೊಬಗನ್ನು ಹೊಂದಿ ಕಂಗೊಳಿಸಿದೆ.

'ಬಾರೋಕ್ ಮಾದರಿಯ ಮತ್ತೊಂದು (ಮಾದರಿಯ) ಬಗೆಯ ಅಲಂಕಾರ ವೈವಿಧ್ಯವನ್ನು ತೋರಿಸತಕ್ಕ ನಿದರ್ಶನ ಇಟಲಿಯ ಟೂರಿನ್ ನಗರದ 'ಸಾಂಟಾ ಸಿರಡೋನ್' ಎಂಬ ವಾಸ್ತು. ಅದರ ಮೇಲೆ ಕುಂಬಕವುಳ್ಳ ಒಂದು ಚೇಪಲ್ ಇದೆ. ಅದರ ಅಲಂಕಾರಿಕ ರಚನೆಯು ತುಂಬ ಜ್ಯಾಮಿತಿಕ ರೇಖಾವಿನ್ಯಾಸ ಲಕ್ಷಣಗಳುಳ್ಳ ಒಂದು ಬೆಡಗಿನ ನಿರ್ಮಾಣವಿದೆ. ಇದನ್ನು ರಚಿಸಿದ ವಾಸ್ತುಕಾರ ಗುವಾರಿನೋ ಗುವಾರಿನಿ[7] ಹೀಗೆ ಅದ್ಭುತವಾದ ಕಾರ್ಯಗೈದವರಲ್ಲಿ ಪೆಟ್ರೊಡಿಕೊರ್ಟನಾ ವಾಸ್ತುಕಾರನ ಕೌಶಲವನ್ನು ಮರೆಯುವಂತಿಲ್ಲ. ಇವರ ಹಿಂದೆ ಅನೇಕ ಕಲಾವಿದರು ಈ ಪರಂಪರೆಯನ್ನು ಬೆಳೆಯಿಸಿಕೊಂಡು ಬಂದಿದ್ದಾರೆ.

---

5 San Carlo alle quttro tontane Rome,built by Francesco Borromini (1599-1667) This oval shaped building is surmounted by an oval dome and its outer surface is not Staight buf undulating (— EDITH TOMOZY "Introduction to the History of Fine Arts and the est" Page 158

6 ಡಾ. ಶಿವರಾಮ ಕಾರಂತ "ಕಲಾ ಪ್ರಪಂಚ" ಪುಟ ೨೯೩.

7 ಡಾ. ಶಿವರಾಮ ಕಾರಂತ "ಕಲಾ ಪ್ರಪಂಚ" ಪುಟ ೨೯೪.

ಬಾರೋಕ್ ವಾಸ್ತುಶೈಲಿ :

ಬಾರೋಕ್ ವಾಸ್ತುವೈಶಿಷ್ಟ್ಯತೆಯು ನಿದರ್ಶನಗಳಿಗೆ, ಚಲನಶೀಲವಾದ ವಾಸ್ತುವಿನ್ಯಾಸಕ್ಕೆ ಮೈಕೆಲ್ ಎಂಜಿಲೋನ ಸರ್‌ಪೈಂಟಾ, ವ್ಹಿಜ್ನೋಲಾನ ಗೇಜು, ಯಥಾದರ್ಶನದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ರೋಮಿನ ಸೇಂಟ್ ಪೀಟರ್ ಮತ್ತು ಪೇಜಾನವೋನಾನ್ ಸೇಂಟ್ ಅಗ್ನೈನೈಜ್, ಬಹುಮಹಡಿ ಕಟ್ಟಡಗಳ ವಿನ್ಯಾಸಕ್ಕೆ ರೋಮಿನ ಎಸ್‌ಕಲೋರ್ಅಲೈಕ್ಯೂಟ್ರೊ ಫೌಂಟೀನ, ಅಲ್ಲದೆ ಸೇಂಟ್ ಪೀಟರ್ ಸ್ಕೊಯರ್, ಫೆಯಿಜಾಡೆಲ್ ಪೊಪೆಲೋ, ಪ್ಯಾರೀಸನ ಟುಲ್ಲೇರೀಜ್‌ಬಾತ್ ಕ್ರೇಜಂಟ್ ಮುಂತಾದ ವಾಸ್ತುಕೃತಿಗಳು ಬಾರೋಕ್ ಶೈಲಿಗೆ ನಿದರ್ಶನಗಳಾಗಿವೆ.

" The Boroque style in architecture originated in Rome Stimulated by Michelangelo's three dimenisional plastic treatment of architecture to be seen in the Choir and The cupola of Stpetre's Goleazzo Alessis (1512-1578) Bolognese palaces and Andrea palladio's (1508–1580) buiding activity in vicenza and venice also contribute toward the Maturing of Boroque Architcctuer,"[8] " ಬಾರೋಕ್ ವಾಸ್ತುಕಲೆ ಕಟ್ಟಡಗಳ ಛಾವಣಿ, ಗೋಡೆಗಳಲ್ಲಿಯು ಶ್ರೀಮಂತವಾದ ಅಲಂಕಾರಗಳಿಂದ ವಿವಿಧ ವಿನ್ಯಾಸಗಳಿಂದ ಸುಳುವು ನಕ್ಷೆಗಳಿಂದ ಬೆಳವಣಿಗೆಯಾದದ್ದರಿಂದ ಗುರುತಿಸಬಹುದು.[9] ಬಾರೋಕ್ ವಾಸ್ತುವಿನ್ಯಾಸ ಹೆಚ್ಚಾಗಿ ಚರ್ಚುಗಳ ನಿರ್ಮಾಣ, ಇಗರ್ಜಿಗಳ ಕಟ್ಟಡ, ಕೆಲವು ಗ್ರಂಥಾಲಯುಗಳ ವಿನ್ಯಾಸ, ಸಾರ್ವಜನಿಕ ಉದ್ಯಾನಗಳಲ್ಲಿಯು ವೈವಿಧ್ಯಮಯವಾದ ವಾಸ್ತುರಚನಾವಿನ್ಯಾಸದ ಸ್ನಾನಗಳು (ಈಜು ಕೊಳಗಳು) ಪ್ರಮುಖ ಬೀದಿಗಳಲ್ಲಿಯು ಕೆಲವು ವೃತ್ತಗಳು, ಉದ್ಯಾನಗಳಲ್ಲಿಯು ಪ್ರಾಣಿ ಮಾನವಾಕೃತಿಯ ಕಾರಂಜಿಗಳು, ಅರಮನೆ ಹಾಗೂ ಭವ್ಯವಾದ ಕಟ್ಟಡಗಳಲ್ಲಿ, ತನ್ನ ವೈಶಿಷ್ಟ್ಯತೆಯುನ್ನು ಭವ್ಯತೆಗೇರಿಸಿ ಬೆಳವಣಿಗೆಯಾದ ಕಲಾಪ್ರಕಾರವಿದಾಗಿದೆ.

---

8 DAGOBERTD. RVNES and HARRY G. SCHRICKEL (Edt) " Encyclopedia of the Arts " page–96

9 EDITH TOMORY " In Introducation to the History of tine Arst India and west " Page 158

೨. ಬಾರೋಕ್ ಶಿಲ್ಪಕಲೆ (Baroque Sculpture)

ಶಿಲ್ಪಿಯಾದವನ ಕಣ್ಣಿಗೆ ವಸ್ತುಗಳ ಬಣ್ಣ ಮುಖ್ಯವಲ್ಲ, ಆಕೃತಿ ಮುಖ್ಯ. ಆತ ಯಾವುದನ್ನೇ ಮಾಡುವದಿದ್ದರೂ ಚಿತ್ರಕಾರನಂತೆ ಬರೀ ಉದ್ದಗಲವುಳ್ಳ ಕಾಗದದ ಮೇಲೆ ಅಥವಾ ಯಾವುದೇ ಹಾಳೆಯ ಮೇಲೆ ಕೆಲಸಮಾಡದೆ ಉದ್ದಗಲಗಳ ಜೊತೆಗೆ ದಪ್ಪವನ್ನು ಇರಿಸಿಕೊಂಡು ತಾನು ಮಾಡುವ ಆಕೃತಿಯಲ್ಲಿ ತಾನು ಕಂಡು ಪ್ರೇರಣೆಗೊಂಡ ವಸ್ತುಗಳ ಆಕೃತಿಯ ಎತ್ತರ, ದಪ್ಪ, ಉದ್ದ, ಅಗಲ ಎಲ್ಲವನ್ನೂ ತೋರಿಸಬಲ್ಲ.[10] ಬಾರೋಕ್ ಶಿಲ್ಪಕಲಾ ಕೃತಿಗಳಲ್ಲಿ ಮುಖ್ಯವಾಗಿ "ಆಕೃತಿ ಕಣ್ಮನದಗಳನ್ನು ರಂಜಿಸಬೇಕು, ಅವುಗಳಲ್ಲಿ ಚೈತನ್ಯ ತುಂಬಿ ತುಳಕಬೇಕು." ಅವನ್ನು ಕಂಡೊಡನೆಯೇ ಅವು ನಮ್ಮನ್ನು ಮುಗ್ಧಗೊಳಿಸಬೇಕು ಎಂಬ ಪ್ರೇರಣೆಯಿಂದ ಈ ಅವಧಿಯ ಸೃಷ್ಟಿಗಳು ಉಂಟಾದವು[11] ಬಾರೋಕ್ ಶಿಲ್ಪದಲ್ಲಿ ಮುಖ್ಯವಾಗಿ ಕಲಾಕೃತಿ ನೋಡುಗನನ್ನು ಆಕರ್ಷಿಸಬೇಕು ಎನ್ನುವ ಅಭೀಪ್ಸೆಯೇ ಈ ರೀತಿಯ ಕಲಾಕೃತಿ ನಿರ್ಮಾಣಕ್ಕೆ ಕಾರಣವಾಗಿವೆ.

ಶಿಲ್ಪ ಕಲಾಕೃತಿಗಳು :

ಬಾರೋಕ್ ಶಿಲ್ಪಿಗಳು ಅನೇಕ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ ಇಲ್ಲಿ ಪ್ರಮುಖವಾದ ಕೆಲವನ್ನು ಮಾತ್ರ ಹೆಸರಿಸಿದ್ದೇನೆ.

೧) ಬರ್ನೀನಿಯಿಂದ ರಚನೆಗೊಂಡ ಶಿಲ್ಪ ಕಲಾಕೃತಿಗಳು.

i ವರ್ಜಿಲ್ ಕಾವ್ಯದ ಕಥಾನಾಯಕ ಎನಿಡ್‌ನ ಶಿಲ್ಪ (ಇದು ಬೆಂಕಿ ಹತ್ತಿದ ಟ್ರಾಯ್‌ನಗರದಿಂದ ನಾಯಕ ತನ್ನ ತಂದೆಯನ್ನು ಹೊತ್ತು ಸಾಗುವ ಶಿಲ್ಪವಿದಾಗಿದೆ.

ii ಗ್ರೀಕ್ ಕಥಾನಕದ ಪ್ಲೇಟೊ ಪ್ರಣಯೋನ್ಮತ್ ದೇವತೆ ಪರ್ಸಿಪೋನಳನ್ನು ಕದ್ದೊಯ್ಯುವ ಶಿಲ್ಪವಿದಾಗಿದೆ.

iii ಸೇಂಟ ಥೇರಿಸಾಳ ಶಿಲ್ಪ (ಆನಂದದಿಂದ ಕೂಡಿದ ಹರ್ಷಾತಿರೇಖದ ಶಿಲ್ಪ) ವಿದಾಗಿದೆ.

೨) ಮೈಕೆಲ್ ಎಂಜಿಲೋನ ಕೆಲವು ಶಿಲ್ಪಕಲಾಕೃತಿಗಳು;

i ಯೇಸುವಿನ ತಾಯಿಯ ಶಿಲ್ಪ (ಮಗುವಿನ ಮೃತದೇಹವನ್ನು ಇಟ್ಟುಕೊಂಡು ದುಃಖಿಸುತ್ತಿರುವ ಶಿಲ್ಪವಿದಾಗಿದೆ)

10 ಡಾ. ಶಿವರಾಮ ಕಾರಂತ ".. ಚಿತ್ರಶಿಲ್ಪಶಾಸ್ತ್ರ ಕಲೆಗಳು " ಪುಟ 17

11 ಡಾ. ಶಿವರಾಮ ಕಾರಂತ " ಕಲಾ ಪ್ರಪಂಚ " ಪುಟ 286

ii ಲಾರೆನ್ಜೋದ ಮೆಡಿಸಿ ಅರಸನ ಶಿಲ್ಪ

iii ನಿದ್ರಿಸುತ್ತಿರುವ ನಾರಿಯ ಶಿಲ್ಪ.

iv ಡೆವಿಡ್‌ನ ಶಿಲ್ಪ (ಇದು ಸಂಗಮವರಿ ಕಲ್ಲಿನಲ್ಲಿ ಕೆತ್ತಿದ ಮಹಾನ್ ಕಲಾಕೃತಿ)

೩) ಅಂಟೋನೆ ಕೊಸವೆಕ್ಸನ ' ಲೂಯಿಸ್ ಡಿ ಬೊರ್ಡನ್ ' ಪ್ರಿನ್ಸ್ ಆಫ್ ಕೊನ್‌ಡೆ

೪) ಜಾನ್ ಅಂಟೋನೇ ರಚಿಸಿದ 'ಲೂಯಿಸ್' ಬ್ರಾಂಜಿನಲ್ಲಿ ರಚಿಸಿದ ಶಿಲ್ಪ

೫) ರೊಪಿನ್‌ನ 'ಮಾರ್ನಿಂಗಶಿಲ್ಪ' (ಅಂಬೆಗಾಲೂರಿ ನಿಂತು ತಲೆಗೂದಲನ್ನು ಬಾಚಿ ಕೊಳ್ಳುತ್ತಿರುವ ಯುವತಿಯ ನಗ್ನ ಶಿಲ್ಪವಿದಾಗಿದೆ.)

" Baroque sculpture, created in the period between 1600 and 1750 is characterized by dynamic motion of body and garnment, by an opening and splitting of contoure, by a richly concave and convex treatement of surface which admits light and shadow as an active facture in total effect "[12] ಬಾರೋಕ್ ಶಿಲ್ಪದ ಶಾರೀರಿಕ ವಿನ್ಯಾಸ, ಹಾವಭಾವ, ಸಹೃದಯನ ಮೇಲೆ ಬೀರುವ ಪರಿಣಾಮ ಒಟ್ಟು ಭವ್ಯತೆಯಿಂದ ಕೂಡಿ ನೋಡುಗನನ್ನು ಯಾವುದೋ ಒಂದು ಭ್ರಮಾಲೋಕ ದಲ್ಲಿ ವಿಹರಿಸುವಂತೆ ಮಾಡುತ್ತವೆ. ಕೆಲವು ಶಿಲ್ಪಗಳಲ್ಲಿ ನಾಟಕೀಯತೆಯ ಭಾವ ನೆಯೇ ಹೆಚ್ಚಾಗಿ ಕೃತ್ರಿಮತೆಯಿಂದ ಶಿಲ್ಪಗಳು ಸಹೃದಯನಿಂದ ದೂರಾಗುವ ಸಾಧ್ಯತೆಯೂ ಇದೆ. ಶಾರೀರಿಕ ಅಂಗರಚನಾವಿನ್ಯಾಸ (ಅನಾಟಮಿ) ಉಡುಗೆ ತೊಡುಗೆ ಹಿತಮಿತವಾದ ಅಭರಣಗಳು ಪ್ರಮಾಣಬದ್ಧವಾದ ಶಿಲ್ಪಗಳ ಒಟ್ಟು ವಿನ್ಯಾಸಗಳಿಂದ ಬಾರೋಕ್ ಶಿಲ್ಪಕಲಾಕೃತಿಗಳು ಆಕರ್ಷಣೀಯವಾಗಿ ಕಂಗೊಳಿಸುತ್ತವೆ.

ಬಾರೋಕ್ ಶೈಲಿಯ ಶಿಲ್ಪಗಳಲ್ಲಿ ಪುರುಷರು, ಚಿಕ್ಕಮಕ್ಕಳು, ನಗ್ನಸ್ತ್ರೀಯರು. ದೇವತೆಗಳು, ಪೌರಾಣಿಕ ಶಿಲ್ಪಗಳು. ರಾಜ ಮಹಾರಾಜರ ಶಿಲ್ಪಗಳು, ಸಾಮಾನ್ಯರ ಶಿಲ್ಪಗಳು, ಈ ಎಲ್ಲ ವಿಧದ ಶಿಲ್ಪಕಲಾಕೃತಿಗಳು ತಮ್ಮ ಇತಿಮಿತಿಯಲ್ಲಿಯೇ ಅವು ಗಳ ಗುಣಧರ್ಮವನ್ನು ಪ್ರಕಟಪಡಿಸುತ್ತವೆ. ಬಾರೋಕ್ ಶೈಲಿಯಲ್ಲಿ ಇದು ಪ್ರಮುಖ ವೈಶಿಷ್ಟ್ಯವಾಗಿದೆ ಎಂದರೆ ತಪ್ಪಾಗಲಾರದು. ಮೈಕಲ್ ಎಂಜಿಲೋ ಬರ್ನೀನಿ ಯಂತಹ ಮೇಜರ (ಪ್ರಮುಖ) ಕಲಾವಿದರಿಂದ ಬಾರೋಕ್ ಶಿಲ್ಪ ತನ್ನ ಸೊಗಸು. ಸೊಬಗನ್ನು ಹೆಚ್ಚಿಸಿಕೊಂಡಿದೆ ಎಂದು ಹೇಳಬಹುದಾಗಿದೆ.

---

12. DAGOBERTD RUNES & HARRY G. SCHRICKEL (Ed) " Encylopedia of Arts " Page 97.

ಬಾರೋಕ್ ಶಿಲ್ಪಕಲೆಯ ಕಲಾವಿದರು[13]

ಇಟಲಿಯ ಕಲಾವಿದರು

೧ ಸಿಲ್ಲನಿ (೧೫೦೦–೧೫೭೧)

೨ ಅಮನತಿ (೧೫೧೧–೧೫೯೨)

೩ ಗಿವ್ರೋವಾಗಿ ಡಾ ಬಲೋಗಾನಾ (೧೫೨೮–೧೬೦೮)

೪ ರೆಲ್ಲಿ ಜಾನ್ ಬಲೋಗಾನಾ (೧೫೨೮–೧೬೦೮)

೫ ಬರ್ನೀನಿ (೧೫೯೮–೧೬೮೦)

ಸ್ಪಾನೀಶ್‌ನ ಕಲಾವಿದರು

೧ ಪ್ರಾನ್ಸಿಸ್‌ಕೋ ಪಿಕ್ಯಾಸೊ (೧೫೭೧–೧೬೫೪)

೨ ಬಾರ್ಜಯೋ ಹರ್ನಾಂಡೀಜಿ (೧೫೭೬–೧೬೩೬)

೩ ಅಲ್ಸನೋ (೧೬೬೮)

೪ ಪೆಡ್ರೊಡಿ ಮೊನೆ (೧೬೨೮–೧೬೮೮)

೫ ಎಲ್‌ಗ್ರೇಕೋ

ಫ್ರೆಂಚ್ ದೇಶದ ಕಲಾಕಾರರು

೧ ಪ್ರಾನ್ಸಿಸ್ ಗಿರೋರ್ಡನ್ (೧೬೨೮-೧೭೧೫)

೨ ಪಿರರ್ ಲೆಗ್ರೂಸ್ (೧೬೬೬–೧೭೧೭)

೩ ಕೊಸವೆಕ್ಸ (೧೬೪೦–೧೭೨೦)

೪ ಕೊಸ್ಟೊ (೧೬೫೮–೧೭೩೩)

೫ ಪ್ಯೂರರ್ ಪ್ರಗೆಟ್ (೧೬೨೨–೧೬೯೪)

೬ ಬುಚರಡನ್ (೧೬೯೮–೧೭೬೨)

೭ ಪಾಲ್‌ಕೊನೆಟ್ ೧೭೧೬–೧೭೯೧

ಜರ್ಮನಿ ಮತ್ತು ಆಸ್ಟ್ರೇಯಾ

ದಕ್ಷಿಣದ ಜರ್ಮನಿಯಲ್ಲಿ ಗಿಯೋವಾನಿ ಬಲೋಗಾನ್‌ನ ಶೈಲಿಯ ಪರಂಪರೆಯ ಕಲಾಕೃತಿಗಳು ರಚನೆಗೊಂಡಿವೆ. ಪ್ಲ್ಯಾಮಿಸ್ ಮತ್ತು ಡಚ್ಜ್‌ನಲ್ಲಿ ಗಿವ್ರೋವಾನಿಯ ವಿದ್ಯಾರ್ಥಿಗಳು (ಹರ್ಬರ್ಟ್ ಗರ್ಹಾರ್ಡ್, ಆಡ್ರಿನ್‌ಡಿವ್ರಿಸ್, ಪಿಟರ್ ಡಿ ವ್ಯಾಯಿಟ್,

13. ವಿವರಗಳಿಗೆ ನೋಡಿ DAGOBERTD RUNES & HARRY G, SCHRICKEL (Edt) "Encylopedia of ARTS" Page-97

ಕಾಲ್ಯಾಡ್, ಕ್ಯಾಂಡಿಡೊ) ಮಾಬಗಾನ ಶ್ಯಾಂರೀಜಕಲ್ಬರ (೧೬೬೪–೧೭೧೪), ಬಲೋಥೊನಾರ್, ಪ್ರೇಮೋಸರ (೧೬೬೧–೧೭೩೩), ಇವರೆಲ್ಲರು ಬರ್ನೀನಿಯ ಪರಂಪರೆಯ ಶೈಲಿಯಲ್ಲಿ ಕಲಾಕೃತಿ ನಿರ್ಮಾಣಮಾಡಿದ್ದಾರೆ.

ಒಟ್ಟಾರೆ, 'ವಾಸ್ತುಶಿಲ್ಪ' ಮತ್ತು 'ಶಿಲ್ಪಕಲೆ'ಗಳು ಬೇರೆಬೇರೆ ಕಲಾ ಪ್ರಕಾರಗಳಾದರೂ ಬಾರೋಕ್ ಕಲೆಯಲ್ಲಿ ಮಾತ್ರ ಇವು ಒಂದಕ್ಕೊಂದು ಬೆರೆತು ಕೊಂಡು ಸಮರಸದಿಂದ ಒಂದೇ ನಾಣ್ಯದ ಎರಡು ಮುಖಗಳ ಹಾಗೆ ಇಡಿಯಾಗಿ ಬೆಳೆದುಬಂದಿವೆ.

ಮಲೆನಾಡಿನ ಕೃಷಿಕರ ವೃತ್ತಿಪದಕೋಶ

● ಎಚ್. ಎಂ. ಮಹೇಶ್ವರಯ್ಯ

ಒಂದು ಸಮುದಾಯದ ಕೃಷಿ ವೃತ್ತಿಪದಗಳನ್ನು ಸಂಗ್ರಹಿಸಿ ಅವುಗಳನ್ನು ಆ ಪ್ರದೇಶದ ಪರಿಸರ, ಭಾಷೆ, ಸಾಮಾಜಿಕ ಚೌಕಟ್ಟು, ಭೂಗುಣ, ಬೆಳೆಗಳು ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕೆಂಬ ವಿಚಾರದಿಂದ ಹೊರಟು, ಬೇರೆ ಬೇರೆ ಉಪಭಾಷಾವಲಯದಲ್ಲಿ ಸಂಗ್ರಹಕಾರ್ಯ ಇನ್ನೂ ನಡೆಯದಿದ್ದುದರಿಂದ ಕೇವಲ ವರ್ಗೀಕರಣ, ವಿಶ್ಲೇಷಣೆಗಳನ್ನು ಮಾತ್ರ ಮಾಡಿದ್ದೇನೆ. ಮಲೆನಾಡಿನ ರೈತ ಕುಟುಂಬದ ಸದಸ್ಯನಾದ ನನಗೆ ನನ್ನ ಪರಿಸರದಲ್ಲಿ ಬಳಕೆಯಾಗುತ್ತಿದ್ದ ಕೃಷಿಗೆ ಸಂಬಂಧಿಸಿದ ವಿಶಿಷ್ಟ ಶಬ್ದಗಳನ್ನು ಸಂಗ್ರಹಿಸುವುದು, ಅವುಗಳನ್ನು ದಾಖಲಿಸುವುದು ಮುಖ್ಯವೆನಿಸಿದೆ. ಕೃಷಿಗೆ ಸಂಬಂಧಿಸಿದ ಶಬ್ದಗಳನ್ನು ಗಮನಿಸುವಾಗ ಮಲೆನಾಡಿನ ಪ್ರಮುಖ ಕೃಷಿಗಳಾದ (೧) ಭತ್ತ, ಕಬ್ಬು, (೨) ಅಡಿಕೆ, (೩) ಕಾಫಿ ಬೆಳೆಗಳ ಕೃಷಿವಿಧಾನ ಮತ್ತು ಅವುಗಳನ್ನು ಬೆಳೆಯುವ ಪ್ರದೇಶ ಭಿನ್ನವಾದುದರಿಂದ ನನಗೆ ಲಭ್ಯವಿರುವ ಭತ್ತ-ಕಬ್ಬುಗಳನ್ನು ಬೆಳೆಯುವ ಪರಿಸರದ ಕೃಷಿ ವೃತ್ತಿಪದಗಳನ್ನು ಮಾತ್ರ ದಾಖಲಿಸುವ ಪ್ರಯತ್ನ ಮಾಡಿದ್ದೇನೆ.

ಒಂದು ನಿರ್ದಿಷ್ಟ ವೃತ್ತಿಯ ಶಬ್ದಗಳನ್ನು ಅಥವಾ ನಿರ್ದಿಷ್ಟ ಕ್ಷೇತ್ರದಲ್ಲಿ ಕೆಲಸ ಮಾಡುವ ವ್ಯಕ್ತಿಗಳು ತಮ್ಮಲ್ಲಿ ಬಳಸುವ ತಾಂತ್ರಿಕ ಶಬ್ದಗಳನ್ನು ಆಯಾ ಕ್ಷೇತ್ರದ ವಿಶಿಷ್ಟ ನುಡಿಗಟ್ಟುಗಳೆಂದು ಕರೆಯಬಹುದು. ಉದಾಹರಣೆಗೆ ವಿಜ್ಞಾನ ಕ್ಷೇತ್ರದಲ್ಲಿ ಬಳಕೆಯಾಗುವ ಕನ್ನಡವನ್ನು Scientific Register 'ವಿಜ್ಞಾನ ತಾಂತ್ರಿಕಪದಗಳು' ಎಂದೂ, ಕೃಷಿಗೆ ಸಂಬಂಧಿಸಿದ ನುಡಿಗಟ್ಟುಗಳನ್ನು Agricultural Register 'ಕೃಷಿ ತಾಂತ್ರಿಕಪದಗಳು' ಎಂದೂ ಕರೆಯಬಹುದಾಗಿದೆ. ಈ ರೀತಿಯ ತಾಂತ್ರಿಕಪದಗಳ ಸಂಗ್ರಹ ಕಾರ್ಯ ತೆಲುಗು ಭಾಷೆಯಲ್ಲಿ ನಡೆದಿದೆ. ಕನ್ನಡದಲ್ಲಿ ಈ ಕೆಲಸ ನಡೆಯಬೇಕಾಗಿದೆ.[1] ಉಪಭಾಷಾಮಟ್ಟದಲ್ಲಿ ಉತ್ತರ ಕರ್ನಾಟಕ ಹಾಗೂ ಮಲೆನಾಡಿನ ಕೃಷಿ ತಾಂತ್ರಿಕಪದಗಳು ಬಹಳ ಭಿನ್ನತೆ ಹೊಂದಿರುವುದು ಕಂಡುಬಂದಿದೆ. ಇವುಗಳ ತುಲನಾತ್ಮಕ ಅಧ್ಯಯನವನ್ನು ಮುಂದೆ ಕೈಕೊಳ್ಳಬಹುದು

1. ಡಾ. ವಿ. ಶಿವಾನಂದ ಅವರು ಉತ್ತರ ಕರ್ನಾಟಕದ ಒಕ್ಕಲಿಗರ ವೃತ್ತಿಪದಗಳ ಬಗ್ಗೆ ಲೇಖನ ಬರೆದಿದ್ದಾರೆ.

ದಾಗಿದೆ. ಮುಂದೆ ಕೈಕೊಳ್ಳಬಹುದಾದ ತುಲನಾತ್ಮಕ ಅಧ್ಯಯನಕ್ಕೆ ಈ ಮಲೆನಾಡಿನ ಕೃಷಿಕರ ವೃತ್ತಿಪದಕೋಶ ಉತ್ತಮ ಸಾಮಗ್ರಿಯನ್ನೊದಗಿಸುತ್ತದೆ.

ಭಿನ್ನ ಜಾತಿ ಹಾಗೂ ವರ್ಗಗಳ ಜನರ ಧರ್ಮ ಹಾಗೂ ನಂಬಿಕೆಗಳು ಭಿನ್ನವಾಗಿರುವಾಗಲೂ ಅವರು ವೃತ್ತಿಯಿಂದ ಹೇಗೆ ನಿರ್ದಿಷ್ಟ ಶಬ್ದಗಳೊಡನೆ ಸಂಬಂಧ ಹೊಂದಿರುತ್ತಾರೆ ಎಂಬುದನ್ನು ಗಮನಿಸಬಹುದು. ಉದಾಹರಣೆಗೆ ಮಲೆನಾಡಿನಲ್ಲಿ ವಾಸವಾಗಿರುವ ಹಿಂದೂಗಳೂ ಹಾಗೂ ಮುಸ್ಲೀಮರ ಕೃಷಿ ತಾಂತ್ರಿಕಪದಗಳು ಒಂದೇ ಆಗಿರುವುದು ಕಂಡುಬರುತ್ತದೆ. ಉಚ್ಚಾರಣೆಯ ಹಂತದಲ್ಲಿ ತಮ್ಮ ಮಾತೃಭಾಷೆಯ ಪ್ರಭಾವದಿಂದ ಕೆಲವು ಧ್ವನಿಗಳನ್ನು ಭಿನ್ನ ರೀತಿಯಿಂದ ಉಚ್ಚರಿಸಬಹುದು. ಆದರೆ ಈ ವ್ಯತ್ಯಾಸ ಅಂತಹ ಪ್ರಮುಖವಾದುದಲ್ಲ. ಆದ್ದರಿಂದ ಜಾತಿ ಸಂಬಂಧವಾದ ಉಪಭಾಷೆಗಳ ಅಧ್ಯಯನಕ್ಕೆ ವೃತ್ತಿಪದಗಳು ಯಾವರೀತಿ ಸಹಕಾರಿಯಾಗುತ್ತವೆ ಎಂಬುದನ್ನೂ ಇನ್ನೂ ಅಧ್ಯಯನ ಮಾಡಬೇಕಾಗಿದೆ. ಮಲೆನಾಡಿನ ದೀವರು ಹಾಗೂ ಇತರರ ಕೃಷಿಗೆ ಸಂಬಂಧಿಸಿದ ವೃತ್ತಿಪದಗಳು ವ್ಯತ್ಯಾಸ ಹೊಂದಿಲ್ಲವೆಂಬುದು ನನ್ನ ಭಾವನೆ. ಅಲ್ಲದೇ ಪ್ರಾದೇಶಿಕ ಉಪಭಾಷಾ ದೃಷ್ಟಿಯಿಂದ ಈ ವೃತ್ತಿಪದಗಳನ್ನು ಗಮನಿಸಿದಾಗ ಅವುಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ಅರಿಯಲು ನಮ್ಮಲ್ಲಿ ಸಾಮಗ್ರಿಯ ಅಭಾವವಿದೆ. ತೀರ ಸಂಕ್ಷಿಪ್ತ ಹಾಗೂ ಸೂಕ್ಷ್ಮ ಅಧ್ಯಯನದಿಂದ ಮಾತ್ರ ಈ ಭಿನ್ನತೆಯನ್ನು ಗಮನಿಸುವ ಸಾಧ್ಯತೆಗಳಿವೆ. ಅಲ್ಲದೇ ಕರ್ನಾಟಕದ ಗಡಿನಾಡುಗಳ ಸರಹದ್ದಿನಲ್ಲಿ ಈ ಕೃಷಿ ತಾಂತ್ರಿಕಪದಗಳು ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಅರಿಯಬೇಕಾಗಿದೆ. ಅತ್ಯಂತ ಅವಶ್ಯಕ ನುಡಿಗಟ್ಟುಗಳಾದ ಇವುಗಳ ಉಚ್ಚಾರಣಾ ಭಿನ್ನತೆ, ಭಿನ್ನಭಾಷೆಗಳ ಕೊಡುಕೊಳ್ಳುವಿಕೆ, ಅರ್ಥವ್ಯತ್ಯಾಸ ಮುಂತಾದ ಭಾಷಿಕ ಸೂಕ್ಷ್ಮತೆಗಳನ್ನೂ ಅರಿಯಬೇಕಾಗಿದೆ.

ತಮ್ಮ ಪರಿಸರದ ಅವಶ್ಯಕತೆಯಲ್ಲಿ ಅನೇಕ ಶಬ್ದಗಳು ಹೇಗೆ ಹುಟ್ಟಿಕೊಂಡಿವೆ ಎಂಬುದನ್ನು ಈ ಕೆಳಗಿನ ಸಂಗ್ರಹದಲ್ಲಿ ಅರಿಯಬಹುದಾಗಿದೆ. ಭತ್ತಕ್ಕೆ ಬರುವ ರೋಗಗಳಾಗಲೀ, ಭತ್ತಬೆಳೆಯುವ ನೆಲದಲ್ಲಿ ಹುಟ್ಟುವ ಕಳೆಗಳಾಗಲಿ (weeds) ಬಯಲುನಾಡಿನ ಜೋಳಕ್ಕೆ ಬರುವ ರೋಗ, ಜೋಳದ ನೆಲದ ಕಳೆಗಳಿಗಿಂತ ತೀರ ಭಿನ್ನವಾಗಿವೆ. ಭತ್ತಕ್ಕೆ ಬರುವ ರೋಗಗಳು–ಬೆಂಕಿರೋಗ, ಕೊಕ್ಕೆರೋಗ, ಚುಕ್ಕೆರೋಗ, ಊದಿನಕಡ್ಡಿರೋಗ, ಅರಿಷಿಣ ಮೊಳಕೆ, ಸುಳಿ ಹೇನು, ಮುಟ್ಟುರಿಕೆರೋಗ ಇತ್ಯಾದಿ. ಜೋಳದ ರೋಗ–ಕರಿಜಿಗೆ, ಕಡಗಿ, ಪಿಸಾಳಿ, ಬಾಂಡ, ರ್‍ವಾತಿ ಇತ್ಯಾದಿ. ಭತ್ತದ ನೆಲದ ಕಳೆಗಳು-ಕರಿಮೂತಿಹುಲ್ಲು, ಉಲ್ಟುಕ, ಗೇಕು, ಗಲುಗು, ಜಡ್ಡು, ಕಾರ್ಲು, ಬಿಳಿಕಸ, ಸದಗ, ಜಿಗಳುಗನ್ನೆ, ಮ್ಯಾರಿ, ದುಂಬಲು, ಕಜಮೀಬೀಜ ಗಾಜಾರಿ ಇತ್ಯಾದಿ. ಜೋಳದ ನೆಲದ ಕಳೆಗಳು–ಅಡಗಸ, ಅಲಬ, ಕಣಗ್ಯಾ, ಅಪ, ಇಗಳಿ.

ಕುರುವಗ್ಯಾ, ಗಣಜಲು, ಗಜಿಗ್ಯಾ, ಛೆಡಿ, ಜೇಕ, ಮಳವಂಡಿ, ಮಾರುಡಿಗ್ಯಾ, ಹಸರಾಣಿ, ಹಣಜಿಲ, ಹೂಗಸ, ಸಿಂಪಿಗ್ಯಾ ಇತ್ಯಾದಿ. ಈ ಎರಡು ವ್ಯತ್ಯಾಸಗಳು. ಆ ಬೆಳೆಗಳು ಬೆಳೆಯುವ ಪರಿಸರ, ಭೂಮಿಗಳನ್ನು ಅವಲಂಬಿಸಿವೆ ಎಂಬುದನ್ನು ಅರಿಯಬಹುದಾಗಿದೆ. ನೂರಕ್ಕೆ ೯೦ ರಷ್ಟು ವ್ಯತ್ಯಾಸವನ್ನು ಇಂತಹ ತಾಂತ್ರಿಕಪದಗಳಲ್ಲಿ ಕಾಣಬಹುದಾಗಿದೆ.

ಕೃಷಿ ಬದುಕಿನ ಮೂಲಬಂಡವಾಳಗಳಾಗಿ ಅವರ ದೈನಂದಿನ ಜೀವನದಲ್ಲಿ ಈ ಪ್ರರೂಪಗಳು ಸಿಂಹ ಪಾಲನ್ನು ಪಡೆದಿರುತ್ತವೆ. ಒಂದು ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯಲ್ಲಿ ಶಬ್ದಗಳು ನಿರ್ದಿಷ್ಟ ಅರ್ಥವ್ಯಾಪ್ತಿಯನ್ನು ಪಡೆದು ಚಲಾವಣೆಯಾಗುತ್ತಿರುತ್ತವೆ. ಒಂದು ಪ್ರದೇಶದ ವ್ಯಾಪ್ತಿಯ ನಿರ್ದಿಷ್ಟ ಎಲ್ಲೆಯನ್ನು ಮೀರಿದಾಗ ಅದೇ ಧ್ವನಿರೂಪ ಅರ್ಥವ್ಯತ್ಯಾಸದೊಂದಿಗೆ ಬಳಕೆಯಾಗುವ ಸಾಧ್ಯತೆ ಇದೆ. ಉದಾಹರಣೆಗೆ ಉತ್ತರ ಕರ್ನಾಟಕದ ಕನ್ನಡದಲ್ಲಿ 'ಕುಂಚಿಗೆ' ಎನ್ನುವ ಶಬ್ದಕ್ಕೆ ಸಣ್ಣ ಮಕ್ಕಳ ಬೆನ್ನು ಮತ್ತು ತಲೆಯನ್ನು ಮುಚ್ಚುವಂತೆ ಹಾಕುವ 'ಕುಲಾಯಿ' ಎಂಬ ಅರ್ಥವಿದೆ. ಆದರೆ ಮಲೆನಾಡಿನ ಕನ್ನಡವಲ್ಲಿ ಹೆಂಗಸರು ಚಳಿಯಲ್ಲಿ ಹೊಲದ ಕೆಲಸಕ್ಕೆ ಹೋಗುವಾಗ ತಲೆ ಹಾಗೂ ಬೆನ್ನಿನ ಮೇಲೆ ಹಾಕಿಕೊಳ್ಳುವ ಹರಿದ ಸೀರೆಗಳನ್ನು ಹೊಲಿದು ಮಾಡಿದ ಬಟ್ಟೆ ಎಂಬ ಅರ್ಥವಿದೆ. 'ಕುಲಾವಿ' ಎಂಬುದು ಮಕ್ಕಳಿಗೆ ತಲೆ ಹಾಗೂ ಬೆನ್ನಿನ ಮೇಲೆ ಮುಚ್ಚುವಂತೆ ಹಾಕುವ ಉಡುಪು. ಆದ್ದರಿಂದ ಒಂದೇ ಶಬ್ದ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಅರ್ಥ ವ್ಯಾಪ್ತಿಯನ್ನು ಪಡೆದಿರುತ್ತವೆ. ಅಲ್ಲದೇ ಶಬ್ದಗಳು ನಿರ್ದಿಷ್ಟ ಹಾಗೂ ಸೀಮಿತ ಅರ್ಥದಿಂದ ಬಳಕೆಯಾಗುತ್ತವೆ. ಏಕೆಂದರೆ ಅವು ಆ ಪ್ರದೇಶದ ಜನಗಳ ಬಾವಕೋಶದ ಅಂಗವಾಗಿರುತ್ತವೆ.

ಮಲೆನಾಡಿನ ಕೃಷಿಕರು ತಮ್ಮ ಉಪಕರಣಗಳನ್ನು 'ಮುಟ್ಟುಗಳು' ಎಂದು ಕರೆಯುತ್ತಾರೆ. ಈ ಉಪಕರಣಗಳನ್ನು ಮರದಿಂದ ಮಾಡಿದ್ದರೆ 'ಮರದ ಮುಟ್ಟುಗಳು' ಎಂದು ಕರೆಯುತ್ತಾರೆ. (೧) ಕೃಷಿ ಉಪಕರಣಗಳನ್ನು ೧.೧ ಮರದ ಉಪಕರಣಗಳು, ೧.೨ ಕಬ್ಬಿಣದ ಉಪಕರಣಗಳು, ೧.೩ ಬಿದರಿನ ಉಪಕರಣಗಳು, ೧.೪ ಚರ್ಮದ ಉಪಕರಣಗಳೆಂದು ವರ್ಗೀಕರಿಸಬಹುದು. ಯಾವುದೇ ಉಪಕರಣ ಪೂರ್ಣ ಮರದಿಂದಲೇ ಮಾಡಿದೆ ಎಂಬ ಭಾವನೆ ತಪ್ಪಾಗುತ್ತದೆ, ಮರದ ಉಪಕರಣದಲ್ಲಿ ಕಬ್ಬಿಣ ಕೂಡ ಇರಬಹುದು. ಯಾವುದು ಮುಖ್ಯವೋ ಅದನ್ನೇ ಆ ಉಪಕರಣದ ವರ್ಗೀಕರಣದಲ್ಲಿ ಬಳಸಲಾಗಿದೆ. ಅಲ್ಲದೇ ಕೃಷಿಗೆ ಸಂಬಂಧಿಸಿದ ಅನೇಕ ವರ್ಗಗಳನ್ನು ಇಲ್ಲಿ ಸೇರಿಸಲಾಗಿದೆ. ಉದಾಹರಣೆಗೆ :

೧) ಕೃಷಿ ಉಪಕರಣಗಳು : ೧.೧ ಮರದ ಉಪಕರಣ, ೧.೨ ಕಬ್ಬಿಣದ ಉಪಕರಣ, ೧.೩ ಬಿದರಿನ ಉಪಕರಣ, ೧.೪ ಚರ್ಮದ ಉಪಕರಣ. ೨) ಗಾಡಿಯು

ಭಾಗಗಳು, ೩) ಭತ್ತ ೩.೧ ಭತ್ತದ ತಳಿಗಳು, ೩.೧.೧ ಹಳೇ ತಳಿಗಳು, ೩.೧.೨ ಹೊಸ ತಳಿಗಳು. ೩.೨ ಭತ್ತದ ಸಾಲುಗಳು, ೩.೩ ಭತ್ತದ ರೋಗಗಳು· ೪) ಕಬ್ಬಿನ ತಳಿಗಳು. ೫) ೫.೧ ಕಳೆಗಳು, ೫.೨ ಬಳ್ಳಿಗಳು. ೬) ಹುಳಗಳು, ಕೀಟಗಳು. ೭) ಮಣ್ಣು, ೮) ೮.೧ ಗದ್ದೆ, ೮.೨ ಹರ, ೯) ಎತ್ತು. ೯.೧ ದೇಪವ ಭಾಗಗಳು ೯.೨ ಬಣ್ಣ, ೯.೩ ಗುಣ, ೯.೪ ಆಕಾರ, ೯.೫ ರೋಗ, ೯.೬ ಎತ್ತಿಗೆ ಬಳಸುವ ವಸ್ತುಗಳು. ೧೦) ತೂಕ, ೧೧) ನೆಲದ ಅಳತೆ, ೧೨) ಬೇಸಾಯದ ಕ್ರಿಯೆಗಳು. ೧೩) ಇತರ ಶಬ್ದಗಳು.

೧) ಉಪಕರಣಗಳು (Implemnts)

೧-೧ ಮರದ ಉಪಕರಣಗಳು :

ಕೊಲ್ಡು–ಕೊರಡು	ನೆಲವನ್ನು ಸಮಮಾಡಲು ಹಾಗೂ ಹೆಂಡೆಗಳನ್ನು ಒಡೆಯಲು ಬಳಸುವ ಉಪಕರಣ.
ಬಗಿನೇ ಕೊಲ್ಡು	ಬಗಿನೇಮರವ ಕೊಲ್ಡು
ಬೀಟೇ ಕೊಲ್ಡು	ಬೀಟೇ ಮರದ ಕೊಲ್ಡು
ಕುಂಟೆ	ನೆಲದ ಕಳೆಯನ್ನು ಕತ್ತರಿಸುವ ಹಾಗೂ ನೆಲದೊಳಗೆ ಪ್ರವೇಶ ಮಾಡಿ ಮಣ್ಣನ್ನು ಹುಡಿಗೊಳಿಸುವ ಉಪಕರಣ,
ಹೆಗ್ಗುಂಟೆ	ದೊಡ್ಡ ಕುಂಟೆ
ಬುಡಗುಂಟೆ–ಎಡಗುಂಟೆ –ಮಣೆಸಾಲು ಕುಂಟೆ	ಸಣ್ಣಕುಂಟೆ, ಹರತೆಗೆ ಉಪಯೋಗಿಸುವಂತದು.
ಕೂರಿಗೆ	ಬಿತ್ತುವ ಸಾಧನ
ನೊಗ	ಎರಡು ಎತ್ತುಗಳ ಹೆಗಲ ಮೇಲಿಟ್ಟು, ಗಾಡಿ, ಕುಂಟೇ ಇತ್ಯಾದಿಗಳಿಗೆ ಜೋಡಿಸಿ ಕಟ್ಟಲು ಬರುವಂತಹ ಮರದ ತುಂಡು.
ದಂಡರ್‌ನೊಗ	ಹರತೆಗೆ ಉಪಯೋಗಿಸುವ ಉದ್ದವಾದ ನೊಗ.
ಮೂದಳ–ಮೂದಾಳು	ಮೂರು ಹಲ್ಲುಗಳುಳ್ಳ ಕೂರಿಗೆ
ಎಲೆದಾಳು–ಎಲದಾಳು	ಎಲೆಯಾಕಾರದ ಕಬ್ಬಿಣದ ತಾಳುಳ್ಳ ಕುಂಟೆ.
ಕ್ವಾತಾಳ	ಬಿತ್ತುವುದಕ್ಕೆ ಉಪಯೋಗಿಸುವ ಎರಡು ಸೀಗಿಲುಳ್ಳ ಉಪಕರಣ
ಯಳಾಲು	ಹರಗಿದ ನಂತರ ಮಣ್ಣಿನಲ್ಲಿ ಮುಚ್ಚಿದ ಭತ್ತವನ್ನು ಕೆದರಲು ಅನುವಾಗುವಂತಹ ಮುಳ್ಳು ಅಥವ ಕೊಂಬೆಯಿಂದ ಮಾಡಿದ ಉಪಕರಣ
ರೋಣಗಲ್ಲು	ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸುವ ದೊಡ್ಡ ಕಲ್ಲನ್ನು ಒಳಗೊಂಡ ಉಪಕರಣ.
ಹೊಡಗೊಡಶಿ	ಹೆಂಡೆಗಳನ್ನು ಒಡೆಯಲು ಅನುಕೂಲವಾಗುವಂತಹ ಮರದ ಸುತ್ತಿಗೆಯಂತಹ ಉಪಕರಣ.
ನಳ್ಳಿ	ಮಣ್ಣನ್ನು ಗೋರುವ ಹಲಗೆ

ದಾಡಿ	ಕೂರಿಗೆಯ ಹಲ್ಲುಗಳು.
ಹಲಿಬಿ	ಭತ್ತವನ್ನು ರಾಶಿ ಮಾಡಲು ಉಪಯೋಗಿಸುವ ಮರದ ಹಲಗೆ.
ಬಾಳು	ನೇಗಿಲನ್ನು ಮಾಡಲು ಬೇಕಾದ ಮರದ ತುಂಡು.
ಯೀಚು	ನೇಗಿಲು, ಕುಂಟೆಗಳಿಗೆ ಇರುವ ಉದ್ದನೆಯ ಜೋಡಿ ಕಟ್ಟಿಗೆ.
ಮೇಣಿ	ಕುಂಟೆಯನ್ನು ಕೈಯಲ್ಲಿ ಹಿಡಿದುಕೊಳ್ಳಲು ಅನುವಾಗುವಂತಹ ಗೂಟ.
ಅಲಕು	ಅರವಸೆಯಾದ ನಂತರ ನೀರಿನಲ್ಲಿ ತೇಲುವ ಕಳೆಗಳನ್ನು ಎಳೆಯಲು ಬೇಕಾದ ಮುಳ್ಳಿನಂತಹ ಉಪಕರಣ.
ದಿಂಡು	ಕುಂಟೆಯನ್ನು ಮಾಡಲು ಬರುವಂತಹ ಮರದ ತುಂಡು.
ಕಾವುಗೂಟ	ಬರಹೊಡೆಯುವಾಗ, ಹರಗುವಾಗ ಕುಂಟೆಯನ್ನು ಹಿಡಿದುಕೊಳ್ಳುವ ಕತ್ತರಿ ಆಕಾರದ ಗೂಟ.
ಕಾವು	ಪಿಕಾಸಿ. ಗುದ್ದಲಿಗೆ ಹಾಕುವ ಮರದ ಕೋಲು.

೧-೨ ಕಬ್ಬಿಣದ ಉಪಕರಣಗಳು :

ತಾಳು	ಯಡೆಗುಂಟೆ, ಎಲೆದಾಳಿಗೆ ಉಪಯೋಗಿಸುವ ಕಬ್ಬಿಣದ ಸಾಮಾನು.
ಜಿಗಣೆ - ಹತಿಗೆ ಕಾಲು	ಕುಳ ನಿಲ್ಲಲು ಮಾಡಿದ ಕಬ್ಬಿಣದ ಮಳೆ
ಕುಡ	ಕುಂಟೆಯ ಬಾಯಿಗೆ ತೊಡಿಸಿದ ಕಬ್ಬಿಣದ ಪಟ್ಟಿ
ಸಲಿಕೆ – ಗುದ್ದಲಿ	ನೆಲವನ್ನು ಕೆತ್ತಲು ಬಳಸುವ ಉಪಕರಣ.
ಪಿಕಾಸಿ	ಎರಡು ಬಾಯಿಗಳನ್ನು ಹೊಂದಿದ ನೆಲ ಅಗೆಯುವ ಉಪಕರಣ.
ಕುಡಗೋಲು	ಕೊಯ್ಯಲು ಬಳಸುವ ಕಬ್ಬಿಣದ ಉಪಕರಣ
ಬಂಡಿಕುಡಗೋಲು	ವೃತ್ತಾಕಾರದ ದೊಡ್ಡ ಕುಡಗೋಲು
ಕಂದ್ಲಿ – ಮಚ್ಚು	ಮರವನ್ನು ಕೆತ್ತಲು ಬಳಸುವ ಅಗಲನಬಾಯಿಯ ಕುಡಗೋಲು.
ಕೈಗುದ್ಲಿ	ಸಣ್ಣ ಸಲಿಕೆ
ಬಾಯಿಗುದ್ಲಿ	ಬಾಯಿ ಇರುವ ಸಣ್ಣ ಪಿಕಾಸಿ

ಪಾರಿ	ನೆಲದಲ್ಲಿ ರಂಧ್ರ ಕೊರೆಯಲು ಬರುವಂತಹ ಉದ್ದನೆಯ ಕಬ್ಬಿಣದ ತುಂಡು.
ಕುರುಚಿಗಿ – ಕುರುಚ್ಗಿ	ಸಣ್ಣ ಕುಡಗೋಲು.
ಹಳಿ	ಕಬ್ಬಿಣದ ಪಟ್ಟಿ.
ಕೊಡ್ಲಿ – ಕೊಡಲಿ	ಕಟ್ಟಿಗೆ ಹೊಳಚುವ, ಕತ್ತರಿಸುವ ಕಬ್ಬಿಣದ ತುಂಡು.
ಬಾಚಿ	ಕೆತ್ತುವ ಉಪಕರಣ.
ಕುಳ	ನೇಗಿಲಿಗೆ ಉಪಯೋಗಿಸುವ ಕಬ್ಬಿಣದ ಪಟ್ಟಿ.
ಉಳಿ	ಮರವನ್ನು ಕೆತ್ತುವ, ರಂಧ್ರ ಕೊರೆಯುವ ಕಬ್ಬಿಣದ ತುಂಡು.

೧. ೩. ಬಿದಿರಿನ ಉಪಕರಣ :

ಮುಕ್ಕರಿ	ಬೀಜ ಬಿತ್ತುವಾಗ ಕಾಳನ್ನು ಹಾಕಿಕೊಂಡು ಸೊಂಟಕ್ಕೆ ಕಟ್ಟಿಕೊಳ್ಳುವ ಮರದ ಪುಟ್ಟಿ.
ಕಣಜ	ಭತ್ತವನ್ನು ಸಂಗ್ರಹಿಸಲು ಅನುಕೂಲವಾಗುವ ದೊಡ್ಡ ಬಿದರಿನ ಚಾಪೆ.
ಕತ್ರ	ದನಗಳಿಂದ ರಕ್ಷಣೆ ಪಡೆಯಲು, ಹಿತ್ತಲು ಗದ್ದೆಗಳಲ್ಲಿ ನಿಲ್ಲಿಸುವ ಬಿದರಿನ ತಟ್ಟಿ,
ಮ-ರ	ಕೇರುವ ಉಪಕರಣ.
ತಟ್ಟಿ	ಸಗಣಿ ತುಂಬುವ ಪುಟ್ಟಿ.
ಜಲ್ಲಿ– ಜಲ್ಲೆ	ಹೆಸರು, ಉದ್ದಿನ ಸೊಪ್ಪನ್ನು ತುಂಬುವ ದೊಡ್ಡ ಪುಟ್ಟಿ.
ಕಲ್ಲಿ	ಬೆತ್ತದ ಪುಟ್ಟಿ.
ಹೆಡಿಗೆ	ದೊಡ್ಡ ಪುಟ್ಟಿ.
ಚಿಬ್ಲ	ದುಂಡನ ಆಕಾರದ ಸಣ್ಣ ಪುಟ್ಟಿ,
ಕೆರಸಿ – ಗೆರಸಿ	ಚೌ ಕಾಕಾರದ ಅಗಲದ ಬಾಯುಳ್ಳ ಬಿದರಿನ ಪುಟ್ಟಿ.
ಕಣೆ – ಕಣಗಿ	ಗಾಡಿಗೆ ಹಾಕುವ ಬಿದಿರಿನ ಗೂಟ.
ಬಾಯಿಕುಕ್ಕಿ	ಎತ್ತಿನ ಬಾಯಿಗೆ ಕಟ್ಟುವ ಪುಟ್ಟಿ.
ಸಡ್ಡೆ	ರಂಧ್ರವಿರುವ ಬಿದರಿನ ಕೋಲು,
ಅದ್ಲಿ	ಬಿದಿರನ್ನು ಸಣ್ಣಗೆ ಕೊಚ್ಚಿ ಅಂಚಾರದಂಡಿಗೆಯು ಕೆಳಿಗೆ ಹಾಕುವ ತಟ್ಟಿ

ನ್ಯಾರೆದೊಣ್ಣೆ	ಒಂದುಕಡೆ ಉದ್ದನೆಯ ಮುಳ್ಳಿನಂತಿರುವ ಉಪಕರಣ, ಹುಲ್ಲನ್ನು ಕೊಡವಲು ಬಳಸುತ್ತಾರೆ.
ಗೂಡೆ	ಭತ್ತವನ್ನು ಗಾಡಿಯ ಮೂಲಕ ತರುವಾಗ ಬಳಸುವ ಅತಿ ದೊಡ್ಡ ಪುಟ್ಟಿ.
ಗುಣಿಕು	ಬಾರಿಕೋಲಿನ ಕಟ್ಟಿಗೆ.

೧.೪. ಚರ್ಮದ ಉಪಕರಣಗಳು :

ಬಾರಿಕೋಲು	ಎತ್ತುಗಳಿಗೆ ಹೊಡೆಯಲು ಬಳಸುವ ಕಟ್ಟಿಗೆ.
ಕುಣಿಕೆ	ಬಾರಿಕೋಲಿನ ದಿಂಡಿಗೆ ಕಟ್ಟುವ ಚರ್ಮದ ತುಂಡು
ಕುಡಿ	ಬಾರಿಕೋಲಿನ ತುದಿ.
ಪಟಗಣ್ಣಿ	ನೋಗ ಹಾಗೂ ಎತ್ತಿನ ಕೊರಳಿಗೆ ಕಟ್ಟುವ ಪಟ್ಟಿ.
ಮಿಣಿ	ಚರ್ಮದ ಅಥವ ಕತ್ತದ ಹಗ್ಗ.

೨. ಗಾಡಿಯ ಭಾಗಗಳು :

ಗಾಲಿ	ಚಕ್ರ
ಗುಂಬ	ಚಕ್ರದ ಮಧ್ಯೆ ಇರುವ ದುಂಡನೆಯ ಮರದ ತುಂಡು
ಕೀಲು	ಚಕ್ರ ಬೀಳದಂತೆ ಅಚ್ಚಿನಲ್ಲಿ ಹಾಕಿದ ಬೆಣೆ
ಅಚ್ಚು	ಕಬ್ಬಿಣದಸರಳು, ಎರಡುಚಕ್ರಗಳನ್ನು ಹಿಡಿದಿರುತ್ತದೆ.
ಮೂಕು	ನೆಲದ ಮೇಲೆ ಗಾಡಿಯನ್ನು ಇಡಲು ಅನುಕೂಲವಾಗುವಂತೆ ಜೋಡಿಸಿದ ಮರದ ತುಂಡು.
ಬಳೆ	ಗುಂಬದ ಸುತ್ತ ಇರುವ ಕಬ್ಬಿಣದ ಕಟ್ಟು.
ಅಡ್ಡಮಣಿ	ಮೂಕಿನ ಕೆಳಗೆ ಜೋಡಿಸಿದ ಮಣಿ
ಮೇಲ್ ಮಣಿ	ಮೂಕಿನ ಮೇಲೆ ಜೋಡಿಸಿದ ಮಣಿ
ಕೊರಿಗೆ ತೋಳು	ಗಾಡಿಯ ಮೇಲಿರುವ ಚೌಕಾಕಾರದ ಮರದ ಕಟ್ಟುಗಳು.
ಕಾಲು	ಚಕ್ರದ ಕಾಲುಗಳು
ಪುಟ್ಟೆ–ಬುಟೇವು	ಚಕ್ರಕ್ಕೆ ಉಪಯೋಗಿಸುವ ಅರ್ಧಚಂದ್ರಾಕಾರದ ಮರದ ತುಂಡು.
ಕಣಿಗೆ	ಮರ ಅಥವಾ ಬಿದುರಿನ ಗೂಟ
ಅಂಬಾರವಂಡಿಗೆ	ಕಣಿಗೆಗಳ ಮೇಲೆ ಹಾಕುವ ಉದ್ದನೆಯ ಕಟ್ಟಿಗೆ
ಅದ್ಲಿ	ಕಣಗೆಗಳ ಮಧ್ಯೆ ಸಿಕ್ಕಿಸುವ ಬಿದಿರಿನ ಅಂಡೆ,

ಓಟಿ-ಊಟಿ	ಅಚ್ಚನ್ನು ಜೋಡಿಸುವ ಮರದ ದೊಡ್ಡ ತುಂಡು.
ಸಿಪಾಯಿ ಕಟ್ಟಿಗ	ಕುಳಿತುಕೊಳ್ಳಲು ಅನುಕೂಲವಾಗುವಂತೆ ಮೂಕು ಹಾಗೂ ಅಡ್ಡಗಟ್ಟಿಗೆ ತ್ರಿಕೋನಾಕಾರವಾಗಿ ಜೋಡಿಸಿದ ಜೋಡಿ ಕಟ್ಟಿಗೆಗಳು,
ಅಡ್ಡಗಟ್ಟು	ಕೂರಿಗೆ ತೋಳಿಗೆ ಅಡ್ಡವಾಗಿ ಜೋಡಿಸಿದ ಮರದ ಉದ್ದನೆಯ ತುಂಡು
ಉದ್ದಿಗೆ	ಗಾಡಿಯ ಮೂಕು ಹಾಗೂ ಕೂರಿಗೆ ತೋಳಿಗೆ ಜೋಡಿಸಿದ ಉದ್ದನೆಯ ಮರದ ಕಟ್ಟಿಗೆ.
ಹಳಿ	ಗಾಲಿಯ ಸುತ್ತ ಜೋಡಿಸಿರುವ ಕಬ್ಬಿಣ ಪಟ್ಟಿ.
ಇಗ್ಗಾಲಿ	ಎರಡು ಗಾಲಿ
ಒಗ್ಗಾಲಿ	ಸಮವಿಲ್ಲದ ಜಾಗದಲ್ಲಿ ಒಂದೇ ಗಾಲಿಯ ಮೇಲೆ ಉರುಳುವ ಗಾಡಿ.
ಹೆರಗೋಡು-ಹೆರಣ್ಣೆ ಚಟಗಿ	ಗಾಡಿಯ ಕೀಲು ಹಾಗೂ ಅಚ್ಚಿಗೆ ಹಚ್ಚಲು ಉಪಯೋಗಿಸುವ ಎಣ್ಣೆ ಹಾಕುವ ಚಟಿಗೆ.
ಬಿರಿ	ಗಾಡಿಯನ್ನು ನಿಲ್ಲಿಸಲು ಅನುಕೂಲವಾಗುವಂತಹ ಮರದ ತುಂಡಿನ ಜೋಡಣೆ.
ಕೊಳಂಗಡ	ಗಾಡಿಗೆ ಕಟ್ಟುವ ಪಟಗಣ್ಣೆ.

೩. ಭತ್ತ.

೩.೧ ಭತ್ತದ ತಳಿಗಳು

೩.೧.೧ ಹಳೇ ತಳಿಗಳು

ಮಲ್ಲಿಗೇ ಸಣ್ಣ	ಒಂದು ಜಾತಿಯ ಭತ್ತ.
ಆಲೂರು ಸಣ್ಣ	
ರತ್ನ ಚೋಡಿ ,	
ಸಣ್ಣ ವಾಳ್ಯಾ	
ದೊಡ್ಡ ವಾಳ್ಯಾ	
ದಬ್ಬಣ ಸಾಲಿ	
ಹಂಕಲು ಬುಡ್ಡ	
ಹೊನಸು	
ರಾಜಮಣಿ	
ಜೀರಿಗೆ ಸಣ್ಣ	

ತೊಗರಿಗ
ರಾಜಭೋಗ
ಬಿಳೇದಡಿ ಬುಡ್ಡ
ಕರೇದಡಿ ಸಣ್ಣ
ಕೊಯಮತ್ತೂರು ಸಣ್ಣ
ಸಣ್ಣಬಂಗಾರ ಕೋವಿ
ಸಣ್ಣ, ದೊಡ್ಡ ಬಂಗಾರ ಕೋವಿ
ಏಡಿ ಕುಣಿ
ನ್ಯಾರಿಮಿಂಡ

೩.೧.೨. ಹೊಸತಳಿಗಳು

ಇಂಟಾನ್	ಒಂದು ಜಾತಿಯ ಭತ್ತ
ಮಧು	
ಜಯ	
ಹಂಸ	
ಪಲ್ಗುಣ	
ಐ. ಆರ್. ಇಪ್ಪತ್ತು	
ಭರಣಿ	
ಮಂಗಳ	
ಐ. ಐ. ಟಿ	
ಭವಾನಿ	
ಫಾರಂ ಭತ್ತ	
ಮುಂಫಲ	ಅಲ್ಪ ವೇಳೆಯಲ್ಲಿ ಬೆಳೆಯುವ ಭತ್ತದ ತಳಿ.
ಹಿಂಫಲ	ಹೆಚ್ಚು ಸಮಯ ತೆಗೆದುಕೊಂಡು ಬೆಳೆಯುವ ತಳಿ.

೩.೨. ಭತ್ತದ ಸಾಲುಗಳು :

ಅಡ್ಡ ಸಾಲು	ಅಡ್ಡನಾಗಿರುವ ಭತ್ತದ ಸಾಲು.
ಬೀಸ್ ಸಾಲು	ಅಗಲ ಹಾಗೂ ಉದ್ದವಾದ ಸಾಲು
ಕೂಡ ಸಾಲು	ಕೂಡಿಕೊಂಡಿರುವ ಸಾಲು
ಕಡೇ ಸಾಲು	ಕೊನೆಯ ಸಾಲು
ದುಂಡ ಸಾಲು	ದಪ್ಪನಾಗಿ ಹುಟ್ಟಿರುವ ಸಾಲು
ಅಡೆ ಸಾಲು	ನಾಲ್ಕೂ ಬದಿಯ ಬದುವಿನ ಪಕ್ಕದ ಸಾಲುಗಳು

ನೆಟ್ಟ ಸಾಲು	ನೆಟ್ಟಗಿರುವ ಸಾಲು.
ಕಟ್ ಸಾಲು	ಸರಿಯಾಗಿ ಹುಟ್ಟಿದ ಸಾಲು.
ಸೊಟ್ ಸಾಲು	ಅಂಕು ಡೊಂಕಾದ ಸಾಲು.

೪. ಕಬ್ಬಿನ ತಳಿಗಳು :

ಹಂಡ ಕಬ್ಬು	ಬಿಳಿ ಮತ್ತು ಕೆಂಪು ಗೀರಿನ ಪಟ್ಟಿ ಇರುವ ಕಬ್ಬು.
ಸೀಮೇ ಕಬ್ಬು	ಕಪ್ಪನೆ ಬಣ್ಣದ ತೊಗಟೆ ಹೊಂದಿದ ಕಬ್ಬು.
ಸಕ್ಕರೆ ಕಬ್ಬು	ಸಕ್ಕರೆ ತಯಾರಿಸಲು ಉಪಯೋಗಿಸುವ ಕಬ್ಬು.

೫.೧ ಕಳೆಗಳು :

ಕೊಳವಂಕ	ಒಂದು ಜಾತಿಯ ಮುಳ್ಳು ಗಿಡ.
ಕರಿಮೂತಿ ಹುಲ್ಲು	
ಗಾಜರಿ	
ಸಿಂಬಳಗೊನ್ನಿ	
ಕರ್ಕಿ	
ಉಲ್ಡುಕ	
ಒಳ ಮುಚ್ಚುಗ	ಒಂದು ಜಾತಿಯ ಮುಳ್ಳು ಸಸ್ಯ.
ಹೊರ ಮುಚ್ಚುಗ	
ಮ್ಯಾರಿ	ಛತ್ರದಂತೆ ಕಾಣುವ ಕಳೆ
ಕರಿದಡಿ ಮ್ಯಾರಿ	
ಕೆಂಪುದಡಿ ಮ್ಯಾರಿ	
ಬಿಳೇದಡಿ ಮ್ಯಾರಿ	
ಗೇಕು	
ಉಪ್ಪುಗೇಕು	
ದೊಡ್ಡ ಗೇಕು	
ಮುಂಬಲು	
ಕಚವೀಬೀಜ	
ಗಲುಗು	
ಹಬ್ಬುಗಡ್ಡಿ	
ನರಿಬಾಲದ ಹುಲ್ಲು	
ಇಲಿಕಿವಿ ಹುಲ್ಲು	

ವಿಷ್ಣುಕಾಂತಿ ಹುಲ್ಲು
ಸೂರ್ಯಕಾಂತಿ ಹುಲ್ಲು
ಜಡ್ಡು — ನೀರಿನಲ್ಲಿ ಹಬ್ಬುವ ಸಸ್ಯ
ಬುಟ್ಟುನೆಲೆ ಸೊಪ್ಪು
ಹನಗನ್ನೆ
ಮುದೆಕಂಟೆ
ಕಾಲುರ್ಜ
ಬಿಳಿಕಸ
ಸಣ್ಣೆಲೆ ಸದಗ
ಮಜ್ಜಿಗೆ ಎಲೆ
ಜಿಗಳುಗನ್ನೆ
ತ್ವಾಳಗನ್ನೆ

೫.೨ ಬಳ್ಳಿಗಳು

ಗುಗಣೀ ಬಳ್ಳಿ — ಒಂದು ಜಾತಿಯು ಬಳ್ಳಿ
ಮುಂಗನ ಬಳ್ಳಿ
ನೆಲವೇ ಬಳ್ಳಿ
ಹಿಂದ್ಲಚ್ಚಿ ಬಳ್ಳಿ
ಗುಲಗಂಜೀ ಬಿಳ್ಳಿ
ಕೆಕ್ಕರನ ಬಳ್ಳಿ
ಮರಜಿನ್ನಿ ಬಳ್ಳಿ
ಮಹಾಲಿಂಗನ ಬಳ್ಳಿ
ಪಟ್ಲ ಬಳ್ಳಿ
ತೊಟ್ಟೀ ಬಳ್ಳಿ
ಮಗಿಸವತೇ ಬಳ್ಳಿ
ಅವರೇ ಬಳ್ಳಿ
ತುಪ್ಪಿರೇ ಬಳ್ಳಿ
ಹೀರೆಬಳ್ಳಿ
ಮಡಹಗಲಬಳ್ಳಿ
ಗೆಣಸಿನಬಳ್ಳಿ

೬. ಹುಳಗಳು, ಕೀಟಗಳು :

ಕಂಬಳಿಹುಳ	ಒಂದು ಜಾತಿಯ ಹುಳ
ಕೊಕ್ಕೆ ಹುಳ	
ಗೊಬ್ಬರದ ಹುಳ	
ಹಸರು ಹುಳ	
ಬೇರು ಹುಳ	
ಕುಂಬಾರ ಹುಳ	
ಗೊಣ್ಣೇಹುಳ	
ಮೆಣಸಿನ ಹುಳ	
ಮಳೇಹುಳ	
ಸೊಲಬ	
ಒನಕೆ ಮಡ್ಡಿ	
ತೊಣಸಿ	
ಕುಲ್ಡೀಕುಕ್ಕಾರ	
ಉಣ್ಣೆ	
ಜಂಡಿಗ	
ಜಿರ್ಲೆ	
ಕಲ್ಲೇಡಿ	
ಹಾಲೇಡಿ	
ಶಿವನ ಕುದುರೆ	
ಮಿಡತೆ	
ಜಿಟ್ಟೆ	
ನುಸಿ	

೭. ಮಣ್ಣು :

ಕೆಂಗಲು	ಕೆಂಪು ಮಣ್ಣಿನ ಭೂಮಿ
ಗೊಚ್ಚು	ಸಣ್ಣ ಕಲ್ಲುಗಳಿಂದ ಕೂಡಿದ ಮಣ್ಣು
ಮರುಳು	ಮರುಳುಮಣ್ಣು
ಸುಣ್ಣಬುರ್ಲೆ	ಸುಣ್ಣದ ಕಲ್ಲುಗಳಿಂದ ಕೂಡಿದ ಮಣ್ಣು
ಯರೆ	ಕಪ್ಪುಮಣ್ಣಿನ ಭೂಮಿ
ಜಂಪಲು	ಹಸಿಆರದ ಮಣ್ಣಿನ ಭೂಮಿ
ರೊಟ್ಟೆ	ಗಡುಸಾದ ಮಣ್ಣಿನ ಭೂಮಿ

ಹೆಂಡೆ-ಹೆಂಟೆ	ಒಣಗಿದ ಮಣ್ಣಿನ ಮುದ್ದೆ
ಮಗಿ ಹೆಂಡೆ	ಮಣ್ಣಿನ ದೊಡ್ಡ ಮುದ್ದೆ
ಗೊಳಲು ಹೆಂಡೆ	ಮಣ್ಣಿನ ಸಣ್ಣ ಮುದ್ದೆ
ಕಲ್‌ಹೆಂಡೆ	ಸುಲಭವಾಗಿ ಒಡೆಯುವ ಹೆಂಡೆ
ದುಬ್ಬುಹೊಸೆ	ಮಳೆನೀರನ್ನು ಕುಡಿದು ಉಬ್ಬಿದ ಮಣ್ಣು
ಅರ್ಲು	ಕೆಸರಿಂದ ಕೂಡಿದ ಮಣ್ಣು
ಕೊಟ್ಟಿ ಮಣ್ಣು	ಒಂದು ಬಗೆಯ ಮಣ್ಣು
ಕಾರು	ಬಿರುಸು ಮಣ್ಣಿನ ಭೂಮಿ.

೮.೧ ಗದ್ದೆ :

ಬದು	ಹೊಲಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ಒಡ್ಡು.
ಹಾಳಿ	ಚೌಕಾಕೃತಿಯ ಬದುಗಳುಳ್ಳ ತುಂಡು ಭೂಮಿ.
ಕಿರಿಬದ	ಸಣ್ಣಬದು
ಹೆಬ್ಬದ	ದೊಡ್ಡಬದು
ಗದ್ದೆ	ನೀರಾವರಿ ಇರುವ ಹಾಗೂ ಬದುಗಳುಳ್ಳ ಜಮೀನು
ಒಡ್ಡಿನ ಗದ್ದೆ	ದೊಡ್ಡ ಒಡ್ಡನ್ನು ಹೊಂದಿದ ಗದ್ದೆ
ತೋಟದ ಗದ್ದೆ	ಹಿಂದೆ ತೋಟವಿದ್ದ ಗದ್ದೆ
ಉಂಬಳಿ ಗದ್ದೆ	ಉಂಬಳಿಯಾಗಿ ದೊರೆತ ಗದ್ದೆ
ಭೂತನ ಗದ್ದೆ	ಭೂತವಾಸವಾಗಿದೆ ಎಂದು ನಂಬಿಕೆ ಇರುವ ಗದ್ದೆ.
ತೆಗ್ಗಿನ ಗದ್ದೆ–ತಗ್ಗಿನ ಗದ್ದೆ	ತೆಗ್ಗಿನಲ್ಲಿರುವ ಗದ್ದೆ
ಮೂಲೆಗದ್ದೆ	ಮೂಲೆಯಲ್ಲಿರುವ ಗದ್ದೆ.
ಕುಣಿ ಗದ್ದೆ	ಹೊಂಡವಿರುವ ಗದ್ದೆ.
ಸರದ ಗದ್ದೆ	ನೀರಿನ ಸೌಕರ್ಯವಿರುವ ತೆಗ್ಗಿನ ಗದ್ದೆ
ಹೆಂಡೇರ ಗದ್ದೆ	ಹೆಂಡೇರ ಎಂಬ ಮನೆಯವರ ಗದ್ದೆ.
ಕಬೂಲ ಸಾಬರ ಗದ್ದೆ	ಕಬೂಲ ಸಾಬರಿಗೆ ಸೇರಿದ ಗದ್ದೆ.
ದಳೆ	ನೇರವಾದ ಹಾಳಿಗಳನ್ನೊಳಗೊಂಡ ಪಟ್ಟಿ.
ದೇವರ ದಳೆ	ದೇವಸ್ಥಾನಕ್ಕೆ ಸಂಬಂಧಿಸಿದ ಭೂಮಿ.
ಕಿಪ್ಪಾಳಿ	ಕೆಳಗಿನ ಹಾಳಿ
ಮೇವಾಳಿ	ಮೇಲಿನ ಹಾಳಿ
ಮಡಿ	ಮಣ್ಣಿನ ದಿಣ್ಣೆಯಿಂದ ಕೂಡಿದ ಸಾಲಗಳುಳ್ಳ ಹಾಳಿ
ಶುಂಠಿಮಡಿ	ಶುಂಠಿಯನ್ನು ಹಾಕಿರುವ ಹಾಳಿ

ನೀರುಳ್ಳಿಮಡಿ	ನೀರುಳ್ಳಿಯನ್ನು ಹಾಕಿರುವ ಮಡಿ
ಅಡ್ಡ ಬದು	ಅಡ್ಡವಾಗಿರುವ ಬದು
ಉದ್ದ ಬದು	ಉದ್ದನೆಯ ಬದು
ಜವಳು	ಕುಂಟೆಯ ಸಾಲುಗಳುಳ್ಳ ಅರ್ಧಹಾಳಿ.

೮.೨ ಹರ

ಹರ	ಜಮೀನಿನ (ಗದ್ದೆಯ) ವಿಸ್ತಾರವಾದ ಭೂಪ್ರದೇಶ ಮಲೆನಾಡಿನ ಭೂಮಿಗಳ ವರ್ಗೀಕರಣವನ್ನು ಹರದ ಹೆಸರಿನಲ್ಲಿ ಮಾಡುತ್ತಾರೆ
ಮರಳಹರ	ಮರಳು ಮಣ್ಣಿನಿಂದ ಕೂಡಿದ ವಿಸ್ತಾರವಾದ ಭೂಪ್ರದೇಶ.
ಕಲ್ಲಗದ್ದೆಹರ	ಕಲ್ಲುಮಣ್ಣಿನಿಂದ ಕೂಡಿದ ಭೂಪ್ರದೇಶ
ಕಾರು ಹರ	ಕಾರು ಮಣ್ಣಿನಿಂದ ಕೂಡಿದ ಭೂಪ್ರದೇಶ.
ಮುತ್ಲಹರ	ಮುತ್ತಲ ಗಿಡಗಳಿಂದ ಕೂಡಿದ ಗದ್ದೆಗಳಭೂ-ಪ್ರದೇಶ
ಬಸ್ಲಿಕೆರೆಹರ	ಬಸಲೀಕೆರೆಯ ಹತ್ತಿರವಿರುವ ಭೂಪ್ರದೇಶ
ಬೆಂಡೆಕಟ್ಟೆಹರ	ಬೆಂಡೇಕಟ್ಟೆ ಎಂಬ ಕೆರೆಯ ಹತ್ತಿರ ಭೂಪ್ರದೇಶ.

೯. ಎತ್ತು

೯.೧ ಎತ್ತಿನ ದೇಹದ ಭಾಗಗಳು :

ಮುಡ	ಎತ್ತಿನ ಬೆನ್ನಿನ ಮೇಲೆ ಇರುವ ಗುಮ್ಮಟ
ಗೊರಸು	ಕಾಲಿನ ಅಟ್ಟೆ
ಚಪ್ಪೆ	ಮೊಣಕಾಲಿನ ಪ್ರದೇಶ
ಬಾಲ	ಬಾಲ
ಕೊಂಬು	ತಲೆಯ ಮೇಲಿರುವ ಜೋಡಿ ಕೊಂಬುಗಳು
ಕಣ್ಣು	—
ಕಿವಿ	—
ಬಾಯಿ	--
ಹೊಳ್ಳೆ	ಮೂಗಿನ ಎರಡು ರಂಧ್ರಗಳು

೯.೨. ಬಣ್ಣ

ಬೂದ	ಬೂದು ಬಣ್ಣ

ಕೆಂದ	ಕೆಂದ ಬಣ್ಣ
ಹಂಡಬಂಡ	ಹಂಡಬಂಡ ಬಣ್ಣ
ಗಲ್ಡ	ಪಟ್ಟಿ ಇರುವ ಬಣ್ಣ
ಕರಿ	ಕರಿಬಣ್ಣ
ಬಿಳಿ	ಬಿಳಿಬಣ್ಣ
ಮಾಸ	ಮಾಸಲು ಬಣ್ಣ (ಕಪ್ಪು ಮಿಶ್ರಿತ ಬಣ್ಣ)

೯.೩. ಎತ್ತಿನ ಗುಣ

ಸರ್ಪ	ಹಾವಿನಂತೆ ಸಿಟ್ಟಿನ ಗುಣವುಳ್ಳ ಎತ್ತು
ಕಲ್ಡಿ	ನಿಧಾನ ಗುಣದ ಎತ್ತು
ಹಂದಿ	— ,, —
ಕ್ವಾಣ	— ,, —
ಸುಬ್ಬ	ಸಂಪನ್ನ ಗುಣದ ಎತ್ತು
ಕಳ್ಳ	ಬೇಸಾಯ ಮಾಡುವಾಗ ಮಲಗುವ ಎತ್ತು.
ಚಾಟು	ಮುಟ್ಟಿದೊಡನೆ ಬೇಗ ಮುಂದೆ ಸಾಗುವ ಎತ್ತು.

೯.೪ ಎತ್ತಿನ ಆಕಾರ

ವೋಟ-ಗಿಡ್ಡ	ಎತ್ತರವಿಲ್ಲದ ಸಣ್ಣ ಆಕಾರದ ಎತ್ತು
ಮುದಿಯ	ವಯಸ್ಸಾದ ಎತ್ತು
ಕುಂಟ	ಕುಂಟುವ ಎತ್ತು
ಕುಲ್ಡ	ಕಣ್ಣುಕಾಣದ ಎತ್ತು

೯.೫ ಎತ್ತಿನ ರೋಗ

ಸಲ್ಡು-ನರಡು	ಗಂಟಲಿನ ರೋಗ
ಕಾಲುಬಾಯಿ	ಕಾಲಿನರೋಗ (ಗೊರಸಿನಲ್ಲಿ ಹುಳ ಬರುವ ರೋಗ)
ಬಾಯೊಡಿ	ಬಾಯಿಯಲ್ಲಿ ಗಾಯವಾಗುವ ರೋಗ
ಸೊಡ್ರು	ಮೂಗಿನ ರೋಗ
ಕಪ್ಪಿ	ನಾಲಿಗೆಯಲ್ಲಿ ಗಂಟಾಗುವ ರೋಗ
ಕೊಡವಿಸ್ಸಿ	ಕೊಂಬಿನ ಬುಡಕ್ಕೆ ಬರುವ ರೋಗ
ದಪ್ಪೆರೋಗ	ಎತ್ತು ಒಣಕಲಾಗಿ ಸರಳುವ ರೋಗ

೯.೬ ಎತ್ತಿಗೆ ಬಳಸುವ ವಸ್ತುಗಳು

ಗೊಣಸು	ಕೊಂಬಿನ ತುದಿಗೆ ಹಾಕುವ ಹಿತ್ತಾಳಿಯ ವಸ್ತು
ಹಲ್ಲೆ	ಗೊರಸಿಗೆ ಬಡಿಯುವ ಲಾಳಾಕೃತಿಯ ಕಬ್ಬಿಣದ ಪಟ್ಟಿ
ನಿಶಾನಿ	ಕೊಂಬಿಗೆ ಕಟ್ಟುವ ಟೇಪು
ಜೂಲ	ಮೈಗೆ ಹೊದಿಸುವ ಅಲಂಕಾರದಬಟ್ಟೆ
ಗಗ್ರ	ಕೊರಳಿಗೆ ಕಟ್ಟುವ ಘಂಟೆ
ದಂಡೆ	ಕೊರಳಿನ ಪಟ್ಟಿ
ಮೂಗದಾಣ	ಮೂಗಿನ ದಾರ
ಹಗ್ಗದ-ಕಣ್ಣ	ಎತ್ತನ್ನು ಹಿಡಿದುಕೊಳ್ಳಲು ಬಳಸುವ ಹಗ್ಗ
ಮುಕ್ಕಾಡ	ಎತ್ತುಗಳನ್ನು ಕೆಡವಲು ಮುಖಕ್ಕೆ ಹಾಕುವ ಹಗ್ಗದ ಕಟ್ಟು

೧೦. ತೂಕ

ಸೇರು	ದಾನ್ಯ ಅಳೆಯುಲು ಬಳಸುವ ಮಾಪನ
ಪಲ್ಲ	ನೂರು ಸೇರು
ಪಾವು	$\frac{1}{4}$ ಸೇರು
ನೋಟಾಕು	$\frac{1}{8}$ ಸೇರು
ಚಟಾಕು	$\frac{1}{16}$ ಸೇರು
ಗಿದ್ನ	೪ ಸೇರು
ಕೊಳಗ	೮೦ ಸೇರು
ಖಂಡಗ	೧೬ ಪಲ್ಲ (೧೬೦೦ ಸೇರು)
ಕೆ. ಜಿ. ಕ್ವಿಂಟಾಲ್	ಹೊಸ ಪದ್ಧತಿಗಳು.

೧೧. ನೆಲದ ಅಳತೆ

ಎಕರೆ	೪೦ ಗುಂಟೆ ಭೂಮಿ
ಸಾವಿರ ಬೀಜದ ನೆಲ	ಕಬ್ಬನ್ನು ಹಾಕುವ ನಿರ್ದಿಷ್ಟ ಅಳತೆಯ ಭೂಮಿ
ಖಂಡುಗದ ನೆಲ	೧೬ ಪಲ್ಲ ಭತ್ತ ಬೆಳೆಯುವ ಭೂಮಿ
ಒಂದು ಹೊರೆ ನೆಲ	ಒಂದು ಹೊರೆ ಕಬ್ಬಿನ ಬೀಜ ಬಿತ್ತುವ ಭೂಮಿ

೧೨. ಬೇಸಾಯದ ಕ್ರಿಯೆಗಳು :

ಗೇಮೆ	ನೆಲವನ್ನು ಊಳುವದು

ಉಕ್ಕೆ	ನೇಗಿಲದಿಂದ ನೆಲವನ್ನು ಉಳುವುದು
ಹ್ವಾಕಿ–ವರ್ಲೆ	ಮೊದಲನೆ ಉಕ್ಕೆ
ಇಜ್ಜಾಲು	ಎರಡನೆ ಉಕ್ಕೆ
ಹಿಂಗೊಲ್ಡು	ಹಿಂದೆ ಭಾರ ಬಿಟ್ಟು ಹೊಡೆಯುವ ಕೊರಡು
ಮುಂಗೊಲ್ಡು	ಮುಂದೆ ಭಾರ ಬಿಟ್ಟು ಹೊಡೆಯುವ ಕೊರಡು
ನೀರಗೋಲ್ಡು	ನೀರಿನಲ್ಲಿ ಹೊಡೆಯುವ ಕೊರಡು
ಇಳಿಗೊಲ್ಡು	ಹೊಡೆಯುವವನು ಇಳಿದು ಹೊಡೆಯುವ ಕೊರಡು
ಬರಹರತೆ	ಒಣಭೂಮಿಯ ಹರತೆ
ನೀರಡತೆ	ನೀರಿನ ಭೂಮಿಯಲ್ಲಿ ಮಾಡುವ ಹರತೆ
ಮಗಚು	ಉಕ್ಕೆಯಾದ ಮಣ್ಣನ್ನು ನೇಗಲಿನ ಮೂಲಕ ಅಡ್ಡವಾಗಿ ಮತ್ತೆ ಹೊಡೆಯುವುದು
ಗೋರು	ಸಂಗ್ರಹವಾದ ಮಣ್ಣನ್ನು ಸಮನಾಗಿ ಹರಡುವುದು.
ಹರತೆ	ಹರಗುವುದು.
ಅರ್ಲ್ಲ	ನಾಟಿ ಮಾಡಲು ಅನುಕೂಲವಾಗುವಂತೆ ಮಣ್ಣನ್ನು ಅರ್ಲ್ಲ ಮಾಡುವುದು. (ಹಸಿ ಮಾಡುವುದು)
ನಾಟಿ	ಸಸಿಯನ್ನು ನಡೆವುದು
ಅರವಸಿ	ನೀರಿನಲ್ಲಿ ಹರಗುವುದು
ಬಳಿಸಾಲು	ಬಿತ್ತನೆಯಾದ ನಂತರ ಹರಗುವುದು
ಯಡನಟ್ಟಿ	ಭತ್ತ ಸರಿಯಾಗಿ ಹುಟ್ಟದ ಕಡೆ ಸಸಿ ನೆಡುವುದು
ಹಾರುಗೊಳ್ಳು	ಗಾಡಿಯ ಹಿಂಭಾಗದಲ್ಲಿ ಭಾರ ಬಿದ್ದರೆ ಮೇಲಕ್ಕೆ ಮೂಕು ಹಾರುತ್ತದೆ.
ಇಳಿಗೊಳ್ಡು	ಎತ್ತಿನ ಕೊರಳಿಗೆ ಹೆಚ್ಚಿನ ಭಾರ ಬೀಳುತ್ತದೆ
ಊರಿಹೊಡಿ	ನೇಗಿಲನ್ನು ಹೆಚ್ಚು ನಾಟುವಂತೆ ಹೊಡೆಯುವುದು
ಎದೆ ಕೀಳಂಗೆ ಹೊಡಿ	ದೊಡ್ಡ ದೊಡ್ಡ ಮಣ್ಣಿನ ಹೆಂಡೆ ಕೀಳುವ ಹಾಗೆ ಹೊಡೆಯುವುದು.
ಮೆಟ್ಟಿಕೊಂಡು ಹೊಡಿ	ಕಾಲನ್ನು ನೇಗಿಲ ದಿಂಡಿನ ಮೇಲಿಟ್ಟು ಹೊಡೆಯುವುದು.

೧೩. ಇತರ ಶಬ್ದಗಳು

ಸಿವುಡು	ಭತ್ತದ ತೆನೆ ಇರುವ ಹುಲ್ಲಿನ ಕಟ್ಟು

ಪೆಂಡಿ	ಭತ್ತ ಇರದ ಹುಲ್ಲಿನ ಕಟ್ಟು
ಕಂತಲ ಪೆಂಡಿ	ತುಂಡು ಹುಲ್ಲಿನ (ಬಾಗಿದ) ಕಟ್ಟು
ಮೆದೆ	ಕೊಯ್ದು ಭತ್ತದ ಹುಲ್ಲನ್ನು ನೆಲದ ಮೇಲೆ ಇಟ್ಟ ಗುಂಪು
ಗೋಡು	ಕೆರೆ ಅಥವಾ ಹೊಂಡದ ತಳಭಾಗದಲ್ಲಿರುವ ಕೊಳೆತ ಮಣ್ಣು
ಗೂಟ	ಎತ್ತು ಆಕಳನ್ನು ಕಟ್ಟುವ ಬಿದರಿನ ಅಥವಾ ಮರದ ತುಂಡು
ಹೊರೆ	ಅನೇಕ ಸಿವುಡು ಅಥವಾ ಪೆಂಡಿಗಳ ಕಟ್ಟು
ಗುದ್ದಿ	ಮೊಂಡ ದನಗಳ ಗತಿನಿರೋಧಕ್ಕಾಗಿ ಕೊರಳಲ್ಲಿ ಕಟ್ಟುವ ಕಟ್ಟಿಗೆಯ ತುಂಡು.
ಇಟ್ಣಿ	ಇಟ್ಣಗೂಟ. ಇಕ್ಕಟ್ಟಿನ ಗೂಟ
ಪೆಟ್ಣಿ	ಪೆಟ್ಟಿಣೆ. ಪೆಟ್ಟುವ ಮಣೆ
ಮಾರಗಿ	ದನಗಳಿಗೆ ಮೇವನ್ನು ಹಾಕಲು ಮರದಿಂದ ಮಾಡಿದ ದೊಡ್ಡ ಕಂದಕವಿರುವ ತುಂಡು.
ಗೂಡಿ	ನೀರನ್ನು ಗುಂಡಿಯಿಂದ ಎತ್ತಿ ಕಾಲುವೆಗೆ ಸುರಿಯುವ ಉಪಕರಣ.
ಗೊರಬು	ಮಳೆಗಾಲದಲ್ಲಿ ತಲೆ ಮೇಲೆ ನೀರು ಬೀಳದಂತೆ ಕಡ್ಡಿಯನ್ನು ಜೋಡಿಸಿ ಮಾಡಿದ ಹೊದಿಕೆ.
ಕುಂಚಗಿ	ಹಳೆಸೀರೆ ಹಾಗೂ ಬಟ್ಟೆಗಳನ್ನು ಜೋಡಿಸಿ ಹೊಲಿದ ಹೊದಿಕೆ, ಗದ್ದೆಯಲ್ಲಿ ಕೆಲಸ ಮಾಡುವ ಹೆಂಗಸರು ಉಪಯೋಗಿಸುತ್ತಾರೆ.
ಕೊಡತಿ	ಮರದ ಸುತ್ತಿಗೆ.
ದೊಂಬು	ಹೊಲದಲ್ಲಿ ಏಡಿ, ಇಲಿ, ಹೆಗ್ಗಣ, ಮಳೆಹುಳಗಳು ಮಾಡಿದ ರಂಧ್ರ.
ಕೊಡತ	ಎತ್ತಿನಗತಿ ನಿರೋಧಕ್ಕಾಗಿ ಕಟ್ಟುವ ಬಡಿಗೆ
ಬಲ್ಪು	ಹರತೆಯಾದನಂತರ ಕಳೆ ಹಾಗೂ ಕೆಸರು ಮಣ್ಣಿನಿಂದ ಕೂಡಿದ ವಸ್ತು.
ಗವ್ತ	ದನಗಳ ಉಚ್ಚೆ
ಬಣವಿ	ಹುಲ್ಲು ಹಾಗೂ ಭತ್ತಗಳನ್ನು ಒಟ್ಟಿದ ಗುಂಪು
ನಾರು–ಕಲ್‌ನಾರು	ಮೀನುಗಳನ್ನು ಹಿಡಿಯುವ ದಾರದ ಬಲೆ

ರಗಸಪಾಟಿ	ಮಣೆ, ಕಣ್ಣಿಗಳನ್ನು ಮಾಡಲು ಬರುವಂತ ನಾರಿನ ಗಿಡ
ಹುರಿ	ಸಣಬಿಃಹುರಿ
ಹೆರಣ್ಣೆ	ಚಕ್ರದ ಅಚ್ಚಿಗೆ ಸವರಲು ಉಪಯೋಗಿಸುವ ಎಣೆ
ಮುಸ್ರಿಬಾನಿ	ಮುಸುರೆಯನ್ನು ಹಾಕುವ ಮಣ್ಣಿನ ಪಾತ್ರೆ
ರಂಜಣಗಿ	ಧಾನ್ಯಗಳನ್ನು ಶೇಖರಿಸುವ ಮಣ್ಣಿನ ಪಾತ್ರೆ
ಗುಡಾಣ	ಮಣ್ಣಿನ ಹರವಿ
ಬರ್ಲ್ಲ	ರಸ್ತೆ ಹಾಗೂ ಕೊಟ್ಟಿಗೆಯು ಕಸಗುಡಿಸುವ ಪೊರಕೆ
ಅಟ್ಲ್ಲ	ಎತ್ತರವಾಗಿ ಮಲಗಲು ಮಾಡಿದ ವ್ಯವಸ್ಥೆಯು ಗುಡಿಸಲು
ಮಗಿ	ಮಣ್ಣಿನ ಚಟಗಿ
ತತ್ರಾಣಿ	ಸಣ್ಣಬಾಯಿ ಇರುವ ನೀರಿನ ಹೂಜಿ
ಕಟಬಳ್ಳಿ	ಕಟ್ಟುವ ಬಳ್ಳಿ
ಹಣಿಸು	ಕುಡಗೋಲು, ಕುಳಗಳನ್ನು ಕುಲುಮೆಯಲ್ಲಿ ಹರಿತ ಮಾಡುವುದು.
ಪಣತ	ಭತ್ತ ಹಾಗೂ ಇತರ ಧಾನ್ಯಸಂಗ್ರಹ ಮಾಡುವ ಜಾಗ
ಹಾಲುಗಾಳು	ಹಾಲುತುಂಬಿಕೊಂಡಿರುವ ಕಾಳು
ಅಡೆದಿರ	ಬದುವಿನ ಪಕ್ಕದಲ್ಲಿರುವ ನಾಲ್ಕು ಅಥವಾ ಎಂಟು ಸಾಲು ಭತ್ತ
ಗೊಟ್ಟ	ಎತ್ತು ದನಕರುಗಳಿಗೆ ಕಾಹಿಲೆಯಾದಾಗ ಔಷಧಿ ಕುಡಿಸುವ ಬಿದರಿನ ಕೋಲು
ಹಂಕ್ಲ್ಲ	ರಾಗಿ, ಶೇಂಗಾ ಬೆಳೆಯುವ ಭೂಮಿ
ಬೀಳು	ದನಗಳನ್ನು ಮೇಯಿಸುವ ಹುಲ್ಲಿನಿಂದ ಕೂಡಿದ ಜಾಗ
ಗೋಮಾಳ	ಊರಿನ ದನಗಳನ್ನು ಮೇಯಿಸುವ ಜಾಗ
ಜಂಗಳೀದನ	ಊರೊಟ್ಟಿನ ದನಕರುಗಳು
ಮಾಸ್ತಿಬಯಲು	ಗದ್ದೆಯನ್ನೊಳಗೊಂಡ ವಿಶಾಲವಾದ ಭೂಪ್ರದೇಶ
ಕಂಬಳಿ–ಗೊಂಗಡಿ	ಮಳೆ, ಚಳಿಯಿಂದ ರಕ್ಷಣೆಗಾಗಿ ಹೊತ್ತುಕೊಳ್ಳುವ ಕಪ್ಪು, ಬಿಳಿ ಕುರಿತುಪ್ಪಟದ ಬಟ್ಟೆ
ಕರಿ	ಕಂಬಳಿಯ ಅಂಚಿನ ದಾರ

ಕಡ	ಬೇರೆಯವರಿಂದ ತಂದ ಸಾಲ
ವಾತ	ನೂರು ರೂಪಾಯಿಗೆ ನೂರು ಸೇರು ಭತ್ತ ಕೊಡುವುದಾಗಿ ಸಾಲ. (ಆಷಾಡದಿಂದ ಕಾರ್ತೀಕದ ವರೆಗೆ)
ಗುತ್ತಿಗೆ	ಹೊಲ ಮಾಡಲು ಇನ್ನೊಬ್ಬರಿಗೆ ಕೊಡುವದು
ಸಮಗೋರು	ರೈತ ಹಾಗೂ ಜಮೀನುದಾರನಿಗೆ ಸಮಪಾಲು
ಮೂಗೋರು	ರೈತನಿಗೆ ಎರಡುಪಾಲು, ಜಮೀನುದಾರನಿಗೆ ಒಂದುಪಾಲು
ಆಲೆಮನೆ	ಕಬ್ಬನ್ನು ಅರೆದು ಬೆಲ್ಲಮಾಡುವ ಜಾಗ
ಗಾಣ	ಕಬ್ಬನ್ನು ಅರೆಯುವ ಯಂತ್ರ
ಕೊಪ್ಪರಿಗೆ	ಕಬ್ಬಿನ ಹಾಲನ್ನು ಬೇಯಿಸುವ ಕಬ್ಬಿಣದ ದೊಡ್ಡ ಪಾತ್ರೆ
ಹಲಗೆ	ಚೌಕಾಕಾರದ ಬೆಲ್ಲದ ತುಂಡು
ಬಾನಿ	ನಾಲ್ಕು ಹಲಗೆಗಳ ಬೆಲ್ಲ
ಬಟ್ಲು ಬೆಲ್ಲ	ಬಟ್ಟಲಲ್ಲಿ ಹಾಕಿ ಮಾಡಿದ ಬೆಲ್ಲ
ಜೋನಿ	ಡಬ್ಬದಲ್ಲಿ ತುಂಬುವ ದ್ರವರೂಪದ ಬೆಲ್ಲ
ಅಂಟುಕೋಲು	ಕಬ್ಬಿನ ಕೋಲಿಗೆ ಅಂಟಿಸಿರುವ ಅಂಟಾದ ಬೆಲ್ಲ
ಬಾಂದುಕಲ್ಲು	ಹಕ್ಕಿನಕಲ್ಲು, ಎರಡು ಹೊಲದ ನಡುವೆ ಇರುವ ಗಡಿಕಲ್ಲು
ಊಡಿ	ಸಪ್ಪನ್ನು ಉಗುರಿನಿಂದಕತ್ತರಿಸುವುದು
ತಾರು	ಭತ್ತಪೂರ್ಣವಾಗಿ ಒಣಗಿದೆ ಎಂಬರ್ಥ
ಕೊರ್ಲು	ಅರ್ಧಕಡಿದ ಮರ ಅಥವ ಮೆಳೆ, ಪೆಳೆಗಳು
ಮೆಳೆ	ಪೊದರುಗಳ ಗುಂಪು
ಚರಗ	ಭೂಮಿ ಹುಣ್ಣಿಮೆಯಲ್ಲಿ ಎಲ್ಲ ಬೆಳೆಗಳನ್ನು ಕೊಯ್ದು ಬೇಯಿಸಿದ ಅಡಿಗೆ.
ಹೂಲಿಗ	ಚರಗವನ್ನು ಹೊಲದಲ್ಲಿ ಚೆಲ್ಲುವಾಗ ಹೇಳುವ ಶಬ್ದ.
ಉಬ್ಲು	ಜೊಳ್ಳುಭತ್ತ
ಹೊಟ್ಟು	ಭತ್ತ ಹಾಗೂ ಇತರ ಧಾನ್ಯಗಳ ಒಣಗಿದ ಎಲೆಪ್ರಡಿ ಇತ್ಯಾದಿ
ಸರ್ಕಾಸು	ಸರ್ಕಾರದಿಂದ ಮಂಜೂರಾದ ಭೂಮಿ
ಮುನ್ನಾಜಂಗಲ್	ಅರಣ್ಯಖಾತೆಯ ವಶದಲ್ಲಿರುವ ಕಾಡು

ಸಾಗುವಳಿ ಚೀಟಿ	ಸಾಗುವಳಿ ಪತ್ರ
ಬಗರ್‌ಹುಕುಂ	ಕಾಡನ್ನು ಕಡಿದು ಮಾಡಿದ ಬಲಾತ್ಕಾರದ ಸಾಗುವಳಿ
ಬೇನಾಮಿಹೊಲ	ಅನಧಿಕೃತ ಹೊಲ
ಬಾಗಾಯುತ	ತೋಟ
ಕಬ್ಜ	ಹಕ್ಕು, ಸ್ವಾದೀನ, ವಶದಲ್ಲಿರುವ ಭೂಮಿ
ಉಂಬಳಿ	ಉಂಬಳಿಯಾಗಿ, ಬಹುಮಾನವಾಗಿ ಬಂದ ಭೂಮಿ
ಹಕ್ಕುದಾರಿ	ಒಡೆತನಕ್ಕೆ ಒಳಪಟ್ಟ ಭೂಮಿ
ಸಂಬಳದಾಳು	ಇನ್ನೊಬ್ಬರಲ್ಲಿ ಕೆಲಸಕ್ಕಿರುವವನು.
ಪೋಡು	ವಿಭಜನೆ
ಗೇಣಿದಾರ	ಇನ್ನೊಬ್ಬರಿಂದ ಪಡೆದು ಹೊಲ ಉಳುವವ.
ಕೊಪ್ಪೆ	ಕಂಬಳಿಯನ್ನು ಮಡಿಚಿ ಹೊದ್ದುಕೊಳ್ಳುವ ವಿಧಾನ.

ಮೇಲೆ ಕೊಟ್ಟಿರುವ ಮಲೆನಾಡಿನ ಕೃಷಿಕರ ವೃತ್ತಿಪದಕೋಶಗಳಿಂದ ನಮ್ಮ ಕನ್ನಡ ಶಬ್ದಕೋಶಗಳು ಒಳಗೊಳ್ಳದ ಅನೇಕ ಶಬ್ದಗಳು ಹಾಗೂ ಅವುಗಳ ಅರ್ಥ ಗೊತ್ತಾಗುತ್ತದೆ. ಕೆಲವು ಶಬ್ದಗಳು ಶಬ್ದ ಕೋಶದಲ್ಲಿ ದಾಖಲಾಗಿದ್ದರೂ ಮಲೆನಾಡಿನ ಪರಿಸರದಲ್ಲಿ ಯಾವ ಅರ್ಥದಲ್ಲಿ ಬಳಕೆಯಾಗುತ್ತವೆಯೋ ಆ ಅರ್ಥದಲ್ಲಿ ಬಳಕೆಯಾಗಿಲ್ಲವೆಂಬುದು ತಿಳಿಯುತ್ತದೆ. ಇಂತಹ ಅರ್ಥವ್ಯತ್ಯಾಸದ ಸಾಧ್ಯತೆಗಳು ಭಾಷೆಯ ಸಹಜ ಕ್ರಿಯೆಯಾಗಿರುವುದರಿಂದ. ನಿಘಂಟುಗಳು ಹೆಚ್ಚು ಅರ್ಥನ್ನೊಳಗೊಳ್ಳಬೇಕಾದುದು ಅನಿವಾರ್ಯವಾಗುತ್ತದೆ. ಆದ್ದರಿಂದ ಮೇಲೆ ದಾಖಲಿಸಿದ ಶಬ್ದಗಳು, ಕನ್ನಡ ಶಬ್ದಗಳ ಸಂಗ್ರಹ, ಅರ್ಥ ವಿವರಣೆಗೆ ಅನುಕೂಲಮಾಡಿ ಕೊಡುವುದರ ಜೊತೆಗೆ ಈ ನಿಟ್ಟಿನಲ್ಲಿ ಸಂಗ್ರಹಕಾರ್ಯ ನಡೆಸಲು ಪ್ರೇರಣೆ ನೀಡಿದರೆ ಮುಂದೆ ಅವುಗಳೆಲ್ಲವನ್ನೂ ಕಲೆಹಾಕಿಕೊಂಡು ವಿಶ್ಲೇಷಣೆ ಮಾಡಬಹುದಾಗಿದೆ.

ಸಹಾಯಕ ಲೇಖನಗಳು :

1. M. Murugeshan (1984) Agriculture Technical Terms, Pondi and Karai Compared. DLA NEWS VIII No. 7.
2. ವಿ. ಶಿವಾನಂದ (1978) ಒಕ್ಕಲುತನ ವೃತ್ತಿ ಪದಕೋಶ–1

ಸುಖವು ಬೇಕೆ ನಿಮಗೆ ಸುಖವು?

● ಗುರುಪಾದ ಮರಿಗುದ್ದಿ

ಓ ನನ್ನ ಸ್ನೇಹಿತರೆ
ನಿಮಗೆಂದಾದರೂ ಒಮ್ಮೊಮ್ಮೆ
ಚಿಂತೆಯು ಸಣ್ಣದೊಂದು ಗೆರೆ ಮೂಡಿದರೆ ಮುಖದಲ್ಲಿ,
ಅಕಸ್ಮಾತ್ ದುಗುಡದ ಛಾಯೆಯೊಂದು ಕಾಣಿಸಿದರೆ ಮನದಲ್ಲಿ.
ದಯವಿಟ್ಟು ಹೊರಬನ್ನಿ.
ಎಲ್ಲ ಕವಚಗಳ ಕಳೆದೊಗೆದು
ಬಂಧನಗಳ ಕಿತ್ತೊಗೆದು ಬನ್ನಿ.

ಪಕ್ಕದಲಿ ಅರಳಿರುವ ಈ ಹೂವ
ಬಣ್ಣ–ಗಂಧದ ಭಾಷೆಯಲಿ ಸಂಭಾಷಿಸಿ,
ದೂರದಲಿ ಕೂಗುತಿಹ ಆ ಹಕ್ಕಿ
ಉಲಿಹದ 'ಶುಭ-ಹಾರೈಕೆ' ಸ್ವೀಕರಿಸಿ.
ಕಾಲ ಕೆಳಗೆ ಬೆಳೆದಿರುವ ಹಸಿರು ಹುಲ್ಲು
ಚಿಮ್ಮಿಸುವ ಜೀವರಸಕೆ ಶರಣೆನ್ನಿ.
ಇಲ್ಲದಿರೆ
ಬೀಸುವ ತಂಗಾಳಿಯ ಮೂಸಿ ನೋಡಿ
ಹರಿವ ನೀರನೊಮ್ಮೆ ಗುಟುಕರಿಸಿ
(ತಾಜಾತನದ ಮಜ ಹಾಯಾಗಿಲ್ಲವೆ ?)
ಇಳಿವ ಸೂರ್ಯನ ಕಿರಣಗಳ ಹಿಡಿದು
ಸರಸರನೆ ಮೇಲ–ಮೇಲಕೆ ಏರಿ
ಸ್ವರ್ಗದ ಬಾಗಿಲು ಬಡಿದು ಬಿಡಿ,
ನಿಮ್ಮ ನೋವಿನ ಲೋಕಕೆ 'ಗುಡ್-ಬೈ' ಎನ್ನಿ.

ಆದರೆ ನೆನಪಿಡಿ ;
ನೆಲದ ಕಾಲನೆಂದೂ ಕೀಳದಿರಿ.

ಐದು ಹೊಸ ಸ್ವರವಚನಗಳು

● ವೀರಣ್ಣ ರಾಜೂರ

ಕನ್ನಡದಲ್ಲಿ ವಚನದಂತೆ ಸ್ವರವಚನಸಾಹಿತ್ಯವೂ ವಿಪುಲವಾಗಿ ಬೆಳೆದುಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರಿಂದ ಹುಟ್ಟು ಪಡೆದ ಅದು ಇಂದಿನ ವರೆಗೂ ರಚನೆಗೊಳ್ಳುತ್ತ ನಡೆದಿರುವುದು ಅದರ ಜೀವಂತಿಕೆ ಹಾಗೂ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಏಕೋತ್ತರಶತಸ್ಥಲ, ಶೂನ್ಯಸಂಪಾದನೆ, ಪರಮಮೂಲಜ್ಞಾನ ಷಟ್‌ಸ್ಥಲ, ವೀರಶೈವ ಚಿಂತಾಮಣಿ ಮೊದಲಾದ ಸ್ಥಲಕಟ್ಟಿನ ವಚನ ಕೃತಿಗಳಲಿ, ಶಿವಯೋಗಪ್ರದೀಪಿಕೆ, ಗಣವಚನ ರತ್ನಾವಳಿ ಎಂಬ ಕೇವಲ ಸ್ವರವಚನ ಸಂಗ್ರಹ ಗಳಲ್ಲಿ ಈ ಸಾಹಿತ್ಯ ರಾಶಿಗೊಂಡಿದೆ. ಅಲ್ಲದೆ ಬಿಡಿಯಾಗಿಯೂ ಸ್ವರವಚನಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ೧ ಯಾವುದೇ ಹಸ್ತಪ್ರತಿ ತೆಗೆದು ನೋಡಿದರೂ, ಬಿಡಿ ಗರಿಗಳಿದ್ದರೆ ಅಲ್ಲಿ ಒಂದೋ ಎರಡೋ ಸ್ವರವಚನಗಳನ್ನು ಬರೆದಿರುವುದು ಹೆಚ್ಚಾಗಿ ಕಂಡುಬರುತ್ತದೆ.

ಪ್ರಸ್ತುತ ಐದು ಸ್ವರವಚನಗಳು "ಮಿಶ್ರಷಟ್‌ಸ್ಥಲವಚನಗಳು" ೨ ಎಂಬ ನೂತನ ಸ್ಥಲಕಟ್ಟಿನ ಕೃತಿಯಲ್ಲಿ ದೊರೆತಿವೆ. ಇವುಗಳನ್ನು ಈ ಕೃತಿಯಲ್ಲಿ ಸ್ಥಲ ಕ್ಕೊಂದರಂತೆ, ಪ್ರತಿಸ್ಥಲದ ಅಂತ್ಯದಲ್ಲಿ 'ಆ ಸ್ಥಲ ನಿರ್ದೇಶದ ಪದನು' ಎಂಬ ತಲೆಬ ರಹದೊಂದಿಗೆ ಸೇರಿಸಲಾಗಿದೆ. ಒಂದೊಂದು ಸ್ವರವಚನವೂ ಆಯಾ ಸ್ಥಲದ ಸ್ವರೂಪ ಲಕ್ಷಣಗಳನ್ನು ವಿವರಿಸುತ್ತವೆ. ಇಲ್ಲಿನ ಸ್ವರವಚನಗಳು ಕ್ರಮವಾಗಿ ಭಕ್ತ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳಿಗೆ ಸಂಬಂಧಿಸಿವೆ. ಮಾಹೇಶ್ವರ ಸ್ಥಲದ ಅಂತ್ಯದ ಗರಿ ಕಳೆದುಹೋದುದರಿಂದ ಅದರೊಂದಿಗೆ ಆ ಸ್ಥಲಕ್ಕೆ ಸೇರಿದ ಸ್ವರವಚ ನವೂ ಇಲ್ಲದಾಗಿದೆ.

ಪ್ರತಿ ಸ್ವರವಚನಕ್ಕೂ ರಾಗ ಸೂಚನೆಯಿದೆ. ಪ್ರಾರಂಭದಲ್ಲಿ ಪಲ್ಲ, ಮುಂದೆ ೭ ನುಡಿಗಳು ಐದೂ ಕೃತಿಗಳಲ್ಲಿ ನಿಯತವಾಗಿವೆ. ೪ ನೆಯ ಸ್ವರವಚನ ವಾರ್ಧಕ ಷಟ್ಪದಿಯಲ್ಲಿದ್ದರೆ, ಉಳಿದುವು ೪ ಪಾದಗಳ ಪದ್ಯರೂಪದಲ್ಲಿವೆ. ಐದರಲ್ಲಿ ಮೊದಲಿ

---

೧ ವಿವರಗಳಿಗೆ ನೋಡಿ "ಶಿವಯೋಗ ಪ್ರದೀಪಿಕೆ" ಸಂ: ವೀರಣ್ಣ ರಾಜೂರ ಪ್ರ.ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪ್ರಸ್ತಾವನೆಪುಟ XX—XXXIX

೨ ಕನ್ನಡ ಅಧ್ಯಯನ ಪೀಠದ ತಾಳೆಯ ಗರಿ ಪ್ರತಿ ಸಂ. ೨೫೮

ನೆದು ಅಗ್ಘವಣಿಯ ಹಂಪಯ್ಯನದಾದರೆ, ೨ ಮತ್ತು ೩ ನೆಯವು ಚೆನ್ನಬಸವಣ್ಣ ಹಾಗೂ ೪ ಮತ್ತು ೫ ನೆಯವು ಪ್ರಭುದೇವರ ರಚನೆಗಳಾಗಿವೆ[3]. ಇದುವರೆಗೆ ಬೆಳಕಿಗೆ ಬಾರದ ಇವುಗಳನ್ನು ಇಲ್ಲಿ ಪರಿಷ್ಕರಿಸಿ ಸಂಪಾದಿಸಲಾಗಿವೆ.*

೧

ರಾಗ : ಲಲಿತ

ಕುಳವಾರರ ಮೂಲಿಗ ಸದ್ಭಕ್ತನ
ಒಳಗಡಗಿದ ಮಾಹೇಶ್ವರ ಪ್ರಸಾದಿಯು
ತಿಳಿವಿನ ಪ್ರಾಣಲಿಂಗಿ ಶರಣೈಕ್ಯ
ಸ್ಥಲ ನಿಜಕಿವು ಪಥವು ।ಪಲ್ಲ।

ಆತ್ಮಸ್ತುತಿ ಪರನಿಂದೆಯಿಲ್ಲದೆ ಸರ್ವ ಭೂತಹಿತವನಾಗಿ
ಬ್ರಹ್ಮಾದ್ವೈತದ ಭ್ರಾಂತಿಯೋಗದೆ ಸಜ್ಜನ ಸತ್ಯಸದಾಚಾರ ನೆಲೆಗೊಂಡು
ಶಾಂತನಾಗಿ ತನುಮನಧನದೊಳಗಣುಮಾತ್ರ ಪ್ರಪಂಚಿಲ್ಲದೆ
ಲಿಂಗಜಂಗಮಕೀರತು ಮಾಡಿ ಕಿಂಕಿಲ ಭೃತ್ಯತೆಯುಳ್ಳಾತನೆ ಸದ್ಭಕ್ತ ।೧।

ನುಡಿವ ಛಲದಿ ನಡೆದಾಯತ ಸ್ವಾಯತವಿಡಿದು ಶೀಲವ್ರತ ನಿಯತಾಚಾರದಿ
ಒಡಲೊಡವಭಿಮಾನದಾಸೆಯಿಲ್ಲದೆ ಗುರುಲಿಂಗ ಜಂಗಮಕ್ಕೆ
ಎಡೆದೆರಹಿಲ್ಲದೆ ಮಾಡಿ ಮಾಡಿ ಮನದೃಢವಿಡಿದಿಹ ನಿಜಭಕ್ತಿಸ್ಥಲದ ಮೇ-
ಲೆಡೆಗೊಂಡ ಭಕ್ತಿನಿಷ್ಠಾಪರವದು ಮಾಹೇಶ್ವರನಾಚರಣೆ ।೨।

ಲಿಂಗ ಜಂಗಮ ಗುರು ಮುಖಕರ್ಪಿಸುವ ಕ್ರಮಂಗಳನರಿದು ಕೊಟ್ಟು
ಪಡೆದ ಪವಿತ್ರ ಪ-
ದಂಗಳ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದತ್ರಯವನು
ಹಿಂಗದೆ ಹಾರಿಕೊಂಡಿರ್ದ ಶರಣ ಲಿಂಗಿ ಭೃತ್ಯ ಕಿಂಕರ ನಾನೆಂದೆಂ-
ಬಂಗ ಚಿಹ್ನದೋರುತ್ತಿಹುದು ಭಕ್ತಿ ಮುಕ್ತಿ ಪ್ರಸಾದಿಯು ।೩।

---

೩ ಎರಡನೆಯ ಸ್ವರವಚನ ಹಲಗೆದೇವನ ಶೂನ್ಯಸಂಪಾದನೆಯಲ್ಲಿಯೂ ಎಡೆ ಪಡೆದಿವೆ. ಆದರೆ ಪ್ರಕಟವಾಗಿಲ್ಲ.

* ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅನುಮತಿಯಿತ್ತ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಿಗೆ ಕೃತಜ್ಞನಾಗಿದ್ದೇನೆ.

ತನುವಿನ ಪ್ರಾಣವು ಆಚಾರಸ್ಥಲ ಮನದ ಪ್ರಾಣವು ಅನುಭಾವಸ್ಥಲ-
ದನುಕುಳ ನೆನಹಿನ ಕೊನೆಯೊಳು ತೊಳಗಿ ಬೆಳಗುತ್ತಿಹ ಲಿಂಗಕ್ಕೆ
ತನುವೆ ಗುರು ಅನುಭಾವವೆ ಜಂಗಮವಿನಿತು ತ್ರಿವಿಧವೊಂದಾಗಿಪ್ಪ
ಅನು ದೊರಕಲು ನಿಜಭಕ್ತನ ಕೂಡಿಹ ಪ್ರಾಣಲಿಂಗಿಯಂಗ ।೪।

ಕರ್ಮೇಂದ್ರಿಯಂಗಳು ಸೋಂಕದೆ ಲೋಭವು ಸಂಬಂಧಿಸದಾವಂಗದಲಾಸೆಯು
ನೆಮ್ಮದೆ ಸಂಭ್ರಮ ಸಡಗರ ಕುಲಛಲ ವಿಧಿಸೂತಕ ಪೂರ್ವ ಸಂಬಂಧಗಳಳಿದತಿ
ಸಿಂಕಿಲ ಭಯ ವರ್ಮವರಿದು ದಾಸೋಹದಿ ತನುಮನ
ನಿರ್ಮಳ ನಿಜನೆಲೆಗೊಳಲದು ಭಕ್ತನೊಳಿಹ ಶರಣಸ್ಥಲ ।೫।

ಜನನ ಮರಣ ಸ್ಥಿತಿ ಮಲ ಕುಲ ಛಲಗಳನೆಣಿಸದೆ ಸಟೆಸಂಕಲ್ಪಾದಿಗಳನು
ಮನ ಮುಟ್ಟದೆ ದಿಟ ಘಟಿಸಿ ಸ್ವತಂತ್ರಭಾವ ಲಿಂಗದೊಳಗೆ
ಅನುಭವ ಕೋಟರ ಸುಖದಾನಕ್ಕೈದರೆ ಮನದಾಸೋಹದ ಮಾಟದ ವಿವರಗ
ಳನು ನೆಲೆಗೊಳಲದು ಭಕ್ತನ ಕೂಡಿಪ್ಪೈಕ್ಯ ನಿಜಸ್ಥಲವು ।೬।

ಭಕ್ತನ ಕೂಡಿಹ ಮಾಹೇಶ್ವರನ ಭಕ್ತನ ಮಿಶ್ರದೊಳಿಪ್ಪ ಪ್ರಸಾದಿಯು
ಘನ ಬೆರಸಿಹ ಪ್ರಾಣಲಿಂಗಿ ಭಕ್ತಿಸ್ಥಲದೊಳಗಡಗಿ
ಭಕ್ತನಾದ ಶರಣಸ್ಥಲ ಮತ್ತಾ ಭಕ್ತಿಯುಕ್ತವಾದೈಕ್ಯಸ್ಥಲದೊಳು
ಭಕ್ತಸಹಿತ ಮೈದೋರುವ ಭಕ್ತರ ಭೃತ್ಯನಾನು ಹಂಪೆಯ ವಿರುಪಾ ।೭।

೨

ರಾಗ . ಆಹಿರ

ಆಗಾದ ಅಮಲ ಪ್ರಸಾದಿಯು ಷಡುಸ್ಥಲದ
ಯೋಗಸ್ಥಲಂಗಳನುಪಮಕನುಪಮ ।ಪಲ್ಲ।

ಕರಣಾದಿ ಗುಣಂಗಳುರವಣೆ ಕಲ್ಪಿತದ
ಭರವಶಗಳಿದು ಶಂಕಾವಿಷವನು
ಪರಿಹರಿಸಿ ತನುಮನದ ಸೊಗಸು ಸೋಂಕದ ಮುನ್ನ
ನಿರುತಾರ್ಪಿತವಾದನೀ ಪ್ರಸಾದಿ ।೧।

ಅಷ್ಟತನುವಿನ ಪೂರ್ವವಳಿದು ಗುರುಲಿಂಗಜರ
ನಿಷ್ಠೆಯಿಂ ಸರ್ವ ಸೂತಕಗಳಳಿದು

ಕೊಟ್ಟು ಕೊಂಬವಧಾನಿ ತಾನಾಗಿ ತಾ ಕೆಲರ್ಗೆ
ಕೊಟ್ಟುಂಬನಲ್ಲ ಪ್ರಸಾದಿ ಭಕ್ತ ।೨।

ಲಿಂಗಗ್ರಾಹಕನಾಗಿ ಲಿಂಗವಿರಹಿತ ಭೋಗ
ಕಂಗವಿಸ ನೋಡನಾಸೆವಿಡಿದೇನುವ
ಲಿಂಗ ಮುಂತಲ್ಲದನ್ಯವ ಮುಟ್ಟಿ ದೇಹ ಭಾಷೆ
ಯಂಗ ಪ್ರಸಾದಿಯು ಮಾಹೇಶ್ವರ ।೩।

ಸಕಲೇಂದ್ರಿಯಾದಿಗಳು ತಮ್ಮ ತಮ್ಮ ಮುಖದ ಕೊನೆ
ಯಕಳಂಕ ಭಾವ ಭೀತಿಯೊಳು ಲಿಂಗ
ಮುಖಕೆ ತಿದ್ದುವನಾಗಿ ಸರ್ವಾಂಗ ಸಂ
ಯುಕುತ ಪ್ರಸಾದಿಯು ಪ್ರಾಣಲಿಂಗಿ ।೪।

ಲಿಂಗ ಪಂಚೀಕರಣ ಮುಖ ಮುಖದ ಹಸ್ತದಲ್ಲಿ
ಹಿಂಗದವಧಾನದಾಯುತ ತ್ರಿ[ವಿ]ಧದ
ಸಂಗಸುಖ ಹಮ್ಮುಬಿಮ್ಮುಗಳಳಿದು ಭೋಗಿಸೂ
ದಂಗ ಪ್ರಸಾದಿಯು ಶರಣಸ್ಥಲ ।೫।

ತನುಮನಧನದ ವಿಕಾರಂಗಳಳಿದು
ಗುರುಲಿಂಗ ಚರಪ್ರಸಾದ ಶೇಷ ಸ್ವೀಕಾರದ
ಅನು ತಮ್ಮೊಳಡಗಿ ತಾನೆ ಪ್ರಸಾದದ ತತ್ಪ-
ರಸರೂಪನಾದನೆ ಪ್ರಸಾದಿಯೈಕ್ಯ ।೬।

ಷಡುರುಚಿಯ ಭಿನ್ನವಿಡಿದೊಂದೊಂದು ರುಚಿ ಜಿಹ್ವೆ
ಗೊಡಗೂಡುವಂತೆ ಷಡುಸ್ಥಲಪ್ರಸಾದ
ವಿಡಿದೊಂದುಗೂಡಿ ಕೂಡಲಚೆನ್ನಸಂಗನೊಳು
ಅಡಗಿ ತನುಗುಣವಳಿದ ಸುಪ್ರಸಾದಿ ।೭।

೬

ರಾಗ : ಮಧುಮಾಧವಿ

ಜ್ಞಾನಾನುಭಾವ ಸಿದ್ಧವಾದ ಷಡುಸ್ಥಲ ಒಂದು
ಪ್ರಾಣಲಿಂಗಿಯು ಸ್ಥಲದ ಮೇಲೆ ತಮ್ಮ

ಸ್ವಾನುಭಾವ ಸತ್ಕ್ರಿಯಾಚಾರ ಚಿಹ್ನದೋರುವ
ನಿರ್ಣಯದ ಸುಖವನೇನೆಂಬೆನು ।ಪಲ್ಲ।

ದಳ ಹತ್ತರಲಿ ತೊಳಗಿ ಬೆಳಗುವ ಪರಂಜ್ಯೋತಿ
ಕಳೆಯೋಜಿಃ ಪ್ರಣಮ ಸ್ವರೂಪಿನಿಂದ
ಒಳಹೊರಗೆ ತೆರಹಿಲ್ಲದಿಹ ಪ್ರಾಣಲಿಂಗದೊಳ
ಗಳವಟ್ಟಡದು ಪ್ರಾಣಲಿಂಗಿಸ್ಥಲ ।೧।

ಅನುಭಾವ ಜ್ಞಾನವಾಚಾರವರಿವಿನ ಹೃದಯ
ಮನ ಪ್ರಾಣ ಕೈಯಿಂದೆ ಲಿಂಗವಿಡಿದು
ಅನಾಹತದಷ್ಟ ಕಮಲದ ಹೊಸಪೂಜೆ
ಯನು ಮಾಡುವನು ಪ್ರಾಣಲಿಂಗಿಯ ಭಕ್ತನು ।೨।

ಬಹಿರಂಗದರ್ಪ ಪ್ರಾಣಾಭಿಮಾನವಿತ್ತಡೇ
ನಹುದೆಂದು ಜ್ಞಾನಮುಖದಿಂದ್ರಿಯಗಳು
ಸಹಜಲಿಂಗ ಪ್ರಾಣವಪ ಸೀಮೆ ಮನವಿಡಿಯ
ಲಹನಾತ ಪ್ರಾಣಲಿಂಗಿಯ ಮಾಹೇಶ್ವರ ।೩।

ಅಂಗ ಲಿಂಗ ಹಿಡಿದು ಲಿಂಗವಪ್ರಾಣವ ಹಿಡಿದು
ಸಂಗ ಸುಖದಿಂದಾದ ಅಮೃತ ಕಳೆಯಂ
ಲಿಂಗಕರ್ಪಿಸಿ ಕೊಂಬ ಭೇದವನು ತಾ ಪ್ರಾಣ
ಲಿಂಗಿಯೊಳಗಣ ಪ್ರಸಾದಿಯ ಚಿಹ್ನವು ।೪।

ಭಾವದ ಕೊನೆಯ ಮೇಲೆ ನೆನಹು ಪರಿಪೂರ್ಣವಾ
ಗಾವರಿಸಿ ಪ್ರಣಮಪ್ರಭೆ ತೋರ್ಪ ಜ್ಯೋತಿ
ಶಿವಜ್ಞಾನ ಶಿವಲಿಂಗ ವ್ಯಸನದೊಳಿಹನು–
ಭಾವಿಯೆ ಪ್ರಾಣಲಿಂಗಿಯ ಶರಣನು ।೫।

ತೆರಹಿಲ್ಲದ ಘನದ ಮನವು ಗ್ರಹಿಸುವ ಬಳಿಕ
ಲರಸನೇನುಂಟು ಲಿಂಗದೊಳು ಪ್ರಾಣ
ಪರತು ಬೇರಿಲ್ಲದಂಗವು ಪ್ರಾಣಲಿಂಗಿಯ
ಬೆರಸಿ ಬೇರಿಲ್ಲದೈಕ್ಯ ಸ್ಥಲವಿದು ।೬।

ಅಲ್ಲಲ್ಲಿಯೇ ತೋರಿ ಅಲ್ಲಲ್ಲಿಯೆ ಅಡಗಿ
ಅಲ್ಲಲ್ಲಿಯೇ ಪ್ರಾಣಲಿಂಗದೊಳಗೆ
ತಲ್ಲೀಯವಾಗಿ ಕೂಡಲಚೆನ್ನಸಂಗ ನಿ-
ಮ್ಮಲ್ಲಿ ಬೆರಸಿದ ಪ್ರಾಣಲಿಂಗದೇಹಿ ।೭।

೪

ರಾಗ : **ಹಿಂದೊಳ ವಸಂತ**

ಶರಣನೆ ಭಕ್ತ ಶರಣನೆ ಮಾಹೇಶ್ವರನಾಗಿ
ಶರಣನೆ ಪ್ರಸಾದಿ ಶರಣನೆ ಪ್ರಾಣಲಿಂಗಿಯಾದ
ಶರಣನೆ ಲಿಂಗೈಕ್ಯನಾದ ಶರಣನ ಘನಕ್ಕೆ ಶರಣೆಂದು ಶುದ್ಧನಾದೆ. ॥ಪಲ್ಲ॥

ಪ್ರಳಯ ಪ್ರಕೃತಿಯ ಮಾಯಾ ರಂಜ ಭುಂಜಕನಲ್ಲ
ಒಳಹೊರಗೆ ಆಚಾರದನುಭಾವ ಮಾರ್ಗಕ್ರೀ
ಯುಳವಟ್ಟು ಲಿಂಗ ನಿಃಪತಿಯಾಗಿ ತಥ್ಯಮಿಥ್ಯಗಳಾಸೆಯಾಮಿಷಗಳ
ತಿಳಿವಳಿದು ಬೋಧೆ ನಿರ್ಬೋಧೆ ಸಾಧ್ಯಸಾಧ್ಯ
ಕಳೆ ಸೀಮೆ ನಿಸ್ಸೀಮೆ ಬಂಧ ನಿರ್ಬಂಧ ನಿರ್ಗುಣ ಸ
ಗುಣ ದೇಹ ನಿರ್ದೇಹ ಸಂಕಲ್ಪವಿರಹಿತ ನಿತ್ಯಮುಕ್ತ ಶರಣ. ॥೧॥

(?) ಮಸಿ ಮಸುಳು ಕುಟಿಲ ಕುಹಕ ಕ್ರೋಧ ಆಸೆಯಾ
ಮಿಷ ತಾಮಸಜ್ಞಾನ ಪಂಚಭೌತಿಕದ ಜಡವಿಷಯಂಗ...
[ಳು] ಸದುಗುಣ ವಿನಯ ಸಮತೆ ನೆಲೆಗೊಂಡು ನಿಃಕಾಮ ನಿಜವು ವ-
ಚಿಸಿ ಲಿಂಗಾಭಿಮಾನದೊಳು ಪರ
ವಶಚಿತ್ತ ಕಿಂಕಲತೆ ಪರತತ್ವದನುಭಾವ
ದಶರೀರಲಿಂಗ ಗೂಡಾದ ಲಿಂಗಗ್ರಾಹಿ ಶರಣನೊಳಗಣ ಭಕ್ತನು ॥೨॥

ಸ್ಥಲವಿಡಿದು ಲಿಂಗವಿಡಿದಾಚಾರದನುಭಾವ
ಕುಳವಿಡಿದು ಲಿಂಗೈಕ್ಯಭಾವ ನಿಜನೆಲೆಗೊಂಡು
ಸ್ಥಲತತ್ವ ನಡೆ ನುಡಿಯು ನೋಟಲಿಂಗದ ಕೂಟ ನಂಬುಗೆಯ ನಿಷ್ಠೆವಿಡಿದು
ಕುಲಮದ ಜ್ಞಾನ ದರ್ಶನ ಭ್ರಾಂತಿ ಕರ್ಮಕ್ರೀ
ಯುಳಿದು ಸರ್ವತ್ರ ಪದವೆಲ್ಲವ ತೃಣೀಕರಿಸಿ
ಒಳಹೊರಗುವಿಲ್ಲದೊಂದೆ ವಸ್ತುವಾಗಿಹ ಶರಣನೊಳಗಣ ಮಾಹೇಶ್ವರ. ॥೩॥

ಅರ್ಪಿತಾನರ್ಪಿತಗಳೆಂಬುಭಯ ಸಂಕಲ್ಪ
ದರ್ಪ ವಿಷಯೇಂದ್ರಿಯ ಗುಣಂಗಳಳಿದನಕಾಯ
ವಪ್ಪುದನು ಗುರು ಪ್ರಾಣವೆ ಲಿಂಗ ಜಂಗಮುಸ್ಥಲವೆ ಸುಜ್ಞಾನವಾಗಿ
ಅರ್ಪಿಸಲ್ಕಿಲ್ಲಾಗಿ ಶುದ್ಧ ಸಿದ್ಧ ಪ್ರಸಿದ್ಧ
ದಪ್ರತಿಮ ತ್ರಿವಿಧಪ್ರಸಾದ ನಿಶ್ಚಯ ತನುವ
ನಪ್ಪಿಕೊಂಡೆರಪರಿಯದಮೃತ ಭಾವೈಕ್ಯ ಶರಣಸ್ಥಲದೊಳಿಹ ಪ್ರಸಾದಿ ॥೪॥

ನೇತ್ರ ಶ್ರೋತ್ರ ಘ್ರಾಣ ಜಿಹ್ವೆ ಸ್ಪರ್ಶನ ಜ್ಞಾನ
ನೇತ್ರ ಶ್ರೋ [ತ್ರ] ಘ್ರಾಣ ಜಿಹ್ವೆ ಸ್ಪರ್ಶನಗಳಿಪ್ಪ ತೆರನು
ಪ್ರಾಣದೊಳು ಪ್ರಾಣಕಾಯದೊಳು ಕಾಯಮುಟ್ಟಿದುರ್ದ ಬಿಡದಿಪಂತೆ
ಭ್ರಾಂತಿಲ್ಲದರಿವಿಲ್ಲದರ್ಚಿಸಲ್ಕಿಲ್ಲಾಗಿ
ಖ್ಯಾತಿ ಲಾಭಗಳಳಿದು ರತ್ನಗ್ರಹಕವಾದ
ಮಾತಿನಂದದಿ ಜ್ಯೋತಿ ಕಾಂತಿಪ ಶರಣನೊಳಗಿಪ್ಪ ಪ್ರಾಣಲಿಂಗಿ. ॥೫॥

ಜನವಗ್ರಹಿ[ಸಿ]ದ ಭ್ರಮೆಯ ಮೃಗತೃಷ್ಣೆ ಮೂರ್ತಿಗಳ
ನಗುತನಾಯನ ದೇಹದೊಳು ನಿರಾಯಸ ಶಬುದ
ಮುಗುದಾತ್ಮ ಸಂಗದಿಂದರಿವು ಪಾರವೆಗಳಳಿದು ಜಲಬಿಂದು ರವಿಯುದಯಕೆ
ಮಿಗೆ ರತ್ನಚ್ಛವಿದೋರುವಂತೆ ಖಂಡಿತ ಭಾವ
ದಗಣಿತದೊಳಪ್ರಮಾಣಕ ಶರಣಸ್ಥಲವಿಡಿದು
ಬಗೆ ಬ್ರಹ್ಮವಳಿದು ನಿಸ್ಸೀಮ ನಿರ್ಲೇಪ ನಿಃಕಾಮಿ ನಿಜಲಿಂಗೈಕ್ಯವು. ॥೬॥

ಅಂಗಕಾಧಾರವಾದಾರುದಳದಕ್ಷರಂಗ
ಳಿಂಗಿತಾತ್ಮನೆ ಪ್ರಾಣಲಿಂಗವಾಗು
ತ್ತುಂಗ ಸಹಸ್ರದಳ ಕರ್ಣಿಕಾ ನಿವಾಸಿಯಾಗಿರೆ ಪರಮಹಂಸ ಸುಖವು
ಸಂಗವಂತಾರು ಸ್ಥಲವಿಡಿದ ಶರಣ ಸ
ರ್ವಾಂಗ ಭಕ್ತನು ಮಾಹೇಶ್ವನು ಪ್ರಸಾದಿಯು ಪ್ರಾಣ
ಲಿಂಗೈಕ್ಯ ತಾನಾತ ಗೊಹೇಶ್ವರನೊಳಗೆ ಸ್ವಯಲಿಂಗವಾದ ಶರಣನು ॥೭॥

೨೫

ರಾಗ ; ಶ್ರೀರಾಗ ತಾಳ : ಧರ (?)

ಭಕ್ತಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣಸ್ಥಲಗೂಡಿ
ಯುಕ್ತಿಯೊಳೊಡಗೂಡಿ ವೈಕ್ಯಸ್ಥಲದಲಿ ವರ್ತಿಸಿ ಲಿಂಗಲೀಯವಾದನು ॥ಪಲ್ಲ॥

ತಾನೊಂದೇನೊಂದನ್ಯ ಚಿಹ್ನದೋರದಾನಂದಂ ದ್ವೈತಾದ್ವೈತಂಗಳ
ಏನುವನೆಣಿಸದೆ ಲಿಂಗದೊಳಗೆ ಲೀಯವಾದಂದೆ ಲಿಂಗೈಕ್ಯಸ್ಥಲವು ॥೧॥

ಒಂದೊಂದಱ ಕುಳಸಂಬಂಧವನರಿದೊಂದೊಂದರ ಮುಖದೊಳಗಿರಿಸಿ
ಸಂದಿಲ್ಲದೆ ಸ್ವಯವಹ ಭೇದವೈಕ್ಯನೊಳೊಂದಿದ ಭಕ್ತಿಸ್ಥಲವು ॥೨॥

ಇಲ್ಲದ ಚಿತ್ತರದ ಪರಿಜಲದೊಳು ಬಿದ್ದಂತೆ ಚಿತ್ತಲಿಂಗ
ದಿ ಲೀಯವಾಗಿ ಐಕ್ಯನೊಳಿಪ್ಪ ಮಹೇಶನ ಶೂನ್ಯಸ್ಥಲವು ॥೩॥

ಅಂಗಪ್ರಾಣ ಮನ ಭಾವ ಜ್ಞಾನ ಘನಖಂಡಿತ ನಿತ್ಯ ನಿರಂಜನವ
ಲಿಂಗಾರ್ಪಿತದವಧಾನದ ಬೆಳಗೊಳಕೊಂಡುದೈಕ್ಯನ ಪ್ರಸಾದಿಸ್ಥಲ ॥೪॥

ನೋಡಿ ನುಡಿದು ಕೇಳಿ ಹೇಳಲಿಲ್ಲದ ಘನವೆ ನಿರಹಂಕಾರ ನೆಲೆಗೊಂಡು
ಕೂಡಿದ ಪ್ರಾಣವು ಲಿಂಗವಾದ ಪ್ರಭೆಯಾನಂದ ದೈಕ್ಯನ ಪ್ರಾಣಲಿಂಗಿ ॥೫॥

ಶೂನ್ಯವಶೂನ್ಯಗಳಚಲ ಖಂಡಿತಗಳೇನುವನೆಣಿಸದ ಪರಿಪೂರ್ಣ
ಜ್ಞಾನಿಯಾದೆ ಬಯಲಾದೆ ಬೆಳಗಿನೊಳಗಾದೆನೇನೈಕ್ಯನ ಶರಣಸ್ಥಲ ॥೬॥

ತಾನೆ ತಾ ನಿಜವಸ್ತುವಾದ ಘನವನಗ್ರಹಿಸುವೊಡಗೋಚರವು
ಜ್ಞಾನಶೂನ್ಯವನೆಯ್ದಿ ನಾನು ಇಲ್ಲವಾಗಿ ನೀನು ಇಲ್ಲ ಗೊಹೇಶ್ವರಾ, ॥೭॥

ಒರೆಗಲ್ಲು :

ಬನವಾಸಿ ಮಧುಕೇಶ್ವರಾಲಯ : ನವರಂಗ ಸ್ತಂಭದ ಮೇಲಿರುವ ವಿಭೂತಿ ಗೌರಯ್ಯನ ಶಾಸನ ಶಿಲ್ಪ

● **ಎಚ್. ಆರ್. ರಘುನಾಥ ಭಟ್**

ಬನವಾಸಿ–ಪ್ರಾಚೀನ, ಮಧ್ಯಕಾಲೀನ ಕರ್ನಾಟಕದ ಒಂದು ಪ್ರಮುಖ ಸಮಾಜೋ–ಸಾಂಸ್ಕೃತಿಕ ಕೇಂದ್ರವಾಗಿತ್ತು. ಇದುವರೆಗೆ ತಿಳಿದು ಬಂದಿರುವಂತೆ, ಮೌರ್ಯರ ಕಾಲದ (ಕ್ರಿಸ್ತ ಪೂರ್ವ ಮೂರನೆಯ ಶತಮಾನ) ರಖ್ಖಿತ ಥೇರನನು ಮೊದಲುಗೊಂಡು ಅದೆಷ್ಟೋ ಜನ ಗಣ್ಯರು ಇಲ್ಲಿಗೆ ಬಂದು ಹೋದದ್ದುಂಟು; ಇಲ್ಲಿಂದಲೂ ಕೆಲವರು ಬೇರೆಡೆಗೆ ಹೋದದ್ದುಂಟು. ಚಂದ್ರಗುಪ್ತ ಥೇರ ಶ್ರೀಲಂಕೆಗೆ ಹೋದದ್ದು, ಬನವಾಸಿ ಭೂತಪಾಲ ಸೆಟ್ಟಿ ಕಾರ್ಲೆಗೆ (ಪುಣೆ ಜಿಲ್ಲೆ) ಹೋಗಿ ಶಾಸನ–ಶಿಲ್ಪ ಸಹಿತ ಚೈತ್ಯಾಲಯ ನಿರ್ಮಿಸಿದ್ದು ಉಲ್ಲೇಖನೀಯ.

ಹತ್ತನೆಯ ಶತಮಾನದಿಂದೀಚೆಗೆ ಬನವಾಸಿಗೆ ಬಂದು ಹೋದವರ ಸಂಖ್ಯೆ ಹೆಚ್ಚಿರಬೇಕು; ಸಾಹಿತ್ಯ–ಶಾಸನಗಳಲ್ಲಿ ಕೆಲವು ನೆನಪಾಗಿ ಉಳಿದಿವೆ. ಬನವಾಸಿಯ ವನಸಿರಿಗೆ ಮಾರುಹೋದ ಪಂಪ ಹಾಗೂ ಹಲವು ಶಾಸನ ಕವಿಗಳು ಇದನ್ನು ಕಣ್ಣಾರೆ ಕಂಡಿರಬೇಕು. ಚಾಮರಸ ತನ್ನ **ಪ್ರಭುಲಿಂಗ ಲೀಲೆ** ಯಲ್ಲಿ ಬಣ್ಣಿಸಿದಂತೆ ಅಲ್ಲಮಪ್ರಭು ಮಧುಕೇಶ್ವರಾಲಯಕ್ಕೆ ಬಂದಿರಬೇಕು. ಆದರೆ ಇವರ ಭೇಟಿಯನ್ನು ದಾಖಲಿಸುವ ಶಾಸನ–ಶಿಲ್ಪಗಳು ಬನವಾಸಿಯಲ್ಲಿ ಇದುವರೆಗೂ ಸಿಕ್ಕಿಲ್ಲ. ಇದೀಗ ಪರೀಕ್ಷಿಸಲಾದ ಬನವಾಸಿ ಮಧುಕೇಶ್ವರಾಲಯದ ನವರಂಗ–ಸ್ತಂಭವೊಂದರ ಮೇಲಣ ಶಾಸನ-ಶಿಲ್ಪ ವಿಭೂತಿ ಗೌರಯ್ಯನದು–ಎಂಬುದು ನಮ್ಮ ಕುತೂಹಲವನ್ನು ಮತ್ತಷ್ಟು ಕೆರಳಿಸುತ್ತಿದೆ.

ಈ ಶಾಸನವನ್ನು ಕನ್ನಡ, ನಾಗರಿ, ತಮಿಳು, ಗ್ರಂಥ ಲಿಪಿಗಳಲ್ಲಿ ಹಾಗೂ ಸಂಸ್ಕೃತ, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ದಾಖಲಾತಿಗೊಳಿಸಿದ್ದು ಲಿಪಿ ಮತ್ತು ಭಾಷಾಶಾಸ್ತ್ರದ ದೃಷ್ಟಿಯಿಂದಲೂ ಅಭ್ಯಾಸಮಾಡುವಂಥದ್ದಿದೆ. ಈ ಎಲ್ಲ ಲಿಪಿ, ಭಾಷೆಗಳಲ್ಲಿ ಬರೆದ ಶಾಸನ ಪಾಠವನ್ನು ಸಂಗ್ರಹಿಸಿದರೆ ನಮಗೆ ಸಧ್ಯಕ್ಕೆ ತಿಳಿದು ಬರುವ ಸಂಗತಿ ಇಷ್ಟು:

೧ ವಿಭೂತಿ ಗೌರಯ್ಯ ಆಂಧ್ರಪ್ರದೇಶದ ಓರಂಗಲ್ಲು ಬಳಿಯಿರುವ ಮಾಜಿ ರಾಜುಪಲ್ಲಿಯಲ್ಲಿ ಜನಿಸಿದವ;

೨. ಶ್ರೀಶೈಲ ಪರ್ವತದಲ್ಲಿ ವಾಸಿಸುತ್ತಿದ್ದವ;

೩. ಶ್ರೀ ಪಂಡಿತಾರಾಧ್ಯರ ಶಿಷ್ಯನಾಗಿದ್ದವ. (''ಗೃಹದ ದಾಸ'')



ಕೆತ್ತನ ಶಿಲ್ಪ-ರೂಪ ಇನ್ನೂ ಸ್ವಾರಸ್ಯಕರವಾಗಿದೆ: ವಿಭೂತಿ ಗೌರಯ್ಯ ಶ್ರೀ ಮಧುಕೇಶ್ವರ ಲಿಂಗಕ್ಕೆ ಮುಖಮಾಡಿ, ತುಸು ಬಾಗಿ ನಿಂತು ಎರಡೂ ಕೈಗಳನ್ನು

ಭಕ್ತಿಯಿಂದ ಜೋಡಿಸಿ, ಮುಕ್ತಭಾವದಿಂದ ಶಿವಾರಾಧನೆಯನ್ನು ಮಾಡುತ್ತಿದ್ದಾನೆ. ಶಿಖೆಯಲ್ಲಿ ಪುಟ್ಟ ಶಿವಲಿಂಗವನ್ನು ಪಾಣಿಪೀಠಸಹಿತ ಧರಿಸಿದ್ದಾನೆ. ('ಶಿರೋಧಾರಿ ಲಿಂಗಿ'ಯಾಗಿದ್ದಾನೆ): ತಲೆಗೆ ರುದ್ರಾಕ್ಷಿ ಸರ ಸುತ್ತಿದ್ದಾನೆ. ಕಿವಿಯಲ್ಲಿ ರುದ್ರಾಕ್ಷಿಯ ಕರ್ಣಾಭರಣವಿದೆ, ಕೊರಳಲ್ಲಿ ಒಂದು ಪುಟ್ಟ ಮತ್ತೊಂದು ದೊಡ್ಡ ರುದ್ರಾಕ್ಷಿ ಸರಗಳಿವೆ, ತೋಳಿಗೂ ರುದ್ರಾಕ್ಷಿ ಬುಜಬಂಧವಿದೆ. ಈತ ಉಟ್ಟ ಪುಟ್ಟ ಪಂಜೆಯ ನೆರಿಗೆ ಹಾಗೂ ಸೊಂಟಕ್ಕೆ ಸುತ್ತಿದ ಶಾಲಿನ ಗಂಟು ಮತ್ತು ಕಂಚು ಕೂಡ ಕಲಾತ್ಮಕವಾಗಿವೆ. ಬಲಗಾಲಲ್ಲಿ ಮಾತ್ರ ಕಾಲ್ಗಡಗ ಕಂಡುಬರುತ್ತದೆ. ಜಟೆಯನ್ನು ಹಿಂಭಾಗದಲ್ಲಿ ಮಡಚಿ ಕಟ್ಟಿನಿಂತ ಈ ಗಡ್ಡಧಾರಿ ವಿಭೂತಿ ಗೌರಯ್ಯನ ಕಾಯ ಭವ್ಯವಾಗಿದೆ; ಭಕ್ತಿ ಭಾವದಿಂದ ತುಂಬಿದೆ. ಈತನ ಈ ಉಬ್ಬುಶಿಲ್ಪ ಕಮಾನುಳ್ಳ ಪುಟ್ಟ ಕೋಷ್ಠ (ಗೂಡು) ದಲ್ಲಿದೆ. ಇದರ ಮೇಲ್ಭಾಗದಲ್ಲೇ ಸಂಬಂಧ ಪಟ್ಟ ಶಾಸನವಿರುವುದು. ಈ ಶಾಸನ-ಶಿಲ್ಪ ಹೊತ್ತ ಕಂಬವು ಮಧುಕೇಶ್ವರ ದೇಗುಲದ ನವರಂಗದಲ್ಲಿದೆ (ಬಾಗಿಲುವಾಡದ ಬಳಿ): ಈಗಾಗಲೇ ಪ್ರಕಟವಾದ ಶಿವಶರಣರ ಶಿಲ್ಪಶಾಸನಗಳುಳ್ಳ ತ್ರೈಲೋಕ್ಯ ಮಂಟಪದ ಎದುರಲ್ಲೇ ಇದೆ. ಇದನ್ನು ಶಾಸನ ಇಲಾಖೆಯು ೧೯೩೫-೩೬ ರಲ್ಲಿ ಗಮನಿಸಿದ್ದರೂ, ಅನಂತರ ೧೯೬೫ ರಲ್ಲಿ ಪ್ರಕಟಿಸಿದ್ದರೂ ಇದನ್ನು ಇನ್ನೂ ಸೂಕ್ಷ್ಮ ಪರೀಕ್ಷೆಗೆ ಒಳಪಡಿಸಿದಂತಿಲ್ಲ **(ಎಸ್ ಐಐ XX** (ಬಿಕೆಪಿ IV) ೩೫೭).

ವಿಭೂತಿ ಗೌರಯ್ಯನ ಈ ಬಗೆಯ ಶಾಸನ-ಶಿಲ್ಪ ಆಂಧ್ರ ಪ್ರದೇಶದ ಗುಂಡಲ, ಪಾಲಂಪೇಟೆ, ಹನುಮಕೊಂಡ, ಪರ್ಕಾಲ, ಘಾನಾಪುರ, ಮೂಸಲಿಮಡುಗು, ಪಾನೆಂ ಮುಂತಾದೆಡೆಗಳಲ್ಲೂ ದೊರಕಿವೆ. ಈ ಶಾಸನಗಳ ಲಿಪಿಶೈಲಿ, ಭಾಷಾರಚನೆ ಮತ್ತು ಶಿಲ್ಪ ಶೈಲಿಗಳನ್ನು ಆಧರಿಸಿ ಇದನ್ನು ಹನ್ನೆರಡನೆಯ ಶತಮಾನದ್ದೆಂದು ತಿಳಿಯಬಹುದು. ಗುಂಡಲ ಶಾಸನದಲ್ಲಂತೂ ಕಾಕತೀಯ ಗಣಪತಿಯ ಉಲ್ಲೇಖವಿದೆ. ಈ ಶಾಸನಗಳೊಟ್ಟಿಗೆ ಬನವಾಸಿಯಲ್ಲಿ ದೊರೆತ ವಿಭೂತಿ ಗೌರಯ್ಯನ ಶಾಸನ ಶಿಲ್ಪವನ್ನು ಹೋಲಿಸಿ ನೋಡಿದಾಗ ಇದೂ ಕೂಡ ಹನ್ನೆರಡನೆಯ ಶತಮಾನದ್ದೆಂದು ಅನ್ನಿಸುತ್ತದೆ. ಪಂಡಿತಾರಾಧ್ಯರ ಶಿಷ್ಯನಾದ ವಿಭೂತಿ ಗೌರಯ್ಯನನ್ನು ಹೀಗೆ ನಾಲ್ಕು ಭಾಷೆ ಮತ್ತು ನಾಲ್ಕು ಲಿಪಿಗಳಲ್ಲಿ ಶಿಲ್ಪ ಸಹಿತ ತಿಳಿಯಪಡಿಸುವ ಸಂವಹನಾಕಾಂಕ್ಷೆ ನಮ್ಮನ್ನು ಬೆರಗುಗೊಳಿಸುತ್ತಿದೆ. ಈತನ ಬಗೆಗೆ ಇನ್ನೂ ಹೆಚ್ಚಿನ ವಿವರಗಳನ್ನು, ಮಾಹಿತಿಗಳನ್ನು ಸಂಗ್ರಹಿಸಲು ಪ್ರಚೋದಿಸುತ್ತಿದೆ. ಶ್ರೀಶೈಲದಿಂದ ಹೊರಟು ಆಂಧ್ರ ಕರ್ನಾಟಕದಲ್ಲಿ ಸಂಚರಿಸಿದ್ದಿರಬಹುದಾದ ಈ ವಿಭೂತಿ ಗೌರಯ್ಯನು ಮಧ್ಯಕಾಲೀನ ಸಮಾಜೋ-ಧಾರ್ಮಿಕ ಸುಧಾರಣಾ ಚಳವಳಿಯಲ್ಲೇನಾದರೂ ಸಹಭಾಗಿಯಾಗಿದ್ದನೆ ? ಎಂಬುದನ್ನು ಸಂಶೋಧಿಸಬೇಕೆನ್ನಿಸುತ್ತಿದೆ.

ಈ ಸಂಚಿಕೆಯ ಲೇಖಕರು

೧ ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨ ಡಾ. ವಿಲ್ಯಂ ಮಾಡ್ತ
ಭಾಷಾ ವಿಜ್ಞಾನ ಪ್ರವಾಚಕರು
ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ

೩ ಡಾ. ಎಂ. ಎನ್. ಜೋಶಿ
ಉಪನ್ಯಾಸಕರು, ಸಂಸ್ಕೃತ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪ ಡಾ. ಶಾಲಿನಿ ರಘುನಾಥ
ಕನ್ನಡ ಉಪನ್ಯಾಸಕಿ. ಐ. ಸಿ. ಸಿ. ಮತ್ತು ಸಿ. ಇ.
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫ (ಅ) ಶ್ರೀ ಜಿ. ಎಸ್. ವಡಗಾಂವಿ
ಕನ್ನಡ ಉಪನ್ಯಾಸಕರು
ಕಿರಿಯ ಮಹಾವಿದ್ಯಾಲಯ, ಬನಹಟ್ಟಿ

(ಬ) ಶ್ರೀಮತಿ ಚೌರವ್ವ ಕೊಣ್ಣೂರ
ರಾಮಪೂರ, ರಬಕವಿ

೬ (ಅ) ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

(ಬ) ಶ್ರೀಮತಿ ಹನುಮಾಕ್ಷಿ ಗೋಗಿ
ಕನ್ನಡ ಉಪನ್ಯಾಸಕಿ
ಕಲ್ಯಾಣ ನಗರ, ಕಲಬುರ್ಗಿ

೭ ಶ್ರೀ ಎಸ್. ಸಿ. ಪಾಟೀಲ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೮ ಡಾ. ಎಚ್. ಎಂ. ಮಹೇಶ್ವರಯ್ಯ
ಭಾಷಾವಿಜ್ಞಾನ ಉಪನ್ಯಾಸಕರು
ಕನ್ನಡ ಅಧ್ಯಯನಪೀಠ ಕ. ವಿ. ವಿ. ಧಾರವಾಡ

೯ ಶ್ರೀ ಗುರುಪಾದ ಮರಿಗುದ್ದಿ
ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ
ಸಂಕೇಶ್ವರ (ಬೆಳಗಾಂವಿ ಜಿಲ್ಲೆ)

೧೦ ಡಾ. ವೀರಣ್ಣ ರಾಜೂರ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧ ಡಾ. ಎಚ್. ಆರ್. ರಘುನಾಥ ಭಟ್
ಪ್ರವಾಚಕರು, ಪ್ರಾಚೀನ ಭಾರತೀಯ
ಇತಿಹಾಸ ಮತ್ತು ಶಾಸನ ಶಾಸ್ತ್ರವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ, ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ'' ತ್ರೈಮಾಸಿಕ ಪತ್ರಿಕೆಯು ಆಜೀವ ಸದಸ್ಯತ್ವ ಪಡೆಯುಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ :	ರೂ. ೮-೦೦	(ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಗಳು :	ರೂ. ೨-೫೦	(ಅಂಚೆ ವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ	ರೂ. ೪-೦೦	

ಹಣವನ್ನು **ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**-೫೮೦ ೦೦೩ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ, **ನಿರ್ದೇಶಕರು,** ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಕಳಿಸಬೇಕು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ